# ಆರಂಭಿಕ ಬಾಲ್ಯದ ಶಿಕ್ಷಣವನ್ನು ಕುರಿತು ಗಮನವನ್ನು ಕೇಂದ್ರೀಕರಿಸಿದ ರಾಷ್ಟ್ರೀಯ ತಂಡದ ವರದಿ

ರಾಷ್ಟ್ರೀಯ **ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಮಂಡಳಿ**

## ಮುನ್ನುಡಿ

ಆರಂಭಿಕ ಬಾಲ್ಯದ ಶಿಕ್ಷಣವನ್ನು (ECE) ಕುರಿತು ಗಮನವನ್ನು ಕೇಂದ್ರೀಕರಿಸಿದ ರಾಷ್ಟ್ರೀಯ ತಂಡದ ಸದಸ್ಯರು ಆರಂಭಿಕ ಬಾಲ್ಯದ ಶಿಕ್ಷಣದ (ECE) ಬದಲಿಗೆ ಅದನ್ನು ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ (ECCE: Early Childhood Care and Education) ಎಂಬುದಾಗಿ ಒಮ್ಮತದ ಮೂಲಕ ಮರು-ನಾಮಕರಣ ಮಾಡಿದ್ದಾರೆ. ಈ ತಂಡದ ಕೆಲಸದ ನಿಟ್ಟಿನಲ್ಲಿ, ECEಯನ್ನು ECCE ಎಂಬುದಾಗಿ ಬದಲಾಯಿಸಲು ಇರುವ ಮುಖ್ಯ ಕಾರಣಗಳು ಹೀಗಿವೆ:

ಗರ್ಭದಲ್ಲಿರುವ ಹಂತದಿಂದ ಹಿಡಿದು 8 ವರ್ಷದವರೆಗಿನ ಮಗುವಿನ ಅವಧಿಯನ್ನು ಆರಂಭಿಕ ಬಾಲ್ಯ ಎಂದು ಪರಿಗಣಿಸಲಾಗುತ್ತದೆ. ವಿಕಾಸಾತ್ಮಕ ಮನೋವಿಜ್ಞಾನ ಮತ್ತು ಕಲಿಕಾ ಸಿದ್ಧಾಂತಗಳ ಸೈದ್ಧಾಂತಿಕ ಚೌಕಟ್ಟಿನ ಪ್ರಕಾರ ಈ ಅವಧಿಯಲ್ಲಿ ಮಗುವಿನ ಬೆಳವಣಿಗೆಯು ನಿರಂತವಾಗಿ ನಡೆಯುತ್ತಿರುತ್ತದೆ. ಪ್ರಾಥಮಿಕ ಶಿಕ್ಷಣದ ಹಂತವು ಪರಿಣಾಮಕಾರಿ ಅಂತರ್‌ಸಂವಹನದ ಅಗತ್ಯವಿರುವಂತಹ ಸುಸಂಘಟಿತ ರೂಪದ ಮತ್ತು ಔಪಚಾರಿಕ ಕಲಿಕೆಯ ವ್ಯವಸ್ಥೆಯಾಗಿದ್ದು, ಮಗುವು ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಪ್ರಾಥಮಿಕ ಶಿಕ್ಷಣದ ಹಂತಕ್ಕೆ ಸಾಗುವ ಪ್ರಕ್ರಿಯೆಯು ಹಂತಹಂತವಾಗಿ ಮತ್ತು ಸುಗಮವಾಗಿ ನಡೆಯಬೇಕೆಂಬುದು ಆರಂಭಿಕ ಬಾಲ್ಯವನ್ನು 6 ವರ್ಷದಿಂದ 8 ವರ್ಷದವರೆಗೆ ವಿಸ್ತರಿಸಿದ ಮತ್ತೊಂದು ಕಾರಣವಾಗಿದೆ. ಚಿಕ್ಕ ಮಕ್ಕಳಿಗೆ ಆರೈಕೆ ಮತ್ತು ಪೋಷಣೆಯ ಅಗತ್ಯವಿರುವುದರಿಂದ 'ಆರೈಕೆ' ಎಂಬ ಪದವನ್ನು ಸೇರಿಸಲಾಗಿದೆ. ಅವರ ಸಮಗ್ರ ಬೆಳವಣಿಗೆಗಾಗಿ ಆರೋಗ್ಯ ಮತ್ತು ಪೋಷಕಾಂಶದ ಅಗತ್ಯಗಳ ಜೊತೆಗೆ ಅವರ ಮನೋಸಾಮಾಜಿಕ ಮತ್ತು ಭಾವನಾತ್ಮಕ ಅಗತ್ಯಗಳು ಕೂಡಾ ಸೂಕ್ತವಾಗಿ ಈಡೇರಬೇಕು. ಇಲ್ಲಿ ಶಿಕ್ಷಣವೆಂದರೆ ಜ್ಞಾನ, ಕೌಶಲಗಳು, ಅಭ್ಯಾಸ ಮತ್ತು ಮನೋಭಾವಗಳನ್ನು ದಕ್ಕಿಸಿಕೊಳ್ಳುವ ಒಂದು ಕಲಿಕೆಯ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ. ಅಷ್ಟಲ್ಲದೇ, ಪ್ರಾಥಮಿಕ ಹಂತದ ಔಪಚಾರಿಕ ಶೈಕ್ಷಣಿಕ ವ್ಯವಸ್ಥೆಯನ್ನು ಪ್ರವೇಶಿಸಲು ಚಿಕ್ಕ ಮಗುವನ್ನು ತಯಾರು ಮಾಡುವುದರ ಮೇಲೆಯೂ ಅದರ ಮುಖ್ಯ ಗಮನವಿರುತ್ತದೆ. ಹೀಗೆ ECCEಯು 8 ವರ್ಷದವರೆಗಿನ ಚಿಕ್ಕ ಮಕ್ಕಳ ಸಮಗ್ರ ಬೆಳವಣಿಗೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಅವರಿಗೆ ಅವಕಾಶಗಳು ಮತ್ತು ಅನುಭವಗಳನ್ನು ಒದಗಿಸುವ, ಹಾಗೂ ಅದರ ಜೊತೆಗೆ ತಮ್ಮ ಚಿಕ್ಕ ಮಕ್ಕಳ ಅಗತ್ಯಗಳನ್ನು ಪೂರೈಸಲು ಸಮುದಾಯಗಳು ಮತ್ತು ಕುಟುಂಬಗಳಿಗೆ ಅಗತ್ಯ ಸೇವಾ ಸೌಲಭ್ಯಗಳು ಮತ್ತು ಬೆಂಬಲ ವ್ಯವಸ್ಥೆಯನ್ನು ನೀಡುವ ಒಂದು ತತ್ವವನ್ನು ಒಳಗೊಂಡಿದೆ. ಅನುಕೂಲದ ದೃಷ್ಟಿಯಿಂದ ಹಾಗೂ ಯೋಜನೆಯನ್ನು ರೂಪಿಸುವ ಮತ್ತು ಸಾಂಸ್ಥಿಕ ನೆಲೆಗಳ ದೃಷ್ಟಿಯಿಂದ ECCEಯನ್ನು ಮೂರು ಉಪ-ಹಂತಗಳಲ್ಲಿ ವಿಭಜಿಸಲಾಗಿದೆ:

- ಹುಟ್ಟಿನಿಂದ 2+ ವಯೋಮಾನದವರೆಗೆ
- 3ರಿಂದ 5+ ವಯೋಮಾನದವರೆಗೆ
- 6ರಿಂದ 8+ ವಯೋಮಾನದವರೆಗೆ

ಪ್ರತೀ ಉಪ-ಹಂತವೂ ಪ್ರತ್ಯೇಕ ಸಾಂಸ್ಥಿಕ ವ್ಯವಸ್ಥೆಯೊಳಗೆ ನೆಲೆಗೊಂಡಿರಬಹುದು.

1. **1ನೇ ವಿಭಾಗವು** ಇತ್ತೀಚಿನ ಸಂಶೋಧನೆಗಳಿಂದ ದೊರೆತ ಪುರಾವೆಗಳನ್ನು ಆಧರಿಸಿ ಮಾನವ ವಿಕಾಸದ ಮೊದಲ ಕೆಲ ವರ್ಷಗಳ

ಜೀವನದ ಮಹತ್ವದ ಮೇಲೆ ಒತ್ತನ್ನು ನೀಡುತ್ತದೆ. ಇದು ಭಾರತವನ್ನು ಜಾಗತಿಕ ಸಂದರ್ಭ ಮತ್ತು ದೃಷ್ಟಿಕೋನದಲ್ಲಿ ನೆಲೆಗೊಳಿಸುತ್ತದೆ ಹಾಗೂ ಗರಿಷ್ಠ ಪರಿಣಾಮಗಳುಳ್ಳ ಆರಂಭಿಕ ಬಾಲ್ಯದ ಬೆಳವಣಿಗೆಯ (ECD) ಯೋಜನೆಗಳ ಸ್ವರೂಪವನ್ನು ವ್ಯಾಖ್ಯಾನಿಸುತ್ತದೆ.

2. **2ನೇ ವಿಭಾಗವು** ECCEಯು ಭಾರತದಲ್ಲಿ ಹೇಗೆ ನೆಲೆಗೊಂಡಿದೆ ಎಂಬುದನ್ನು ಇಲ್ಲಿ ಅದರ ವಿಕಾಸವನ್ನು ಮೊದಲ್ಗೊಂಡು, ಪ್ರಸ್ತುತ ಪರಿಸ್ಥಿತಿಯವರೆಗಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ಒದಗಿಸಿಕೊಡುವುದರ ಮೂಲಕ ವಿಶ್ಲೇಷಿಸುತ್ತದೆ. ಅದರ ನೀತಿಯ ಚೌಕಟ್ಟು, ಅವಕಾಶ ಹಾಗೂ ವ್ಯಾಪ್ತಿ ಎಷ್ಟಿದೆ ಎಂಬುದನ್ನು, ಅದರ ವಿವಿಧ ಮಾದರಿಗಳು, ಪರಿಮಾಣಾತ್ಮಕ ಚಿತ್ರಣ ಮತ್ತು ಕೊರತೆಗಳನ್ನು ಪರಿಶೀಲಿಸುವುದರೊಂದಿಗೆ ಇದು ವರ್ತಮಾನದ ಸನ್ನಿವೇಶವನ್ನು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡುತ್ತದೆ.
3. **3ನೇ ವಿಭಾಗವು** ಸನ್ನಿವೇಶದ ಒಂದು ಗುಣಾತ್ಮಕ ಅವಲೋಕನದ ಆಧಾರದ ಮೇಲೆ ಈಗಿನ ಸಾಮಾಜಿಕ ಸನ್ನಿವೇಶಗಳು ಮತ್ತು ವ್ಯವಸ್ಥೆಗಳಿಗೆ ಸಂಬಂಧಪಟ್ಟಂತೆ ಪರಸ್ಪರ ಒಂದಕ್ಕೊಂದು ಕೊಂಡಿಯಾದ ಮಹತ್ವದ ಸಮಸ್ಯೆಗಳ ಒಂದು ವಿಶ್ಲೇಷಣಾತ್ಮಕ ಪರಿಶೀಲನೆಯನ್ನು ಒದಗಿಸುತ್ತದೆ. ಅದರ ಜೊತೆಗೆ, ಭಾಷಾ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಉತ್ತಮ ಗುಣಮಟ್ಟದ ECCEಯನ್ನು ಎಲ್ಲರಿಗೂ ತಲುಪಿಸುವ ಉದ್ದೇಶದಿಂದ ನೀತಿ ಹಾಗೂ ಯೋಜನೆಗೆ ಸಂಬಂಧಿಸಿದ ಪರಿಣಾಮಗಳ ರೂಪುರೇಶೆಯನ್ನು ರೂಪಿಸುತ್ತದೆ.
4. **4ನೇ ವಿಭಾಗವು** ಮುಂದೆ ಸಾಗಲು ಬೇಕಾದ ನೀತಿ ನಿರೂಪಣೆಯ ಮೂಲಭೂತ ಪಲ್ಲಟಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅದರಲ್ಲಿ ಪ್ರತೀ ಪ್ರಕರಣಕ್ಕೂ ಸಂಬಂಧಿಸಿದಂತೆ ಯಾವ ಕೆಲಸಗಳಾಗಬೇಕು ಎಂಬುದನ್ನು ಹೇಳುತ್ತದೆ. ಇಂತಹ ನೀಲನಕ್ಷೆಯೊಂದರ ರೂಪರೇಖೆಯಿಲ್ಲದೇ ಕಾರ್ಯನೀತಿಗಳ ಹೇಳಿಕೆಯು ಕಾಗದವನ್ನು ಕುರಿತ ಮತ್ತೊಂದು ಪೊಳ್ಳು ಭರವಸೆಯಾಗಿ ಪರಿಣಮಿಸಬಹುದು.
5. ಅಂತಹ ಪ್ರಮುಖ ಹೆಜ್ಜೆಗಳ ನಿಟ್ಟಿನಲ್ಲಿ ಬದ್ಧತೆಯಿರದಿದ್ದರೆ ಒಂದು ಪಠ್ಯಕ್ರಮ ಚೌಕಟ್ಟನ್ನು ಸಮಾನವಾಗಿ ಅನುಷ್ಠಾನಕ್ಕೆ ತರಲಾಗದು ಎಂಬ ಅಂಶವನ್ನು ಪರಿಗಣಿಸಿ **5ನೇ ವಿಭಾಗ**ದಲ್ಲಿ ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ತತ್ವಗಳ ಆಧಾರದ ಮೇಲೆ ಹೊಸ ಪಠ್ಯಕ್ರಮ ಚೌಕಟ್ಟಿನ ಮಾರ್ಗಸೂಚಿಗಳನ್ನು ಪ್ರಸ್ತುತಪಡಿಸಲಾಗಿದೆ.

## ಕಾರ್ಯಕಾರಿ ಸಾರಾಂಶ

**ವಿಭಾಗ 1** ಆರಂಭಿಕ ಬಾಲ್ಯವನ್ನು ಕುರಿತ ಜಾಗತಿಕ ನೋಟ

**ವಿಭಾಗ 2** ಭಾರತೀಯ ಸಂದರ್ಭ: ಪರಿಸ್ಥಿತಿಯ ವಿಶ್ಲೇಷಣೆ ಹಾಗೂ ಪ್ರಸ್ತುತ ಸನ್ನಿವೇಶ.

**ವಿಭಾಗ 3** ಅತೀ ಮಹತ್ವದ ಸಮಸ್ಯೆಗಳು, ಸಾಮಾಜಿಕ ವಾಸ್ತವ ಹಾಗೂ ನೀತಿಯ ಪರಿಣಾಮಗಳು

**ವಿಭಾಗ 4** ಮುಂದಿನ ಹಾದಿ: ನೀತಿ ಮಾದರಿಗಳ ಬದಲಾವಣೆ

**ವಿಭಾಗ 5** ಪಠ್ಯಕ್ರಮ ಚೌಕಟ್ಟಿನ ಮಾರ್ಗಸೂಚಿಗಳು

# 1. ಆರಂಭಿಕ ಬಾಲ್ಯವನ್ನು ಕುರಿತವನ್ನು ಕುರಿತ ಜಾಗತಿಕ ನೋಟ

ಒಂದು ಮಗುವಿನ ಇಡೀ ಜೀವನದ ಬೆಳವಣಿಗೆಯಲ್ಲಿ ಮಗುವಿನ ಮೊದಲ 6ರಿಂದ 8 ವರ್ಷಗಳು ಬಹಳ ನಿರ್ಣಾಯಕವಾಗುತ್ತವೆ ಎಂಬುದನ್ನು ಜಾಗತಿಕ ಮಟ್ಟದಲ್ಲಿ ಗುರುತಿಸಲಾಗಿದೆ, ಏಕೆಂದರೆ ಈ ಅವಧಿಯಲ್ಲಿ ಬೆಳವಣಿಗೆಯ ಗತಿಯು ಬಹಳ ಶೀಘ್ರವಾಗಿರುತ್ತದೆ. ನರವಿಜ್ಞಾನದಲ್ಲಿ ನಡೆದ ಇತ್ತೀಚಿನ ಸಂಶೋಧನೆಗಳು, ಅದರಲ್ಲೂ ಮುಖ್ಯವಾಗಿ ಮೆದುಳನ್ನು ಕುರಿತ ಸಂಶೋಧನೆಗಳು, ಮೆದುಳಿನಲ್ಲಿ ಸಿನಾಪ್ಟಿಕ್(ಕ್ರೋಮೊಸೋಮ್ ಜೋಡಿಗಳ ಸಂಯೋಜನದ-synaptic)ಗಳ ಜೋಡಣೆಗಳು ರೂಪುಗೊಳ್ಳುವ ಮತ್ತು ಮೆದುಳಿನ ಸಾಮರ್ಥ್ಯವು ಪೂರ್ಣ ಪ್ರಮಾಣದಲ್ಲಿ ಬೆಳೆಯುವಂತಹ 'ನಿರ್ಣಾಯಕ ಅವಧಿಗಳು' ಈ ಆರಂಭಿಕ ವರ್ಷಗಳಲ್ಲಿಯೇ ಇರುತ್ತವೆ ಎಂಬುದರ ಬಗೆಗೆವಿಶ್ವಾಸಾರ್ಹ ಪುರಾವೆಗಳನ್ನು ಒದಗಿಸಿವೆ. ಈ ಆರಂಭಿಕ ವರ್ಷಗಳಲ್ಲಿ ಪ್ರಚೋದಿಸುವಂತಹ ಮತ್ತು ಸಮೃದ್ಧ ಪೋಷಣೆಯನ್ನು ಒದಗಿಸುವಂತಹ ಭೌತಿಕ ಮತ್ತು ಮನೋಸಾಮಾಜಿಕ ಪರಿಸರವು ಸಿಗದಿದ್ದಲ್ಲಿ ಮಗುವಿನ ಮೆದುಳು ಸಾಮರ್ಥ್ಯವು ಪೂರ್ಣ ಪ್ರಮಾಣದಲ್ಲಿ ವಿಕಾಸ ಹೊಂದುವುದು ಗಣನೀಯವಾಗಿ, ಮತ್ತು ಬಹಳ ಸಲ ಹಿಂದಿರುಗಲಾರದ ರೀತಿಯಲ್ಲಿ ಕಡಿಮೆಯಾಗುತ್ತದೆ ಎಂದೂ ಈ ಸಂಶೋಧನೆಗಳು ಸೂಚಿಸಿವೆ. ಬದುಕಿನ ಈ ಹಂತವು ಮಕ್ಕಳಲ್ಲಿ ಜೀವನದುದ್ದಕ್ಕೂ ಉಳಿದುಕೊಳ್ಳುವ ಸಾಮಾಜಿಕ ಮೌಲ್ಯಗಳು ಮತ್ತು ವೈಯಕ್ತಿಕ ಅಭ್ಯಾಸಗಳನ್ನು ಬೇರೂರಿಸುವ ಒಂದು ಅಡಿಪಾಯವೂ ಹೌದು.ಹೀಗಾಗಿ ಈ ಆರಂಭಿಕ ವರ್ಷಗಳಲ್ಲಿ ಪ್ರತೀ ಮಗುವಿಗೂ ಅಂತಹ ಒಂದು ಪರಿಸರವನ್ನು ಒದಗಿಸುವುದು ಮತ್ತು ಆ ಮೂಲಕ ಒಂದು ಉತ್ತಮ ಅಡಿಪಾಯವನ್ನು ಹಾಕಿಕೊಡುವುದು ಬಹಳ ಮುಖ್ಯವಾಗುತ್ತದೆ. ಅದು ಪ್ರತೀ ಮಗುವಿನ ಹಕ್ಕು ಮಾತ್ರವಲ್ಲ, ಮುಂದಿನ ದಿನಗಳಲ್ಲಿ ಒಂದು ದೇಶಕ್ಕೆ ಲಭ್ಯವಾಗುವ ಮಾನವ ಬಂಡವಾಳದ ಗುಣಮಟ್ಟದ ಮೇಲೂ ಅದು ಪರಿಣಾಮ ಬೀರುತ್ತದೆ. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವು (ECCE) ಈ ಕಾರಣಗಳಿಂದ ಮಹತ್ವದ್ದಾಗಿದೆ.

ಭಾರತದ ECCE ಯೋಜನೆಳನ್ನು ಕಳೆದ ಕೆಲ ದಶಕಗಳಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಜನಸಾಂಖ್ಯಿಕವಾಗಿ ಆದ ಪಲ್ಲಟಗಳಿಂದ ಹೊರಹೊಮ್ಮಿದ ಜಾಗತಿಕ ವಿದ್ಯಮಾನಗಳು ಮತ್ತು ಅಗತ್ಯಗಳೂ ಸಹ ಪ್ರಭಾವಿಸಿವೆ. ವಿಶ್ವಸಂಸ್ಥೆಯ ಮಿಲೆನಿಯಮ್ ಘೋಷಣೆಯಲ್ಲಿನ ಮಿಲೆನಿಯಮ್ ಅಭಿವೃದ್ಧಿಯ (MDGs) 8 ಗುರಿಗಳಲ್ಲಿ ಐದು ಗುರಿಗಳು ಚಿಕ್ಕ ಮಕ್ಕಳ ಆರೋಗ್ಯ, ಪೋಷಕಾಂಶ, ಮತ್ತು ಶಿಕ್ಷಣಕ್ಕೆ ಸಂಬಂಧಿಸಿವೆ. ಇತರ ದೇಶಗಳಿಗೆ ಹೋಲಿಸಿದರೆ MDGsನ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಭಾರತದ ಪ್ರಗತಿಯು ಕಳಪೆಯಾಗಿರುವುದು, ನಾವು ನಮ್ಮ ಎಳೆಯ ಮಕ್ಕಳನ್ನು ಸುದೀರ್ಘ ಕಾಲದವರೆಗೆ ನಿರ್ಲಕ್ಷಿಸಿದ್ದೇವೆ ಎಂಬುದು ತಿಳಿಯುತ್ತದೆ.

ಪರಿಣಾಮವನ್ನು ಗರಿಷ್ಠ ಮಟ್ಟಕ್ಕೇರಿಸಲು ಆರಂಭಿಕ ಬಾಲ್ಯ ಮತ್ತು ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳ ಯೋಜನೆ ಹಾಗೂ ಒದಗಿಸುವಿಕೆಯ ಪ್ರಕ್ರಿಯೆಗಳು ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ಮೂರು ಮುಖ್ಯ ತತ್ವಗಳನ್ನು ಪರಿಗಣಿಸಬೇಕಾಗುತ್ತದೆ:

(a) ಮಗುವಿನ ಬೆಳವಣಿಗೆಯು ನಿರಂತರವಾಗಿ ನಡೆಯುವ ಮತ್ತು ಸತತ ಸೇರ್ಪಡೆಯಿಂದ ಸಾಕಾರಗೊಳ್ಳುವ ಪ್ರಕ್ರಿಯೆಯಾಗಿದೆ, ಹೀಗಾಗಿ ಹಿಂದೆ ಏನಾಗಿರುತ್ತದೋ ಅದು ಮುಂದೆ ಆಗಲಿರುವುದನ್ನು ಪ್ರಭಾವಿಸುತ್ತದೆ. ಆದ್ದರಿಂದ ಕಾರ್ಯಕ್ರಮಗಳ ನಡುವೆ ಅದನ್ನು ಉತ್ತಮಗೊಳಿಸಲು ಮಧ್ಯಪ್ರವೇಶಿಸುವಾಗ ಪ್ರಸವಪೂರ್ವದಿಂದ ಹಿಡಿದು ಪ್ರಾಥಮಿಕ ಶಿಕ್ಷಣದ ಕೊನೆಯ ಹಂತದವರೆಗಿನ ಇಡೀ

ಬಾಲ್ಯದ ಒಂದು ನಿರಂತರ ಪ್ರಕ್ರಿಯೆಯನ್ನು ಪರಿಗಣಿಸಬೇಕೇ ವಿನಃ ಪ್ರತ್ಯೇಕವಾಗಿ ಯಾವುದೋ ಒಂದು ಉಪಹಂತದಲ್ಲಿ ಪ್ರವೇಶಿಸುವುದಲ್ಲ.

(b) ಆರೋಗ್ಯ, ಪೌಷ್ಟಿಕಾಂಶ, ಮತ್ತು ಶೈಕ್ಷಣಿಕ/ಮನೋಸಾಮಾಜಿಕ ಬೆಳವಣಿಗೆಯ ಪ್ರಕ್ರಿಯೆಗಳು ಪರಸ್ಪರ ಸಂಯೋಜಿತವಾದ ಅಂತರ್‌ಸಂಬಂಧವನ್ನು ಹೊಂದಿದ ಪ್ರಕ್ರಿಯೆಗಳಾಗಿವೆಯಾದ್ದರಿಂದ ಮಕ್ಕಳ ಎಲ್ಲಾ ಅಗತ್ಯಗಳನ್ನೂ ಒಂದು ಸಮಗ್ರ ದೃಷ್ಟಿಕೋನದಿಂದ ಪರಿಗಣಿಸುವುದು ಬಹಳ ಮುಖ್ಯವಾಗುತ್ತದೆ;

(c) ಕಾರ್ಯಕ್ರಮಗಳು ಬರಿಯ ಮಗುವನ್ನು ಮಾತ್ರವೇ ದೃಷ್ಟಿಯಲ್ಲಿ ಇಟ್ಟುಕೊಳ್ಳದೆ ಮಗುವಿನ ಒಟ್ಟಾರೆ ಪರಿಸ್ಥಿತಿಯನ್ನೂ ಪರಿಗಣಿಸಿದರೆ ಮಾತ್ರ ಮಗುವಿನ ಬೆಳವಣಿಗೆಯು ಗರಿಷ್ಠ ಮಟ್ಟವನ್ನು ತಲುಪಲು ಸಾಧ್ಯ.

## 2. ಭಾರತೀಯ ಸಂದರ್ಭ: ಪರಿಸ್ಥಿತಿಯ ವಿಶ್ಲೇಷಣೆ ಹಾಗೂ ಮೌಲ್ಯಮಾಪನ

ವರ್ತಮಾನದ ಪ್ರಸ್ತುತ ಸನ್ನಿವೇಶದ ಒಂದು ವಿಶ್ಲೇಷಣೆಯು ಅದಕ್ಕೆ ಸಂಬಂಧಿಸಿದಂತೆ ಇರುವ ಸಾಂವಿಧಾನಿಕ ನಿಬಂಧನೆಗಳು, ಇಲ್ಲಿಯ ತನಕದ ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದ ನೀತಿಗಳು ಮತ್ತು ಕಾನೂನಾತ್ಮಕ ಷರತ್ತುಗಳು, ಯೋಜನಾ ಪ್ರಕ್ರಿಯೆಯ ವಿಕಾಸ, ಕಾರ್ಯಕ್ರಮದ ನಡುವೆ ನಡೆದ ವಿವಿಧ ಸುಧಾರಣಾ ಮಧ್ಯಸ್ಥಿಕೆಗಳು, ಹಾಗೂ ವಿವಿಧ ಮಂತ್ರಾಲಯಗಳ ಜವಾಬ್ದಾರಿಗಳ ಅವಲೋಕನವನ್ನೂ ಹಾಗೂ ಪ್ರಸ್ತುತ ಸನ್ನಿವೇಶದ ಬಗೆಗಿನ ಸ್ಥೂಲವಾದ ಪರಿಮಾಣಾತ್ಮಕ ಮೌಲ್ಯಮಾಪನವನ್ನೂ ಒಳಗೊಳ್ಳುತ್ತವೆ.

ಅಂತಿಮ ವಿಮರ್ಶಾತ್ಮಕ ಮೌಲ್ಯಮಾಪನವು ಸಾರ್ವಜನಿಕ ವಲಯವು0-6 ವರ್ಷದ ಒಳಗಿನ ವಯೋಮಿತಿಯಲ್ಲಿ ಕೇವಲ 22% ಮಕ್ಕಳನ್ನು ಮಾತ್ರ ಒಳಗೊಳ್ಳುತ್ತದೆ ಎಂಬುದನ್ನು ಗಮನಿಸಿದೆ. ಖಾಸಗಿ ವಲಯದ ವ್ಯಾಪ್ತಿಯ ಅಂಕಿ-ಅಂಶಗಳು ಲಭ್ಯವಿಲ್ಲ, ಇದು ಸಾರ್ವಜನಿಕ ವಲಯದಷ್ಟೇ ದೊಡ್ಡದಾಗಿರುವ ಸಾಧ್ಯತೆ ಇದೆ ಎಂದು ಅಂದಾಜಿಸಲಾಗಿದೆ. ಸಣ್ಣ ಗಾತ್ರದ NGO ವಲಯದ ವ್ಯಾಪ್ತಿಯಲ್ಲಿಯೂ ನಿಖರವಾದ ಅಂಕಿ-ಅಂಶಗಳು ಲಭ್ಯವಿಲ್ಲ, ಆದರೆ ಇಲ್ಲಿ ವಿವಿಧ ಮಾದರಿಗಳು ಸಿಗುತ್ತವೆ.

2002ರ 86ನೇ ಸಂವಿಧಾನ ತಿದ್ದುಪಡಿ ಕಾಯಿದೆಯು 6 ವರ್ಷಕ್ಕಿಂತ ಕಡಿಮೆ ಅವಧಿಯ ಮಕ್ಕಳಿಗೆ ಆರೈಕೆ ಮತ್ತು ಶಿಕ್ಷಣ ಒದಗಿಸುವ ಹೊಣೆಗಾರಿಕೆಯಿಂದ ರಾಜ್ಯವನ್ನು ಮುಕ್ತಗೊಳಿಸಿದ್ದು, ಇದು ನಕಾರಾತ್ಮಕ ಬೆಳವಣಿಗೆ ಎಂದು ಗಮನಿಸಲಾಗಿದೆ.

ಈ ಕಳವಳಕಾರಿ ಸನ್ನಿವೇಶಕ್ಕೆ ಏಕಸೂತ್ರವಿರದ ವಿಧಾನ ಮತ್ತು ವಿಘಟಿತ ಹೊಣೆಗಾರಿಕೆಗಳು ಮುಖ್ಯವಾದ ಕೆಲ ಕಾರಣಗಳು ಎಂದು ಈ ವರದಿಯು ಉಲ್ಲೇಖಿಸುತ್ತದೆ. ಅದು ತೀರ್ಮಾನಿಸುವ ಹಾಗೆ, ECCEಯನ್ನು 3 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗಾಗಿ DEE & L (Department of Elementary Education & Literacy) ಯೋಜನೆಯಲ್ಲಿ ಇರುವ ಎಲ್ಲಾ ಕಾರ್ಯಕ್ರಮಗಳ ಹೊಣೆಗಾರಿಕೆಗಳೊಂದಿಗೆ EFA (Education for All) ಮತ್ತು UEEಯ (Universal Elementary Education) ಚೌಕಟ್ಟಿನ ಒಳಗೆ ಸ್ಥಿರವಾಗಿ ನೆಲೆಗೊಳಿಸಬೇಕು, ಮತ್ತು 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಎಲ್ಲಾ ಕಾರ್ಯಕ್ರಮಗಳ ಹೊಣೆಗಾರಿಕೆಯು DWCD (Department of Women and Child Development)ಯದ್ದಾಗಿರಬೇಕು.

## 3 ಅತೀ ಮಹತ್ವದ ಸಮಸ್ಯೆಗಳು, ಸಾಮಾಜಿಕ ವಾಸ್ತವ ಹಾಗೂ ನೀತಿಯ ಪರಿಣಾಮಗಳು

ಈ ವರದಿಯು ಅತೀ ಮಹತ್ವದ ಸಮಸ್ಯೆಗಳು ಮತ್ತು ಸಾಮಾಜಿಕ ವಾಸ್ತವಗಳ ಒಂದು ವಿಶ್ಲೇಷಣೆಯನ್ನು ಒದಗಿಸುತ್ತದೆ, ಮತ್ತು ಅದರ ಜೊತೆಗೆ ನೀತಿಸೂತ್ರಗಳ ಪರಿಣಾಮಗಳನ್ನು ಸಹಾ ಗುರುತಿಸುತ್ತದೆ. ಹೆಚ್ಚಿನ ಸಮಸ್ಯೆಗಳು ECCEಯನ್ನು ಮುಖ್ಯವಾಹಿನಿಯ ಶೈಕ್ಷಣಿಕ ವ್ಯವಸ್ಥೆಯಲ್ಲಿ 'ಪರಿಗಣಿಸದ' ಕಾರಣದಿಂದಾಗಿ ಶುರುವಾಗಿವೆ, ಮತ್ತು ಸಾಮಾಜಿಕ ವಿಭಜನೆಗಳು, ನಿರ್ದಿಷ್ಟ ಸಾಮಾಜಿಕ ಸಮುದಾಯಗಳನ್ನು ಕುರಿತ ತಾರತಮ್ಯ, ಸೇವಾಸೌಲಭ್ಯಗಳ ಧ್ರುವೀಕರಣ ಇವೆಲ್ಲ ನಾನಾ ಬಗೆಯ ಜನರಿಗೆ ಲಭ್ಯವಾಗುವಂತಿರುವ ECCEಯ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತವೆ ಎಂದು ಅದು ವಾದಿಸುತ್ತದೆ. ಭಾರತದಲ್ಲಿ ಮುಖ್ಯವಾಗಿ ಬಡ ಗ್ರಾಮೀಣ ಮತ್ತು ನಗರದ ಉದ್ಯೋಗಸ್ಥ ಮಹಿಳೆಯರ ಮಕ್ಕಳ ಸೌಲಭ್ಯಕ್ಕೆಂದು ಇರುವ ಶಿಶುಪಾಲನಾ ಕೇಂದ್ರಗಳು ಮತ್ತು ಅಂಗನವಾಡಿಗಳ ಅಗತ್ಯವನ್ನು ಮನಗಾಣಲು ವಿಫಲವಾಗಿರುವುದಕ್ಕೆ ಭಾರತದ ಸಮಾಜದಲ್ಲಿ ಆಳವಾಗಿ ಬೇರೂರಿರುವ ಲಿಂಗ ತಾರತಮ್ಯ ಮತ್ತು ವ್ಯಾಪಕ ಪಿತೃ ಪ್ರಧಾನ ಮೌಲ್ಯಗಳು ಹೊಣೆ ಎನ್ನಲಾಗುತ್ತದೆ; ಈ ರೀತಿಯ ಅಲಕ್ಷ್ಯದಿಂದ ಕುಟುಂಬದ ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಈ ವರದಿಯು ಸಾರ್ವಜನಿಕ, ಖಾಸಗಿ ಮತ್ತು NGO –ಹೀಗೆ ಈ ಮೂರು ವಿಭಾಗಗಳ ಕಾರ್ಯತಂತ್ರಗಳನ್ನು ಮತ್ತು ನಿಯಂತ್ರಣದ ವಿಧಾನಗಳನ್ನು ಚರ್ಚಿಸುತ್ತದೆ. ಗುಣಾತ್ಮಕ ಪರಿಶೀಲನೆಯನ್ನು ಮಾಡಿದಾಗ ಸಾರ್ವಜನಿಕ ವಲಯದಲ್ಲಿ ಹೆಚ್ಚುಕಡಿಮೆ ಕಳಪೆ ಗುಣಮಟ್ಟದ ಸೌಲಭ್ಯಗಳು ಕಂಡುಬಂದವು; ಖಾಸಗಿ ವಲಯದಲ್ಲಿ ಮಹತ್ತರ ವ್ಯತ್ಯಾಸಗಳಿದ್ದವು, ಇಡೀ ವ್ಯವಸ್ಥೆಯ ಮೇಲೆ ಹಾನಿಕಾರಕ ಪ್ರಭಾವವನ್ನು ಬೀರುವ ಅಪಾಯಕಾರಿ ಮತ್ತು ಅಹಿತಕರ ರೂಢಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬಂದವು; NGO ವಲಯದಲ್ಲಿ ಅತ್ಯುತ್ತಮ ಗುಣಮಟ್ಟದ ಕೆಲವು ಬಿಡಿ ಮಾದರಿಗಳು ದೊರೆತವಾದರೂ ಅವೂ ಸಹ ನಿರೀಕ್ಷಿತ ಮಟ್ಟವನ್ನು ಸಾಧಿಸಿಲ್ಲ.

ಉತ್ತಮ ಗುಣಮಟ್ಟದ ಶಿಕ್ಷಣವು ಎಲ್ಲರಿಗೂ ಸಿಗುವಂತೆ ಮಾಡುವುದು ಹಾಗೂ ನಿಯಮಗಳು ಮತ್ತು ಮಾನದಂಡಗಳ ಅಗತ್ಯವನ್ನು ಕುರಿತೂ ಒತ್ತಿ ಹೇಳುತ್ತ ಈ ವರದಿಯು ಗುಣಮಟ್ಟವನ್ನು ನಿರ್ಧರಿಸುವ ಐದು ಮುಖ್ಯ ಆಯಾಮಗಳನ್ನು ಉಲ್ಲೇಖಿಸುತ್ತದೆ: ಸಮರ್ಪಕ ಪಠ್ಯಕ್ರಮ; ತರಬೇತಿ ಹೊಂದಿದ, ಸ್ಫೂರ್ತಿಯಿಂದ ಉತ್ಸಾಹಿತರಾದ ಮತ್ತು ಸೂಕ್ತ ಪ್ರತಿಫಲಗಳನ್ನು ಪಡೆದ ಶಿಕ್ಷಕರು; ಶಿಕ್ಷಕ-ಮಕ್ಕಳ ಅನುಪಾತ ಮತ್ತು ಗುಂಪಿನ ಗಾತ್ರವು ಸಮರ್ಪಕವಾಗಿರುವುದು; ಮೇಲುಸ್ತುವಾರಿ ವ್ಯವಸ್ಥೆ; ಮತ್ತು ಮಕ್ಕಳಿಗೆ ಅನುಕೂಲವಾಗುವಂತಹ ಮೂಲಸೌಕರ್ಯಗಳು.

ಇದರ ನಂತರ ವರದಿಯು ನಿಯಂತ್ರಣ ವಿಧಾನಗಳ ಬಗೆಗೆ ಹಾಗೂ ಸಕ್ರಿಯ ಬೆಂಬಲದೊಂದಿಗೆ ಪಾಲಕರು, ಕುಟುಂಬಗಳು ಮತ್ತು ಸಮುದಾಯಗಳನ್ನು ಸಬಲೀಕರಿಸುವ ಅಗತ್ಯವನ್ನು ಕುರಿತು ಚರ್ಚಿಸುತ್ತದೆ.

ಶಿಕ್ಷಕರ ಸಂಬಳ ಮತ್ತು ಕೆಳಮಟ್ಟದ ಸ್ಥಿತಿ, ಶಿಕ್ಷಕ ತರಬೇತಿ ಕಾರ್ಯಕ್ರಮಗಳ ಕಳಪೆ ಗುಣಮಟ್ಟ, ಯೋಗ್ಯ ಶಿಕ್ಷಕರನ್ನು ಗುರುತಿಸುವ ಹಾಗೂ ಅಧಿಕೃತವಾಗಿ ಮಾನ್ಯ ಮಾಡುವುದನ್ನು ಕುರಿತು, ಹಾಗೂ 'ತರಬೇತಿ ಹೊಂದದ' ದೊಡ್ಡ ಸಂಖ್ಯೆಯ ಶಿಕ್ಷಕರ ಸಮಸ್ಯೆಯನ್ನು ನಿರ್ವಹಿಸುವ ತುರ್ತು ಅಗತ್ಯದ ಬಗ್ಗೆ ವರದಿಯು ನಮ್ಮ ಗಮನ ಸೆಳೆಯುತ್ತದೆ.

ಉತ್ತಮ ಗುಣಮಟ್ಟದ ಕಾರ್ಯಪಡೆಯನ್ನು ಕಟ್ಟುವ ನಿಟ್ಟಿನಲ್ಲಿ ಇಡುವ ಹೆಜ್ಜೆಗಳನ್ನು ವರದಿಯು ವಿವರಿಸುತ್ತದೆ. ವೈವಿಧ್ಯಮಯ ಕೋರ್ಸುಗಳ ಮೂಲಕ

ಎಲ್ಲಾ ಪ್ರಕಾರದ ಮತ್ತು ಹಂತಗಳ ಕಾರ್ಯಕ್ರಮಗಳಿಗೆ ಎಲ್ಲಾ ವಿಭಾಗಗಳಲ್ಲಿಯೂ ತರಬೇತಿ ನೀಡುವುದು, ಬಹುವಿಧದ ಮಾದರಿಗಳು ಮತ್ತು ಸಂದರ್ಭಗಳಿಗೆ ಹೊಂದಿಕೊಳ್ಳಬಹುದಾದ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳುವುದು, ಎಲ್ಲರಿಗೂ ನ್ಯಾಯಯುತ ಸಂಬಳ ಸಿಗುವಂತಾಗುವುದು, ತರಬೇತಿದಾರರ ಸಾಮರ್ಥ್ಯವನ್ನು ರೂಪಿಸುವುದು, ಕಲಿಕೆಯ ಮತ್ತು ಬೋಧನೆಯ ಸಾಮಗ್ರಿಗಳನ್ನು ಒದಗಿಸುವುದು, ಮತ್ತು ಅಧಿಕೃತವಾಗಿ ಮಾನ್ಯಮಾಡುವುದನ್ನು ಇದು ಒಳಗೊಳ್ಳುತ್ತದೆ.

ತರಗತಿಕೋಣೆಯಲ್ಲಿ ಎದುರಾಗುವ ಬಹುಭಾಷಾ ಸನ್ನಿವೇಶವನ್ನು ಕುರಿತು ಮತ್ತು 'ಆಂಗ್ಲ ಮಾಧ್ಯಮ' ಶಾಲೆಗಳ ಸಲುವಾಗಿ ಎಲ್ಲಾ ವರ್ಗಗಳಿಂದಲೂ ಬರುವ ಅಗಾಧ ಒತ್ತಡವನ್ನು ಕುರಿತೂ ಈ ವರದಿಯು ಚರ್ಚಿಸುತ್ತದೆ; ಭಾಷಾ ಬೋಧನೆಗಾಗಿ ಕೆಲವು ಹೊಸಬಗೆಯ ಸಲಹೆಗಳನ್ನೂ ಇದು ನೀಡುತ್ತದೆ.

## 4. ಮುಂದಿನ ಹಾದಿ: ನೀತಿ ಮಾದರಿಗಳ ಬದಲಾವಣೆ

ECEಯಲ್ಲಿ ಎದುರಾದ ಅನೇಕ ಪ್ರಸ್ತುತ ಸಮಸ್ಯೆಗಳು ಹಿಂದಿನ ಕಾರ್ಯನೀತಿಗಳಫಲವಾದದ್ದರಿಂದ ಮಕ್ಕಳಿಗೆ ನ್ಯಾಯ ಒದಗಿಸಲು ಈಗ ಪಠ್ಯಕ್ರಮ ಸುಧಾರಣೆಗೂ ಮೊದಲು ನೀತಿಗಳಲ್ಲಿ ಮುಖ್ಯವಾದ ಬದಲಾವಣೆಗಳನ್ನು ಮಾಡಬೇಕಾಗುತ್ತದೆ.

I. **ECCEಯ ಮೌಲ್ಯ**: ECCEಯು ಎಲ್ಲಾ ಮಕ್ಕಳ ಬೆಳವಣಿಗೆಗೂ ಅತ್ಯಗತ್ಯವಾದದ್ದು ಮತ್ತು ಪ್ರತೀ ಮಗುವಿಗೂ ಸಮಾನ ಗುಣಮಟ್ಟದ ECCEಯನ್ನು ಪಡೆಯುವ ಹಕ್ಕಿದೆ ಎಂಬುದನ್ನು ಗುರುತಿಸುವುದು ಮತ್ತು ಸ್ವೀಕರಿಸುವುದು ಮೊದಲ ಹೆಜ್ಜೆ. ECCEಯು ಶೈಕ್ಷಣಿಕವಾಗಿ ಮೊದಲ ಮೆಟ್ಟಿಲು.

   ಅದು EFAಯ ಭಾಗವಾಗಬೇಕು. DEE&L ಮೂರಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳಿಗಾಗಿ ಇರುವ ಎಲ್ಲಾ ಕಾರ್ಯಕ್ರಮಗಳ ಜವಾಬ್ದಾರಿಯನ್ನು ಮತ್ತು DWCDಯು 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು.

II. **ಸಂಪನ್ಮೂಲಗಳ ಹಂಚಿಕೆ**: ಪ್ರತೀ ಮಗುವಿಗೂ ಸಮಾನ ಗುಣಮಟ್ಟದ ECCEಯನ್ನು ಒದಗಿಸುವ ಉದ್ದೇಶವಿದೆ ಅಂದರೆ ಅಲ್ಲಿ ಸಂಪನ್ಮೂಲಗಳ ಹಂಚಿಕೆಯು ದೊಡ್ಡ ಪ್ರಮಾಣದಲ್ಲಿಯೇ ನಡೆಯಬೇಕು ಎಂದರ್ಥ. ಜಾಗತಿಕ ಮಟ್ಟದ ಅಧ್ಯಯನಗಳು ಸೂಚಿಸುವ ಹಾಗೆ ಒಂದು ಮಗುವಿನ 85% ಮಿದುಳಿನ ಪ್ರಮುಖ ಸಂರಚನೆಯು ಆರಂಭಿಕ ವರ್ಷಗಳಲ್ಲಿಯೇ ಪೂರ್ಣಗೊಳ್ಳುತ್ತದೆ, 6 ವರ್ಷಕ್ಕಿಂತ ಕಡಿಮೆ ಮಯಸ್ಸಿನ ಮಕ್ಕಳಿಗೆ ಮಾಡುತ್ತಿರುವ ವಾಸ್ತವಿಕ ಖರ್ಚು 6-14ರ ವಯಸ್ಸಿನ ಮಕ್ಕಳ ಖರ್ಚಿನ ಕೇವಲ 1/8 ಭಾಗ (ಪ್ರತೀ ಮಗುವಿಗೆ) ಮಾತ್ರವಾಗಿದೆ.

III. **ಎಲ್ಲರಿಗೂ ಗುಣಮಟ್ಟದ ಖಾತರಿ**: ಬಹು ಮಾದರಿಗಳು, ವೈವಿಧ್ಯಮಯ ವಿಭಾಗಗಳು, ಒಂದು ಅವಧಿಯ ನಂತರ ರೂಪುಗೊಳಿಸಲಾದ ವಿವಿಧ ವಿಧಾನಗಳು ಇವೆಲ್ಲದರ ಅಸ್ತಿತ್ವವನ್ನು ಒಂದು ಸಾಮಾನ್ಯ ಚೌಕಟ್ಟಿನ ಒಳಗೆ ಸ್ವೀಕರಿಸಬೇಕು. ಕೆಲವು ಮೂಲಭೂತ ನಿಯಮಗಳು ಮತ್ತು ಮಾನದಂಡಗಳಿಗೆ, ಹಾಗೂ ಗುಣಮಟ್ಟದ ಐದು ಮೂಲಭೂತ ಆಯಾಮಗಳಿಗೆ ಬೇರೆ ಬೇರೆ ಕಾರ್ಯತಂತ್ರಗಳ ಮೂಲಕ ಬದ್ಧವಾಗಬೇಕಾಗುತ್ತದೆ. ಇದರ ಜೊತೆಗೆ ಅಗತ್ಯಕ್ಕೆ ತಕ್ಕಂತೆ ನಿಯಂತ್ರಣವನ್ನೂ ಮಾಡುತ್ತ ವಿವಿಧ ಸಾಂದರ್ಭಿಕ ವಾಸ್ತವಗಳಿಗೆ ಹೊಂದಿಕೊಳ್ಳುವುದು ಮತ್ತು ಒಂದು ಅರ್ಥಪೂರ್ಣ ಭಾಷಾ ನೀತಿಯನ್ನು ಅಳವಡಿಸಿಕೊಳ್ಳುವುದು ಕೂಡಾ ಮುಖ್ಯವಾಗುತ್ತದೆ.

IV. **ಸಕ್ರಿಯ ಬೆಂಬಲಕ್ಕಾಗಿ ಜನಜಾಗೃತಿ**: ಪಾಲಕರಿಂದ ಹಿಡಿದು ನೀತಿ ನಿರೂಪಕರವರೆಗೆ ಸಕ್ರಿಯ ಬೆಂಬಲಕ್ಕಾಗಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸಮೂಹ ಮಾಧ್ಯಮಗಳನ್ನು ತೊಡಗಿಸಿಕೊಂಡ ಒಂದು ವ್ಯಾಪಕ ಮತ್ತು ಸತತವಾಗಿ ಚಾಲ್ತಿಯಲ್ಲಿರುವ ಆಂದೋಲನವು ಅಗತ್ಯವಾಗುತ್ತದೆ. ಇದಕ್ಕೆ ಸೂಕ್ತ ಸಂಪನ್ಮೂಲಗಳನ್ನು ಒದಗಿಸುವ ಅಗತ್ಯವಿದೆ, ಮತ್ತು ವಿವಿಧ ರೂಪದ ಅಗತ್ಯ ಸಾಮಗ್ರಿಗಳನ್ನು ಸಜ್ಜುಗೊಳಿಸಲು ಸರಕಾರವು ನಾಯಕತ್ವ ವಹಿಸಿಕೊಳ್ಳಬೇಕಾಗುತ್ತದೆ. ಸಕ್ರಿಯ ಬೆಂಬಲವನ್ನು ಉದ್ದೇಶಿಸಿದ ಆಂದೋಲನವು ಮಕ್ಕಳ ಬದುಕಿನಲ್ಲಿ ಈ ಆರಂಭಿಕ ವರ್ಷಗಳು ಎಷ್ಟು ಮಹತ್ವದ್ದು ಎನ್ನುವುದನ್ನು ಜನರಿಗೆ ತಲುಪಿಸಬೇಕಾಗುತ್ತದೆ, ಇದನ್ನು ಅಲಕ್ಷ್ಯ ಮಾಡಿದರೆ ಆಗುವ ಅಪಾಯಗಳ ಬಗೆಗೆ ಅದು ಎಚ್ಚರಿಸಬೇಕು ಮತ್ತು ECCEಯ ವ್ಯಾಪ್ತಿ, ಅರ್ಥ, ಮತ್ತು ಉದ್ದೇಶಗಳನ್ನೂ ವಿವರಿಸಬೇಕು.

V. **ಸಾಮರ್ಥ್ಯ ನಿರ್ಮಾಣ**: ನಂತರದಲ್ಲಿನ ಒಂದು ಮುಖ್ಯವಾದ ಕೆಲಸವೆಂದರೆ ಈ ಮೊದಲೇ ಹೇಳಿದಂತೆ ಎಲ್ಲಾ ಹಂತಗಳಲ್ಲಿಯೂ ಸಾಮರ್ಥ್ಯ ನಿರ್ಮಾಣದ ಕಾರ್ಯಕ್ಕೆ ನೇರವಾಗಿ ಒಂದು ಬೃಹತ್ ಪ್ರಮಾಣದ ಮತ್ತು ದೀರ್ಘಾವಧಿಯ ಕಾರ್ಯಕ್ರಮವನ್ನು ಜಾರಿಗೊಳಿಸುವುದು. ಈಗ ಅಸ್ತಿತ್ವದಲ್ಲಿರುವ ಕೌಶಲ್ಯಗಳು ಮತ್ತು ಸಂಸ್ಥೆಗಳ ಸಾಮರ್ಥ್ಯವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವರ್ಧಿಸುವ ದಿಸೆಯಲ್ಲಿ DEE&L ಗೆ ಮುಖ್ಯವಾದ ಪಾತ್ರವಿದೆ.

VI. **ಇತರ ಪ್ರಮುಖ ಕೆಲಸಗಳು**:

- ಎಳೆಯ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ ಮಂತ್ರಾಲಯಗಳೂ ಒಂದು ಉದ್ದೇಶಕ್ಕಾಗಿ ಒಗ್ಗೂಡುವುದು
- ವಿವಿಧ ಸ್ವಾಯತ್ತ ಸಂಸ್ಥೆಗಳ ನಡುವಿನ ಸಹಕಾರ-ಸಂಯೋಜನೆ
- ವಿವಿಧ ಶೈಕ್ಷಣಿಕ ಸಂಸ್ಥೆಗಳ ನಡುವೆ ಸಂಪರ್ಕಜಾಲ
- ಒಂದು ದತ್ತಾಂಶ ಸಂಚಯದ ನಿಟ್ಟಿನ ವರದಿ ವ್ಯವಸ್ಥೆಗಳನ್ನು ರೂಪಿಸುವುದು
- ಅನುಷ್ಠಾನಕ್ಕೆ ತರಲು ಮತ್ತು ಮೇಲ್ವಿಚಾರಣೆ ಮಾಡಲು ಪ್ರತೀ ಹಂತಗಳಲ್ಲಿಯೂ ಸಾಂಸ್ಥಿಕ ಕಾರ್ಯವಿಧಾನಗಳು
- ಈ ಪ್ರಕ್ರಿಯೆಗಳಲ್ಲಿ ಸಮರ್ಥವಾಗಿ ಪಾಲ್ಗೊಳ್ಳಲು ಪಂಚಾಯತ್ ರಾಜ್ ಸಂಸ್ಥೆಗಳ (PRI) ಸಬಲೀಕರಣ.
- ಸಂಶೋಧನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ಸಮರ್ಪಕ ಸಂರಚನೆಗಳು ಮತ್ತು ಸಂಸ್ಥೆಗಳು

## 5. ECCEಯ ಪಠ್ಯಕ್ರಮ ಚೌಕಟ್ಟು

ECCEಗೆ ಸ್ಥೂಲವಾಗಿ ಮೂರು ಉದ್ದೇಶಗಳಿವೆ:

- ಮಗುವು (ಅವನು/ಅವಳು) ತನ್ನ ಗರಿಷ್ಠ ಸಾಮರ್ಥ್ಯವನ್ನು ಸಾಧಿಸಿಕೊಳ್ಳಲು ಸಮರ್ಥವಾಗುವ ರೀತಿಯಲ್ಲಿ ಮಗುವಿನ ಸರ್ವತೋಮುಖ ಬೆಳವಣಿಗೆ.
- ಶಾಲಾ ಶಿಕ್ಷಣಕ್ಕೆ ಸಿದ್ಧಗೊಳಿಸುವುದು, ಮತ್ತು
- ಮಹಿಳೆಯರು ಮತ್ತು ಹೆಣ್ಣು ಮಕ್ಕಳಿಗೆ ಬೆಂಬಲ ಸೇವೆಗಳನ್ನು ಒದಗಿಸುವುದು.

ಪಠ್ಯಕ್ರಮವನ್ನು ವಯೋಮಾನಕ್ಕೆ ತಕ್ಕ, ಎಲ್ಲಾ ಕ್ಷೇತ್ರಗಳನ್ನೂ ಒಳಗೊಂಡ, ಆಟಗಳನ್ನು ಆಧರಿಸಿದ, ಸಮನ್ವಯೀಕೃತ, ಅನುಭವಾತ್ಮಕ, ಸಂದರ್ಭಕ್ಕೆ

ಹೊಂದಿಕೊಳ್ಳುವ (flexible) ಮತ್ತು ಸಾಂದರ್ಭಿಕ (contextual) ಎಂಬ ನಿಟ್ಟಿನಲ್ಲಿ ವ್ಯಾಖ್ಯಾನಿಸಲಾಗುತ್ತದೆ. ECCE ಪಠ್ಯಕ್ರಮದ ಮಾರ್ಗದರ್ಶಿ ತತ್ವಗಳು ಹೀಗಿವೆ:

- ಕಲಿಕೆಗೆ ಆಟವನ್ನು ಮೂಲಾಧಾರವನ್ನಾಗಿಸುವುದು
- ಶಿಕ್ಷಣಕ್ಕೆ ಕಲೆಯು ಮೂಲಾಧಾರ
- ಮಕ್ಕಳ ಆಲೋಚನೆಯಲ್ಲಿನ ವಿಶಿಷ್ಟ ಲಕ್ಷಣಗಳನ್ನು ಗುರುತಿಸುವುದು
- ಪರಿಣತಿಗಿಂತ ಅನುಭವಕ್ಕೆ ಹೆಚ್ಚು ಆದ್ಯತೆ
- ದಿನನಿತ್ಯದ ಕ್ರಿಯೆಗಳಲ್ಲಿ ನಿಕಟತೆಯ ಮತ್ತು ಸವಾಲುಗಳ ಅನುಭವ
- ಔಪಚಾರಿಕ ಮತ್ತು ಅನೌಪಚಾರಿಕ ಸಂವಹನಗಳೆರಡನ್ನೂ ಸಂಯುಕ್ತಗೊಳಿಸುವುದು
- ಪಠ್ಯಾಧಾರಿತ (ಬುನಾದಿ ಸ್ವರೂಪದ ಅಕ್ಷರಕಲಿಕೆ ಮತ್ತು ಗಣಿತಜ್ಞತೆ) ಮತ್ತು ಸಾಂಸ್ಕೃತಿಕ ಎರಡನ್ನೂ ಒಳಗೊಳ್ಳುವುದು
- ಸ್ಥಳೀಯ ಸಾಮಗ್ರಿಗಳು, ಕಲೆಗಳು ಮತ್ತು ಜ್ಞಾನದ ಬಳಕೆ
- ಬೆಳವಣಿಗೆಗೆ ಸಂಬಂಧಿಸಿದಂತೆ ಸಮರ್ಪಕ ಅಭ್ಯಾಸ, ಹೊಂದಿಕೊಳ್ಳುವಿಕೆ ಮತ್ತು ಬಹುತ್ವ
- ಆರೋಗ್ಯ, ಸ್ವಾಸ್ಥ್ಯ ಮತ್ತು ಆರೋಗ್ಯಕರ ಅಭ್ಯಾಸಗಳು

ನಂತರ, ವರದಿಯು ಬೆಳವಣಿಗೆಯ ಬೇರೆ ಬೇರೆ ಕ್ಷೇತ್ರಗಳ, 'ಹುಟ್ಟಿನಿಂದ 8 ವರ್ಷಗಳವರೆಗಿನ' ಪ್ರತೀ ಉಪಗುಂಪಿನ ಬೆಳವಣಿಗೆಗೆ ಸಂಬಂಧಿಸಿದ ಗುಣಲಕ್ಷಣಗಳ, ಮತ್ತು ಬೆಳವಣಿಗೆಯ ಗುರಿಗಳನ್ನು ಸಾಧಿಸಲು ಸಹಾಯ ಮಾಡುವ ಅನುಭವಗಳಿಗೆ ಸಂಬಂಧಿಸಿದಂತೆ ಮಗುವಿನ ಅಗತ್ಯಗಳ ಸ್ಥೂಲ ನಕ್ಷೆಯನ್ನು ನೀಡುತ್ತದೆ. ಮೂಲಭೂತ ತತ್ವಗಳ ಆಧಾರದ ಮೇಲೆ ಪ್ರತೀ ವಯೋಮಾನದ ಗುಂಪುಗಳಿಗೆ (0-2+, 3-5+, 6-8+) ವಯೋ ನಿರ್ದಿಷ್ಟವಾದ ಪಠ್ಯಕ್ರಮ ಚೌಕಟ್ಟುಗಳನ್ನು ಹೇಳಲಾಗಿದೆ. ಸಮನ್ವಯ ಶಿಕ್ಷಣ ಮತ್ತು ಭಾಷಾ ನೀತಿಗಳನ್ನು ಕುರಿತೂ ಇದರಲ್ಲಿ ಪ್ರಸ್ತಾಪಿಸಲಾಗಿದೆ.

## ಆರಂಭಿಕ ಬಾಲ್ಯದ ಶಿಕ್ಷಣವನ್ನು ಕುರಿತು ಗಮನವನ್ನು ಕೇಂದ್ರೀಕರಿಸಿದ ರಾಷ್ಟ್ರೀಯ ತಂಡದ ಸದಸ್ಯರು

ಶ್ರೀಮತಿ ಮೀನಾ ಸ್ವಾಮಿನಾಥನ್ (ಅಧ್ಯಕ್ಷರು)

ಮಾನನೀಯ ಕಾರ್ಯಕ್ರಮ ನಿರ್ದೇಶಕರು
ಉತ್ತರಾ ದೇವಿ ರಿಸೋರ್ಸ್ ಸೆಂಟರ್ ಫಾರ್ ಜಂಡರ್ ಅಂಡ್ ಡೆವಲಪ್‌ಮೆಂಟ್,
ಎಂ. ಎಸ್. ಸ್ವಾಮಿನಾಥನ್ ರಿಸರ್ಚ್ ಫೌಂಡೇಶನ್,
ಚೆನ್ನೈ-600 113

ಡಾ. (ಶ್ರೀಮತಿ) ಆದರ್ಶ್ ಶರ್ಮಾ
ನಿರ್ದೇಶಕರು,
ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಕೋಆಪರೇಶನ್ ಅಂಡ್ ಚೈಲ್ಡ್ ಡೆವಲಪ್‌ಮೆಂಟ್ (NIPCCD),
ನ್ಯೂಡೆಲ್ಲಿ -110 016

ಡಾ. ಎಸ್. ಆನಂದಲಕ್ಷ್ಮಿ

ಮಾಜಿ ನಿರ್ದೇಶಕಿ
ಲೇಡಿ ಇರ್ವಿನ್ ಕಾಲೇಜ್
A-204 ಮಾನಸ್‌ಸರೋವರ್
19, 3ನೇ ಸೀವರ್ಡ್ ರೋಡ್, ಬಾಲ್ಮೀಕಿ ನಗರ್,
ಚೆನ್ನೈ-600 041

ಡಾ. ರೊಮಿಲಾ ಸೋನಿ
ಶಿಕ್ಷಕಿ
ಪ್ರಾಥಮಿಕ ಶಿಕ್ಷಣ ಇಲಾಖೆ

NCERT
ನ್ಯೂಡೆಲ್ಲಿ-110 016

ಡಾ. ಜಿ ಸಿ ಉಪಾಧ್ಯಾಯ
ರೀಡರ್
ಪ್ರಾಥಮಿಕ ಶಿಕ್ಷಣ ಇಲಾಖೆ
NCERT
ನ್ಯೂಡೆಲ್ಲಿ-110 016

ಶ್ರೀಮತಿ ಎಸ್ ಎಸ್ ಜಯಲಕ್ಷ್ಮಿ
ನಿರ್ದೇಶಕರು, ವಿದ್ಯಾ ವಿಕಾಸಿನಿ ಸೊಸೈಟಿ,
ಕೊಯಂಬತ್ತೂರ್ -641 034

ಡಾ, ಪ್ರೇರಣಾ ಮೋಹಿತೆ
ಮುಖ್ಯಸ್ಥರು, HDFC ಇಲಾಖೆ
ಹೋಮ್ ಸೈನ್ಸ್ ವಿಭಾಗ,
ಎಂ. ಎಸ್. ಯೂನಿವರ್ಸಿಟಿ, ಬರೋಡ, ಗುಜರಾತ್

ಡಾ. ಕೆ ಲಕ್ಷ್ಮಿ
ಗೌರವ ನಿರ್ದೇಶಕರು
ರಾಜ್ಯ ಸಂಪನ್ಮೂಲ ಕೇಂದ್ರ-ECCE
ಆಂಧ್ರ ಮಹಿಳಾ ಸಭಾ (ಅಕಡೆಮಿಕ್ ಕ್ಯಾಂಪಸ್)
ಹೈದರಾಬಾದ್ -500 007

ಡಾ. ಆಶಾ ಸಿಂಗ್
ರೀಡರ್
ಮಕ್ಕಳ ಅಭಿವೃದ್ಧಿ ವಿಭಾಗ
ಲೇಡಿ ಇರ್ವಿನ್ ಕಾಲೇಜ್, ನ್ಯೂಡೆಲ್ಲಿ -110 001

ಡಾ. ಕೆ. ಉಷಾ ಅಬ್ರೋಲ್
ಪ್ರಾದೇಶಿಕ ನಿರ್ದೇಶಕರು
NIPCCD
ಬೆಂಗಳೂರು -560 064
ಕರ್ನಾಟಕ

ಡಾ. ವಿನಿತ ಕೌಲ್
ಹಿರಿಯ ಶಿಕ್ಷಣ ತಜ್ಞೆ
ವಿಶ್ವ ಬ್ಯಾಂಕ್
ನ್ಯೂ ಡೆಲ್ಲಿ -110 003

ಶ್ರೀಮತಿ ಫೇನಿ ತಾರಾಪೂರ್
ಅಧ್ಯಕ್ಷರು, IAPE,
ಪುಣೆ -411 039

ಪ್ರೊಫೆಸರ್ ವಿ. ಪಿ. ಗುಪ್ತಾ (ಮೆಂಬರ್-ಸೆಕ್ರೆಟರಿ)
DEME (ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನಲ್ ಮೆಷರ್‌ಮೆಂಟ್ ಅಂಡ್ ಇವ್ಯಾಲ್ಯುಯೇಷನ್,
NCERT, ನ್ಯೂಡೆಲ್ಲಿ -110 016

ಡಾ. ವೃಂದಾ ದತ್ತಾ (ಆಹ್ವಾನಿತರು)
ರೀಡರ್
ಯೂನಿಟ್ ಫಾರ್ ಫ್ಯಾಮಿಲಿ ಅಂಡ್ ಚೈಲ್ಡ್ ವೆಲ್‌ಫೇರ್
ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸಸ್

ಮುಂಬೈ -400 088
ಮಹಾರಾಷ್ಟ್ರ

**ಕೃತಜ್ಞತೆಗಳು**

ನಮಗೆ ದೊರೆತ ಸೀಮಿತ ಅವಧಿಯಲ್ಲಿ ಈ ಕೆಲಸವನ್ನು ಸಮರೋಪಾದಿಯಲ್ಲಿ ಮುಗಿಸಲು ಆಳವಾಗಿ ತೊಡಗಿಕೊಂಡ ಮತ್ತು ತೋರಿದ ಬದ್ಧತೆಯ ಸಲುವಾಗಿ ಈ ತಂಡದ ಪ್ರತಿಯೊಬ್ಬ ಸದಸ್ಯರಿಗೂ ನಾನು ಋಣಿಯಾಗಿದ್ದೇನೆ, ಅವರ ಪ್ರಯತ್ನವಿಲ್ಲದೇ ಈ ಕೆಲಸವು ಪೂರ್ಣಗೊಳ್ಳುತ್ತಿರಲಿಲ್ಲ.

ಇಡೀ ತಂಡವು ಭಾರತದ ಆರು ನಗರಗಳ ಸಮಾಲೋಚನಾ ಸಭೆಗಳಲ್ಲಿ ವಿವಿಧ ಭಾಗೀದಾರರನ್ನು ಪ್ರತಿನಿಧಿಸಿದ ಅನೇಕ ವ್ಯಕ್ತಿಗಳಿಗೆ ಋಣಿಯಾಗಿದೆ. ಅಲ್ಲಿ ನಡೆದ ಚರ್ಚೆಗಳು ನಿಜಕ್ಕೂ ಫಲದಾಯಕವಾಗಿದ್ದವು ಮತ್ತು ಈ ವರದಿಯು ಒಂದು ಆಕಾರ ತಳೆಯುವುದಕ್ಕೆ ಕಾರಣವಾದವು.

ಮೀನಾ ಸ್ವಾಮಿನಾಥನ್
ಅಧ್ಯಕ್ಷರು

## ವಿಷಯಸೂಚಿ

ಕಾರ್ಯಕಾರಿ ಸಾರಾಂಶ
ಆರಂಭಿಕ ಬಾಲ್ಯದ ಶಿಕ್ಷಣವನ್ನು ಕುರಿತು ಗಮನವನ್ನು ಕೇಂದ್ರೀಕರಿಸಿದ ರಾಷ್ಟ್ರೀಯ ತಂಡದ ಸದಸ್ಯರು

1. ಆರಂಭಿಕ ಬಾಲ್ಯವನ್ನು ಕುರಿತ ಜಾಗತಿಕ ನೋಟ
   1.1 ಆರಂಭಿಕ ವರ್ಷಗಳ ಮಹತ್ವ
   1.2 ಹೊರಮ್ಮುತ್ತಿರುವ ಪರಿಕಲ್ಪನೆಗಳು
   1.3 ಜಾಗತಿಕ ಸಂದರ್ಭ
   1.4 ಭಾರತದ ಸಂದರ್ಭದಲ್ಲಿ
   1.5 ಜಾಗತಿಕವಾಗಿ ಚಿಕ್ಕ ಮಕ್ಕಳ ಸ್ಥಿತಿ
   1.6 ಜಾಗತಿಕ ಬೆಳವಣಿಗೆಗಳು
   1.7 ಭಾರತದ ಮಗುವಿನ ಚಿತ್ರಣ
2. ಭಾರತದ ಸಂದರ್ಭ: ಸನ್ನಿವೇಶದ ವಿಶ್ಲೇಷಣೆ ಮತ್ತು ಮೌಲ್ಯನಿರ್ಣಯ
   2.1 ಒಂದು ಚಾರಿತ್ರಿಕ ನೋಟ
   2.2 ವ್ಯಾಪ್ತಿ ಮತ್ತು ಪ್ರವೇಶದ ಅವಕಾಶ (access)
   2.3 ಒಂದು ವಿಮರ್ಶಾತ್ಮಕ ಮೌಲ್ಯನಿರ್ಣಯ
3. ನಿರ್ಣಾಯಕ ಸಮಸ್ಯೆಗಳು, ಸಾಮಾಜಿಕ ವಾಸ್ತವ ಮತ್ತು ನೀತಿಯ ಪರಿಣಾಮಗಳು
   3.1 ಸಾಮಾಜಿಕ ವಿಭಜನೆಗಳು: ಸಮಾನತೆ, ಪ್ರವೇಶದ ಅವಕಾಶ ಮತ್ತು ಗುಣಮಟ್ಟ
   3.2 ECCEಯ ಗುಣಾತ್ಮಕ ಚಿತ್ರಣ
   3.3 ಎಲ್ಲರಿಗೂ ಸಮಾನ ಗುಣಮಟ್ಟವನ್ನು ಖಚಿತಪಡಿಸುವುದು
   3.4 ಭಾಷೆಗಳಿಗೆ ಸಂಬಂಧಿಸಿದ ವಿಷಯಗಳು
4. ಮುಂದಿನ ಹಾದಿ: ನೀತಿ ಮಾದರಿಗಳ ಬದಲಾವಣೆ
   4.1 ECCEಯ ಮೌಲ್ಯ ಮತ್ತು ಅದನ್ನು EFAಯ ಭಾಗವೆಂದು ಪರಿಗಣಿಸುವುದು
   4.2 ಸಂಪನ್ಮೂಲಗಳ ಹಂಚಿಕೆ
   4.3 ಎಲ್ಲರಿಗೂ ಸಮಾನ ಗುಣಮಟ್ಟವನ್ನು ದೊರಕಿಸುವುದು: ಕಾರ್ಯತಂತ್ರಗಳು ಮತ್ತು ಸಾಧನಗಳು
   4.4 ಸಕ್ರಿಯ ಬೆಂಬಲ

4.5 ಸಾಮರ್ಥ್ಯ ನಿರ್ಮಾಣ
4.6 ಸಮ್ಮಿಲನ
4.7 ಉಪಸಂಹಾರ

5. ECCEಯ ಪಠ್ಯಕ್ರಮ ಚೌಕಟ್ಟು
5.1 ಬೋಧನೆಯ ಪ್ರಕ್ರಿಯೆ
5.2 ಪಠ್ಯಕ್ರಮ ಚೌಕಟ್ಟಿನ ಮೂಲತತ್ವಗಳು
5.3 ಶಿಶುಗಳು ಮತ್ತು ಪುಟ್ಟ ಮಕ್ಕಳ (0-2+ವಯೋಮಾನದ) ಪಠ್ಯಕ್ರಮ
5.4 3-5+ ವಯೋಮಾನದ ಮಕ್ಕಳ ಪಠ್ಯಕ್ರಮ
5.5 3-5+ ವಯೋಮಾನದ ಮಕ್ಕಳಿಗೆ ಸಂಬಂಧಿಸಿದ ಇತರ ವಿಷಯಗಳು
5.6 6-8+ ವಯೋಮಾನದ ಮಕ್ಕಳ ಆರಂಭದ ಪ್ರಾಥಮಿಕ ಹಂತದ ಪಠ್ಯಕ್ರಮ

ಪರಾಮರ್ಶನ ಗ್ರಂಥಗಳು

# 1. ಆರಂಭಿಕ ಬಾಲ್ಯವನ್ನು ಕುರಿತ ಜಾಗತಿಕ ನೋಟ

## 1.1 ಆರಂಭಿಕ ವರ್ಷಗಳ ಮಹತ್ವ

ಒಂದು ಮಗುವಿನ ಬದುಕಿನಲ್ಲಿ ಆರಂಭಿಕ ಬಾಲ್ಯವೆಂದು ಕರೆಯುವ ಮೊದಲ 6-8 ವರ್ಷಗಳು ಮಗುವಿನ ಜೀವನಪೂರ್ತಿ ಬೆಳವಣಿಗೆಯ ಅತೀ ಮಹತ್ವದ ಅಥವಾ ನಿರ್ಣಾಯಕ ಹಂತವೆಂದು ಜಾಗತಿಕವಾಗಿ ಒಪ್ಪಿಕೊಳ್ಳಲಾಗಿದೆ, ಏಕೆಂದರೆ ಆ ಅವಧಿಯಲ್ಲಿ ಮಗುವಿನ ಬೆಳವಣಿಗೆಯು ಶೀಘ್ರ ಗತಿಯಲ್ಲಿ ನಡೆಯುತ್ತದೆ. ನರವಿಜ್ಞಾನದಲ್ಲಿ ನಡೆದ ಇತ್ತೀಚಿನ ಸಂಶೋಧನೆಯು, ಅದರಲ್ಲೂ ಮುಖ್ಯವಾಗಿ ಮೆದುಳಿಗೆ ಸಂಬಂಧಿಸಿದ ಸಂಶೋಧನೆಯು ಈ ಆರಂಭಿಕ ವರ್ಷಗಳಲ್ಲಿ ಸ್ಥಿತಗೊಂಡ 'ನಿರ್ಣಾಯಕ ಅವಧಿ'ಯ ಬಗೆಗೆ ವಿಶ್ವಾಸಾರ್ಹ ಪುರಾವೆಗಳನ್ನು ಒದಗಿಸುತ್ತದೆ. ಆರಂಭಿಕ ವರ್ಷಗಳು, ಅದರಲ್ಲೂ ಮೊದಲ ಮೂರು ವರ್ಷಗಳು ಮೆದುಳಿನಲ್ಲಿ ಸಿನಾಪ್ಸಿಸ್‌ಗಳ ಸಂಪರ್ಕವು ಸಮರ್ಪಕವಾಗಿ ರೂಪುಗೊಳ್ಳುವುದಕ್ಕೆ ಮತ್ತು ಮೆದುಳಿನ ಪೂರ್ಣ ಸಾಮರ್ಥ್ಯದ ಬೆಳವಣಿಗೆಗೆ ಅತೀ ಮಹತ್ವದ ವರ್ಷಗಳಾಗಿವೆ.[1] ಈ ಆರಂಭಿಕ ವರ್ಷಗಳಿಗೆ ಉತ್ತೇಜಕೆ ಮತ್ತು ಸಮೃದ್ಧ ಪೋಷಣೆಯನ್ನು ಒದಗಿಸುವಂತಹ ಭೌತಿಕ ಮತ್ತು ಮನೋಸಾಮಾಜಿಕ ಪರಿಸರದ ಬೆಂಬಲವು ದೊರೆಯದಿದ್ದಲ್ಲಿ ಮಗುವಿನ ಮೆದುಳು ಸಾಮರ್ಥ್ಯವು ಪೂರ್ಣ ಪ್ರಮಾಣದಲ್ಲಿ ವಿಕಾಸ ಹೊಂದುವುದು ಗಣನೀಯವಾಗಿ, ಮತ್ತು ಬಹಳ ಸಲ ಹಿಂದಿರುಗಲಾರದ ರೀತಿಯಲ್ಲಿ ಕಡಿಮೆಯಾಗುತ್ತದೆ ಎಂದೂ ಈ ಸಂಶೋಧನೆಗಳು ಸೂಚಿಸಿವೆ.[2] [3] [4] [5] [6] [7]

ಅಂದರೆ ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನಲ್ಲಿ ಅತೀಹೆಚ್ಚು ಪ್ರತಿಶತ ಮಕ್ಕಳು ಅವರ ಜೀವಿತಾವಕಾಶಗಳ ದೃಷ್ಟಿಯಿಂದ ನೋಡಿದರೆ ಬಡತನದ ಸಂದರ್ಭದಲ್ಲಿ (poverty contexts) 'ಅಪಾಯಕಾರಿ' ಸನ್ನಿವೇಶದಲ್ಲಿ ಸಿಲುಕುತ್ತಾರೆ ಎನ್ನುವುದನ್ನು ಈ ಅಧ್ಯಯನಗಳಿಂದ ನೇರವಾಗಿ ಅನ್ವಯಿಸಬಹುದು. ಆರಂಭಿಕ ಬಾಲ್ಯದ ಈ ಹಂತವು ಮಕ್ಕಳಿಗೆ ಜೀವನಪೂರ್ತಿ ಉಳಿಯುವ ಸಾಮಾಜಿಕ ಮತ್ತು ವೈಯಕ್ತಿಕ ಅಭ್ಯಾಸಗಳನ್ನು ಬೇರೂರಿಸಲೂ ಸಹ ಒಂದು ಅಡಿಪಾಯವಾಗುತ್ತದೆ. ಹೀಗಾಗಿ ಪ್ರತಿಯೊಬ್ಬ ಮಗುವಿಗೂ ಶಕ್ತಿತುಂಬುವ ಒಂದು ಪರಿಸರವನ್ನು ಒದಗಿಸುವುದಕ್ಕಾಗಿ ಈ ಆರಂಭಿಕ ವರ್ಷಗಳಲ್ಲಿನ ಪ್ರಯತ್ನ ಮತ್ತು ಆ ಮೂಲಕ

[1] *Doherty, G. 1997*

[2] *Levinger, B. 1994*

[3] *Ghai, O.P. 1975*

[4] *Natesan H. and Devdas 19815*

[5] *Anandalakshmi, S. 1982*

[6] *Bhattacharya A.K.1981*


[7] *Upadhyay, G.C. 1996*

ಮಗುವಿನ ಜೀವನಕ್ಕೆ ಒಂದು ಸಮರ್ಥ ತಳಹದಿಯನ್ನು ಹಾಕಿಕೊಡುವುದು ಬಹಳ ಮುಖ್ಯವಾಗುತ್ತದೆ. ಅಷ್ಟೇ ಅಲ್ಲ ಅದು ಪ್ರತಿಯೊಬ್ಬ ಮಗುವಿನ ಹಕ್ಕಾಗಿದೆ, ದೀರ್ಘಾವಧಿಯಲ್ಲಿ ಅದು ಒಂದು ದೇಶದಲ್ಲಿ ಲಭ್ಯವಾಗಬಹುದಾದ ಮಾನವ ಬಂಡವಾಳದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ.

### 1.2 ಹೊರಹೊಮ್ಮುತ್ತಿರುವ ಪರಿಕಲ್ಪನೆಗಳು

ಈ ವಿಶಾಲ ವ್ಯಾಪ್ತಿಯ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ವಿವಿಧ ಕಾರ್ಯಕ್ರಮಗಳು ವಿವಿಧ ಬಗೆಯಲ್ಲಿ ಆರಂಭಿಕ ಬಾಲ್ಯದ ಬೆಳವಣಿಗೆಯನ್ನು ವ್ಯಾಖ್ಯಾನಿಸಿವೆ ಮತ್ತು ವಿವರಿಸಿವೆ. ಒಂದು ನಿರ್ದಿಷ್ಟ ಕಾರ್ಯಕ್ರಮವು ಯಾವುದನ್ನು ಆದ್ಯತೆಯನ್ನಾಗಿಸಿಕೊಳ್ಳುತ್ತದೆ ಎನ್ನುವುದು ಮತ್ತು 0-6 ವರ್ಷಗಳ ನಡುವೆ ಅದು ಪರಿಗಣಿಸುವ ವಯೋಮಾನದ ಗುಂಪು ಯಾವುದು ಎನ್ನುವುದು ಮುಖ್ಯವಾದ ನಿರ್ಧಾರಕ ಅಂಶವಾಗುತ್ತದೆ. ಆರಂಭಿಕ ಬಾಲ್ಯದ ಶಿಕ್ಷಣ(ECE)ವನ್ನು ಒಳಗೊಳ್ಳುವ ಹೆಸರುಗಳು ಮತ್ತು ವ್ಯಾಖ್ಯಾನಗಳು 3-6 ವರ್ಷದ ಮಕ್ಕಳನ್ನು (ಶಿಶುಪಾಲನ ಕೇಂದ್ರ, ಶಿಶುವಿಹಾರ ಮತ್ತು ಪೂರ್ವ-ಪ್ರಾಥಮಿಕ ಶಾಲೆಗಳಲ್ಲಿ ಕಂಡುಬರುವ) ಉದ್ದೇಶಿಸಿದ 'ಶಾಲಾಪೂರ್ವ ಶಿಕ್ಷಣವನ್ನು' ಕೇಂದ್ರೀಕರಿಸಿದ ಕಾರ್ಯಕ್ರಮಗಳಿಗೆ ಸಂಬಂಧಿಸಿವೆ. ಇವು ಬಹಳ ಸಲ ಒಂದು ಪ್ರಾಥಮಿಕ ಶಾಲೆಯ ಭಾಗವಾಗಿರುತ್ತವೆ. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವು (ECCE) ಅದೇ ಶೈಕ್ಷಣಿಕ ಪ್ರೇರಣೆಯನ್ನು ಉಳಿಸಿಕೊಳ್ಳುತ್ತದೆಯಾದರೂ ತನ್ನ ವ್ಯಾಪ್ತಿಯನ್ನು 'ಆರೈಕೆ'ಯ ಅಂಶದೊಂದಿಗೆ (0-3 ವರ್ಷದವರ ಆರೈಕೆ ಮತ್ತು ಆರಂಭದ ಪ್ರಚೋದನೆಯನ್ನೂ ಒಳಗೊಂಡು, ಶಿಶುವಿಹಾರಗಳು ಮತ್ತು ಮನೆಯಲ್ಲೇ ಪಾಲಕರಿಂದ ಕೊಡಲ್ಪಡುವ ಶಿಕ್ಷಣದ ಮೂಲಕ) ವಿಸ್ತರಿಸುತ್ತದೆ. ಆರಂಭಿಕ ಬಾಲ್ಯದ ಬೆಳವಣಿಗೆ (ECD) ಮತ್ತು ಆರಂಭಿಕ ಬಾಲ್ಯದ ಆರೈಕೆ ಮತ್ತು ಬೆಳವಣಿಗೆಯ (ECCD) ಯೋಜನೆಗಳು ಇನ್ನೂ ಹೆಚ್ಚಿನ ಒಂದು ಸಮಗ್ರವಾದ ಮತ್ತು ಏಕೀಕೃತ ಪರಿಕಲ್ಪನೆಯಾಗಿದೆ; ಇದು ಆರೋಗ್ಯ, ಪೌಷ್ಟಿಕಾಂಶ, ಮನೋಸಾಮಾಜಿಕ ಬೆಳವಣಿಗೆ ಅಥವಾ ಶಿಕ್ಷಣದ ನಡುವೆ ಪರಸ್ಪರ ಸಹಕಾರವುಳ್ಳ ಮತ್ತು ಪರಸ್ಪರ ಅವಲಂಬಿತವಾದ ಸಂಬಂಧದೊಂದಿಗೆ ಹೊಂದಿಕೊಳ್ಳುತ್ತದೆ ಮತ್ತು ಒಂದು ಮಗುವಿನ ಸರ್ವತೋಮುಖ ಬೆಳವಣಿಗೆಯತ್ತ ಗಮನಹರಿಸುತ್ತದೆ. ECCD ಅಥವಾ ECD ಯೋಜನೆಗಳು ಸಮಗ್ರ ಮಕ್ಕಳ ಅಭಿವೃದ್ಧಿ ಸೇವಾ (ICDS) ಯೋಜನೆಗಳಂತೆ ಸಾಮಾನ್ಯವಾಗಿ ಮಗುವಿನೊಂದಿಗೆ ಗರ್ಭಿಣಿಯರು, ಬಾಣಂತಿಯರು ಮತ್ತು ಹದಿಹರೆಯದ ಹೆಣ್ಣುಮಕ್ಕಳನ್ನೂ ಒಳಗೊಂಡು ಒಂದು ಜೀವನ-ಚಕ್ರವನ್ನು ತನ್ನ ವ್ಯಾಪ್ತಿಯಲ್ಲಿ ಸೇರಿಸಿಕೊಳ್ಳುತ್ತವೆ.

**ಚಿತ್ರ 2.1: ಮೆದುಳಿನ ಬೆಳವಣಿಗೆ ಮತ್ತು ಕಾರ್ಯದ ಕೆಲವು ಅಂಶಗಳ ನಿರ್ಣಾಯಕ ಅವಧಿಗಳು**




ಮೂಲ: *Reaching Out to the Child, HDS, World Bank, 2004*

Binacular Vision – ಉಭಯನೇತ್ರೀಯ ನೋಟ
Emotional Control - ಭಾವನಾತ್ಮಕ ನಿಯಂತ್ರಣ
Habitual response –ರೂಢಿಗತ ಪ್ರತಿಕ್ರಿಯೆ
Peer Social Skills - ಸಹಪಾಠಿಗಗಳ ಸಾಮಾಜಿಕ ಕೌಶಲ್ಯಗಳು
Language - ಭಾಷೆ
Symbol – ಸಂಕೇತ
Cognitive Skills – ಸಂಜ್ಞಾನಾತ್ಮಕ ಕೌಶಲ್ಯಗಳು
Relative Quality – ಸಾಪೇಕ್ಷ ಗುಣ
Critical period - ನಿರ್ಣಾಯಕ ಅವಧಿ
Critical period wanes - ನಿರ್ಣಾಯಕ ಅವಧಿಯು ಕ್ಷಯಿಸುತ್ತದೆ

## 1.3 ಜಾಗತಿಕ ಸಂದರ್ಭ

ಒಂದು ದೇಶದ ಆರ್ಥಿಕ ಪ್ರಗತಿಯಲ್ಲಿ ಆರಂಭಿಕ ಬಾಲ್ಯಾವಧಿಯ ಪಾತ್ರದ ಮಹತ್ವದ ಬಗ್ಗೆ ಅರಿವು ಮೂಡಿಸಲು ಜಾಗತಿಕವಾಗಿ ಅನೇಕ ಘಟನೆಗಳು ತಮ್ಮ ಕೊಡುಗೆ ನೀಡಿವೆ. ಈ ಬದಲಾವಣೆಯ ಆರಂಭವು 1989ರಲ್ಲಿ ನಡೆದ ಮಕ್ಕಳ ಹಕ್ಕುಗಳ ಕುರಿತ ವಿಶ್ವ ಸಂಸ್ಥೆಯ ಸಮಾವೇಶದೊಂದಿಗೆ ಆರಂಭವಾಯಿತು. ಅದೇ ಮೊದಲ ಬಾರಿಗೆ ಸಮಾಜದ ಮಕ್ಕಳ ಸ್ವಾಸ್ಥ್ಯವನ್ನು ಕಾಪಾಡಲು ಮತ್ತು ಉತ್ತೇಜಿಸಲು ಅಂತರರಾಷ್ಟ್ರೀಯ ಮಾನದಂಡಗಳು ಮತ್ತು ಕಾರ್ಯತಂತ್ರಗಳು ರೂಪುಗೊಂಡಿದ್ದವು.

ಆರಂಭಿಕ ಬಾಲ್ಯದ ಮಹತ್ವವನ್ನು ಕುರಿತು ಗಮನ ಸೆಳೆದ ಎರಡನೆಯ ಪ್ರಮುಖ ಘಟನೆಯೆಂದರೆ ಮಾನವ ವಿಕಾಸ ಸೂಚಿಯೊಂದನ್ನು ಸೃಷ್ಟಿಸಿದ್ದು, 1990ರಲ್ಲಿ ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆಯಿಂದ (UNDP) ಮಾನವ ವಿಕಾಸದ ಅಂಕಿಅಂಶಗಳ ಸಮುಚ್ಚಯವೊಂದನ್ನು ಮೊದಲ ಬಾರಿಗೆ ಹೊರತರಲಾಯಿತು. ಮಾನವ ವಿಕಾಸ ಸೂಚಿಯು ಮಾನವ ವಿಕಾಸದ ಮೂರು ಮೂಲ ಆಯಾಮಗಳ ಆಧಾರದ ಮೇಲೆ ದೇಶಗಳ ಸಾಧನೆಗಳನ್ನು ಅಳೆಯುತ್ತದೆ. ಆ ಮೂರು ಆಯಾಮಗಳು ಹೀಗಿವೆ: 1) ದೀರ್ಘ ಮತ್ತು ಆರೋಗ್ಯಪೂರ್ಣ ಬದುಕು, 2) ಜ್ಞಾನ, 3) ಸೂಕ್ತ ರೀತಿಯ ಜೀವನಮಟ್ಟ. ಇದು ಮರಣದ ಪ್ರಮಾಣ, ಶಿಕ್ಷಣ ಮತ್ತು ಮಗುವಿನ ದುಡಿಮೆ ಯಂತಹ ಮಕ್ಕಳಿಗೆ ಸಂಬಂಧಿಸಿದ ಸೂಚಕಗಳನ್ನು ಒಳಗೊಳ್ಳುತ್ತದೆ.

ಅಂತರರಾಷ್ಟ್ರೀಯ ವಲಯದಲ್ಲಿ ಮೂರನೆಯ ಅಂತಹ ಘಟನೆಯೆಂದರೆ, 1990ರಲ್ಲಿ ಥಾಯ್‌ಲ್ಯಾಂಡಿನ ಜೋಮ್ಟೇನ್‌ನಲ್ಲಿ ನಡೆದ ಸರ್ವರಿಗೂ ಶಿಕ್ಷಣ (EFA) ಎಂಬ ವಿಷಯವನ್ನು ಕುರಿತ ಜಾಗತಿಕ ಸಮ್ಮೇಳನ. ಅಲ್ಲಿ 'ಕಲಿಕೆಯು ಹುಟ್ಟಿನೊಂದಿಗೇ ಆರಂಭವಾಗುತ್ತದೆ' ಎಂಬ ಸುಪ್ರಸಿದ್ಧ ಪದಗಳೊಂದಿಗೆ ಶಿಕ್ಷಣವನ್ನು ಕುರಿತು ಜಾಗತಿಕವಾಗಿ ಅನ್ವಯವಾಗುವ ಬದ್ಧತೆಯ ನಿಟ್ಟಿನ ನಿರ್ಣಯವನ್ನು ಕೈಗೊಳ್ಳಲಾಯಿತು. ಅದರ ಜೊತೆಗೆ ಸೆನೆಗಲ್‌ನ ಡಕಾರ್‌ನಲ್ಲಿ ವಿಶ್ವ ಶಿಕ್ಷಣ ವೇದಿಕೆಯ ಸಮ್ಮೇಳನದಲ್ಲಿ (ಏಪ್ರಿಲ್ 2000) ಸರಕಾರಗಳು, ಕುಟುಂಬ ಮತ್ತು ಸಮುದಾಯಗಳ ಪಾಲ್ಗೊಳ್ಳುವಿಕೆಯ ನಿಟ್ಟಿನಲ್ಲಿ, ECCEಯ ಪ್ರಾಮುಖ್ಯತೆಯನ್ನು ಪುನರುಚ್ಚರಿಸಲಾಗಿದ್ದು, ಭಾರತವು ಈ ಎಲ್ಲ ಒಪ್ಪಂದಗಳಿಗೆ ಸಹಿ ಹಾಕಿದೆ.

ಎಲ್ಲಾ ದೇಶಗಳಲ್ಲಿ ಕಂಡುಬರುವ ಮಕ್ಕಳ ಸಮಸ್ಯೆಗಳನ್ನು ಕುರಿತು ಅಂತರರಾಷ್ಟ್ರೀಯವಾಗಿ ಗಮನ ಸೆಳೆಯುವುದಕ್ಕೆ ಜಾಗತೀಕರಣದ ಪ್ರಕ್ರಿಯೆಗಳು ಸಹಾಯ ಮಾಡಿವೆ. ಬಾಲ ಕಾರ್ಮಿಕರ ಸಮಸ್ಯೆ, ಮಕ್ಕಳ ಪೌಷ್ಟಿಕಾಂಶದ ಕೊರತೆ, ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳು ಈಗ ದೇಶಗಳ ಗಡಿಗಳ ಆಚೆ ಕ್ರಮಿಸಿವೆ ಮತ್ತು ಅದರ ನಿವಾರಣೆಗೆ ಬೇಕಾಗುವ ಸಂಪನ್ಮೂಲಗಳನ್ನು ಒಗ್ಗೂಡಿಸಲಾಗುತ್ತಿದೆ[8].

ದಕ್ಷಿಣ ಏಶಿಯಾದ ದೇಶಗಳಲ್ಲಿ ಸಹ ಮಕ್ಕಳೆಡೆಗಿನ ತಮ್ಮಬದ್ಧತೆಯನ್ನು ಕುರಿತ ಮುಖ್ಯವಾದ ಮೈಲಿಗಲ್ಲುಗಳನ್ನು ಸಾಧಿಸಲಾಗಿದೆ; ಮಕ್ಕಳ ಆರೋಗ್ಯ, ಪೌಷ್ಟಿಕಾಂಶ, ಶಿಕ್ಷಣ ಹಾಗೂ ಹಿಂಸೆ, ದುರುಪಯೋಗ, ಶೋಷಣೆ, ಅಪಹರಣ, ದುಡಿಮೆ ಮುಂತಾದ ಶೋಷಣೆಗಳ ವಿರುದ್ಧ ಮಕ್ಕಳ ಸಂರಕ್ಷಣೆಯಂತಹ ಸರ್ವೇಸಾಮಾನ್ಯ ಸಮಸ್ಯೆಗಳನ್ನು ಗುರುತಿಸಲಾಗಿದೆ.

## 1.4 ಭಾರತೀಯ ಸಂದರ್ಭ

ಈ ಜಾಗತಿಕ ಚಲನೆಗಳು ಭಾರತದಲ್ಲಿರುವ ECCEಯ ಕ್ಷೇತ್ರವನ್ನೂ ಪ್ರಭಾವಿಸಿವೆ. ಮಕ್ಕಳ ಪರವಾಗಿ ಅದರಲ್ಲಿಯೂ ಆರ್ಥಿಕವಾಗಿ ಅಂಚಿಗೆ ಸರಿದ ಸಮುದಾಯಗಳ ಮಕ್ಕಳ ಪರವಾಗಿ ಶೀಘ್ರ ಮಧ್ಯಪ್ರವೇಶಗಳ ಅಗತ್ಯವನ್ನು ಸರಿಯಾಗಿ ಗುರುತಿಸಲಾಗಿದೆ. ಭಾರತದ ಜನಸಂಖ್ಯೆಯು 2001ರ ಹೊತ್ತಿಗೆ ಒಂದು ಬಿಲಿಯನ್ ತಲುಪಿದೆ. ಇದು ಜಗತ್ತಿನಲ್ಲೇ ಅತೀ ಹೆಚ್ಚಿನ ಮಕ್ಕಳ ಸಂಖ್ಯೆಯನ್ನು ಹೊಂದಿದ ದೇಶವಾಗಿದೆ. 2001ರ ಗಣತಿಯ ಪ್ರಕಾರ 0-6ರ ವಯೋಮಾನದ ನಡುವಿನ ಮಕ್ಕಳ ಸಂಖ್ಯೆಯು 158 ಮಿಲಿಯನ್ ಆಗಿತ್ತು. ಆದರೆ ಇಲ್ಲಿನ ಮಾನವ ಬೆಳವಣಿಗೆಯ ಒಟ್ಟು ಪ್ರಮಾಣವು ಸಾಕಷ್ಟು ಕಡಿಮೆಯಿದೆ. ಮಾನವ ಬೆಳವಣಿಗೆಯ ವರದಿಯಲ್ಲಿ ಭಾರತದ ಸ್ಥಾನವು 124ರಿಂದ 127ಕ್ಕೆ ಕುಸಿದಿದೆ. ಆರೋಗ್ಯ, ಜೀವಿತಾವಧಿ, ಶಿಕ್ಷಣ, ಮತ್ತು ಹಸಿವಿನ ಕ್ಷೇತ್ರದಲ್ಲಿ ಭಾರತವು ಸಮರ್ಪಕ ಸಾಧನೆ ತೋರಿಲ್ಲವೆಂಬುದನ್ನು 2003ರ ವರದಿಯು ಒತ್ತಿ ಹೇಳಿದೆ.. ಮಕ್ಕಳ ಮರಣದ ಪ್ರಮಾಣವನ್ನು ತಗ್ಗಿಸುವುದು, ಲಿಂಗ ಸಮಾನತೆಯನ್ನು ಸಾಧಿಸುವುದು, ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರೈಸುವಂತಹ ಗುರಿಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಾದ ನೇಪಾಳ, ಬಾಂಗ್ಲಾದೇಶ, ಮತ್ತು ಚೀನಾಗಳಿಗೆ ಹೋಲಿಸಿದರೆ ಭಾರತವು ಮಿಲೆನಿಯಂ ಅಭಿವೃದ್ಧಿಯ ಗುರಿಗಳನ್ನು (Millennium Development Goals-MDGs) ಸಾಧಿಸುವ ನಿಟ್ಟಿನಲ್ಲಿ ಬಹಳ ಕುಂಟುತ್ತ ನಡೆದಿದೆ. ಇದೇ ಗತಿಯಲ್ಲಿ ಮುಂದುವರೆದರೆ 2015ರ ಹೊತ್ತಿಗೆ ಮಿಲೆನಿಯಮ್ ಗುರಿಗಳನ್ನು ಸಾಧಿಸುವುದೂ ಸಂಶಯವೇ. ವಿಶ್ವಸಂಸ್ಥೆಯ

[8] *Datta, V. 2005*

ಮಿಲೆನಿಯಮ್ ಘೋಷಣೆಯ ಪ್ರಕಾರ MDGsನ ಎಂಟು ಗುರಿಗಳಲ್ಲಿ ಐದು ಗುರಿಗಳು ಚಿಕ್ಕ ಮಗುವಿನ ಆರೋಗ್ಯ, ಪೌಷ್ಟಿಕಾಂಶ, ಮತ್ತು ಶಿಕ್ಷಣವನ್ನು ಕುರಿತದ್ದಾಗಿದೆ. ಆದ್ದರಿಂದ ECCDಯು MDGs ಅನ್ನು ಸಾಧಿಸುವ ನಿಟ್ಟಿನ ಮೊದಲ ಮತ್ತು ಅತೀ ಅವಶ್ಯವಾದ ಹೆಜ್ಜೆಯಾಗಿದೆ.

ಎಲ್ಲಾ ಬಗೆಯ ತಾರತಮ್ಯವನ್ನು ನಿರ್ಮೂಲನ ಮಾಡುವ ಒಪ್ಪಂದಕ್ಕೆ (Convention on the Elimination of All Forms of Discrimination-CEDAW) ಭಾರತವು ಒಪ್ಪಿ ಸಹಿ ಹಾಕಿದೆ. ಆದರೂ ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆ, ಬಾಲ್ಯ ವಿವಾಹದಿಂದ ಹಿಡಿದು ಲೈಂಗಿಕ ಶೋಷಣೆ ಮತ್ತು ಗೃಹಸಂಬಂಧಿ ಸಂಪನ್ಮೂಲಗಳ ಕೊರತೆಯವರೆಗೆ ಭಾರತದ ಮಹಿಳೆಯರ ಜೀವನ ಚಕ್ರದಾದ್ಯಂತ ಲಿಂಗ ತಾರತಮ್ಯತೆಯನ್ನು ಕಾಣಬಹುದು.

## 1.5 ಜಾಗತಿಕ ಮಟ್ಟದಲ್ಲಿ ಚಿಕ್ಕ ಮಗುವಿನ ಸ್ಥಿತಿಗತಿ

0-6 ವಯೋಮಾನದ ಮಕ್ಕಳಿಗಾಗಿ ಇರುವ ECD ಯೋಜನೆಗಳು ಕಳೆದ ಕೆಲವು ದಶಕಗಳಲ್ಲಾದ ವಿವಿಧ ಸಾಮಾಜಿಕ, ಆರ್ಥಿಕ, ಮತ್ತು ಜನಸಮೂಹಗಳ ಸಂರಚನೆಗೆ ಸಂಬಂಧಿಸಿದ ಬದಲಾವಣೆಗಳಿಂದ ಉದ್ಭವಿಸಿದ ಹೊಸ ಅಗತ್ಯಗಳಿಂದಾಗಿ ಮಹತ್ವವನ್ನು ಪಡೆಯುತ್ತವೆ. ಅವು ನಿರ್ದಿಷ್ಟವಾಗಿ, ಕುಟುಂಬದ ಸ್ವರೂಪ, ಮನೆಯಿಂದ ಹೊರಗೆಮಹಿಳೆಯರ ನೌಕರಿಯಲ್ಲಿನ ಹೆಚ್ಚಳ, ಶಿಕ್ಷಣಕ್ಕಾಗಿ ಹೆಚ್ಚುತ್ತಿರುವ ಬೇಡಿಕೆಗಳ ನಿಟ್ಟಿನ ಬದಲಾವಣೆಗಳಾಗಿವೆ. 0-6 ವರ್ಷದವರ ಈ ಗುಂಪಿಗೆ ಸೌಲಭ್ಯವನ್ನು ಒದಗಿಸುವ ಉತ್ತಮ ಗುಣಮಟ್ಟದ ECD ಯೋಜನೆಗಳು ಅಲ್ಪಾವಧಿ ಮತ್ತು ದೀರ್ಘಾವಧಿ ಲಾಭಗಳನ್ನು ನೀಡಬಲ್ಲವು, ಅದರಲ್ಲೂ ನಿರ್ದಿಷ್ಟವಾಗಿ ಸೌಲಭ್ಯವಂಚಿತ ಸನ್ನಿವೇಶಗಳಲ್ಲಿ ಇರುವ ಮಕ್ಕಳಿಗೆ ಹೆಚ್ಚಿನ ಲಾಭವಾಗಬಲ್ಲವು ಎಂಬುದು ಕಂಡು ಬಂದಿದೆ. ಬಡತನದ ಹಿನ್ನೆಲೆಯಿರುವ ಮಕ್ಕಳಿಗೆ ಅವರ ಮನೆಗಳಲ್ಲಿ ಸಿಗದ ಸೌಲಭ್ಯಗಳನ್ನು ಒದಗಿಸಿಕೊಡುವ ಮೂಲಕ ಈ ಯೋಜನೆಗಳು ತಮ್ಮ ಕೊಡುಗೆಯನ್ನು ನೀಡುತ್ತವೆ ಮತ್ತು ಹೀಗೆ ಅಂತಹ ಮಕ್ಕಳ ಜೀವಿತಾವಕಾಶಗಳನ್ನು ಸುಧಾರಿಸಲು ಯತ್ನಿಸುತ್ತವೆ.

ದಕ್ಷಿಣ ಏಶಿಯಾದಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಭಾರತದಲ್ಲಿ ಮಾಡಿದ ಅಧ್ಯಯನವು ಅಲ್ಪಾವಧಿ ದೃಷ್ಟಿಕೋನದಲ್ಲಿ ಔಪಚಾರಿಕ ಶಿಕ್ಷಣಕ್ಕಾಗಿ ಮಕ್ಕಳು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಸಿದ್ಧವಾಗುವ ಪ್ರಕ್ರಿಯೆಯ ಮೇಲೆ ECD ಯೋಜನೆಗಳು ಹೇಗೆ ಮತ್ತು ಎಷ್ಟು ಪರಿಣಾಮಗಳನ್ನು ಉಂಟುಮಾಡಿವೆ ಎಂಬುದನ್ನು ದಾಖಲಿಸಿದೆ; ಧಾರಣಶಕ್ತಿ ಮತ್ತು ಸಾಧನೆಯ ಮಟ್ಟಕ್ಕೆ ಸಂಬಂಧಿಸಿದಂತೆ 15-20% ವ್ಯತ್ಯಾಸಗಳು ಕಂಡುಬಂದಿರುವುದು, ಮತ್ತು ಅದರ ಜೊತೆಗೆ ಪ್ರಾಥಮಿಕ ಶ್ರೇಣಿಗಳಲ್ಲಿ ಗಣಿತ ಕಲಿಕೆಯ ಮಟ್ಟವು ಸುಧಾರಿಸಿರುವುದು ಅದಕ್ಕೆ ನಿದರ್ಶನವಾಗಿದೆ.[9] PROAPE ಯೋಜನೆಯಲ್ಲಿ (Brazilian Programma deAlimentacao de Pre escolar) ಆರಂಭಿಕ ಕಲಿಕೆಯ ಯೋಜನೆಗಳನ್ನೂ ಒಳಗೊಂಡು ಪ್ರಾಥಮಿಕ ಹಂತದ 2ನೇ ತರಗತಿಯ ಶಿಕ್ಷಣದವರೆಗೆ ಶಿಕ್ಷಣದ ಒಟ್ಟು ವೆಚ್ಚವು ECCD ಯೋಜನೆಯಲ್ಲಿ ಪಾಲ್ಗೊಂಡವರಿಗೆ, ಅದರಲ್ಲಿ ಪಾಲ್ಗೊಳ್ಳದಿರುವವರಿಗೆ ಹೋಲಿಸಿದರೆ 11% ಕಡಿಮೆ ಆಗಿತ್ತು. ECDಯು ಕೇವಲ ಚಿಕ್ಕ ಮಕ್ಕಳನ್ನು ಮಾತ್ರವಲ್ಲದೇ ಅವರ ಹಿರಿಯ ಸಹೋದರ-ಸಹೋದರಿಯರಿಗೂ ಲಾಭದಾಯಕವಾಗಿ ಪರಿಣಮಿಸಿದೆ; ನಿರ್ದಿಷ್ಟವಾಗಿ ಹೆಣ್ಣುಮಕ್ಕಳು ತಮ್ಮ ತಮ್ಮಂದಿರು ಮತ್ತು ತಂಗಿಯರನ್ನು ನೋಡಿಕೊಳ್ಳುವ ಹೊಣೆಯಿಂದ ಮುಕ್ತರಾಗಿ ಶಾಲೆಗೆ ಸೇರುವ ಅವಕಾಶ ಪಡೆದಿದ್ದಾರೆ.

---

[9] *Kaul et.al 1993*

ದೀರ್ಘಾವಧಿ ದೃಷ್ಟಿಕೋನದಿಂದ ನೋಡಿದರೆ ECD ಯೋಜನೆಗಳಲ್ಲಿ ಪಾಲ್ಗೊಳ್ಳುವುದರಿಂದ ಅದರ ಫಲಾನುಭವಿಗಳಿಗೆ ಹೆಚ್ಚಿನ ಆದಾಯಕ್ಕೆ ಸಂಬಂಧಿಸಿದಂತೆ ಲಾಭಾಂಶ ಸಿಕ್ಕಿದೆ, ಕ್ಷೇಮಾಭಿವೃದ್ಧಿ ನೆರವಿನ ಮೇಲೆ ಅವರು ಅವಲಂಬಿತರಾಗುವುದು ಕಡಿಮೆಯಾಗಿದೆ, ವಯಸ್ಕರಲ್ಲಿ ಅಪರಾಧದ ಪ್ರಮಾಣ ಕಡಿಮೆಯಾಗಿದೆ, ಕುಟುಂಬದೊಳಗೆ ವೃತ್ತಿಗಳಿಗೆ ಸಂಬಂಧಿಸಿದಂತೆ ಹೊಂದಾಣಿಕೆ ಉತ್ತಮವಾಗಿದೆ, ಉತ್ಪಾದಕ ಶಕ್ತಿ ಹೆಚ್ಚಿದೆ, ಮತ್ತು ಆರೋಗ್ಯ ಸಂಬಂಧಿತ ವೆಚ್ಚವು ಕಡಿಮೆಯಾಗಿದೆ. ಬ್ರಿಟಿಷ್ ಅನುಲಂಬೀಯ ಅಧ್ಯಯನವು (EPPE- Effective Provision of Preschool Education) ECCEಯ ವಿವಿಧ ಮಾದರಿಗಳು ಮತ್ತು ಪ್ರಾಥಮಿಕ ಹಂತದ ನಂತರದ ಸಾಧನೆಗೆ ಸಂಬಂಧವಿರುವುದನ್ನು ಸ್ಪಷ್ಟವಾಗಿ ನಿದರ್ಶಿಸಿದೆ.

MDGs ಮತ್ತು EFA ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ECDಯ ಪಾತ್ರವು ಬಹಳ ಪ್ರಮುಖವಾಗಿದೆ. MDGs ಮತ್ತು EFA ಗುರಿಗಳನ್ನು ಕುರಿತ ಒಪ್ಪಂದಕ್ಕೆ ಭಾರತವು ಸಹಿ ಹಾಕಿದೆ ಮತ್ತು ಪ್ರತೀ ಮಗುವಿನ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವುದು ಅದರ ಒಂದು ಮುಖ್ಯವಾದ ಗುರಿಯಾಗಿದೆ. ಸಂಶೋಧನೆಗಳು ತೋರಿಸಿಕೊಟ್ಟಂತೆ ಅದರ ಪರಿಣಾಮವು ಗರಿಷ್ಠ ಪ್ರಮಾಣದಲ್ಲಿ ಆಗಲು ಆರಂಭಿಕ ಬಾಲ್ಯ ಮತ್ತು ಪ್ರಾಥಮಿಕ ಶಿಕ್ಷಣ ಯೋಜನೆಗಳನ್ನು ಯೋಜಿಸುವ ಮತ್ತು ಅವುಗಳಿಗೆ ಅವಕಾಶ ಕಲ್ಪಿಸುವ ಪ್ರಕ್ರಿಯೆಗಳು ಮಕ್ಕಳ ಬೆಳವಣಿಗೆಯ ಮೂರು ಮುಖ್ಯ ತತ್ವಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು:

a) ಮಗುವಿನ ಬೆಳವಣಿಗೆಯು ನಿರಂತರವಾಗಿ ನಡೆಯುವ ಮತ್ತು ಸಂಚಿತ ಪ್ರಕ್ರಿಯೆಯಾಗಿದೆ, ಹೀಗಾಗಿ ಹಿಂದೆ ಏನಾಗಿರುತ್ತದೋ ಅದು ಮುಂದೆ ಆಗಲಿರುವುದನ್ನು ಪ್ರಭಾವಿಸುತ್ತದೆ. ಆದ್ದರಿಂದ ಕಾರ್ಯಕ್ರಮಗಳ ನಡುವೆ ಅದನ್ನು ಉತ್ತಮಗೊಳಿಸಲು ಮಧ್ಯಪ್ರವೇಶಿಸುವಾಗ ಪ್ರಸವಪೂರ್ವದಿಂದ ಹಿಡಿದು ಪ್ರಾಥಮಿಕ ಶಿಕ್ಷಣದ ಕೊನೆಯ ಹಂತದವರೆಗಿನ ಇಡೀ ಬಾಲ್ಯದ ಒಂದು ನಿರಂತರ ಪ್ರಕ್ರಿಯೆಯನ್ನು ಪರಿಗಣಿಸಬೇಕೇ ವಿನಃ ಪ್ರತ್ಯೇಕವಾಗಿ ಯಾವುದೋ ಒಂದು ಉಪಹಂತದಲ್ಲಿ ಪ್ರವೇಶಿಸುವುದಲ್ಲ. ಉದಾಹರಣೆಗೆ ಮಗುವನ್ನು ಸಿದ್ಧಗೊಳಿಸುವ ಆರಂಭಿಕ ಬಾಲ್ಯದ ಫಲಿತಗಳು ನಿರೀಕ್ಷಿತ ಮಟ್ಟವನ್ನು ತಲುಪದೇ ಇದ್ದರೆ ಅದೆಷ್ಟೇ ಬಂಡವಾಳವನ್ನು ಹೂಡಿದ್ದರೂ ಪ್ರಾಥಮಿಕ ಶಿಕ್ಷಣದ ಫಲಿತಗಳಲ್ಲಿ ಗಣನೀಯ ಸುಧಾರಣೆ ಕಂಡುಬರುವುದಿಲ್ಲ.
b) ಆರೋಗ್ಯ, ಪೌಷ್ಟಿಕಾಂಶ, ಮತ್ತು ಶೈಕ್ಷಣಿಕ/ಮನೋಸಾಮಾಜಿಕ ಬೆಳವಣಿಗೆಯ ಪ್ರಕ್ರಿಯೆಗಳು ಪರಸ್ಪರ ಸಂಯೋಜಿತವಾದ ಅಂತರ್‌ಸಂಬಂಧವನ್ನು ಹೊಂದಿದ ಪ್ರಕ್ರಿಯೆಗಳಾಗಿವೆಯಾದ್ದರಿಂದ ಮಕ್ಕಳ ಎಲ್ಲಾ ಅಗತ್ಯಗಳನ್ನೂ ಒಂದು ಸಮಗ್ರ ದೃಷ್ಟಿಕೋನದಿಂದ ಪರಿಗಣಿಸುವುದು ಬಹಳ ಮುಖ್ಯವಾಗುತ್ತದೆ.
c) ಕಾರ್ಯಕ್ರಮಗಳು ಬರಿಯ ಮಗುವನ್ನೊಂದೇ ದೃಷ್ಟಿಯಲ್ಲಿ ಇಟ್ಟುಕೊಳ್ಳದೆ,ಮಗುವಿನ ವರ್ತಮಾನ ಹಾಗೂ ದೂರವರ್ತಿ ಸಂದರ್ಭಗಳ ಒಟ್ಟು ಹಿನ್ನೆಲೆಯನ್ನು ಪರಿಗಣಿಸಿದರೆ ಮಾತ್ರ ಮಗುವಿನ ಬೆಳವಣಿಗೆಯು ಗರಿಷ್ಠ ಮಟ್ಟವನ್ನು ತಲುಪಲು ಸಾ್ಯ.

## 1.6 ಜಾಗತಿಕ ಬೆಳವಣಿಗೆಗಳು

ECCE ಯೋಜನೆಯು ಎಲ್ಲೆಡೆ ಎಷ್ಟು ಆದ್ಯತೆಯನ್ನು ಪಡೆದಿದೆಯೆನ್ನುವುದನ್ನು ಜಗತ್ತಿನ ವಿವಿದೆಡೆ ಇರುವ ನೀತಿಗಳು ಮತ್ತು ಆಚರಣೆಗಳ ಪರಿಶೀಲನೆಯಿಂದ ತಿಳಿದುಬರುತ್ತದೆ.

ಚೀನಾದಲ್ಲಿ ಶಿಶುಪೋಷಣೆಯ ಮುಖ್ಯ ಉದ್ದೇಶವನ್ನುಳ್ಳ ಶಿಶುವಿಹಾರಗಳನ್ನು ಎಲ್ಲಾ ಹಂತಗಳಲ್ಲೂ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರಿಸಲಾಗಿದೆ. ಶಿಶುವಿಹಾರದ ಹಂತಕ್ಕೆ ಪ್ರವೇಶಿಸುವ ಮಗುವಿನ ವಯಸ್ಸು 3. ಈ ಹಂತದ ಶಿಕ್ಷಣದ ಅವಧಿ ಮೂರು ವರ್ಷಗಳು. ಆದರೆ ಶಾಲಾಪೂರ್ವ ಶಿಕ್ಷಣವು ಕಡ್ಡಾಯವೇನಲ್ಲ, ಮತ್ತು ಕೆಲವು ಸರಕಾರಿ ಉಪಕ್ರಮಗಳಿಗೆ ಪೂರಕವಾಗಿ ಮುಖ್ಯ ಪೋಷಣಕರ್ತರಾಗಲು ಸರಕಾರೇತರ ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಗುತ್ತದೆ.

ನ್ಯೂಝಿಲ್ಯಾಂಡ್‌ನಲ್ಲಿ ECE ಕಡ್ಡಾಯವಲ್ಲದ ಒಂದು ಅವಕಾಶವಾಗಿದೆ. ಆದರೆ ಹೆಚ್ಚುಕಡಿಮೆ 3-5 ವರ್ಷದ ಒಳಗಿನ ಮಕ್ಕಳಿಗಾಗಿ ಇರುವ ಕಿಂಡರ್‌ಗಾರ್ಟನ್ ಅನ್ನೂ ಒಳಗೊಂಡು ಎಲ್ಲಾ ಮಕ್ಕಳೂ ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿದ್ದಾರೆ ಮತ್ತು ಇವರೆಲ್ಲ ಸರಕಾರಿ ನೆರವನ್ನು ಪಡೆಯುತ್ತಾರೆ. ಈಗ ಸರಕಾರವು ECCEಯನ್ನು ಕುರಿತ ಒಂದು ಸಮಗ್ರ ರಾಷ್ಟ್ರೀಯ ನೀತಿಯೊಂದನ್ನು ರೂಪಿಸುವ ಯೋಚನೆ ಮಾಡುತ್ತಿದೆ, ಈ ನೀತಿಯು ಸಂದರ್ಭಕ್ಕೆ ಹೊಂದಿಕೊಳ್ಳಬಲ್ಲ (flexible) ವೈವಿಧ್ಯಮಯ ವಿಧಾನಗಳನ್ನು ಒಳಗೊಳ್ಳಲಿದೆ.

ಜಪಾನಿನಲ್ಲಿ ಸಾಂಪ್ರದಾಯಿಕವಾಗಿ ECCEಯು ಎರಡು ವ್ಯವಸ್ಥೆಗಳಲ್ಲಿ ವಿಭಜಿಸಲ್ಪಟ್ಟಿದೆ: 3 ವರ್ಷಕ್ಕಿಂತ ಮೇಲ್ಪಟ್ಟ ಮಕ್ಕಳಿಗೆ ಕಿಂಡರ್‌ಗಾರ್ಟನ್ - ಇದು ಶಿಕ್ಷಣ ಇಲಾಖೆಯ ಸುಪರ್ದಿಯಲ್ಲಿರುತ್ತದೆ, ಮತ್ತು 3 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ದೈನಂದಿನ ಶಿಶುವಿಹಾರ - ಇದು ಕ್ಷೇಮಾಭಿವೃದ್ಧಿ ವಿಭಾಗದ ಸುಪರ್ದಿಯಲ್ಲಿರುತ್ತದೆ. ಕಿಂಡರ್‌ಗಾರ್ಟನ್‌ಗಳಲ್ಲಿ ಶೈಕ್ಷಣಿಕವಾಗಿ ಅಪೇಕ್ಷಣೀಯವಾದ, ಆದರೆ ಕುಟುಂಬದ ಚೌಕಟ್ಟಿನಲ್ಲಿ ಒದಗಿಸಲು ಸಾಧ್ಯವಾಗದ ಅನುಭವಗಳನ್ನು ಮಕ್ಕಳು ಪಡೆಯಬೇಕು ಎಂಬ ಅಂಶದ ಮೇಲೆ ಒತ್ತನ್ನು ನೀಡಲಾಗುತ್ತದೆ. ಕಿಂಡರ್‌ಗಾರ್ಟನ್ ಪಠ್ಯಕ್ರಮದಲ್ಲಿ ಗುಂಪಿನೊಡನೆ ಬದುಕುವ ಅನುಭವಗಳು, ಬೌದ್ಧಿಕ ವಿಕಸನದ ಕಲಿಕಾ ಚಟುವಟಿಕೆಗಳು, ಸೃಜನಾತ್ಮಕ ಮತ್ತು ರಚನಾತ್ಮಕವಾದ ಚಟುವಟಿಕೆಗಳು (ತರಬೇತಿ ಹೊಂದಿದ ತಜ್ಞ ಶಿಕ್ಷಕರ ಮಾರ್ಗದರ್ಶನದಲ್ಲಿ) ಸೇರಿರುತ್ತವೆ.

ಮಲೇಶಿಯಾದಲ್ಲಿ ಕೂಡಾ ಸರಕಾರದಿಂದ ಆರ್ಥಿಕ ಬೆಂಬಲ ಪಡೆದ ಸಾರ್ವಜನಿಕ ಶಾಲಾಪೂರ್ವ ಶಿಕ್ಷಣ ವ್ಯವಸ್ಥೆಯಿದೆ. ಫಿಲಿಪ್ಪೀನ್ಸ್‌ನಲ್ಲಿ 2000ನೇ ಇಸವಿಯಲ್ಲಿ ಒಂದು ಸಮಗ್ರ ಶಿಕ್ಷಣ ನೀತಿಯನ್ನು ಮತ್ತು ECCE ಸಲುವಾಗಿ ಒಂದು ರಾಷ್ಟ್ರೀಯ ವ್ಯವಸ್ಥೆಯನ್ನು ಪ್ರಸಾರಮಾಡಲು ಶಾಸನವೊಂದನ್ನು ರೂಪಿಸಲಾಯಿತು.

ಇ-9 ರಾಷ್ಟ್ರಗಳಲ್ಲಿ[10] (ಅತೀ ಹೆಚ್ಚು ಜನಸಂಖ್ಯೆಯನ್ನು ಹೊಂದಿದ ದೇಶಗಳು: ಬಾಂಗ್ಲಾದೇಶ, ಬ್ರೆಜಿಲ್, ಚೀನಾ, ಈಜಿಪ್ಟ್, ಭಾರತ, ಇಂಡೋನೇಶಿಯಾ, ಮೆಕ್ಸಿಕೊ, ನೈಜೀರಿಯಾ ಮತ್ತು ಪಾಕಿಸ್ತಾನ) ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವು ಯಾವ ಸ್ಥಿತಿಯಲ್ಲಿದೆ ಎಂಬುದರ ವರದಿಯ ಪ್ರಕಾರ ಆ ಎಲ್ಲಾ ದೇಶಗಳು EFAಯ ಒಂದು ನಿರ್ಣಾಯಕ ಅಂಗವೆಂಬ ನಿಟ್ಟಿನಲ್ಲಿ ECCE ಕಾರ್ಯಕ್ರಮಗಳಿಗೆ ಬೆಂಬಲ ನೀಡುವ ದೃಷ್ಟಿಯಿಂದ ಮುಂದಡಿ ಇಡುತ್ತಿವೆ ಮತ್ತು ಅದು ಒಂದು ಸಮಗ್ರ ದೃಷ್ಟಿಕೋನದ ಪಠ್ಯಕ್ರಮವನ್ನು ಪರಿಚಯಿಸುವ ಯತ್ನದೊಂದಿಗೆ ಶಿಕ್ಷಕರ ತರಬೇತಿ, ಮತ್ತು ಇತರ ಸೂಚಕಗಳನ್ನೂ ಒಳಗೊಳ್ಳುತ್ತದೆ.

ಈ ಹಿನ್ನೆಲೆಯಲ್ಲಿ ಭಾರತದ ಮಗುವಿನ ವಿವರವನ್ನು ಗಮನಿಸಿದರೆ ನಿರಾಸೆಯಾಗುತ್ತದೆ.

---

[10] *UNESCO 2003*

### 1.7 ಭಾರತದ ಮಗುವಿನ ವಿವರಗಳು

- ಭಾರತದಲ್ಲಿ 0-6 ವರ್ಷಗಳ ಒಳಗಿನ ಒಟ್ಟು ಮಕ್ಕಳ ಸಂಖ್ಯೆ 158 ಮಿಲಿಯನ್.
- ಹುಟ್ಟುವಾಗ ಮೂರರಲ್ಲಿ ಒಂದು ಪಾಲಿನಷ್ಟು (1/3) ಶಿಶುಗಳ ತೂಕ ಕಡಿಮೆ ಇರುತ್ತದೆ.
- ಸಂಪೂರ್ಣವಾಗಿ ಲಸಿಕೆ ಹಾಕಿಸಿಕೊಂಡ ಮಕ್ಕಳ (12-23 ತಿಂಗಳು) ಪ್ರಮಾಣ ಕೇವಲ 42%.
- 14% ಮಕ್ಕಳು ಲಸಿಕೆ ಹಾಕಿಸಿಕೊಂಡೇ ಇಲ್ಲ.
- ಜಗತ್ತಿನಲ್ಲಿ ಅತೀ ಹೆಚ್ಚು ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳುಭಾರತದಲ್ಲಿದ್ದಾರೆ.
- 2 ವರ್ಷಕ್ಕಿಂತ ಕಡಿಮೆ ವಯೋಮಾನದ ಒಟ್ಟು ಮಕ್ಕಳಲ್ಲಿ 47% ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.
- 0-6 ವರ್ಷದ ಒಟ್ಟು ಮಕ್ಕಳಲ್ಲಿ 5% ಮಕ್ಕಳು ತೀವ್ರ ಸ್ವರೂಪದ ಅಥವಾ ಮಧ್ಯಮ ಸ್ವರೂಪದ ರಕ್ತಹೀನತೆಯಿಂದ ಬಳಲುತ್ತಿದ್ದಾರೆ.
- ಪ್ರತೀ ವರ್ಷ ಹುಟ್ಟುತ್ತಿರುವ ಮಕ್ಕಳ ಸಂಖ್ಯೆ 25 ಮಿಲಿಯನ್.
- ಶಿಶುಗಳ ಮರಣದ ಪ್ರಮಾಣವು (IMR-Infant Mortality Rate) ಹುಟ್ಟಿದ ಪ್ರತೀ 1000 ಮಕ್ಕಳಿಗೆ 70ರಷ್ಟು.
- 5 ವರ್ಷಕ್ಕಿಂತ ಕಡಿಮೆ ವಯೋಮಾನದ 60 ಮಿಲಿಯನ್ ಮಕ್ಕಳು ಬಡತನದಲ್ಲಿದ್ದಾರೆ.
- ಅವರಲ್ಲಿ ಕೇವಲ 19.4 ಮಿಲಿಯನ್ ಮಕ್ಕಳು (3-5 ವರ್ಷದ ಒಳಗಿನ) ICDS ಅಡಿಯಲ್ಲಿ ಶಾಲಾಪೂರ್ವ ಶಿಕ್ಷಣವನ್ನು ಪಡಯುತ್ತಿದ್ದಾರೆ.
- 6 ವರ್ಷಕ್ಕಿಂತ ಕಡಿಮೆ ವಯಸ್ಸಿನ 16 ಕೋಟಿ ಮಕ್ಕಳಲ್ಲಿ ಕೇವಲ 3.42 ಕೋಟಿ ಮಕ್ಕಳು ಪೂರಕ ಪೌಷ್ಟಿಕ ಆಹಾರವನ್ನು ಪಡೆಯುತ್ತಿದ್ದಾರೆ.

  ಮೂಲ:*Government of India, 2002 (a) The Child in India: A Profile, 2002,New Delhi: UNDP 2003: Human Development Report.*

ಇದನ್ನು ನೋಡಿದರೆ ಭಾರತವು ಈಗಾಗಲೇ ದೀರ್ಘ ಕಾಲದವರೆಗೆ ತನ್ನ ಮಕ್ಕಳನ್ನು ಕಡೆಗಣಿಸುತ್ತಿ ದೆ ಎನ್ನುವುದು ನಿಚ್ಚಳವಾಗುತ್ತದೆ. ಈಗಲೂ ನಿರ್ಭೀತವಾದ ಮತ್ತು ನಿರ್ಣಾಯಕ ಕ್ರಮವನ್ನು ಕೈಗೊಳ್ಳದಿದ್ದರೆ ಮುಂದಿನ ಭವಿಷ್ಯವು ಕರಾಳವಾಗಿರಬಲ್ಲದು.

## 2. ಭಾರತೀಯ ಸಂದರ್ಭ: ಪರಿಸ್ಥಿತಿಯ ವಿಶ್ಲೇಷಣೆ ಹಾಗೂ ಪ್ರಸ್ತುತ ಸನ್ನಿವೇಶ

ಒಂದು ಮಗುವಿನ ಬದುಕಿನಲ್ಲಿ ಅದರ ಆರಂಭಿಕ ವರ್ಷಗಳು ಎಷ್ಟು ಮಹತ್ವದ್ದು ಎಂಬ ಅಂಶ, ಮತ್ತು ಈ ಹಂತದಲ್ಲಿ ECCE ಯೋಜನೆಯು ಎಷ್ಟು ಅತ್ಯಗತ್ಯ ಎಂಬುದನ್ನು ಹಿಂದಿನ ವಿಭಾಗವು ವಿವರಿಸಿದೆ. ವೈಜ್ಞಾನಿಕ ಜ್ಞಾನಕ್ಷೇತ್ರದಲ್ಲಾದ ಮುನ್ನಡೆಗಳು ECCE ಯೋಜನೆಗಳ ನಿಟ್ಟಿನ ಶ್ರಮದ (ಆರ್ಥಿಕ ಮತ್ತು ದೈಹಿಕ) ಪರವಾಗಿ ಸಾಕಷ್ಟು ವಾದಗಳನ್ನು ಒದಗಿಸುತ್ತವೆ.

### 2.1 ಒಂದು ಚಾರಿತ್ರಿಕ ದೃಷ್ಟಿಕೋನ

ಚಾರಿತ್ರಿಕವಾಗಿ ನೋಡಿದರೆ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಕುರಿತಂತೆ ಭಾರತದ ಬಳಿ ಪರಂಪರಾನುಗತವಾಗಿ ಮುಂದುವರೆದುಕೊಂಡು ಬಂದ

ಸುಮಾರು 5000 ವರ್ಷಗಳಷ್ಟು ಹಿಂದಿನ ಅಭ್ಯಾಸಗಳ ಕಣಜವಿದೆ. ಭಾರತದಲ್ಲಿ ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದ ಹೊತ್ತಿಗೆ ECE (ಆರಂಭಿಕ ಬಾಲ್ಯದ ಶಿಕ್ಷಣ) ಉಪಕ್ರಮಗಳು ಔಪಚಾರಿಕವಾಗಿ ದಾಖಲಾಗತೊಡಗಿದವು ಎಂದು ತಿಳಿದುಬರುತ್ತದೆ. ಈ ಚಳುವಳಿಯ ಆರಂಭದ ಪ್ರವರ್ತಕರು ಗಿಜುಭಾಯಿ ಬಧೇಕಾ, ತಾರಾಬಾಯಿ ಮೋದಕ್, ಮರಿಯಾ ಮೊಂಟೆಸರಿ, ಮತ್ತು ಇತರ ಅನೇಕರು. ಜೊತೆಗೆ ಮಹಾತ್ಮಾ ಗಾಂಧಿ, ರವೀಂದ್ರನಾಥ ಟ್ಯಾಗೋರ್ ಮತ್ತು ಜಾಕೀರ್ ಹುಸೇನ್‌ರಂತಹ ಭಾರತದ ಮಹಾನ್ ಶೈಕ್ಷಣಿಕ ಚಿಂತಕರೂ ಮಗುವಿನ ಬೆಳವಣಿಗೆಯ ಅವಧಿಯಲ್ಲಿ ಶಿಕ್ಷಣದ ಮಹತ್ವವನ್ನು ಕುರಿತು ಗಮನ ಸೆಳೆದಿದ್ದಾರೆ. ಸ್ವಾತಂತ್ರ್ಯ ದೊರಕಿದ ಅವಧಿಯಲ್ಲಿ ಶಾಲಾಪೂರ್ವ ಶಿಕ್ಷಣದ ಅಗತ್ಯವನ್ನು ಪ್ರಾಥಮಿಕವಾಗಿ ಸ್ವಯಂಸೇವಾ ಸಂಸ್ಥೆಗಳು ಮತ್ತು/ಅಥವಾ ಖಾಸಗಿ ಸಂಸ್ಥೆಗಳು ಪೂರೈಸಿದವು.

### 2.1.1 ಭಾರತದ ಸಂವಿಧಾನ ಮತ್ತು ಚಿಕ್ಕ ಮಕ್ಕಳು

ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳು ಅಥವಾ ರಾಜ್ಯ ನೀತಿಯ ನಿರ್ದೇಶಕ ತತ್ವಗಳಂತಹ ಅನೇಕ ಅವಕಾಶಗಳನ್ನು ECCE ಸೇವೆಗಳ ಬೆಂಬಲಕ್ಕಾಗಿ ಬಳಸಿಕೊಳ್ಳಲಾಗಿದೆ. ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ದುರ್ಬಲರಾದ ಸಮುದಾಯಗಳ ಪರವಾದ ಧನಾತ್ಮಕ ತಾರತಮ್ಯತೆಗೆ ಭಾರತದ ಸಂವಿಧಾನದ ಅನುಚ್ಛೇದ 15 (3), ರಾಜ್ಯಕ್ಕೆ [ಸರಕಾರಕ್ಕೆ] ಅಧಿಕಾರ ನೀಡುತ್ತದೆ. ಅದು ಹೆಣ್ಣುಮಕ್ಕಳು ಮತ್ತು ಅವಕಾಶವಂಚಿತ ಸಾಮಾಜಿಕ ಸಮುದಾಯಗಳಿಗೆ ಸೇರಿದ ಮಕ್ಕಳಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸುತ್ತದೆ ಮತ್ತು ಸಂಕಷ್ಟದ ಸನ್ನಿವೇಶಗಳಲ್ಲಿ ಯಾವುದೇ ನಾಗರಿಕನ ವಿರುದ್ಧವೂ ತಾರತಮ್ಯ ಮಾಡಕೂಡದು ಎಂದು ವಿಧಿಸುತ್ತದೆ. ಅನುಚ್ಛೇದ 15 (3), ಸ್ಪಷ್ಟವಾಗಿ ಹೀಗೆ ಹೇಳುತ್ತದೆ: *"ಮಹಿಳೆಯರು ಮತ್ತು ಮಕ್ಕಳ ಸಲುವಾಗಿ ವಿಶೇಷ ಅವಕಾಶಗಳನ್ನು ಕಲ್ಪಿಸಲು ಈ ಅನುಚ್ಛೇದದಲ್ಲಿನ ಯಾವುದೂ ರಾಜ್ಯವನ್ನು [ಸರಕಾರವನ್ನು] ನಿರ್ಬಂಧಿಸಲಾರದು."*

ಭಾರತ ಸಂವಿಧಾನದ ರಾಜ್ಯ ನೀತಿಯ ನಿರ್ದೇಶಕ ತತ್ವಗಳ ಅಡಿಯಲ್ಲಿನ ನಿರ್ದಿಷ್ಟ ಅನುಚ್ಛೇದಗಳು ECCEಗೆ ಬೆಂಬಲ ನೀಡುವಂತಹ ಚೌಕಟ್ಟನ್ನು ಒದಗಿಸುತ್ತವೆ. ಅವು ಹೀಗಿವೆ:

| | |
|---|---|
| ಅನುಚ್ಛೇದ 39 (f) | *ಮಕ್ಕಳ ಬಾಲ್ಯ ಮತ್ತು ಯೌವ್ವನವು ಶೋಷಣೆಯಿಂದ ಸುರಕ್ಷಿತವಾಗಿ ಒಂದು ಆರೋಗ್ಯಕರ ಸ್ಥಿತಿಯಲ್ಲಿ ಬೆಳೆಯಲು, ಹಾಗೂ ಮುಕ್ತ ವಾತಾವರಣದಲ್ಲಿ ಘನತೆಯಿಂದ ಬಾಳಲು ಅನುಕೂಲವಾಗುವಂತಹ ಅವಕಾಶಗಳು ಮತ್ತು ಸೌಲಭ್ಯಗಳು* |
| ಅನುಚ್ಛೇದ 42 | ಇದು ಉದ್ಯೋಗಸ್ಥ ಮಹಿಳೆಯರಿಗೆ ನೇರವಾಗಿ ಸಂಬಂಧಿಸಿದೆ: "ರಾಜ್ಯವು [ಸರಕಾರವು] ಅವರು ಕೆಲಸ ಮಾಡುವ ಜಾಗದಲ್ಲಿ ನ್ಯಾಯಯುತವಾದ ಮತ್ತು ಮಾನವೀಯ ವಾತಾವರಣವನ್ನು ಕಲ್ಪಿಸಿಕೊಡಬೇಕು ಮತ್ತು ಹೆರಿಗೆ ಸಂಬಂಧಿತ ಸಹಾಯವನ್ನು ಒದಗಿಸಬೇಕೆಂದು ಆದೇಶಿಸುತ್ತದೆ." (ಈ ಕಾನೂನುಬದ್ಧ ಅವಕಾಶದಿಂದ ಮಕ್ಕಳೂ ಫಲಾನುಭವಿಗಳಾಗುತ್ತಾರೆ). |

| | |
|---|---|
| ಅನುಚ್ಛೇದ 45 | 2001ರ ಸಂವಿಧಾನ ಮಸೂದೆಯನ್ನು (86ನೇ ತಿದ್ದುಪಡಿ) ಮಾನ್ಯ ಮಾಡುವವರೆಗೆ *ಎಲ್ಲಾ ಮಕ್ಕಳಿಗೆ ಹದಿನಾಲ್ಕು ವರ್ಷಗಳಾಗುವ ತನಕ ಉಚಿತವಾದ ಮತ್ತು ಕಡ್ಡಾಯ ಶಿಕ್ಷಣವನ್ನು ರಾಜ್ಯವು [ಸರಕಾರವು] ಒದಗಿಸಬೇಕು* ಎಂದು ಭಾರತ ಸಂವಿಧಾನದ 45ನೇ ಅನುಚ್ಛೇದವು ನಿರ್ದೇಶಿಸಿತ್ತು (ರಾಜ್ಯ ನೀತಿಯ ನಿರ್ದೇಶನ ತತ್ವಗಳು). ತಿದ್ದುಪಡಿಯ ನಂತರ ಸಾಂವಿಧಾನಿಕ ನಿರ್ದೇಶನದಲ್ಲಿ 0-6 ವರ್ಷದ ಮಕ್ಕಳನ್ನು ಒಳಗೊಂಡಿದ್ದು ಶಾಲಾಪೂರ್ವ ಶಿಕ್ಷಣವನ್ನು ಮುಖ್ಯ ಅಂಗವನ್ನಾಗಿಸುವ ಮೂಲಕ ಮಕ್ಕಳಿಗೆ ಸರ್ವತೋಮುಖ ಬೆಳವಣಿಗೆಯ ಪರಿಸ್ಥಿತಿ ನಿರ್ಮಿಸಬೇಕು ಎನ್ನುವುದನ್ನು ಅದು ಸೂಚಿಸುತ್ತದೆ. |
| ಅನುಚ್ಛೇದ 47 | ರಾಜ್ಯವು [ಸರಕಾರವು] ತನ್ನ ಪ್ರಜೆಗಳ ಆರೋಗ್ಯವನ್ನು ಸುಧಾರಿಸಲು ಅವರ ಪೌಷ್ಟಿಕತೆಯ ಮಟ್ಟವನ್ನು ಮತ್ತು ಅವರ ಜೀವನ ಮಟ್ಟವನ್ನು ಉನ್ನತೀಕರಿಸಲು ಪ್ರಯತ್ನಿಸಬೇಕು. |

### 2.1.2 ಸಂವಿಧಾನದ (86 ನೇ ತಿದ್ದುಪಡಿ) ಮಸೂದೆ, 2001

ಸಂವಿಧಾನದ (86 ನೇ ತಿದ್ದುಪಡಿ) ಮಸೂದೆ, 2001, 0-14 ವರ್ಷಗಳವರೆಗಿನ ಮಕ್ಕಳನ್ನು ಎರಡು ಸ್ಪಷ್ಟ ವರ್ಗಗಳಲ್ಲಿ ವಿಭಜಿಸಿ, ಅವರ ಹಿತಾಸಕ್ತಿಗಳನ್ನು ಸಂವಿಧಾನದ ಎರಡು ಪ್ರತ್ಯೇಕ ವಿಧಿಗಳ ವ್ಯಾಪ್ತಿಯಲ್ಲಿ ತರುತ್ತದೆ. ಸಂವಿಧಾನದಲ್ಲಿ ಅನುಚ್ಛೇದ 21Aಯನ್ನು ಅನುಚ್ಛೇದ 21ರ ನಂತರ ಒಂದು ಮೂಲಭೂತ ಹಕ್ಕಿನಂತೆ ಪರಿಚಯಿಸಲಾಗಿದೆ: ಆರರಿಂದ ಹದಿನಾಲ್ಕು ವರ್ಷಗಳವರೆಗಿನ ಎಲ್ಲಾ ಮಕ್ಕಳಿಗೆ ರಾಜ್ಯವು [ಸರಕಾರವು] ಉಚಿತವಾದ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು, ಇದನ್ನು ರಾಜ್ಯವು [ಸರಕಾರವು] ಕಾನೂನುಬದ್ಧವಾಗಿ ನಿರ್ಧರಿಸಬಹುದಾಗಿದೆ." 0-6 ವರ್ಷದ ಮಕ್ಕಳ ಅಗತ್ಯಗಳನ್ನು ಪೂರೈಸುವ ಉದ್ದೇಶವನ್ನು ಅಭಿವ್ಯಕ್ತಿಸುತ್ತ ಸಂವಿಧಾನದ (86ನೇ ತಿದ್ದುಪಡಿ) ಮಸೂದೆಯು ಅನುಚ್ಛೇದ 45ನ್ನು ಬದಲಾಯಿಸಿದ್ದು (ರಾಜ್ಯ ನೀತಿಗಳ ನಿರ್ದೇಶನ ತತ್ವ), ಅದು ಹೀಗೆ ಹೇಳುತ್ತದೆ: *ಮಕ್ಕಳು ಆರು ವರ್ಷದವರಾಗುವ ತನಕ ರಾಜ್ಯವು [ಸರಕಾರವು] ಎಲ್ಲಾ ಮಕ್ಕಳಿಗೆ ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು ಒದಗಿಸುವ ಪ್ರಯತ್ನ ಮಾಡಬೇಕು*." ECCEಯ ಪರವಾಗಿ ವಾದಿಸುವವರು ಮತ್ತು ಅದನ್ನು ಕಾರ್ಯಗತ ಮಾಡುತ್ತಿರುವವರು ಈ ತಿದ್ದುಪಡಿಯ ಬಗೆಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಏಕೆಂದರೆ, ಈ ತಿದ್ದುಪಡಿಯು ಚಿಕ್ಕ ವಯಸ್ಸಿನ ಮಕ್ಕಳ ಅಗತ್ಯಗಳು ಮತ್ತು ಹಕ್ಕುಗಳನ್ನು ಗುರುತಿಸಲು ನಿರಾಕರಿಸುತ್ತದೆ ಎಂದು ಅವರು ವಾದಿಸುತ್ತಾರೆ. ಜೊತೆಗೆ ಸರಕಾರವು ಸೇವಾಸೌಲಭ್ಯಗಳನ್ನು ಸೃಷ್ಟಿಸಲು 'ಪ್ರಯತ್ನಿಸಬೇಕು' ಎನ್ನುವ ಇಚ್ಛೆಯನ್ನು ಘೋಷಿಸುವ ಮೂಲಕ ಈ ತಿದ್ದುಪಡಿಯು 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಶಿಕ್ಷಣ ಮತ್ತು ಆರೈಕೆಯ ಹೊಣೆಯಿಂದ ನುಣುಚಿಕೊಳ್ಳುವಂತೆ ಮಾಡುತ್ತದೆ.

### 2.1.3 ಮಕ್ಕಳ ಹಕ್ಕುಗಳ ಸಂರಕ್ಷಣೆ

1951ರಿಂದ ಈಚೆಗೆ ಮಕ್ಕಳ ಕ್ಷೇಮಾಭಿವೃದ್ಧಿಯು ಭಾರತದ ಅಭಿವೃದ್ಧಿ ಯೋಜನೆಗಳ ಒಂದು ಅವಿಭಾಜ್ಯ ಅಂಗವಾಗಿದೆ. ಸಾಂವಿಧಾನಿಕವಾಗಿ ಮಕ್ಕಳ ಅಭಿವೃದ್ಧಿ ಮತ್ತು ಶಿಕ್ಷಣವು ಸಹವರ್ತಿ ವಿಷಯಗಳಾಗಿವೆ. ECCE ಯೋಜನೆಗಳ ಸೇವಾ ಸೌಲಭ್ಯಗಳ ವಿತರಣೆಯು ಕೇಂದ್ರ (ಗಣರಾಜ್ಯ) ಹಾಗೂ ರಾಜ್ಯಗಳೆರಡರ ಜಂಟಿ ಹೊಣೆಗಾರಿಕೆಯಾಗಿದೆ ಎಂಬುದು ಇದರ ಅರ್ಥ.

ಹಲವಾರು ಘಟಕಗಳನ್ನು ಹೊಂದಿದ ಭಾರತದ ECCE ಸೇವಾ ಸೌಲಭ್ಯಗಳ ನೀತಿಗಳು ಯಥೇಷ್ಟವಾಗಿದ್ದು, ಅವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

| | |
|---|---|
| ರಾಷ್ಟ್ರೀಯ ಶಿಕ್ಷಣ ನೀತಿ (NPE), 1986 | ಈ ನೀತಿಯು, ECCEಯನ್ನು ಮಾನವ ಸಂಪನ್ಮೂಲಗಳ ಅಭಿವೃದ್ಧಿಯ ಕಾರ್ಯತಂತ್ರಗಳಿಗೆ ನಿರ್ಣಾಯಕ ಕೊಡುಗೆಗಳನ್ನು ನೀಡುವ ಘಟಕದಂತೆ, ಪ್ರಾಥಮಿಕ ಶಿಕ್ಷಣಕ್ಕೆ ಪುಷ್ಟಿ ಮತ್ತು ಬೆಂಬಲವನ್ನು ನೀಡುವ ಯೋಜನೆಯಂತೆ, ಹಾಗೂ ಮಹಿಳೆಯರಿಗೆ ಬೆಂಬಲವನ್ನು ಒದಗಿಸುವ ಸೇವಾ ವ್ಯವಸ್ಥೆಯೆಂಬಂತೆ ಭಾವಿಸುತ್ತದೆ.. ಮುಖ್ಯವಾಗಿ ಈ ನೀತಿಯು ಚಿಕ್ಕ ಮಕ್ಕಳ ಅದರಲ್ಲೂ ನಿರ್ದಿಷ್ಟವಾಗಿ ಮೊದಲ ತಲೆಮಾರಿನ ಕಲಿಕಾರ್ಥಿಗಳು ಪ್ರಧಾನವಾಗಿರುವ ನಿವಾಸಿಗಳ ಪ್ರದೇಶಗಳಲ್ಲಿನ ಮಕ್ಕಳ ಅಭಿವೃದ್ಧಿಯ ನಿಟ್ಟಿನ ತೊಡಗುವಿಕೆಗೆ ಒತ್ತು ನೀಡುತ್ತದೆ. ಮಕ್ಕಳ ಅಭಿವೃದ್ಧಿಯೆಂದರೆ ಸರ್ವತೋಮುಖ ಅಭಿವೃದ್ಧಿ ಎಂಬುದನ್ನು ಮನಗಂಡು ECCE ಯೋಜನೆಗಳನ್ನು ವಿಸ್ತರಿಸಬೇಕಾಯಿತು, ಹಾಗೂ ಆಟಗಳು ಮತ್ತು ಪ್ರತೀ ಮಗುವಿನ ವ್ಯಕ್ತಿತ್ವವನ್ನು ಗಮನದಲ್ಲಿಟ್ಟುಕೊಂಡು ಅದನ್ನು ಮಗು ಕೇಂದ್ರಿತವನ್ನಾಗಿಸಬೇಕಾಯಿತು. ಮಗುವಿನ ಆರೈಕೆ ಮತ್ತು ಶಾಲಾಪೂರ್ವ ಶಿಕ್ಷಣ ಇವೆರಡನ್ನೂ ಪೂರ್ಣವಾಗಿ ಸಮನ್ವಯಗೊಳಿಸಿ ಪ್ರಾಥಮಿಕ ಶಿಕ್ಷಣಕ್ಕೆ ಪುಷ್ಟಿ ನೀಡಿ ಬಲಪಡಿಸುವುದು ಈ ನೀತಿಯ ಗುರಿಯಾಗಿತ್ತು. |
| ರಾಷ್ಟ್ರೀಯ ಮಕ್ಕಳ ನೀತಿ, 1974 ಮತ್ತು ರಾಷ್ಟ್ರೀಯ ಕ್ರಿಯಾ ಯೋಜನೆ: ಮಗುವಿನ ನಿಟ್ಟಿನ ಬದ್ಧತೆ, 1992 | *"ಮಕ್ಕಳಿಗೆ ಅವರು ಹುಟ್ಟುವ ಮೊದಲು ಮತ್ತು ಹುಟ್ಟಿದ ನಂತರದಲ್ಲಿ ಬೆಳವಣಿಗೆಯ ಅವಧಿಯ ಉದ್ದಕ್ಕೂ ಸೂಕ್ತ ಸೇವಾಸೌಲಭ್ಯಗಳನ್ನು ಒದಗಿಸುವುದು ರಾಜ್ಯದ ನೀತಿಯಾಗಬೇಕು. . . ಸೂಕ್ತ ಸಮಯದ ಒಳಗೆ ದೇಶದಲ್ಲಿರುವ ಎಲ್ಲಾ ಮಕ್ಕಳೂ ತಮ್ಮ ಸಂತುಲಿತ ಬೆಳವಣಿಗೆಗಾಗಿ ಇರುವ ಗರಿಷ್ಠ ಸ್ಥಿತಿಗಳನ್ನು ಆನಂದಿಸಲು ಸಾಧ್ಯವಾಗುವ ಹಾಗೆ ರಾಜ್ಯವು ಅಂತಹ ಸೇವೆಗಳ ವ್ಯಾಪ್ತಿಯನ್ನು ಹಿಗ್ಗಿಸುತ್ತ ಹೋಗುತ್ತದೆ."* |
| ರಾಷ್ಟ್ರೀಯ ಕ್ರಿಯಾ ಯೋಜನೆ (NPA), 1992 | ಮಕ್ಕಳ ಸಲುವಾಗಿ ಇರುವ ರಾಜ್ಯ ಕ್ರಿಯಾ ಯೋಜನೆಯು (SPAC) ರಚನೆಗೊಂಡ ನಂತರದ ರಾಷ್ಟ್ರೀಯ ಕ್ರಿಯಾ ಯೋಜನೆಯು (NPA) ಮಕ್ಕಳ ಸಂರಕ್ಷಣೆ, ಉಳಿವು, ಅಭಿವೃದ್ಧಿ ಮತ್ತು ಬೆಳವಣಿಗೆಯನ್ನು ಗುರಿಯಾಗಿಸಿಕೊಂಡಿತ್ತು. NPA ಮತ್ತು SPACಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕ್ಷೇತ್ರಗಳಿಗೂ ನಿರ್ದಿಷ್ಟ ಅವಧಿಯನ್ನೊಳಗೊಂಡ ಗುರಿಗಳು ಮತ್ತು ಕಾರ್ಯತಂತ್ರಗಳನ್ನು ರೂಪಿಸಲಾಗಿತ್ತು. |
| ರಾಷ್ಟ್ರೀಯ ಪೌಷ್ಟಿಕತೆಯ ನೀತಿ, 1993 | 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಪೌಷ್ಟಿಕತೆಯ ದೃಷ್ಟಿಯಿಂದ ದುರ್ಬಲರಾಗಿರುತ್ತಾರೆ ಮತ್ತು ಈ ವಯೋಮಾನದ ಮಕ್ಕಳು 'ಹೆಚ್ಚಿನ ಅಪಾಯ'ದಲ್ಲಿರುವ ಗುಂಪು ಎಂಬುದನ್ನು ಈ ನೀತಿಯು ಗುರುತಿಸುತ್ತದೆ, ಹಾಗಾಗಿ ಈ ಗುಂಪಿನ ಮಕ್ಕಳಿಗೆ ನೀತಿನಿರೂಪಣೆಗಳು ಮತ್ತು ವಿಶೇಷವಾಗಿ ದುರ್ಬಲ ಸಮುದಾಯಗಳಿಗೆ ಯೋಜನಾತ್ಮಕ ಮಧ್ಯಪ್ರವೇಶಗಳ (programmatic interventions) ಮೂಲಕ ಅತೀ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ; ಈ ಸಮಸ್ಯೆಯನ್ನು ನಿರ್ವಹಿಸಲು ರಾಷ್ಟ್ರೀಯ ಪೌಷ್ಟಿಕತೆಯ ಮಂಡಳಿ (NNM)ಯನ್ನು ನೇಮಿಸಲಾಗಿದೆ. |
| ರಾಷ್ಟ್ರೀಯ ಜನಸಂಖ್ಯಾ ನೀತಿ, 2000 | ಈ ನೀತಿಯು, ಜನಸಂಖ್ಯೆಯ ಸ್ಥಿರೀಕರಣಕ್ಕೆ ಮಕ್ಕಳ ಆರೋಗ್ಯವು ಒಂದು ಮೆಟ್ಟಿಲು ಎಂದು ಭಾವಿಸುತ್ತದೆ. |
| ರಾಷ್ಟ್ರೀಯ ಮಹಿಳಾ ಸಬಲೀಕರಣ ನೀತಿ, 2001 | ಕೆಲಸ ಮಾಡುವ ಜಾಗದ, ಶಿಕ್ಷಣ ಸಂಸ್ಥೆಗಳ ಹಾಗೂ ಮನೆಗಳಲ್ಲಿನ ಶಿಶುವಿಹಾರಗಳನ್ನು ಒಳಗೊಂಡ ಮಕ್ಕಳ ಆರೈಕೆಯ ಸೌಲಭ್ಯಗಳಂತೆಯೇ ಮಹಿಳೆಯರಿಗೆ ಬೆಂಬಲ ಸೇವೆಗಳನ್ನು ಒದಗಿಸುವುದು . . . ಮಹಿಳೆಯರು ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವ ರೀತಿಯ ಪರಿಸರವನ್ನು ಸೃಷ್ಟಿಸಲು ಇದನ್ನು ವಿಸ್ತರಿಸಲಾಗುವುದು ಮತ್ತು ಸುಧಾರಿಸಲಾಗುವುದು. |
| ರಾಷ್ಟ್ರೀಯ ಆರೋಗ್ಯ ನೀತಿ (NHP) 2002 | NHPಯ ಗುರಿಗಳಿಗೆ ಸಂಬಂಧಿಸಿದಂತೆ 30/1000ರಷ್ಟಿರುವ ಶಿಶುಗಳ ಮರಣ ಪ್ರಮಾಣವನ್ನು (IMR) ಮತ್ತು 100/100,000ರಷ್ಟಿರುವತಾಯಂದಿರ ಮರಣದ ಪ್ರಮಾಣವನ್ನು (MMR) 2010ರ ಒಳಗೆ ಇಳಿಸುವ ಸಲುವಾಗಿ 0-6 ವರ್ಷದ ಮಕ್ಕಳು ಅದರ |

| | |
|---|---|
| | ಒಂದು ಮುಖ್ಯವಾದ ಘಟಕವಾಗಿದ್ದಾರೆ. ಬುಡಕಟ್ಟು ಮತ್ತು ಸಮಾಜೋ-ಆರ್ಥಿಕವಾಗಿ ಕಡೆಗಣಿಸಲ್ಪಟ್ಟ ಸಮುದಾಯದ ಮಕ್ಕಳ ಆರೋಗ್ಯ ಸಂಬಂಧಿತ ಅಗತ್ಯಗಳಿಗೆ ಹೊಂದುವಂತಹ ಪ್ರತ್ಯೇಕ ಯೋಜನೆಗಳ ಪ್ರಸ್ತಾವಗಳನ್ನು ಮುಂದಿಡಲಾಗಿದೆ. |
| ಮಕ್ಕಳ ಹಕ್ಕುಗಳನ್ನು ಕುರಿತ ಒಪ್ಪಂದ, (CRC) 1992 | 1992ರಲ್ಲಿ ಭಾರತವು CRC ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ದೇಶವು ಮಕ್ಕಳ ಕಲ್ಯಾಣಕ್ಕೆ ಬದ್ಧವಾಗಿದೆ ಎಂಬುದನ್ನು ಅದು ದೃಢಪಡಿಸುತ್ತದೆ. ಅದರ ಪರಿಣಾಮವಾಗಿ ಯಾವ ಮಗುವೂ ಅನಕ್ಷರತೆ, ಹಸಿವು ಅಥವಾ ಆರೋಗ್ಯ ಸೌಲಭ್ಯಗಳಿಂದ ವಂಚಿತವಾಗದಂತೆ ನೋಡಿಕೊಳ್ಳುವ **ಮಕ್ಕಳ ರಾಷ್ಟ್ರೀಯ** ಸನ್ನದನ್ನು ರೂಪಿಸಲು ಒಂದು ನೀತಿನಿರೂಪಣಾ ಚೌಕಟ್ಟು ಸಿದ್ಧಗೊಂಡಿತು. **ಮಕ್ಕಳ ರಾಷ್ಟ್ರೀಯ ಸಮಿತಿ**ಯ ನಿರ್ಮಾಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಾಗಿದೆ. |

### 2.1.4 ECCE ಮತ್ತು ಸಂಬಂಧಪಟ್ಟ ಕಾನೂನಾತ್ಮಕ ಅವಕಾಶಗಳು

ಭಾರತದಲ್ಲಿ ಇರುವ ಎರಡು ಬಗೆಯ ಶಾಸನಬದ್ಧ ಅವಕಾಶಗಳು ಮಕ್ಕಳ ಅಭಿವೃದ್ಧಿಯ ಕ್ಷೇತ್ರವನ್ನು ಆಶ್ರಯಿಸಿವೆ. ಮೊದಲನೇ ಪ್ರಕಾರದ ಕಾನೂನುಬದ್ಧ ಅವಕಾಶವು ನೇರವಾಗಿ ಸೇವಾಸೌಲಭ್ಯಗಳ ವಿತರಣೆಗೆ ಸಂಬಂಧಿಸಿಲ್ಲವಾದರೂ ಅದು ಮಕ್ಕಳ ಬದುಕು, ಆರೋಗ್ಯ, ಮತ್ತು ಸಮಾನ ಅವಕಾಶಗಳ ಹಕ್ಕಿಗೆ ಸಂಬಂಧಿಸಿದೆ. ಎರಡನೆ ಪ್ರಕಾರದ ಕಾನೂನುಬದ್ಧ ಅವಕಾಶವು ಉದ್ಯೋಗದ ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ಮಕ್ಕಳ ಆರೈಕೆಗೆ ಸಂಬಂಧಿಸಿದ ಸೇವೆಗಳ ಸೌಲಭ್ಯಗಳನ್ನು ಕಾನೂನುಬದ್ಧಗೊಳಿಸುತ್ತದೆ, ಆಗ ಶಿಶುಗಳನ್ನು ಮತ್ತು ಚಿಕ್ಕ ಮಕ್ಕಳನ್ನು ಹೊಂದಿದ ಉದ್ಯೋಗಸ್ಥ ತಾಯಂದಿರಿಗೆ ಬೆಂಬಲ ನೀಡುವಂತಹ ಪರಿಸರವು ಉದ್ಯೋಗ ಸ್ಥಳಗಳಲ್ಲಿ ನಿರ್ಮಾಣವಾಗುತ್ತದೆ. ಅದು ಮುಂದೆ ಮಕ್ಕಳ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ.

ಮೊದಲ ಪ್ರಕಾರದ ಕಾನೂನುಬದ್ಧ ಅವಕಾಶಗಳು ಹೀಗಿವೆ:

- **ಪ್ರಸವಪೂರ್ವ ತಪಾಸಣಾ ವಿಧಾನಗಳ (ದುರುಪಯೋಗದ ನಿಯಂತ್ರಣ ಮತ್ತು ತಡೆ) ಮಸೂದೆ, 1994**: ಮಗು ಹುಟ್ಟುವ ಮೊದಲೇ ಭ್ರೂಣದ ಲಿಂಗವನ್ನು ಪತ್ತೆ ಮಾಡುವುದು ಹೆಣ್ಣು ಭ್ರೂಣಹತ್ಯೆಗೆ ದಾರಿ ಮಾಡಿಕೊಡುತ್ತದೆಯಾದ್ದರಿಂದ ಆ ಉದ್ದೇಶಕ್ಕಾಗಿ ಪ್ರಸವಪೂರ್ವ ತಪಾಸಣಾ ವಿಧಾನಗಳನ್ನು ದುರುಪಯೋಗಪಡಿಸಿಕೊಳ್ಳದೇ ಇರಲು ಈ ಕಾಯಿದೆಯು ಸಹಾಯ ಮಾಡುತ್ತದೆ.
- **ಶಿಶುವಿಗೆ ಪರ್ಯಾಯ ಹಾಲು, ಬಾಟಲಿಗಳು ಮತ್ತು ಶಿಶುವಿನ ಆಹಾರದ (ದುರುಪಯೋಗದ ನಿಯಂತ್ರಣ ಮತ್ತು ತಡೆ) ಮಸೂದೆ, 1994**: ಇದು ಸ್ತನ್ಯಪಾನವನ್ನು ಸಂರಕ್ಷಿಸುತ್ತದೆ ಹಾಗೂ ಪ್ರೋತ್ಸಾಹಿಸುತ್ತದೆಯಲ್ಲದೆ, ಶಿಶು ಆಹಾರವನ್ನು ಸಮರ್ಪಕವಾಗಿ ಬಳಸುವಂತೆ ನೋಡಿಕೊಳ್ಳುತ್ತದೆ.
- **ವಿಶಿಷ್ಟ ಚೇತನರ (ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಪ್ರಮಾಣದಲ್ಲಿ ಪಾಲ್ಗೊಳ್ಳುವಿಕೆ) ಮಸೂದೆ, 1995**: ಇದು ವಿಶಿಷ್ಟ ಚೇತನರನ್ನು ರಕ್ಷಿಸಲು ಮತ್ತು ಅವರ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ಸೇವಾಸೌಲಭ್ಯಗಳನ್ನು ಒದಗಿಸುವ ನಿಟ್ಟಿನ ಮುನ್ನೆಚ್ಚರಿಕೆಯ ಕ್ರಮಗಳ ಸ್ವೀಕಾರಕ್ಕೆ ಸಂಬಂಧಿಸಿದೆ.

ಎರಡನೆ ಪ್ರಕಾರದ ಕಾನೂನುಬದ್ಧ ಅವಕಾಶಗಳು ಈ ಕೆಳಗಿನಂತಿವೆ:

ಶಿಶುವಿಹಾರಗಳ ರೂಪದಲ್ಲಿ ಉದ್ಯೋಗಸ್ಥ ಮಹಿಳೆಯರ ಚಿಕ್ಕ ಮಕ್ಕಳು ಮತ್ತು ಶಿಶುಗಳಿಗಾಗಿ ದೈನಂದಿನ ಆರೈಕೆಯ ಕೇಂದ್ರಗಳು ವಿವಿಧ ಕಾರ್ಮಿಕ ಮಸೂದೆಗಳ ವ್ಯಾಪ್ತಿಯಲ್ಲಿರುವ ಒಂದು ಕಾನೂನುಬದ್ಧ ಅವಕಾಶವಾಗಿ ಕಡ್ಡಾಯಗೊಳಿಸಲ್ಪಟ್ಟಿವೆ; ಇವು ಕೆಲಸಮಾಡುತ್ತಿರುವ ಮಹಿಳೆಯರ ಸಂಖ್ಯೆ, ಅರ್ಹ ಮಕ್ಕಳ ಸಂಖ್ಯೆ, ಮತ್ತು ತೋಟ ಅಥವಾ ಫ್ಯಾಕ್ಟರಿಯ ಗಾತ್ರಕ್ಕೆ ಸಂಬಂಧಿಸಿ ಇರುವ ಕೆಲವು ನಿರ್ದಿಷ್ಟ

ನಿಬಂಧನೆಗಳನ್ನು ಪೂರೈಸಬೇಕು. ಈ ಕೇಂದ್ರೀಯ ಮಸೂದೆಗಳು ಒಂದಿಷ್ಟು ಸಾಮಾನ್ಯ ಮಾರ್ಗದರ್ಶಿ ಸೂಚಿಗಳನ್ನು ನೀಡುತ್ತವೆಯಾದರೂ ಈ ಪ್ರತೀ ಮಸೂದೆಗೂ ಸಂಬಂಧಿಸಿದಂತೆ ರಾಜ್ಯ ಸರಕಾರಗಳು ವಿಸ್ತೃತ ವಿವರಗಳುಳ್ಳ ನಿಯಮಗಳನ್ನು ರೂಪಿಸಿದ್ದು, ಅವು ಹೀಗಿವೆ:

- ಫ್ಯಾಕ್ಟರಿ ಮಸೂದೆ, 1948 (1954ರಲ್ಲಿ ತಿದ್ದುಪಡಿಯಾಗಿದೆ)
- ಗಣಿ ಮಸೂದೆ, 1950
- ಪ್ಲಾಂಟೇಶನ್ ಕಾರ್ಮಿಕರ ಮಸೂದೆ, 1951
- ಬೀಡಿ ಮತ್ತು ಸಿಗರೇಟ್ ಕಾರ್ಮಿಕರ ಮಸೂದೆ, 1966
- ಹೆರಿಗೆ ಭತ್ಯೆಯ ಮಸೂದೆ, 1961
- ಗುತ್ತಿಗೆ ಕಾರ್ಮಿಕರ ಮಸೂದೆ, 1970
- ಅಂತರರಾಜ್ಯ ವಲಸೆ ಕಾರ್ಮಿಕರ ಮಸೂದೆ, 1980
- ನಿರ್ಮಾಣ ಕಾರ್ಮಿಕರ ಮಸೂದೆ, 1996

### 2.1.5 ಯೋಜನಾ ಪ್ರಕ್ರಿಯೆಗಳು ಮತ್ತು ಚಿಕ್ಕ ಮಗು

**ಮೂರನೆಯ ಪಂಚವಾರ್ಷಿಕ ಯೋಜನೆಯವರೆಗೂ** ಸ್ವಯಂಪ್ರೇರಿತ ಮತ್ತು ಖಾಸಗಿ ವಿಭಾಗಗಳ ಸುಪರ್ದಿನಲ್ಲಿದ್ದ ECCEಯನ್ನು 1968ರಲ್ಲಿ ಗಂಗಾ ಸರನ್ ಸಿನ್ಹಾ ಸಮಿತಿಯು ಶಾಲಾಪೂರ್ವ ಶಿಕ್ಷಣದ ಅವಶ್ಯಕತೆಯನ್ನು ಒತ್ತಿ ಹೇಳಿದ ನಂತರ ಸರಕಾರದ ವ್ಯಾಪ್ತಿಯೊಳಗೆ ಸೇರಿಸಲಾಯಿತು.

ಆದರೆ **ನಾಲ್ಕನೆಯ ಪಂಚವಾರ್ಷಿಕ ಯೋಜನೆಯವರೆಗೂ** ಶಿಕ್ಷಣವ್ಯವಸ್ಥೆಯ ಶಾಲಾಪೂರ್ವ ಅವಧಿಯನ್ನು ಮಕ್ಕಳ ಕ್ಷೇಮಾಭಿವೃದ್ಧಿಯ ಪರಿಕಲ್ಪನೆಯಾಗಿ ಪರಿಗಣಿಸುವುದನ್ನು ಮುಂದುರಿಸಿ,ಅದನ್ನು ಗ್ರಾಮೀಣ ಕ್ಷೇತ್ರಗಳ ಕುಟುಂಬ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಯೋಜನೆಯ ಒಂದು ಪ್ರಕಾರವೆಂಬಂತೆ ಭಾವಿಸಲಾಯಿತು; ಶಾಲಾಪೂರ್ವ ಮಕ್ಕಳಿಗೆ ಅವರ ಸರ್ವತೋಮುಖ ಬೆಳವಣಿಗೆಯ ಸಲುವಾಗಿ ಮತ್ತು ಮಕ್ಕಳ ಅತ್ಯುತ್ತಮ ಬೆಳವಣಿಗೆಗೆ ತನ್ನ ಕೊಡುಗೆಯನ್ನು ನೀಡಲು ಸಾಧ್ಯವಾಗುವಂತೆ ಕುಟುಂಬವನ್ನು ಬಲಪಡಿಸುವ ನಿಟ್ಟಿನಲ್ಲಿ ಮಕ್ಕಳ ಕ್ಷೇಮಾಭಿವೃದ್ಧಿಯ ಸಮಗ್ರ ಸೇವಾಸೌಲಭ್ಯಗಳನ್ನು ಒದಗಿಸುವುದು ECCEಯ ಉದ್ದೇಶವಾಗಿತ್ತು.

**ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ** ಮಕ್ಕಳ ಅಭಿವೃದ್ಧಿಯ ಪರಿಕಲ್ಪನೆಗೆ ಬಹುಮುಖ್ಯವಾದ ತಿರುವು ಸಿಕ್ಕಿತು. ಈಗ ಅದರ ವಿಧಾನವು ಕ್ಷೇಮಾಭಿವೃದ್ಧಿಯನ್ನಲ್ಲದೆ, ಬೆಳವಣಿಗೆಯನ್ನು ಸಹ ಆದ್ಯತೆಯನ್ನಾಗಿಸಿಕೊಂಡಿತು ಮತ್ತು 1974ರ ಮಕ್ಕಳ ರಾಷ್ಟ್ರೀಯ ನೀತಿಯ ಘೋಷಣೆಯೊಂದಿಗೆ 1975ರಲ್ಲಿ ಏಕೀಕೃತ ಮಕ್ಕಳ ಅಭಿವೃದ್ಧಿ ಸೇವೆಗಳ ಯೋಜನೆಯು (ICDS) ಕಾರ್ಯಾರಂಭ ಮಾಡಿತು; ಆರಂಭದಲ್ಲಿ ಈ ಯೋಜನೆಯು ಪ್ರಯೋಗಾತ್ಮಕವಾಗಿ 33 ಯೋಜನೆಗಳೊಂದಿಗೆ ಕೆಲಸ ಮಾಡಿತು. **ಎಂಟನೆಯ ಪಂಚವಾರ್ಷಿಕ ಯೋಜನೆಯ** ಹೊತ್ತಿಗೆ ಸರ್ಕಾರೀ ವಲಯದಲ್ಲಿನ ಶಾಲಾಪೂರ್ವ ಮಕ್ಕಳ ವ್ಯಾಪ್ತಿಯ ನಿಟ್ಟಿನಲ್ಲಿತೀವ್ರಗತಿಯ ವಿಸ್ತರಣೆಗಳು ನಡೆದವು.

**ಒಂಬತ್ತನೆ ಪಂಚವಾರ್ಷಿಕ ಯೋಜನೆಯು** ಆರಂಭಿಕ ಬಾಲ್ಯದ ಬೆಳವಣಿಗೆಗೆ ಸಂಬಂಧಿಸಿದ ಸೇವೆಗಳ ಆದ್ಯತೆಯನ್ನು ಅದು ಮಾನವ ಸಂಪನ್ಮೂಲಗಳ ಅಭಿವೃದ್ಧಿಯ ದಿಶೆಯಲ್ಲಿ ಮಾಡಿದ ಹೂಡಿಕೆಯೆಂಬಂತೆ ಪುನರ್‌ದೃಢೀಕರಿಸಿತು ಮತ್ತು ECCE ಯೋಜನೆಗಳ ನಿರ್ವಹಣೆಯಲ್ಲಿ, ಅದರಲ್ಲೂ ಮುಖ್ಯವಾಗಿ ವಿಕೇಂದ್ರೀಕೃತ ಪಂಚಾಯತ್ ರಾಜ್ ವ್ಯವಸ್ಥೆಯ(PRS) ಅಡಿಯಲ್ಲಿ ಮಹಿಳಾ

ಗುಂಪುಗಳನ್ನು ತೊಡಗಿಸಿಕೊಳ್ಳುವುದು ಮುಖ್ಯವಾಗುತ್ತದೆ ಎಂಬ ವಿಚಾರದ ಮೇಲೆ ಒತ್ತನ್ನು ನೀಡಿತು.

**ಹತ್ತನೆಯ ಪಂಚವಾರ್ಷಿಕ ಯೋಜನೆಯು** ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಕ್ಕಳ 'ಉಳಿವು', 'ಸಂರಕ್ಷಣೆ', ಮತ್ತು 'ಅಭಿವೃದ್ಧಿ'ಯನ್ನು ಗುರಿಯಾಗಿರಿಸಿಕೊಂಡು ದೇಶದ ಎಲ್ಲಾ ಮಕ್ಕಳನ್ನೂ ತಲುಪುವಂತಹ ಪ್ರಮುಖ ಕಾರ್ಯತಂತ್ರಗಳೊಂದಿಗೆ ಹಕ್ಕುಗಳನ್ನಾಧರಿಸಿದ ವಿಧಾನವನ್ನು ಅಳವಡಿಸಿಕೊಳ್ಳುತ್ತದೆ. ಆರೋಗ್ಯ, ಸೋಂಕು ತಟ್ಟದಂತೆ ರಕ್ಷಣೆ, ಪೌಷ್ಟಿಕಾಂಶ, ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನೀತಿಗಳ ಅನುಷ್ಠಾನ ಮತ್ತು ಯೋಜನೆಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುವ ಮೂಲಕ ಅಭಿವೃದ್ಧಿಯನ್ನು ಸಾಧಿಸಲು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (RCH), ICDS, ಮತ್ತು ಸರ್ವ ಶಿಕ್ಷಣ ಅಭಿಯಾನವೆಂಬ (SSA) ದೇಶಾದ್ಯಂತದ ಮೂರು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಆರಂಭಿಸಲಾಯಿತು. ಮೊದಲ ಆರು ವರ್ಷದ ಬಾಲ್ಯವು ಮಕ್ಕಳ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಮುಖ್ಯವಾದ ಅವಧಿ ಎನ್ನುವುದನ್ನೂ ಮತ್ತು ಪ್ರಸವಪೂರ್ವ ಹಂತದಿಂದ ಮೊದಲ 3 ವರ್ಷದವರೆಗಿನ ಬಾಲ್ಯವು ಮಕ್ಕಳ ಬದುಕಿನಲ್ಲಿ ಅತ್ಯಂತ ನಿರ್ಣಾಯಕ ಹಾಗೂ ಬಹಳ ದುರ್ಬಲ ಅವಧಿ ಎನ್ನುವುದನ್ನೂ ಈ ಯೋಜನೆಯು ಗುರುತಿಸುತ್ತದೆ; ಜೊತೆಗೆ ಮಾನವ ಬೆಳವಣಿಗೆಯ ಸಂಪೂರ್ಣ ಸಾಮರ್ಥ್ಯವನ್ನು ಗಳಿಸಲು ಮತ್ತು ಸತತವಾಗಿ ಸಂಚಯವಾಗುವ ಜೀವಿತಾವಧಿ ಕಲಿಕೆಗೆ ಸೂಕ್ತ ಅಡಿಪಾಯವನ್ನು ಹಾಕುತ್ತದೆ. ಹೀಗೆ ಕುಟುಂಬ ಕೇಂದ್ರಿತವಾದ ಮತ್ತು ಸಮುದಾಯವನ್ನು ಆಧರಿಸಿದ ಮಧ್ಯಂತರ ಪ್ರಕ್ರಿಯೆಗಳ ಮಹತ್ವವನ್ನು ಅದು ಬಲಪಡಿಸುತ್ತದೆ. ಹತ್ತನೇ ಪಂಚವಾರ್ಷಿಕಯೋಜನೆಯು ಉದ್ಯೋಗಸ್ಥ ಮತ್ತು ಅಸ್ವಸ್ಥ ತಾಯಂದಿರ ಮಕ್ಕಳಿಗಾಗಿ ಶಿಶುವಿಹಾರಗಳು ಮತ್ತು ದೈನಂದಿನ ಶಿಶು ಪಾಲನೆಯ ಕೇಂದ್ರಗಳ ರೂಪದಲ್ಲಿರುವ ಬೆಂಬಲ ಸೇವೆಗಳ ಅಗತ್ಯವೂ ಹೆಚ್ಚುತ್ತಿರುವುದನ್ನು ಗುರುತಿಸುತ್ತದೆ, ಇದು ಮುಖ್ಯವಾಗಿ ಹೆಚ್ಚಿನ ಮಹಿಳೆಯರು ಸಂಘಟಿತ ಮತ್ತು ಅಸಂಘಟಿತ ಎರಡೂ ಘಟಕಗಳಲ್ಲಿ ಉದ್ಯೋಗವನ್ನು ಅರಸಲು ಮನೆಯಿಂದ ಹೊರಬರುತ್ತಿರುವ ಈ ಸಂದರ್ಭದಲ್ಲಿ ಹೆಚ್ಚು ಮಹತ್ವವನ್ನು ಪಡೆಯುತ್ತದೆ. ಈ ಹಿನ್ನೆಲೆಯಲ್ಲಿ ದೇಶದ ಉದ್ದಗಲಕ್ಕೂ ಶಿಶುವಿಹಾರಗಳ ವಿಸ್ತೃತ ಸಂಪರ್ಕಜಾಲವನ್ನು ರೂಪಿಸಲು ರಾಷ್ಟ್ರೀಯ ಶಿಶುವಿಹಾರ ನಿಧಿಯನ್ನು ಇನ್ನಷ್ಟು ಬಲಪಡಿಸಲಾಗುವುದು.

### 2.1.6 ECCEಯ ಸಲುವಾಗಿ ವಿವಿಧ ಸಚಿವಾಲಯಗಳ ಸಂಗಮ

ಆರಂಭಿಕ ಬಾಲ್ಯಕ್ಕೆ ಸಂಬಂಧಿಸಿದ ಸೇವಾಸೌಲಭ್ಯಗಳ ವಿತರಣೆಯಲ್ಲಿ ಭಾರತ ಸರಕಾರದ ನಾಲ್ಕು ಸಚಿವಾಲಯಗಳಿಗೆ ಹೊಣೆಗಾರಿಕೆ ಇರುತ್ತದೆ. ಆರಂಭಿಕ ಬಾಲ್ಯಕ್ಕೆ ಸಂಬಂಧಿಸಿದ ಸೇವಾಸೌಲಭ್ಯಗಳ ವಿವಿಧ ಅಂಶಗಳನ್ನು ತಲುಪಿಸುವ ನಿಟ್ಟಿನಲ್ಲಿ, ಪ್ರತೀ ಸಚಿವಾಲಯವೂ ಕೋಷ್ಟಕ 2.1ರಲ್ಲಿ ತೋರಿಸಿದಂತೆ ನಿರ್ದಿಷ್ಟ ವಯೋಮಾನದ ಮಕ್ಕಳ ಗುಂಪಿನ ಹೊಣೆಗಾರಿಕೆಯನ್ನು ಹೊತ್ತಿರುತ್ತದೆ.

0-6ರ ಒಳಗಿನ ಮಕ್ಕಳ ಸೇವೆಗಳ ಹೊಣೆಯು ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆಯ ಸಚಿವಾಲಯದ್ದು. ಈ ವಯೋಮಾನವದವರಿಗೆ ECCE ಸೇವೆಗಳನ್ನು ಒದಗಿಸಲು, ಸಚಿವಾಲಯದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ನೋಡಲ್ ಏಜೆನ್ಸಿ ಆಗಿರುತ್ತದೆ; ಇದು 0-6 ವರ್ಷದ ಮಕ್ಕಳನ್ನು, ICDS ಯೋಜನೆ, ರಾಷ್ಟ್ರೀಯ ಶಿಶುಗೃಹ ನಿಧಿ, ಮತ್ತು ಶಿಶುಗೃಹ ಯೋಜನೆಯ ಮುಖಾಂತರ ನೋಡಿಕೊಳ್ಳುತ್ತದೆ. ಕೇಂದ್ರ ಸರ್ಕಾರದಿಂದ ಪ್ರಾಯೋಜಿತಗೊಳ್ಳುವ ICDS ಯೋಜನೆಗೆ ಸಂಬಂಧಿಸಿದಂತೆ ಯೋಜನೆಯ ರೂಪರೇಷೆಗೆ ಮತ್ತು ಅದರ ಕಾರ್ಯನಿರ್ವಹಣೆಯ ವೆಚ್ಚಕ್ಕೆ ಕೇಂದ್ರ ಸರ್ಕಾರವು ಹೊಣೆಯಾಗಿರುತ್ತದೆ. ರಾಜ್ಯ ಸರ್ಕಾರಗಳು ಅದರ

ಕಾರ್ಯಕ್ರಮದ ಅನುಷ್ಠಾನ ಮತ್ತು ಪೂರಕ ಪೌಷ್ಟಿಕ ಆಹಾರದ ಸರಬರಾಜಿನ ಹೊಣೆಯನ್ನು ಹೊರುತ್ತವೆ. ಇದರ ಜೊತೆಗೆ ಖಾಸಗಿ ಮತ್ತು ಸ್ವಯಂಪ್ರೇರಿತ ವಿಭಾಗಗಳೂ ಇದರಲ್ಲಿ ಪಾಲ್ಗೊಳ್ಳುತ್ತವೆ.

**ಕೋಷ್ಟಕ 2.1: ECCE ಸೇವೆಗಳ ವಿತರಣೆಗೆ ಸಂಬಂಧಿಸಿದಂತೆ ಸಚಿವಾಲಯಗಳ ಹೊಣೆಗಾರಿಕೆ**

| **ಹೊಣೆಗಾರಿಕೆಯ ಕ್ಷೇತ್ರ** | **ಮಕ್ಕಳ ವಯಸ್ಸು** | **ಸಚಿವಾಲಯ** |
|---|---|---|
| ಪೂರಕ ಪೌಷ್ಟಿಕ ಆಹಾರ, ಪೌಷ್ಟಿಕತೆ ಮತ್ತು ಆರೋಗ್ಯ ಶಿಕ್ಷಣ (NHED), ಉಲ್ಲೇಖಿತ | 0-6 ವರ್ಷ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ (DWCD) ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD) |
| ಪ್ರತಿರಕ್ಷಣೆ | 0-6 ವರ್ಷ | ಕುಟುಂಬ ಕಲ್ಯಾಣ ಖಾತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (MOHFW) |
| ಶಾಲಾ ಪೂರ್ವ ಶಿಕ್ಷಣ | 3-6 ವರ್ಷ | DWCD ಮತ್ತು ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (EE&L), MHRD |
| ಮಕ್ಕಳ ಆರೈಕೆ | 0-5/6 ವರ್ಷ | DWCD, ಕಾರ್ಮಿಕ ಸಚಿವಾಲಯ |
| ಅಂಗವೈಕಲ್ಯವನ್ನು ತಡೆಗಟ್ಟುವುದು ಮತ್ತು ಆರಂಭದ ಹಂತದಲ್ಲೇ ಪತ್ತೆಹಚ್ಚುವುದು | ಪ್ರಸವಪೂರ್ವದ ನಂತರ | ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ |

## 2.2 ವ್ಯಾಪ್ತಿ ಮತ್ತು ಲಭ್ಯತೆ

0-6 ವರ್ಷದ ಒಳಗಿನ ಮಕ್ಕಳ ಸಲುವಾಗಿ ಇರುವ ಯೋಜನೆಗಳು ಮತ್ತು ಮಧ್ಯಂತರ ಪ್ರಕ್ರಿಯೆಗಳನ್ನು ಸರಕಾರ, ಖಾಸಗಿ ಮತ್ತು ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುತ್ತವೆ.

### 2.2.1 ಸಾರ್ವಜನಿಕ ಕ್ಷೇತ್ರ

*ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣ: ಒಂದು ಅವಲೋಕನ*(MHRD 2003)ದ ಪ್ರಕಾರ, 3-6 ವರ್ಷದ ಒಳಗಿನ ಒಟ್ಟು ಮಕ್ಕಳ ಸಂಖ್ಯೆಯಲ್ಲಿ 19.64% ಮಕ್ಕಳನ್ನು ಮಾತ್ರ ECCE ಯೋಜನೆಯ ಅಡಿಯಲ್ಲಿ ಒಳಗೊಳ್ಳಲಾಗಿದೆ; ಉದಾಹರಣೆಗೆ, ICDS ಮತ್ತು ECEಯಂತಹ ಯೋಜನೆಗಳು, 1996-97ರ ಅವಧಿಯಲ್ಲಿ DWCDಯ ನೆರವಿನಿಂದ ಸ್ವಯಂಪ್ರೇರಿತ ವಿಭಾಗದಲ್ಲಿ ನಡೆದ ಶಿಶುವಿಹಾರಗಳು ಮತ್ತು ಬಾಲವಾಡಿಗಳು.

1996-97ರ ನಂತರ ಮುಖ್ಯವಾಗಿ ICDS ವ್ಯಾಪ್ತಿಯಲ್ಲಿ ಒಳಗೊಂಡ ಮಕ್ಕಳ ಸಂಖ್ಯೆಯು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿದೆ. ICDS ಮತ್ತು ಶಿಶುಗೃಹದ ಎರಡು ಪ್ರಮುಖ ಯೋಜನೆಗಳ ವ್ಯಾಪ್ತಿಯನ್ನು (2003-04) ಕೆಳಗೆ ಕೊಡಲಾಗಿದೆ:

ಸರಕಾರದ ಇತರೆ ಯೋಜನೆಗಳಿಗೆ ಸಂಬಂಧಿಸಿ ಹೇಳುವುದಾದರೆ ECEಯ ವಿಸ್ತರಣೆಯು ICDS ಸೇವೆಗಳ ವಿಸ್ತರಣೆಯಷ್ಟು ದೊಡ್ಡ ಪ್ರಮಾಣದಲ್ಲಿ ಆಗಲಿಲ್ಲ. 2000ದ ಇಸವಿಯಲ್ಲಿ 2 ಮಿಲಿಯನ್ ECE ಕೇಂದ್ರಗಳನ್ನು ತೆರೆಯಬೇಕೆನ್ನುವ

ಗುರಿಯಿದ್ದು, ಕೇವಲ 0.55 ಮಿಲಿಯನ್ ಕೇಂದ್ರಗಳು ಮಾತ್ರವೇ ಈಗ ಅಸ್ತಿತ್ವದಲ್ಲಿವೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (DPEP) ಹಾಗೂ ಸರ್ವಶಿಕ್ಷಣ ಅಭಿಯಾನದಂತಹ (SSA) ಕಾರ್ಯಕ್ರಮಗಳಲ್ಲಿ ICDSನಲ್ಲಿ ನಿರ್ವಹಿಸಲಾರದವುಗಳ ಬಗ್ಗೆ ಗಮನಹರಿಸಸಲಾಯಿತು. DPEP ಅಡಿಯಲ್ಲಿ 10,000 ECE ಕೇಂದ್ರಗಳನ್ನು ICDS ಕೇಂದ್ರಗಳಿಲ್ಲದ ಕ್ಷೇತ್ರಗಳಲ್ಲಿ[11] ತೆರೆಯಲಾಯಿತು. EE&L ಇಲಾಖೆಯ ಅಂದಾಜಿನ ಪ್ರಕಾರ ಪೂರ್ವ-ಪ್ರಾಥಮಿಕ ಹಂತಕ್ಕೆ ದಾಖಲಾದ ಒಟ್ಟು ಮಕ್ಕಳ ಸಂಖ್ಯೆ 46,23,168. ಅಂದರೆ ECCD ಯೋಜನೆಗಳು ತಮ್ಮ ವ್ಯಾಪ್ತಿಯನ್ನು ಎಷ್ಟೇ ಹೆಚ್ಚಿಸಿಕೊಂಡರೂ ECCE ಯೋಜನೆಗಳ ನಿಟ್ಟಿನ ಮಕ್ಕಳ ವ್ಯಾಪ್ತಿಯು (ಕೇವಲ 22%) ಅತ್ಯಂತಅಸಮರ್ಪಕವಾಗಿರುವುದು ಮೇಲಿನ ಅಂಕಿಅಂಶಗಳಿಂದ ಸ್ಪಷ್ಟವಾಗುತ್ತದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ (DWCD) ಮೂಲಕ ನಡೆದ ICDS ಯೋಜನೆಗಳ ಹೊರತಾಗಿಯೂ ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು (EE&L) ಆರಂಭಿಕ ಬಾಲ್ಯದ ಶಿಕ್ಷಣದ ಮೇಲೆ ಪರಿಣಾಮ ಬೀರಲು DPEP ಮತ್ತು ಮಹಿಳಾ ಸಾಮಾಖ್ಯ ಯೋಜನೆಗಳ ನಿಟ್ಟಿನಲ್ಲಿ ಪ್ರಯತ್ನಗಳನ್ನು ನಡೆಸಿವೆ. ತೀರ ಇತ್ತೀಚೆಗೆ SSAಯ ಗುರಿಗಳು ಹೀಗಿವೆ:

i. ICDSನ ವ್ಯಾಪ್ತಿಯ ಶಾಲಾಪೂರ್ವ ಘಟಕಗಳನ್ನು ಬಲಪಡಿಸುವುದು.
ii. ಬಾಲವಾಡಿಗಳಿಲ್ಲದ ಕ್ಷೇತ್ರಗಳಲ್ಲಿ ಬಾಲವಾಡಿಗಳನ್ನು ತೆರೆಯುವುದು.
iii. ಆರಂಭಿಕ ಬಾಲ್ಯದ ಬೆಳವಣಿಗೆಯ ಮಹತ್ವದ ಪರವಾಗಿ ಪ್ರಚಾರ ಕಾರ್ಯಕ್ರಮಗಳನ್ನು ರೂಪಿಸುವುದು.
iv. ಸಮುದಾಯದ ನಾಯಕರ ಸಲುವಾಗಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವುದು.
v. ECCಗೆ ಗಹನವಾದ ಯೋಜನೆಯನ್ನು ಒದಗಿಸುವುದು.
vi. ಸಂಪನ್ಮೂಲಗಳ ಅಭಿವೃದ್ಧಿ.
vii. ಶಾಲಾವ್ಯವಸ್ಥೆ ಮತ್ತು ECCEಗಳೆರಡೂ ಒಟ್ಟೊಟ್ಟಿಗೇ ನಡೆಯುವ ನಿಟ್ಟಿನಲ್ಲಿ ಉತ್ತೇಜನ.

ಈ ಅಭಿಯಾನದ ಅಡಿಯಲ್ಲಿ ECCE ಕೇಂದ್ರಗಳನ್ನು ಆರಂಭಿಸಲು ಪ್ರತೀ ಜಿಲ್ಲೆಗೆ ವರ್ಷಕ್ಕೆ 15 ಲಕ್ಷ ಅನುದಾನವು ದೊರೆಯುಗುತ್ತದೆ. ಜನಶಾಲಾ ಯೋಜನೆಯು ಅಂತಹ ಒಂದು ಪೂರಕ ಕಾರ್ಯಕ್ರಮವಾಗಿದೆ.

### 2.2.2 ಖಾಸಗಿ ಕ್ಷೇತ್ರ

ಅನೇಕ ಹೆಸರುಗಳಲ್ಲಿ ಕೆಲಸ ಮಾಡುತ್ತಿರುವ ಖಾಸಗಿ ವಲಯದ ವಾಣಿಜ್ಯ ಸಂಸ್ಥೆಗಳನ್ನು ಕುರಿತಂತೆ ಸಮೀಕ್ಷೆಗಳನ್ನು ಇನ್ನೂ ಕೈಗೊಂಡಿಲ್ಲವಾದ್ದರಿಂದ ಖಚಿತ ಅಂಕಿಅಂಶಗಳು ಲಭ್ಯವಿಲ್ಲ. ಕೆಲವು ಅಂದಾಜಿನ ಪ್ರಕಾರ ಖಾಸಗಿ ಶಿಕ್ಷಣದ ಉಪಕ್ರಮಗಳಲ್ಲಿ (ಶಿಶುಗಳ ಪಾಲನೆಯ ಕೇಂದ್ರಗಳು, ಶಿಶುವಿಹಾರಗಳು, ಕಿಂಡರ್‌ಗಾರ್ಟನ್ನುಗಳು, ಮತ್ತು ಪ್ರಾಥಮಿಕ-ಪೂರ್ವ ತರಗತಿಗಳು) ದಾಖಲಾದ ಮಕ್ಕಳ ಸಂಖ್ಯೆ, 1 ಕೋಟಿ (2001). ಅಥವಾ ಹೆಚ್ಚುಕಡಿಮೆ ಆ ಸಮಯಕ್ಕೆ ICDS ಯೋಜನೆಯ ವ್ಯಾಪ್ತಿಯಲ್ಲಿ ಬರುವಷ್ಟೇ ಮಕ್ಕಳು ಎನ್ನಬಹುದು.[12] ಇಂದು, ಖಾಸಗಿ ಕ್ಷೇತ್ರದ ಉಪಕ್ರಮಗಳು ಸರಕಾರೀ ಕ್ಷೇತ್ರದಿಂದ ಕೈಗೊಂಡ ಯೋಜನೆಗಳಷ್ಟೇ

---

[11] *DEE* & *L, MHRD 2001*Central

[12] *DEE* & *L, MHRD 2004*.

ದೊಡ್ಡದಾಗಿವೆಯಾದರೂ ಮೊದಲನೆಯ ಕ್ಷೇತ್ರವು ವಿವಿಧ ವರ್ಗದವರನ್ನು ಒಳಗೊಳ್ಳುತ್ತದೆ. ಆರಂಭದಲ್ಲಿ ನಗರದಮೇಲ್ವರ್ಗ ಮತ್ತು ಮಧ್ಯಮ ವಕ್ಕೆ ಸೀಮಿತವಾಗಿದ್ದ ಖಾಸಗಿ ಕ್ಷೇತ್ರದ ಉಪಕ್ರಮಗಳು ಸಣ್ಣ ನಗರಗಳು, ಗ್ರಾಮಗಳು, ಅರೆ-ನಗರ ಪ್ರದೇಶಗಳು ಮತ್ತು ನಗರದ ಕೊಳಚೆಗೇರಿ ಮುಂತಾದವುಗಳವರೆಗೂ ವಿಸ್ತರಿಸಿವೆ; ಹಿಂದೆಂದೂ ಇರದ ರೀತಿಯಲ್ಲಿ ಅಂತಹ ಶಿಕ್ಷಣ ಸೌಲಭ್ಯಗಳಿಗೆ ಇರುವ ಬೇಡಿಕೆ ಹಾಗೂ ಜನಪ್ರಿಯತೆಯನ್ನು ಇದು ಸೂಚಿಸುತ್ತದೆ. ಇವೆಲ್ಲದರ ಜೊತೆಗೆ ವಿವಿಧ ಕಾಯಿದೆಗಳ ಅಡಿಯಲ್ಲಿನ ಕಾನೂನುಸಮ್ಮತ ಶಿಶುವಿಹಾರಗಳು ಸಹ 1 ಲಕ್ಷಕ್ಕಿಂತ ಅಧಿಕ ಮಕ್ಕಳನ್ನು ಒಳಗೊಂಡಿವೆ ಎಂದು ಅಂದಾಜಿಸಲಾಗಿದೆ.

**ಕೋಷ್ಟಕ 2.2 ಸರಕಾರಿ ECCD ಯೋಜನೆಗಳ ಪ್ರಸ್ತುತ ವ್ಯಾಪ್ತಿ, 2003-04**

| ಕ್ರಮ ಸಂಖ್ಯೆ | ಯೋಜನೆಗಳು | ವಯೋಮಾನ | ಯೋಜನೆಗಳ/ ಶಿಶುವಿಹಾರಗಳ ಸಂಖ್ಯೆ | ಫಲಾನುಭವಿಗಳು | ಒಟ್ಟು |
|---|---|---|---|---|---|
| 1. | ICDS | 6 ತಿಂಗಳು, 3 ವರ್ಷ, 3-6 ವರ್ಷಗಳು | 5,267 | 1,67,98, 824<br>2,04,38,002 | 3,72,36,826 |
| 2. | ಉದ್ಯೋಗಸ್ಥ ಮತ್ತು ಅಸ್ವಸ್ಥ ಮಹಿಳೆಯರ ಮಕ್ಕಳ ಸಲುವಾಗಿ ಶಿಶುವಿಹಾರಗಳು | 0-5 ವರ್ಷಗಳು | 12,470 | 3,11,750 | |
| 3. | ರಾಷ್ಟ್ರೀಯ ಶಿಶುವಿಹಾರ ನಿಧಿ* | 0-5 ವರ್ಷಗಳು | 4,885 | 1,22,125 | 4,33,875 |
| | | | | | 3,76,70,701 |

*ಸರ್ಕಾರದ ಬೆಂಬಲ ಪಡೆದು ಸರ್ಕಾರೇತರ ಸಂಸ್ಥೆಗಳಿಂದ ನಿರ್ವಹಿಸಲ್ಪಡುತ್ತವೆ.
ಮೂಲ: DWCDಯ ವಾರ್ಷಿಕ ವರದಿ, 2003-04, MHRD, GOI, ಪುಟಗಳು.19, 107.

### 2.2.3 ECCEಯ ನಿಟ್ಟಿನ ಸರ್ಕಾರೇತರ ಸೇವೆಗಳು

ECCE ಸೌಲಭ್ಯಗಳ ವಿವಿಧ ಮಾದರಿಗಳು ಮತ್ತು ಪ್ಯಾಕೇಜುಗಳನ್ನು ಒದಗಿಸುವ ಸರ್ಕಾರೇತರ ಸಂಸ್ಥೆಗಳ ಕ್ಷೇತ್ರವೂ ಇದೆ. ಸರ್ಕಾರೇತರ ಕ್ಷೇತ್ರಗಳಿಂದ ಒದಗಿಸಲಾಗುವ ECCE ಸೌಲಭ್ಯಗಳಿಗೆ ಸಂಬಂಧಿಸಿದಂತೆ ಅಂಕಿಅಂಶಗಳು ಲಭ್ಯವಿಲ್ಲ, ಈ ಕ್ಷೇತ್ರಕ್ಕೆ ಹಲವು ಮೂಲಗಳಿಂದ, ಅಂದರೆ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ದಾನಿಗಳು, ಟ್ರಸ್ಟ್‌ಗಳು ಮತ್ತು ವಿವಿಧ ಮತಪಂಗಡಗಳ ಸಂಸ್ಥೆಗಳಿಂದ ಹಣಸಹಾಯ ಸಿಗುತ್ತದೆ. ಇದರ ವ್ಯಾಪ್ತಿಯಲ್ಲಿ 3 ಮಿಲಿಯನ್‌ನಿಂದ ಮೊದಲ್ಗೊಂಡು, 20 ಮಿಲಿಯನ್‌ವರೆಗೆ ಮಕ್ಕಳು ದಾಖಲಾಗಿದ್ದಾರೆ ಎಂದು ಅಂದಾಜಿಸಲಾಗಿದೆ.

### 2.2.4 ನ್ಯೂನತೆಗಳು

ಈ ಯೋಜನೆಗಳಿಂದ ಸಿಗುವ ಸೌಲಭ್ಯಗಳು ಲಭ್ಯವಾಗದ ಕೆಲವು ಚಿಕ್ಕ ಮತ್ತು ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳಿವೆ: ವಲಸೆ ಕಾರ್ಮಿಕರು, ಸದಾ ಸಂಚಾರ ಮಾಡುವವರು, ಮತ್ತು ಅಲೆಮಾರಿಗಳು; ಸಣ್ಣ ಮತ್ತು ದೂರದ ಹಾಡಿಗಳಲ್ಲಿರುವವರು, ಅಥವಾ ಆದಿವಾಸಿಗಳು ಮತ್ತು ಸುಲಭವಾಗಿ ತಲುಪಲಾಗದ ಪರ್ವತ ಪ್ರದೇಶಗಳಲ್ಲಿ ವಾಸಿಸುವವರು; ವಿಕಲ ಚೇತನರು, ಕಾಲುದಾರಿಗಳಲ್ಲಿ ವಾಸಿಸುವವರ ಮಕ್ಕಳು,

ಲೈಂಗಿಕ ಕಾರ್ಯಕರ್ತರು, ಕ್ಷಯ ಮತ್ತು ಏಡ್ಸ್ ರೋಗಿಗಳು, ಕೈದಿಗಳು ಇತ್ಯಾದಿ. ಈ ಪಟ್ಟಿಯು ಉದಾಹರಣ ರೂಪದಲ್ಲಿದೆಯಷ್ಟೇ.

## 2.3 ಒಂದು ವಿಮರ್ಶಾತ್ಮಕ ಮೌಲ್ಯಮಾಪನ

ಕಾಲಕಾಲಕ್ಕೆ ಸಾಂವಿಧಾನಿಕ ಮಾರ್ಗದರ್ಶಕ ಸೂಚನೆಗಳು ಮತ್ತು ಯಥೇಷ್ಟ ಕಾಯಿದೆಗಳು, ನೀತಿಗಳು, ಮತ್ತು ಕಾರ್ಯಯೋಜನೆಗಳು ಘೋಷಣೆಯಾಗುತ್ತಲೇ ಇರುತ್ತವೆಯಾದರೂ ಅಗತ್ಯಗಳು ಮತ್ತು ವಾಸ್ತವಿಕ ಸೌಲಭ್ಯಗಳ ನಡುವಿನ ಅಂತರವು ಅಗಾಧವಾಗಿಯೇ ಇರುತ್ತದೆ ಎನ್ನುವುದನ್ನು ಮೇಲಿನ ಪರಿಶೀಲನೆಯು ಸ್ಪಷ್ಟವಾಗಿ ಹೇಳುತ್ತದೆ. ಅದಷ್ಟೇ ಅಲ್ಲ, ಗುಣಮಟ್ಟದ ಮೌಲ್ಯಮಾಪನ ಹೋಗಲಿ, ವಾಸ್ತವದಲ್ಲಿ ಯಾವ ಸೌಲಭ್ಯಗಳಿವೆ ಎನ್ನುವುದನ್ನು ಕುರಿತೂ ಸರಿಯಾದ ಮಾಹಿತಿ ಇರುವುದಿಲ್ಲ. ಜೊತೆಗೆ ಸ್ಥಳೀಯವಾಗಿ ಮತ್ತು ಸಾಮಾಜಿಕ ಹಂತಗಳಲ್ಲಿ ಅಸಮತೋಲನಗಳಿದ್ದು, ಕೆಲವು ವಿಭಾಗಗಳು ಮತ್ತು ಕ್ಷೇತ್ರಗಳನ್ನು ತೀರಾ ಕಡೆಗಣಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ (NPE, 1986)[13] ಮತ್ತು ಕಾರ್ಯಯೋಜನೆ(POA, 1992)[14]ಯನ್ನು ಅಳವಡಿಸಿಕೊಂಡ ನಂತರ ಕಳೆದ ಎರಡು ದಶಕಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ECCEಗೆ ಸಂಬಂಧಪಟ್ಟ ವಿಷಯಗಳ ಬಗೆಗೆ ಹೆಚ್ಚಿನ ಗಮನವನ್ನು ನೀಡಲಾಗಿದೆ. ನೀತಿಯನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಸಲಹೆ ಸೂಚನೆಗಳನ್ನು ಪಡೆಯಲು ಅನೇಕ ಸಮಿತಿಗಳು, ಕಾರ್ಯ ಪಡೆಗಳು, ಅಧ್ಯಯನ ತಂಡಗಳನ್ನು ರೂಪಿಸಲಾಗಿದೆ ಹಾಗೂ ಯೋಜನೆಗಳ ಮೌಲ್ಯಮಾಪನಕ್ಕೆ ಹಲವು ಅಧ್ಯಯನಗಳನ್ನು ಕೈಗೊಳ್ಳಲಾಗಿದ್ದು, ಈ ತಂಡಗಳೂ ಸಲಹೆಗಳನ್ನಿತ್ತಿವೆ.

ವಿಖಂಡಿತ(fragmented) ವಿಧಾನಗಳು, ಏಕೀಕೃತಗೊಳ್ಳದ ಹೊಣೆಗಳು, ಸ್ಪಷ್ಟವಾದ ಕಾರ್ಯಯೋಜನೆ ಹಾಗೂ ಸೂಕ್ತ ಹಣಸಹಾಯವಿಲ್ಲದಿರುವುದು, ನೀತಿಯಲ್ಲಿನ ಸಲಹೆಗಳನ್ನು ಅನುಷ್ಠಾನಕ್ಕೆ ತರಲು ಜವಾಬ್ದಾರಿಗಳನ್ನು ಖಚಿತ ರೂಪದಲ್ಲಿ ನಿಯೋಜಿಸದಿರುವುದು, ನೀತಿಗಳನ್ನು ಕಾರ್ಯರೂಪಕ್ಕೆ ತರುವಾಗಿನ ವೈಫಲ್ಯಗಳಿಗೆ ಮೂಲ ಕಾರಣವೆನ್ನಬಹುದು. NPE ಮತ್ತು POAಗಳ ಪರಿಕಲ್ಪನೆಗಳನ್ನು ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ (EE&L) ಮತ್ತು MHRDಗಳ ಮೂಲಕ ರೂಪಿಸಿ ವಿಸ್ತರಿಸಿದ್ದರೂ ECCEಯನ್ನು ವಾಸ್ತವವಾಗಿ ಕಾರ್ಯರೂಪಕ್ಕೆ ತರುವ ಹೊಣೆಯನ್ನು ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶನಾಲಯಕ್ಕೆ (ರಾಜ್ಯಗಳಲ್ಲಿನ ಸಮಾಜ ಕಲ್ಯಾಣ) ವಹಿಸಲಾಗಿತ್ತು. ಅದೇ ರೀತಿ, ಶಿಕ್ಷಣವು ರಾಜ್ಯಗಳ ವ್ಯಾಪ್ತಿಯದ್ದಾದರೂ ರಾಜ್ಯಗಳು ರಾಷ್ಟ್ರೀಯ ಯೋಜನೆಯಾದ ICDS ಅನ್ನು ಜಾರಿಗೆ ತರುತ್ತವೆ. ಹೀಗಾಗಿ ಕಾಲಾಂತರದಲ್ಲಿ, ಇದು, ಈಗಾಗಲೇ ವಿವರಿಸಿದಂತೆ, ನಿಶ್ಚಿತ ಪ್ರಕ್ರಿಯೆಗಳನ್ನು ಸೀಮಿತಗೊಳಿಸಿತಲ್ಲದೆ, ಸಮನ್ವಯದ ಅಭಾವಕ್ಕೆ ಎಡೆಗೊಟ್ಟಿತು.1990ರಲ್ಲಿಯೇ ಆಚಾರ್ಯ ರಾಮಮೂರ್ತಿ ಸಮಿತಿಯು[15] ಮಾಡಿದ ಕೆಲವು ಅವಲೋಕನಗಳು ಇಂದಿಗೂ ಯೋಗ್ಯವೆನಿಸುತ್ತವೆ; ಅದರ ಕೆಲವು ವಿವರಣೆಗಳು ಇಲ್ಲಿವೆ: ಉದಾಹರಣೆಗೆ, ಅನುಚ್ಛೇದ 45, ಕೇವಲ 5 ಅಥವಾ 6 ವರ್ಷಕ್ಕೆ ಮೇಲ್ಪಟ್ಟ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ಅದನ್ನು ಬಹಳ ಸಂಕುಚಿತ ದೃಷ್ಟಿಯಲ್ಲಿ ನಿರೂಪಿಸಲಾಗಿದೆ; ಮತ್ತು ECCEಯನ್ನು ಎಲ್ಲಾ ಮಕ್ಕಳಿಗೆ ಒದಗಿಸುವುದು

---

[13] *GOI, 1986*

[14] *GOI, 1992*

[15] *Ramamurthi, A. 1990*

ಸಾಂವಿಧಾನಿಕವಾಗಿ ಕಡ್ಡಾಯ ಎಂದೇನೂ ರಾಷ್ಟ್ರೀಯ ಶಿಕ್ಷಣ ನೀತಿಯು ಸೂಚಿಸುವುದಿಲ್ಲ (5.1.6) ಅಥವಾ ಈ ನಿಟ್ಟಿನ ಸ್ಪಷ್ಟವಾದ ನೀತಿಯನ್ನು ಘೋಷಿಸುವುದಿಲ್ಲ ಎಂದು ಸಮಿತಿಯು ತಿಳಿಸುತ್ತದೆ (5.1.2). ಅನುಷ್ಠಾನಕ್ಕೆ ತರಲು ಮಾಡಿದ ಕಾರ್ಯಕಾರಿ ವಿನ್ಯಾಸದಲ್ಲಿನ ವಿಖಂಡಿತ ವಿಧಾನವೂ ಟೀಕೆಗೆ ಒಳಗಾಗಿದೆ. ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ (UEE) ಮತ್ತು ಮಹಿಳಾ ಅಭಿವೃದ್ಧಿಯಲ್ಲಿ ECCEಯ ಪಾತ್ರವನ್ನು ಗುರಿತಿಸಲಾಗಿದೆಯಾದರೂ ಅದರ ಕಾರ್ಯಾತ್ಮಕ ಪರಿಣಾಮಗಳನ್ನು ECCEಯನ್ನು ಕುರಿತ ಒಂದು ಅಧ್ಯಾಯದಲ್ಲಿ ಮಾತ್ರ ಕೊಡಲಾಗಿದೆ. ಮಹಿಳೆಯರ ಕೌಶಲ್ಯಗಳನ್ನು ಉಪಯೋಗಿಸಿಕೊಳ್ಳುವಂತಹ ಉದ್ಯೋಗವನ್ನು ಸೃಜಿಸಲು ECCEಯು ತಕ್ಕ ಸಾಮರ್ಥ್ಯವನ್ನು ಹೊಂದಿದ್ದರೂ ವೃತ್ತಿಶಿಕ್ಷಣವನ್ನು ಕುರಿತ ಅಧ್ಯಾಯದಲ್ಲಿ ಅದನ್ನು ಕುರಿತ ಉಲ್ಲೇಖಗಳಿಲ್ಲ ಮತ್ತು ಮಹಿಳಾ ಸಮಾನತೆಗಾಗಿ ಶಿಕ್ಷಣವನ್ನು ಕುರಿತ ಅಧ್ಯಾಯದಲ್ಲಿಯೂ ಅದರ ಪ್ರಸ್ತಾಪವಿಲ್ಲ. ಅದೇ ರೀತಿ ಶಿಕ್ಷಕರು ಮತ್ತು ಅವರ ತರಬೇತಿಯ ಅದ್ಯಾಯದಲ್ಲಿ ECCEಯ ಸಿಬ್ಬಂದಿಯ ತರಬೇತಿಯ ಬಗೆಗೆ ಯಾವುದೇ ಪ್ರಸ್ತಾಪವಿಲ್ಲ. 5.1.4ನೇ ವಿಭಾಗವು 'ಮಹಿಳೆಯರು, ಮಕ್ಕಳು ಮತ್ತು ಹೆಣ್ಣುಮಕ್ಕಳ ಸಾಮಾನ್ಯ ಅಗತ್ಯಗಳನ್ನು ಉಲ್ಲೇಖಿಸಿದ್ದು,'ಅಂಗನವಾಡಿಗಳನ್ನು ಉದ್ಯೋಗಸ್ಥ ಮಹಿಳೆಯರು ಮತ್ತು ಬಾಲಕಿಯರ ಅಗತ್ಯಗಳೊಂದಿಗೆ ಸಂಪರ್ಕಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ಇಲ್ಲಿಯೂ DWCDಯು ECCEಗೆ ಸಂಬಂಧಿಸಿದಂತೆ ಕೇಂದ್ರೀಯ ಇಲಾಖೆಯ ಪಾತ್ರವನ್ನು ವಹಿಸಿಕೊಳ್ಳಬೇಕಿತ್ತು; ಅಂದರೆ ಸಹಕಾರ ನೀಡುವ, ಪ್ರಚೋದನೆ ನೀಡುವ, ಹಾಗೂ ಕಾರ್ಮಿಕ, ಕೃಷಿ, ಆದಿವಾಸಿಗಳ ಕಲ್ಯಾಣ, ಕಾಮಗಾರಿ ಮತ್ತು ಗೃಹನಿರ್ಮಾಣ, ನೀರಾವರಿ, ಗ್ರಾಮೀಣಾಭಿವೃದ್ಧಿ ಮುಂತಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ನೇಮಕ ಮಾಡಿಕೊಳ್ಳುವ ಅಥವಾ ಅವರೊಂದಿಗೆ ವ್ಯವಹರಿಸುವ ಇತರ ಇಲಾಖೆಗಳು ಮತ್ತು ಏಜೆನ್ಸಿಗಳ ಪ್ರಯತ್ನಗಳ ಸಮನ್ವಯ, ಉತ್ತೇಜನ ಮತ್ತು ಮೇಲುಸ್ತುವಾರಿಯ ಪಾತ್ರವನ್ನು ಅದು ನಿರ್ವಹಿಸುವ ನಿರೀಕ್ಷೆಯಿತ್ತು. ಆದರೆ ಇಂದಿಗೂ ಇದರ ನಿರ್ವಹಣೆಯನ್ನು ಕುರಿತ ಪುರಾವೆಗಳು ಕಡಿಮೆ.

ಹಾಗೆ ನೋಡಿದರೆ, ಒಂದೇ ಸಚಿವಾಲಯಕ್ಕೆ ಸೇರಿದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಯ ಇಲಾಖೆ (WCD) ಮತ್ತು ಶಿಕ್ಷಣ ಇಲಾಖೆಯ ನಡುವಿನ ಸಹಕಾರವೂ ಅಲ್ಪ ಪ್ರಮಾಣದಲ್ಲಿದೆ. ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು (DEE&L) ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣವನ್ನು (ECCE) ಕುರಿತ ತನ್ನ ಮೂಲಭೂತ ಹೊಣೆಯಿಂದ ತಪ್ಪಿಸಿಕೊಳ್ಳುವಂತಿಲ್ಲ, ಏಕೆಂದರೆ ಪ್ರಾಥಮಿಕ ಶಿಕ್ಷಣ ಮತ್ತು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದೊಂದಿಗೆ (UEE) ಅದಕ್ಕೆ ಸಂಬಂಧವಿದೆ, ಜೊತೆಗೆ ಎಲ್ಲಾ ಹಂತಗಳ ಶಿಕ್ಷಕರಿಗೆ ತರಬೇತಿ ನೀಡುವ ಹೊಣೆಯಿಂದಲೂ ಅದು ತಪ್ಪಿಸಿಕೊಳ್ಳುವಂತಿಲ್ಲ ಎಂದು ಸಮಿತಿಯು ಸ್ಪಷ್ಟವಾಗಿ ಹೇಳುತ್ತದೆ.

ಇವಿಷ್ಟೇ ಅಲ್ಲದೇ ಆಚಾರ್ಯ ರಾಮಮೂರ್ತಿ ಸಮಿತಿಯ ವರದಿಯು ಇತರ ಕೆಲವು ವಿಷಯಗಳನ್ನೂ ಚರ್ಚಿಸುತ್ತದೆ. ಉದಾಹರಣೆಗೆ ICDS ಅನ್ನು ಹೇಗೆ ಪಂಚಾಯತ್ ರಾಜ್ ಸಂಸ್ಥೆಗಳ (PRI) ಅಡಿಯಲ್ಲಿ ಒಂದು ಸಮುದಾಯವನ್ನಾಧರಿಸಿದ ಮತ್ತು ಸಮುದಾಯದಿಂದಲೇ ನಿರ್ವಹಿಸಲ್ಪಡುವ ಯೋಜನೆಯನ್ನಾಗಿ ಮಾಡಬಹುದು ಎಂಬುದನ್ನು ಮತ್ತು 2000ದ ಇಸವಿಯ ಒಳಗೆ 6ಕ್ಕಿಂತ ಕಡಿಮೆ ವಯಸ್ಸಿನ 70% ಮಕ್ಕಳನ್ನು ಒಳಗೊಳ್ಳುವ ಹಾಗೆ ಅಗತ್ಯ ಹೆಚ್ಚುವರಿ ನಿಧಿಯನ್ನು ಹೇಗೆ ಪಡೆಯುವುದು ಎನ್ನುವದನ್ನೂ ಈ ಸಮಿತಿಯು ವಿವರವಾಗಿ ಚರ್ಚಿಸುತ್ತದೆ. ಈ ಗುರಿಯನ್ನು ನಮಗಿನ್ನೂ ಸಾಧಿಸಲಾಗಿಲ್ಲ.

ಈ ವಿಷಯವನ್ನು ಕುರಿತು ಇನ್ನೂ ಹೆಚ್ಚಿನ ವಿವರಗಳು ಈಗ ಅವಶ್ಯವಿಲ್ಲವಾದರೂ, ಇಲ್ಲಿ ಒಂದು ವಿಚಾರವಂತೂ ಸ್ಪಷ್ಟವಾಗುತ್ತದೆ. ECCEಯನ್ನು ಎಲ್ಲರಿಗೂ ಶಿಕ್ಷಣ (EFA) ಮತ್ತು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ (UEE) ಚೌಕಟ್ಟುಗಳ ಅಡಿಯಲ್ಲಿ ಸುಭದ್ರಗೊಳಿಸುವುದು ಮಾತ್ರ ಅವಶ್ಯವಲ್ಲ, ಜವಾಬ್ದಾರಿಗಳನ್ನು ವಹಿಸಿಕೊಡುವುದು, ಉತ್ತರದಾಯಿತ್ವವನ್ನು ಆಗ್ರಹಿಸುವುದು ಮತ್ತು ಪರಸ್ಪರ ಸಹಕಾರದ ಮೇಲುಸ್ತುವಾರಿಗೂ ಹೆಚ್ಚಿನ ಆದ್ಯತೆ ನೀಡಬೇಕಾಗುತ್ತದೆ. ECCEಯು ಮಗುವಿನ ಬದುಕಿನ 0-8 ವರ್ಷಗಳ ಅವಧಿಗೆ ಸಂಬಂಧಿಸಿದ ವಿಷಯಗಳನ್ನು ಆದ್ಯತೆಯಾಗಿ ಇರಿಸಿಕೊಂಡಿದೆ; DEE&Lಯು ಮಗುವಿನ 3 ವರ್ಷದ ನಂತರದ ಬದುಕಿಗೆ ಸಂಬಂಧಿಸಿದ ಎಲ್ಲಾ ಯೋಜನೆಗಳ ಹೊಣೆಯ ಜೊತೆಗೆ ಶಿಕ್ಷಕರ ಶಿಕ್ಷಣದ ಹೊಣೆಯನ್ನೂ ನಿಭಾಯಿಸಬೇಕು; DWCDಯು 0-3 ವರ್ಷದೊಳಗಿನ ಮಕ್ಕಳನ್ನು ಕೇಂದ್ರೀಕರಿಸಬೇಕು. ಆದರೆ ಎರಡೂ ಇಲಾಖೆಗಳ ನಡುವಿನ ಸಹಕಾರಕ್ಕಾಗಿ ಸುವ್ಯವಸ್ಥಿತಗೊಳಿಸಿದ ವಿಧಾನಗಳನ್ನು ಹೊಂದಿರಬೇಕು.

## 3. ಅತೀ ಮಹತ್ವದ ಸಮಸ್ಯೆಗಳು, ಸಾಮಾಜಿಕ ವಾಸ್ತವ ಹಾಗೂ ನೀತಿಯ ಪರಿಣಾಮಗಳು

ECCEಗೆ ಈವರೆಗೂ ಸಿಗಬೇಕಾದ 'ಮಾನ್ಯತೆ ಸಿಗುತ್ತಿಲ್ಲ.' ಈ ತನಕವೂ ಅದನ್ನು ನಮ್ಮ ಶಿಕ್ಷಣ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವೆಂದು ಸ್ವೀಕರಿಸಿಲ್ಲ. ಈ ಅಂಶದ ಸ್ವರೂಪ ಮತ್ತು ಸ್ಥಿತಿಯಿಂದಲೇ ಅವಶ್ಯವಾಗಿ ಕೆಲವು ಗಂಭೀರ ಪರಿಣಾಮಗಳನ್ನು ನಾವಿಂದು ಗಮನಿಸಬಹುದಾಗಿದೆ.

### 3.1 ಸಾಮಾಜಿಕ ವಿಭಜನೆಗಳು: ಸಮಾನತೆ, ಲಭ್ಯತೆ ಮತ್ತು ಗುಣಮಟ್ಟ:

ಮೊದಲನೆಯದಾಗಿ, ಗುಣಮಟ್ಟಕ್ಕೆ ಸಂಬಂಧಿಸಿದಂತೆ ಜನತೆಯ ವಿವಿಧ ಭಾಗಗಳಿಗೆ ಸಿಗುವ ಸೇವಾಸೌಲಭ್ಯಗಳ ನಡುವೆ ನಿಖರವಾದ ವ್ಯತ್ಯಾಸವಿದೆ. ನಗರ-ಗ್ರಾಮೀಣ, ಬಡವ-ಶ್ರೀಮಂತರೆಂಬ ಭೇದಗಳ ಜೊತೆಗೆ ದಲಿತರು, ಆದಿವಾಸಿಗಳು, ಪ್ರತ್ಯೇಕವಾಗಿ ದೂರದಲ್ಲಿರುವ ಸಮುದಾಯಗಳು, ಸಾಮಾಜಿಕವಾಗಿ ಅಂಚಿಗೆ ಸರಿಸಲ್ಪಟ್ಟ ವರ್ಗಗಳು ಮತ್ತು ವಿಕಲ ಚೇತನರೆಂಬ ತಾರತಮ್ಯವನ್ನೂ ನಾವು ಕಾಣಬಹುದು.

ಎರಡನೆಯದಾಗಿ, ಸಾರ್ವಜನಿಕ ಮತ್ತು ಖಾಸಗಿ ಸೇವೆಗಳ ನಡುವಿನ ಧ್ರುವೀಕರಣ. ಸಾರ್ವಜನಿಕ ಸೇವೆಗಳು ಬಡ ಗ್ರಾಮೀಣ ವರ್ಗಗಳಿಗಾಗಿಳ ಮತ್ತು ಖಾಸಗಿ ಸೇವೆಗಳು ನಗರದ ಶ್ರೀಮಂತ ವರ್ಗಗಳ ಸಲುವಾಗಿ ಇವೆಯೆನ್ನುವುದು ತೀರಾ ಸರಳೀಕರಣವಾಗಿಬಿಡುತ್ತದೆ. ಬಹಳ ಸಲ ಈ ವಿಭಜನೆಗಳು ಕೋಷ್ಟಕ 3.1ರಲ್ಲಿ ಸೂಚಿಸಿರುವಂತೆ, ಒಂದು ಇನ್ನೊಂದರ ಕ್ಷೇತ್ರವನ್ನು ಒಳಗೊಳ್ಳುತ್ತವೆ, ಮತ್ತು ಇದೇ ಹಂತದಲ್ಲಿ ಶಿಕ್ಷಣದ ಎರಡೆರಡು ಪಥಗಳನ್ನು ಸೃಷ್ಟಿಸುತ್ತವೆ.

ಸಾರ್ವಜನಿಕ ಸೇವೆಗಳು ಹೆಚ್ಚಾಗಿ, DWCDಯ ಬೆಂಬಲದೊಂದಿಗೆ ಮೂವತ್ತು ವರ್ಷಗಳ ಹಿಂದೆ ಆರಂಭಗೊಂಡ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ICDS) ಎಂದು ಕರೆಯಲಾಗುವ ಯೋಜನೆಯ ಮೂಲಕ ನಡೆಯುತ್ತವೆ. 0-6 ವರ್ಷದ ಮಕ್ಕಳ ಸಲುವಾಗಿ ಆರು ಸೇವೆಗಳನ್ನು ಒದಗಿಸುವ ಈ ಯೋಜನೆಯು, ಪರಿಕಲ್ಪನಾತ್ಮಕವಾಗಿ ಸಮಗ್ರ ದೃಷ್ಟಿಕೋನವುಳ್ಳದ್ದು, ಎಲ್ಲವನ್ನೂ ಒಳಗೊಳ್ಳುವಂಥದ್ದು, ಮತ್ತು ಸಮನ್ವಯೀಕೃತವಾಗಿರುವಂಥದ್ದಾಗಿದೆ. ಆದರೆ ಇದನ್ನು ಅಸಮರ್ಪಕವಾಗಿ ಕಾರ್ಯರೂಪಕ್ಕೆ ತರಲಾಗಿದ್ದು, ಗುಣಮಟ್ಟದಲ್ಲೂ ಬಹಳ ವ್ಯತ್ಯಾಸಗಳನ್ನು ಹೊಂದಿದೆ. ಮಕ್ಕಳಿಗೆ 0-2 ವರ್ಷದ ಅವಧಿಯಲ್ಲಿ ಪೌಷ್ಟಿಕ ಆಹಾರದ ಅಗತ್ಯವು ಅತ್ಯಂತ ಹೆಚ್ಚಾಗಿರು ತ್ತದೆಯಾದರೂ, 3-6 ವರ್ಷದ ಒಳಗಿನ ಮಕ್ಕಳ ಶಾಲಾಪೂರ್ವ

ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಇನ್ನು ಸರಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಮತ್ತು ಶಾಲಾಪೂರ್ವ ತರಗತಿಗಳು ಬಹಳ ವಿರಳವಾಗಿರುವುದರಿಂದ (ದಿಲ್ಲಿ ಕೇಂದ್ರಾಡಳಿತ ಪ್ರದೇಶವೊಂದು ಅಪವಾದ) DEE&L, ಈ ಹಂತದ ಮಕ್ಕಳಿಗೆ ಯಾವ ನೇರ ಸೇವೆಗಳನ್ನೂ ಒದಗಿಸುವುದಿಲ್ಲ.

**ಕೋಷ್ಟಕ 3.1 ECCE ಯೋಜನೆಗಳಲ್ಲಿ ಸಾಮಾಜಿಕ ವಿಭಜನೆಗಳು**

| | | |
|---|---|---|
| ವರ್ಗ | ಶ್ರೀಮಂತ/ಮಧ್ಯಮ | ಬಡ |
| ಸ್ಥಳ | ನಗರ/ಅರೆ-ನಗರ | ಗ್ರಾಮೀಣ |
| ಭಾಷೆ | ಇಂಗ್ಲಿಷ್ | ಪ್ರಾದೇಶಿಕ |
| ನಿರ್ವಹಣೆ | ಖಾಸಗಿ | ಸಾರ್ವಜನಿಕ |
| ಪಠ್ಯಕ್ರಮ | ಶೈಕ್ಷಣಿಕ | ಸಮಗ್ರ/ಕಲ್ಯಾಣಾಭಿವೃದ್ಧಿ |
| ಮೇಲ್ವಿಚಾರಣಾ ಇಲಾಖೆ | DEE&L | WCD |

### 3.1.1 ಶಿಶುವಿಹಾರಗಳು ಮತ್ತು ದೈನಂದಿನ ಶಿಶು ಪಾಲನಾ ಕೇಂದ್ರಗಳು

ಮುಖ್ಯವಾಗಿ ಗ್ರಾಮೀಣ ಕ್ಷೇತ್ರಗಳ ಬಡ ಉದ್ಯೋಗಸ್ಥ ಮಹಿಳೆಯರು ಮತ್ತು ನಗರಗಳ ಕೊಳೆಗೇರಿಗಳಲ್ಲಿ ವಾಸಿಸುವ ಮಹಿಳೆಯರಿಗೆ ಅನುಕೂಲವಾಗಬಹುದಾದ ಶಿಶುವಿಹಾರಗಳು (0-3 ವರ್ಷದ ಮಕ್ಕಳಿಗಾಗಿ) ಮತ್ತು ದೈನಂದಿನ ಶಿಶು ಪಾಲನಾ ಕೇಂದ್ರಗಳ (0-6 ವರ್ಷದ ಮಕ್ಕಳಿಗಾಗಿ) ಅಗತ್ಯವನ್ನು ಗುರುತಿಸಲು ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಮತ್ತು ಎಲ್ಲೆಡೆ ವ್ಯಾಪಿಸಿರುವ ಪಿತೃಪ್ರಧಾನ ಮೌಲ್ಯಗಳು ಅಡ್ಡಿಯಾಗುತ್ತವೆ; ಈ ಸೇವೆಗಳನ್ನು ಒದಗಿಸುವುದರಿಂದ ಅಂತಹ ಮಕ್ಕಳ ಹಿರಿಯ ವಯಸ್ಸಿನ ಸಹೋದರ-ಸಹೋದರಿಯರು ಅದರಲ್ಲೂ ಹಿರಿಯ ಹೆಣ್ಣುಮಕ್ಕಳು ಶಾಲೆಗೆ ಹಾಜರಾಗಬಹುದು,ಜೊತೆಗೆ, 0-3 ವರ್ಷದ ಅಂದರೆ, ಅತೀ ಚಿಕ್ಕ ವಯೋಮಾನದ ಗುಂಪಿನ ಮಕ್ಕಳ ವಿಶಿಷ್ಟ ಮಹತ್ವವನ್ನುಅಧಿಕೃತವಾಗಿ ಗುರುತಿಸುವ ಅವಶ್ಯಕತೆಯೂ ಇದೆ. ಈ ವಯೋಮಾನದವರನ್ನು ಕುರಿತ ಹೊಣೆಯು ಕೌಟುಂಬಿಕ ಕ್ಷೇತ್ರದ ಒಳಗೆ ಗಟ್ಟಿಯಾಗಿ ನೆಲೆಯೂರಿದೆ, ಆದರೆ ಸರಕಾರದ ಪಾತ್ರದ ಬಗೆಗೆ ಯಾವ ಮುನ್ನೋಟವನ್ನೂ ನಾವು ಕಾಣುವುದಿಲ್ಲ.

2001ರ ಜನಗಣತಿಯ ಪ್ರಕಾರ, ಹನ್ನೆರಡು ಕೋಟಿ (ಈ ಅಂದಾಜು ಕಡಿಮೆಯಿರಬಹುದು) ಉದ್ಯೋಗಸ್ಥ ಮಹಿಳೆಯರು ಇರುವಂತಹ ಒಂದು ದೇಶದಲ್ಲಿ90% ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿದ್ದಾರೆ, ಅವರಲ್ಲಿಯೂ ಹೆಚ್ಚಿನವರು ಬಡವರು. ಶಿಶುವಿಹಾರಗಳು ಮತ್ತು ದೈನಂದಿನ ಪಾಲನಾ ಕೇಂದ್ರಗಳ ಕೊರತೆಯು ಅಗಾಧವಾಗಿದ್ದು, ಪರಿಸ್ಥಿತಿಯು ಅಸಾಮಾನ್ಯವೆನಿಸಿದೆ. ಸುಮಾರು 2ರಿಂದ 2.5 ಕೋಟಿ ಉದ್ಯೋಗಸ್ಥ ಮಹಿಳೆಯರು ಮತ್ತು ಅವರ 5.5 ಕೋಟಿ ಮಕ್ಕಳಿಗೆ (6 ವರ್ಷಕ್ಕಿಂತ ಕಡಿಮೆ ವಯಸ್ಸಿನ) ಶಿಶುವಿಹಾರಗಳು ಮತ್ತು ದೈನಂದಿನ ಪಾಲನಾ ಕೇಂದ್ರಗಳ ಅಗತ್ಯವಿರಬಹುದು.ಆದರೆ ಕೇವಲ 4.33 ಲಕ್ಷ ಜನರು ಮಾತ್ರ ಈ ಸೌಲಭ್ಯಗಳನ್ನು ಪಡೆದಿರುತ್ತಾರೆ. (ಕೋಷ್ಟಕ 2.2ನ್ನು ನೋಡಿ).

ಇದು ಮಹಿಳೆಯರು ಮತ್ತು ಮಕ್ಕಳ ಮೇಲೆ ಗಂಭೀರ ಸ್ವರೂಪದ ಪರಿಣಾಮಗಳನ್ನು ಬೀರುತ್ತದೆ, ಅದಕ್ಕೆ ಪುರಾವೆಯಾಗಿ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆಯು ದೊಡ್ಡ ಪ್ರಮಾಣದಲ್ಲಿರುವುದನ್ನು ನೋಡಬಹುದು. ಮಹಿಳೆಯರು ಮೂಲತಃ, ಗೃಹಿಣಿಯರು ಮತ್ತು ತಾಯಂದಿರು. ಉದ್ಯೋಗಸ್ಥ ಮಹಿಳೆಯರು ಅತೀ ಕಡಿಮೆ ಎಂಬುದು ಪಿತೃಪ್ರಧಾನ ಸಮಾಜದ

ಪ್ರಚಲಿತ ದೃಷ್ಟಿಕೋನ. ಇದು ವಾಸ್ತವದ ಚಿತ್ರಣಕ್ಕೆ ವಿರುದ್ಧವಾಗಿದೆ. ಈ ಧೋರಣೆಯ ಹಿಂದೆ ತಾಯಿ ಕೆಲಸಕ್ಕೆ ಹೋದ ಸಂದರ್ಭದಲ್ಲಿ ಹಿರಿಯರು ಮತ್ತು ಕುಟುಂಬದ ಇತರೆ ಸದಸ್ಯರು ಮಕ್ಕಳ ನಿಗಾ ವಹಿಸುತ್ತಾರೆ ಎಂಬ ಒಂದು ಮಧ್ಯಮವರ್ಗೀಯ ನಿಲುವನ್ನು ಕಾಣಬಹುದಾಗಿದೆ. ಆದರೆ ಇದು ಒಂದು ಹುಸಿ ಗ್ರಹಿಕೆ. ಬಡವರ್ಗದಲ್ಲಿ ಸಣ್ಣ ಕುಟುಂಬಗಳು ಸಾಮಾನ್ಯವಾಗಿವೆ. ಅಲ್ಲದೆ ಹಿರಿಯರುತಮ್ಮ ಕೈಲಾಗುವಷ್ಟು ದಿನ ಕೆಲಸವನ್ನು ಮುಂದುವರೆಸುತ್ತಾರೆ. ಬಡವರ್ಗದಲ್ಲಿ ತಾಯಿ ಕೆಲಸಕ್ಕೆ ಹೋಗುವಾಗ ಮನೆಯಲ್ಲೇ ಬಿಟ್ಟ ಶಿಶುಗಳನ್ನು ಅಥವಾ ಕೆಲಸ ಮಾಡುವ ಸ್ಥಳಕ್ಕೆ ಕರೆದೊಯ್ದ ಶಿಶುಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಆ ಶಿಶುವಿನ ಅಣ್ಣನದೋ ಅಕ್ಕನದೋ ಆಗಿರುತ್ತದೆಯಾದ್ದರಿಂದ ಹಿರಿಯ ವಯಸ್ಸಿನ ಸಹೋದರ-ಸಹೋದರಿಯರು ಶಿಕ್ಷಣದ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಇಲ್ಲಿಯೂ ಕೂಡಾ ಶಿಶುಗಳ ಆರೈಕೆಗೆ ಹೆಣ್ಣುಮಕ್ಕಳಿಗೆ ಆದ್ಯತೆ ನೀಡಲಾಗುತ್ತಿದ್ದು, ಗಂಡು ಮಕ್ಕಳನ್ನು ಅನಿವಾರ್ಯವಿದ್ದರೆ ಮಾತ್ರ ಈ ಕೆಲಸದಲ್ಲಿ ತೊಡಗಿಸಲಾಗುತ್ತದೆ. ಹೀಗೆ ಸಾಂಪ್ರದಾಯಿಕ 'ಶಾಲಾಪೂರ್ವ' ತರಗತಿಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆ ಸಮಾನವಾಗಿದ್ದಂತೆ ಕಂಡುಬಂದರೂ ECCEಗೆ ಸಂಬಂಧಿಸಿದಂತೆ, ವಿಶೇಷವಾಗಿ ಶಿಶುವಿಹಾರಗಳು ಮತ್ತು ಪಾಲನಾ ಕೇಂದ್ರಗಳ ನಿಟ್ಟಿನಲ್ಲಿ ವಿವಿಧ ಹಂತಗಳಲ್ಲಿ ಲಿಂಗಾಧಾರಿತ ಪೂರ್ವಾಗ್ರಹಗಳು ಮತ್ತು ಅಜ್ಞಾನವನ್ನು ಕಾಣಬಹುದಾಗಿದೆ.

### 3.1.2 ಖಾಸಗಿ ಕ್ಷೇತ್ರ

ಮೂವತ್ತು ವರ್ಷಗಳಲ್ಲಿ ಇವತ್ತಿಗೂ ಸಂಪೂರ್ಣವಾಗಿ ನಿಯಮಾಧೀನವಾಗದ ಖಾಸಗಿ ವಿಭಾಗವು ಸಾರ್ವಜನಿಕರ ಬೇಡಿಕೆಗಳಿಗೆ ತಕ್ಕಂತೆ ಗಣನೀಯವಾಗಿ ಬೆಳೆದಿದೆಯಲ್ಲದೆ, ಈಗ ICDSಗಿಂತ ಹೆಚ್ಚಿನ ಮಕ್ಕಳನ್ನು ತನ್ನ ವ್ಯಾಪ್ತಿಯಲ್ಲಿ ಒಳಗೊಂಡಿದೆ. ಇಂದು, ಖಾಸಗಿ ವಿಭಾಗದ ಸೇವೆಗಳು ತಮ್ಮ ಮಕ್ಕಳಿಗೆ ಈ ಸೌಲಭ್ಯಗಳನ್ನು ಒದಗಿಸಲು ಮಹಾನ್ ತ್ಯಾಗಗಳನ್ನು ಮಾಡಲು ಸಿದ್ಧವಿರುವ ಅನೇಕ ಬಡ ಪಾಲಕರನ್ನು ತಲುಪುತ್ತಿವೆ, ಮತ್ತು ಸಾರ್ವಜನಿಕ ವಿಭಾಗವು ಗ್ರಾಮೀಣ ಕೊಳೆಗೇರಿಗಳ ಮತ್ತು ಆದಿವಾಸಿ ಪ್ರದೇಶಗಳ ಸೇವಾ ಕಾರ್ಯಗಳತ್ತ ಗಮನಹರಿಸುತ್ತದೆ.

ಸ್ಥೂಲವಾಗಿ ಹೇಳುವುದಾದರೆ ಹೆಚ್ಚಿನ ಖಾಸಗಿ ಶಾಲೆಗಳ ಗುರಿ, ಅಥವಾ ಅವುಗಳ ಪ್ರತಿಪಾದನೆ,ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆಯ ನಿರ್ವಹಣೆ. ಆದರೆ ವಾಸ್ತವ ಬೇರೆ ಇದ್ದು, ಸಾರ್ವಜನಿಕ ವಿಭಾಗವು ಪ್ರಾದೇಶಿಕ ಅಥವಾ ಮಾತೃಭಾಷೆಯಲ್ಲಿಯೇ ಬೋಧಿಸಲು ಕಟಿಬದ್ಧವಾಗಿದೆ. ಈ ಕಾರಣಕ್ಕಾಗಿಯೇ ಖಾಸಗಿ ವಿಭಾಗವು ಹೆಚ್ಚು ಜನಪ್ರಿಯವಾಗಿದ್ದು, ಸಮಾಜದಲ್ಲಿ ಮೇಲ್ಮುಖ ಚಲನೆಗೆ ಇಂಗ್ಲಿಷ್ ಜ್ಞಾನವು ಪ್ರಮುಖ ಮಾರ್ಗವೆಂದು ಭಾವಿಸಲಾಗುತ್ತದೆ. ಆದರೆ ಈ ಭರವಸೆಯು ವಾಸ್ತವವನ್ನು ಪರಿಗಣಿಸುತ್ತಿಲ್ಲ. ಇತರೆಡೆಗಳಲ್ಲಿ ಹಾಗೂ ECEಯಲ್ಲಿ ಕಂಡುಬರುವಂತೆ ಇಂಗ್ಲಿಷ್ ಜ್ಞಾನವು ಸಾಮಾಜಿಕ ವಿಭಜನೆಗೆ ಮತ್ತೊಂದು ಪ್ರಮುಖ ಕಾರಣವೆನಿಸಿದೆ. ಖಾಸಗಿ ವಿಭಾಗದಲ್ಲಿಯೂ ಅಗಾಧ ವ್ಯತ್ಯಾಸಗಳಿವೆ. ಅತ್ಯುತ್ತಮ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಬೆರಳೆಣಿಕೆಯಲ್ಲಿರುವ ಸುಸಜ್ಜಿತ ಮತ್ತು ಸುವ್ಯವಸ್ಥಿತ ಉಚ್ಚ ವರ್ಗದ ಶಾಲೆಗಳು ಒಂದೆಡೆಯಾದರೆ, ದೊಡ್ಡ ಸಂಖ್ಯೆಯಲ್ಲಿರುವ, ಕಳಪೆ ನಿರ್ವಹಣೆಯ, ಮಿತಿಮೀರಿ ಭರ್ತಿಗೊಂಡ, ಚಿಕ್ಕ ಗೂಡಿನಂತಿರುವ ಕೊಳಕು ಜಾಗಗಳಲ್ಲಿ ಮಕ್ಕಳನ್ನು ತುರುಕುವ ಮತ್ತು ಅಗತ್ಯಕ್ಕಿಂತಲೂ ಮುಂಚಿನ ವಯಸ್ಸಿನಲ್ಲಿ ಮೂರು 'R' ಗಳನ್ನು (Reading, Writing and arithmetic-ಓದುವುದು, ಬರೆಯುವುದು ಮತ್ತು ಲೆಕ್ಕ) ಒತ್ತಾಯಪೂರ್ವಕವಾಗಿ ಹೇರಲುಯತ್ನಿಸುವ, ಮೂಲ ಸೌಕರ್ಯಗಳೂ

ಇಲ್ಲದ 'ಗ್ಯಾರೇಜ್' ಶಾಲೆಗಳು ಇನ್ನೊಂದೆಡೆ ಇವೆ. ಇತ್ತೀಚಿನ ಬೆಳವಣಿಗೆಯೆಂದರೆ, ನಗರದ ಮೇಲ್ವರ್ಗಕ್ಕೆಂದು 'ವಿಶೇಷ ಹಕ್ಕ'ನ್ನು ಪಡೆದ, ಹೊರದೇಶದಿಂದ ಬಂದ ಮತ್ತು ಬಹಳ ದುಬಾರಿಯಾದ ಶಾಲೆಗಳು ತಲೆಯೆತ್ತುತ್ತಿವೆ.

1991ರ ನಂತರ ಜಗತ್ತಿನಾದ್ಯಂತ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ತೀವ್ರ ಪ್ರಭಾವದಿಂದ ಖಾಸಗಿ ಶಾಲೆಗಳು ಜನ ಸಮುದಾಯದ ಹೊಸ ಹೊಸ ವರ್ಗಗಳನ್ನು ನಿರಂತರವಾಗಿ ತಲುಪುತ್ತಿವೆ ಮತ್ತು ಅದರ ಜೊತೆಜೊತೆಗೇ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ತಲೆದೋರಿದ ಸಾಮಾಜಿಕ ಅಸಮಾನತೆಯು ಬೃಹತ್ ಪ್ರಮಾಣದಲ್ಲಿ ಬೆಳೆದು ನಿಂತಿದೆ. ಇದಕ್ಕಿಂತ ಕೆಟ್ಟದ್ದೆಂದರೆ, ಸಾರ್ವಜನಿಕ ಆರಂಭಿಕ (ಪ್ರಾಥಮಿಕ) ಶಿಕ್ಷಣ ವ್ಯವಸ್ಥೆಯ ಒಳಗೇ ಎರಡು ಪ್ರಕಾರದ ಶಿಕ್ಷಣವಿದೆಃ ಪೂರ್ಣ ಅನುದಾನ ಪಡೆದ, ಸರಕಾರದಿಂದ ಮತ್ತು ಸ್ಥಳೀಯ ಪ್ರಾಧಿಕಾರಗಳಿಂದ ನಿರ್ವಹಿಸಲ್ಪಡುವ ಹಾಗೂ ತರಬೇತಿ ಪಡೆದ ಮತ್ತು ಅರ್ಹ ಶಿಕ್ಷಕರನ್ನು ಹೊಂದಿದ ಕ್ರಮಬದ್ಧ ಶಾಲೆಗಳು ಒಂದೆಡೆ ಇದ್ದರೆ, ಇನ್ನೊಂದೆಡೆ ಪರ್ಯಾಯ ಶಾಲೆಗಳು, ಶಿಕ್ಷಣ ಖಾತ್ರಿ ಯೋಜನೆ (Education guarantee scheme-EGS), ಅನೌಪಚಾರಿಕ ಶಿಕ್ಷಣ ಮುಂತಾದ ವಿವಿಧ ಹೆಸರುಗಳಲ್ಲಿ ನಡೆಯುವ ಅನೇಕ ಮಿಶ್ರ ರೂಪಗಳಿವೆ. ಇವು ಪರವೃತ್ತಿಗರನ್ನು(paraprofessionals) ಮಾತ್ರ ಬಳಸಿಕೊಂಡು, ಪದವಿಯನ್ನು ಪಡೆಯದ ಪರ್ಯಾಯ ಶಿಕ್ಷಕರನ್ನು ನೇಮಿಸಿಕೊಳ್ಳುತ್ತವೆ ಮತ್ತು ಅತ್ಯಂತ ಅಂಚಿನಲ್ಲಿರುವ ಸಮುದಾಯಗಳ ಅಗತ್ಯಗಳನ್ನು ಮಾತ್ರ ಪೂರೈಸುತ್ತವೆ. ECCEಯು ಹೊರತಾದ ಸಾಂವಿಧಾನಿಕ ಬದ್ಧತೆ ಮತ್ತು ಸುರಕ್ಷೆಗಳ ಹೊರತಾಗಿಯೂ ಇದು ಘಟಿಸಿದೆ.

### 3.1.3 ಸರ್ಕಾರೇತರ ಕ್ಷೇತ್ರ

ಸರ್ಕಾರೇತರ ವಲಯವು (NGO) ಅತ್ಯಂತ ಸಣ್ಣದಿದ್ದರೂ ಬಹಳ ಸಶಕ್ತವಾಗಿದೆ. ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗಾಗಿ ಶಿಶುವಿಹಾರ ಮತ್ತು ದೈನಂದಿನ ಪಾಲನಾ ಕೇಂದ್ರಗಳನ್ನು ಒಳಗೊಂಡಂತೆ, ದೇಶದಲ್ಲೇ ಹೆಚ್ಚು ನಾವೀನ್ಯತೆಗಳನ್ನೊಳಗೊಂಡ ಮತ್ತು ಅತ್ಯುತ್ತಮ ಗುಣಮಟ್ಟದ ಯೋಜನೆಗಳ ನಿಟ್ಟಿನಲ್ಲಿ ದೊರೆಯುವ ಸೇವೆಗಳ ಸ್ವರೂಪ ಮತ್ತು ವ್ಯಾಪ್ತಿ ಬಹುವಿಧವಾಗಿದೆ. ಹಾಗಿದ್ದರೂ NGO ಕ್ಷೇತ್ರದ ಒಂದು ಭಾಗವು ಸಾರ್ವಜನಿಕ ವಲಯದ ಮಾದರಿಯನ್ನು ಸಹ ಅನುಸರಿಸುತ್ತದೆ ಅಥವಾ ಚಿಕ್ಕಮಕ್ಕಳಿಗೆ ಸೂಕ್ತವಲ್ಲದ, ಹೊರೆಯೆನಿಸುವ ಔಪಚಾರಿಕ ಬೋಧನೆಯ ನಿಟ್ಟಿನ ಖಾಸಗಿ ವಲಯವನ್ನು ಅನುಕರಿಸುತ್ತದೆ. ಈ ಸಣ್ಣ ವಲಯದಿಂದ ಕಲಿಯುವಂಥದ್ದು ಬಹಳವಿದೆಯಾದರೂ ಇದು ಶಿಕ್ಷಣ ವ್ಯವಸ್ಥೆಯಲ್ಲಿನ ವಿಸ್ತೃತ ಲೋಪಗಳನ್ನು ಪರಿಹರಿಸಲು ಸಾಧ್ಯವಾಗಿಲ್ಲ. ಕೋಷ್ಟಕ 3.2, ಈ ಮೂರೂ ವಿಭಾಗಗಳ ವಿವಿಧ ಲಕ್ಷಣಗಳನ್ನು ಪಟ್ಟಿ ಮಾಡುತ್ತದೆ.

## 3.2 ECCEಯ ಒಂದು ಗುಣಾತ್ಮಕ ಚಿತ್ರಣ

ಈ ಮೂರೂ ವಿಭಾಗಗಳಿಗೆ ಸಂಬಂಧಿಸಿದಂತೆ ಅತ್ಯುತ್ತಮ ಉದಾಹರಣೆಗಳು ನಮಗೆ ಸಿಗುತ್ತವೆಯಾದರೂ ECCEಯ ಎಂದಿನ ಗುಣಾತ್ಮಕ ಆಯಾಮಗಳು ಪ್ರೋತ್ಸಾಹದಾಯಕವಾಗಿಲ್ಲ.

ಸಂಶೋಧನಾ ಅಧ್ಯಯನಗಳು ಕನಿಷ್ಠ ಸುರಕ್ಷೆಗಳೊಂದಿಗೆ ನಿರಂತರ ಆರೈಕೆಯನ್ನು ಒದಗಿಸುವುದರ, ಮತ್ತು ಮಕ್ಕಳ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯವಿರುವ ಎಲ್ಲಾ ಸೇವೆಗಳನ್ನು ಒದಗಿಸುವುದರ ಆಧಾರದ ಮೇಲೆ

ಗುಣಮಟ್ಟವನ್ನು ನಿರ್ಧರಿಸುತ್ತವೆ. ಮುಂಬೈ ನಗರದ[16] ಆರಂಭಿಕ ಬಾಲ್ಯದ ಯೋಜನೆಗಳ ಗುಣಮಟ್ಟವನ್ನು ಕುರಿತು ನಡೆಸಲಾದ ಒಂದು ಅಧ್ಯಯನವು ಹೇಳುವ ಪ್ರಕಾರ ನಗರದಲ್ಲಿ ICDSನ ಕೇವಲ 3.5% ಕೇಂದ್ರಗಳು ಮಾತ್ರ ಉತ್ತಮ ಗುಣಮಟ್ಟವನ್ನು, 45.8% ಕೇಂದ್ರಗಳು ಸರಾಸರಿಗಿಂತ ಕಡಿಮೆ ಹಾಗೂ 24%ರಷ್ಟು ಕೇಂದ್ರಗಳು ಕಳಪೆ ಗುಣಮಟ್ಟವನ್ನು ಹೊಂದಿದ್ದವು. 34%ರಷ್ಟು ಸರ್ಕಾರೇತರ ಸಂಸ್ಥೆಗಳಲ್ಲಿ (ಪ್ರಥಮ್) 34% ಉತ್ತಮ ಗುಣಮಟ್ಟವನ್ನು ಮತ್ತು 9% ಕಳಪೆ ಗುಣಮಟ್ಟವನ್ನು ಹೊಂದಿವೆ. ಹೆಚ್ಚಿನ ICDS ಕೇಂದ್ರಗಳ ಬೋಧನಾ ವಿಧಾನಗಳಿಗೆ ಕಳಪೆ ಶ್ರೇಣಿಯು ದೊರೆತಿದ್ದು, ಕೇವಲ 17% ಪ್ರಥಮ್ ಕೇಂದ್ರಗಳಿಗೆ ಮಾತ್ರ ಕಳಪೆ ಶ್ರೇಣಿಯು ದೊರೆತಿದೆ. ಅಂದರೆ ಆರಂಭಿಕ ಬಾಲ್ಯದ ಯೋಜನೆಗಳಲ್ಲಿ ಹೆಚ್ಚಿನದೇನೂ ನಡೆಯುತ್ತಿರಲಿಲ್ಲ ಎಂದಾಯಿತು. ಅದೇ ರೀತಿ ದೈನಂದಿನ ಪಾಲನಾ ಕೇಂದ್ರಗಳ ಕುರಿತ ಅಧ್ಯಯನವು ತೋರಿಸುವಂತೆ ಚಿಕ್ಕ ಮಕ್ಕಳಿಗೆ ಮನೆಯ ವಾತಾವರಣವನ್ನು ಕಲ್ಪಿಸುವ ಮತ್ತು ಕಡಿಮೆ ಮಕ್ಕಳನ್ನು ಹೊಂದಿರುವ, ಮನೆಗಳಲ್ಲಿ ನಡೆಸುವ[17] ದೈನಂದಿನ ಪಾಲನಾ ಕೇಂದ್ರಗಳು ಚಿಕ್ಕ ಮಕ್ಕಳ ಆರೈಕೆಗೆ ಸೂಕ್ತವಾಗುತ್ತವೆಯಾದರೂ, ಅವು ಮಕ್ಕಳಿಗೆ ಉತ್ತೇಜನವನ್ನು ಒದಗಿಸಲು ಸಫಲವಾಗಲಿಲ್ಲ. ಆರಂಭಿಕ ಬಾಲ್ಯದಲ್ಲಿ ಒದಗಿಸಲಾದ ಶಿಕ್ಷಣದ ಗುಣಮಟ್ಟ ಮತ್ತು ಮಕ್ಕಳ ಕಲಿಕಾ ಸಾಮರ್ಥ್ಯಗಳ ನಡುವಿನ ಸಂಬಂಧವನ್ನು ಕುರಿತು ತಮಿಳುನಾಡಿನಲ್ಲಿ ಒಂದು ಅಧ್ಯಯನ[18] ನಡೆಸಲಾಯಿತು. ಅಲ್ಲಿ ಮಕ್ಕಳ ಸಂಜ್ಞಾನಾತ್ಮಕ, ಭಾಷಿಕ, ಸಮಾಜೋ-ಭಾವನಾತ್ಮಕ, ಮತ್ತು ಗ್ರಹಿಕೆಗೆ ಸಂಬಂಧಿಸಿದ ಸಂಚಾಲನ ಸಾಮರ್ಥ್ಯಗಳನ್ನು ಅಧ್ಯಯನ ಮಾಡಲಾಯಿತು. ಮೂರೂ ವಿಭಾಗಗಳಲ್ಲಿನ ಯೋಜನೆಗಳ ಗುಣಮಟ್ಟವನ್ನು ಅಳೆಯಲು 'ತಮಿಳುನಾಡು ಆರಂಭಿಕ ಬಾಲ್ಯ ಪರಿಸರದ ಅಂದಾಜು ಮಾಪಕ'ವೊಂದನ್ನು (Tamil Nadu Early Childhood Environment Rating Scale-TECERS) ರೂಪಿಸಲಾಯಿತು. ಈ ಅಧ್ಯಯನದ ಪ್ರಕಾರ ಈ ಕೇಂದ್ರಗಳಲ್ಲಿ ಗಮನಿಸಲಾದ ಗುಣಮಟ್ಟ ಮತ್ತು ಮಕ್ಕಳ ಸಾಧನೆಯ ನಡುವೆ, ಮುಖ್ಯವಾಗಿ ಸಂಜ್ಞಾನಾತ್ಮಕ ಮತ್ತು ಭಾಷಾ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಮನೆ ಮತ್ತು ಸಾಮಾಜಿಕ ಹಿನ್ನೆಲೆಯ ಪರಿಣಾಮಗಳನ್ನು ಪರಿಗಣಿಸಿದ ನಂತರವೂ ಸಕಾರಾತ್ಮಕ ಸಂಬಂಧವಿರುವುದು ಕಂಡುಬಂದಿತು.

**ಕೋಷ್ಟಕ 3.2 ಮೂರು ವಿಭಾಗಗಳಲ್ಲಿ ECCEಯ ಲಕ್ಷಣಗಳು**

| **ವಿಷಯಗಳ ಪಟ್ಟಿ** | **ಸರಕಾರಿ (ಅರೆ-ಸರಕಾರಿ ಮತ್ತು ಅನುದಾನಿತ)** | **ಸ್ವಯಂಪ್ರೇರಿತ** | **ಖಾಸಗಿ** |
|---|---|---|---|
| 1. ಗುರಿ | ನೀತಿಯನ್ನು ಅನುಷ್ಠಾನಗೊಳಿಸುವುದು | ಸಾಮಾಜಿಕ ಲಾಭ | ಲಾಭ |
| 2. ಹೆಸರು/ಕೆಲಸಗಾರರ ಹೆಸರು | ಅಂಗನವಾಡಿ/ಅಂಗನವಾಡಿ ಕಾರ್ಯಕರ್ತರು ಶಿಕ್ಷಕರು | ಬಾಲವಾಡಿ/ಶಿಶು ಪಾಲನಾ ಕೇಂದ್ರ/ಬಾಲವಾಡಿ ಶಿಕ್ಷಕರು/ಕಾರ್ಯಕರ್ತರು | ಶಾಲೆ (ಶಿಶುಪಾಲನಾ ಕೇಂದ್ರ, ಪೂರ್ವ-ಪ್ರಾಥಮಿಕ ಇತ್ಯಾದಿ) |
| 3. ಉದ್ದೇಶಗಳು | ವ್ಯಾಪಕ ಮತ್ತು ಸಮಗ್ರ | ಸಮುದಾಯಕ್ಕೆ | ಔಪಚಾರಿಕ ಶಿಕ್ಷಣ |

[16] *Datta, V. 2001 a*

[17] *Datta, V. 1994*

[18] *MSSRF 2000*

| | | | |
|---|---|---|---|
| ಮತ್ತು ವ್ಯಾಪ್ತಿ | ಬೆಳವಣಿಗೆ | ಅಗತ್ಯವಿರುವ ಶಿಶು ಆರೈಕೆ/ಬೆಳವಣಿಗೆ/ಮತ್ತು ಶಿಕ್ಷಣ | ಮತ್ತು ಶಾಲಾ ಸಿದ್ಧತೆ |
| 4. ಘಟಕಗಳು | ಆರು ಪ್ಯಾಕೇಜ್‌ಗಳು | ವ್ಯತ್ಯಾಸಗಳಿವೆ, ಹೆಚ್ಚಿನದಾಗಿ ಶಿಕ್ಷಣ, ICDS ಸೇವೆಗಳು | ಶಿಕ್ಷಣ, ಕೆಲ ಮಟ್ಟಿಗೆ ಆರೈಕೆ, ಉಸ್ತುವಾರಿಯೊಂದಿಗೆ ಪೌಷ್ಟಿಕ ಆಹಾರ |
| 5. ಬೋಧನೆ ಮತ್ತು ಕಲಿಕೆಯ ವಿಧಾನಗಳು | ಚಟುವಟಿಕೆಯನ್ನು ಆಧರಿಸಿದ್ದು, ಅನೌಪಚಾರಿಕ | ವ್ಯತ್ಯಾಸಗಳಿವೆ, ಅನೌಪಚಾರಿಕ ವಿಧಾನದಿಂದ ಔಪಚಾರಿಕ ವಿಧಾನಗಳು | ಔಪಚಾರಿಕ, ಶಾಲೆಯಂತೆ |
| 6. ಉದ್ದೇಶಿತ ಗುಂಪು | ಕಾರ್ಯನೀತಿಯಲ್ಲಿ ವ್ಯಾಖ್ಯಾನಿಸಲ್ಪಟ್ಟಂತೆ | ಕಡಿಮೆ ಆದಾಯವಿರುವ ಮತ್ತು ಹೆಚ್ಚಿನ ಸೌಲಭ್ಯಗಳಿಲ್ಲದ ಸಮುದಾಯಗಳು | ಸಾಮಾಜಿಕ ಬೇಡಿಕೆಯ ಅನುಸರಣೆ |
| 7. ಪಾಲಕರಿಗೆ ಆಗುವ ಖರ್ಚು | ಉಚಿತ | ಉಚಿತ/ ನಾಮಕಾವಸ್ತೆ ಶುಲ್ಕಗಳು | ಹಣ ಸಂದಾಯದಲ್ಲಿ ವ್ಯತ್ಯಾಸಗಳಿರುತ್ತವೆ |
| 8. ಕೆಲಸಗಾರರ ಸಿದ್ಧತೆ | ECEಯ ಕೆಲವು ಘಟಕದೊಂದಿಗೆ, ಉದ್ಯೋಗಕ್ಕೆ ಸಂಬಂಧಿಸಿದಂತೆ, 3 ತಿಂಗಳ ತರಬೇತಿ, ಆಗಾಗ ಪುನಶ್ಚೇತನ ಕೋರ್ಸುಗಳು | ವ್ಯತ್ಯಾಸಗಳಿವೆ, ಅನೌಪಚಾರಿಕ, ಮಾನದಂಡರಹಿತ | ಕನಿಷ್ಠ, ಇಲ್ಲವೇ ಇಲ್ಲ, ಅಥವಾ ಸಂಬಂಧವಿಲ್ಲದ ತರಬೇತಿ |
| 9. ಸಮುದಾಯದ ಪಾಲ್ಗೊಳ್ಳುವಿಕೆ | ಕಡಿಮೆ | ವ್ಯತ್ಯಾಸಗಳಿವೆ, ಕಡಿಮೆ ಅಥವಾ ಹೆಚ್ಚು | ಕನಿಷ್ಠ/ಇಲ್ಲವೇ ಇಲ್ಲ |
| 10. ಯೋಜನೆಯಲ್ಲಿ ಹೊಂದಾಣಿಕೆ | ಇಲ್ಲವೇ ಇಲ್ಲ, ಮಾನದಂಡಕ್ಕೆ ಅನುಗುಣವಾಗಿರುತ್ತದೆ ಮತ್ತು ಮೇಲಿನಿಂದ ನಿಗದಿಯಾಗಿರುತ್ತದೆ | ಮಗು ಮತ್ತು ಸಮುದಾಯದ ಗ್ರಹಿಕೆಗಳಿಗೆ ಸ್ಪಂದಿಸುತ್ತದೆ, ಸಾಂಸ್ಕೃತಿಕವಾಗಿ ಸಂವೇದನಾಶೀಲವಾಗಿದೆ | ಮಾನದಂಡಕ್ಕೆ ಅನುಗುಣ, ಮತ್ತು ಇಚ್ಛಾನುಸಾರವಾಗಿ ನಿರ್ಧರಿತವಾಗುತ್ತದೆ |
| 11. ಒಡೆತನ | ಸರಕಾರ | ವ್ಯತ್ಯಾಸಗಳಿವೆ, ಸಾಮುದಾಯಿಕ ಒಡೆತನವು ಕಡಿಮೆ ಅಥವಾ ಹೆಚ್ಚು | ವ್ಯಕ್ತಿಗತ |
| 12. ನಿರ್ವಹಣೆಯ ರೀತಿ | ಶ್ರೇಣೀಕೃತ, ಪಾರದರ್ಶಕವಲ್ಲ | ಪಾಲ್ಗೊಳ್ಳುವಿಕೆ ಮತ್ತು ಪಾರದರ್ಶಕತೆಯ ನಿಟ್ಟಿನ ಪ್ರಯತ್ನ | ಶ್ರೇಣೀಕೃತ, ಪಾರದರ್ಶಕವಲ್ಲ |

### 3.2.1 ಸಾರ್ವಜನಿಕ ಕ್ಷೇತ್ರ

ಕೋಷ್ಟಕ 3.3, ICDSನ ಗುಣಮಟ್ಟವನ್ನು ಸ್ಥೂಲವಾಗಿ ಸೂಚಿಸುತ್ತದೆ.

## ಕೋಷ್ಟಕ 3.3 ಮೂರರಿಂದ ಆರು ವರ್ಷದ ಮಕ್ಕಳು: ಯೋಜನೆಗಳ ಪರಿಶೀಲನೆ

<table>
<tr><th>ECCE ಕೇಂದ್ರಗಳು</th><th>ಬಾಲವಾಡಿಗಳು</th><th>ದೈನಂದಿನ ಪಾಲನಾ ಕೇಂದ್ರಗಳು</th></tr>
<tr><td>ICDSನ ಸಾರ್ವತ್ರೀಕರಣದಿಂದಾಗಿ ಸಂಖ್ಯೆಗಳು ಕ್ಷೀಣಿಸುತ್ತಿವೆ</td><td>ICDSನ ಸಾರ್ವತ್ರೀಕರಣದಿಂದಾಗಿ ಹಂತ ಹಂತವಾಗಿ ರದ್ದುಗೊಳಿಸಲಾಯಿತು</td><td>ಮಕ್ಕಳ ಬೆಳವಣಿಗೆಯ ದೃಷ್ಟಿಯಲ್ಲಿ ಇನ್ನೂ ಹೆಚ್ಚು ಯಥೋಚಿತವಾಗುವ ಅಗತ್ಯವಿದೆ</td></tr>
<tr><td colspan="3">ICDS: ಇದು ಈ ಸೇವೆಗಳನ್ನು ಒದಗಿಸುವ ಮುಖ್ಯ ವ್ಯವಸ್ಥೆ, ಆದರೆ ECCEಯು ಇದರ ದುರ್ಬಲ ಘಟಕಗಳಲ್ಲಿ ಒಂದು.<br>ವ್ಯಾಪ್ತಿ: ಉದ್ದೇಶಿತ ಗುಂಪಿನ 1/5 ಭಾಗಕ್ಕಿಂತ ಕಡಿಮೆ<br>ಅಸಮರ್ಪಕವಾಗಿ ತಲುಪುತ್ತಿದೆ: ಸ್ಥಳ ಮತ್ತು ಅಂಗನವಾಡಿ ಕಾರ್ಯಕರ್ತರ ಜಾತಿ/ಸಮುದಾಯಗಳೂ ಇದಕ್ಕೆ ಸಂಬಂಧಿಸಿದ ಅಂಶಗಳಾಗಿವೆ.<br>ಕಳಪೆ ಸೇವೆಗಳು: ಶಾಲಾಪೂರ್ವ ಕೇಂದ್ರಗಳಿಗಿಂತ ಪೌಷ್ಟಿಕ ಆಹಾರದ ಕೆಂದ್ರಗಳೇ ಹೆಚ್ಚಾಗಿವೆ, ಮುಖ್ಯವಾಗಿ ಉತ್ತರದ ರಾಜ್ಯಗಳಲ್ಲಿ.<br>ಕಡಿಮೆ ಬಳಕೆ/ಬಳಕೆಯೇ ಇಲ್ಲ: ದುರ್ಬಲ ಮೂಲಸೌಕರ್ಯಗಳು, ಸಾಮಗ್ರಿಗಳ ಕೊರತೆ, ದಿನದ ಉಳಿದ ಭಾಗಕ್ಕೆ ಪರ್ಯಾಯ ಪಾಲನಾ ಕೇಂದ್ರಗಳ ಅಗತ್ಯವಿದೆ. ಪೂರಕ ಪೌಷ್ಟಿಕ ಆಹಾರದ ಕಳಪೆ ಗುಣಮಟ್ಟ/ಪ್ರಮಾಣ ಮತ್ತು ವಿತರಣೆಯಲ್ಲಿನ ಅವ್ಯವಸ್ಥೆ.<br>ಪ್ರೇರಣಾರಹಿತ ಕಾರ್ಯಕರ್ತರು: ಅಸಮರ್ಪಕ ಪ್ರೋತ್ಸಾಹಕಗಳು, ಅವಾಸ್ತವಿಕ ಕೆಲಸದ ಪಟ್ಟಿಗಳು, ತರಬೇತಿ ಮತ್ತು ಕೆಲಸದ ಸನ್ನಿವೇಶಗಳ ನಡುವೆ ಆಗಾಗ ಹೊಂದಾಣಿಕೆ ಇಲ್ಲದಿರುವುದು.<br>ಕಳಪೆ ಮೇಲ್ವಿಚಾರಣೆ ಮತ್ತು ಸಾಮುದಾಯಿಕ ಒಡೆತನದ ಕೊರತೆ.<br>ಒಟ್ಟಿನಲ್ಲಿ: ಮಿತಿಮೀರಿದ ಹೊರೆ, ಪರಿಷ್ಕೃತ ವಿನ್ಯಾಸ ಮತ್ತು ಆರ್ಥಿಕ/ಮಾನವ ಸಂಪನ್ಮೂಲಗಳಂತಹ ಹೊಸ ಬೆಂಬಲಗಳನ್ನು ನೀಡದೆ ಹೆಚ್ಚಿನ ಹೊಣೆಗಾರಿಕೆಗಳನ್ನು ನಿರ್ವಹಿಸಲಾಗದು. ಸಶಕ್ತ ಮಾಹಿತಿ ಶಿಕ್ಷಣ ಸಂವಹನ (IEC) ಘಟಕ ಹಾಗೂ ತೀವ್ರವಾಗಿ ವೃದ್ಧಿಸುತ್ತಿರುವ ಖಾಸಗಿ ಶಾಲೆಗಳ ಮೇಲುಸ್ತುವಾರಿಯ ಅಗತ್ಯವಿದೆ.</td></tr>
</table>

ಮೂಲ: '*Reaching Out to the Child': An Integrated Approach to Child Development, Human Development Sector, South Asia Region,World Bank, September 2004.*

### 3.2.2 ಖಾಸಗಿ ವಿಭಾಗದಲ್ಲಿ ECE (ಆರಂಭಿಕ ಬಾಲ್ಯದ ಶಿಕ್ಷಣ) ಯೋಜನೆಯ ಪ್ರಸ್ತುತ ಪರಿಪಾಠ

ಮುಖ್ಯವಾಗಿ ಸಮಾಜದ ಉನ್ನತ ಸ್ತರಗಳಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಬಿಡಿ ಬಿಡಿ ಸಂಸ್ಥೆಗಳು ಮತ್ತು ಹಲವು ಉತ್ತಮ ಖಾಸಗಿ ಶಾಲೆಗಳು ಇವೆಯಾದರೂ ಹೆಚ್ಚಿನವು ಈ ಕೆಳಗಿನ ಅನಪೇಕ್ಷಿತ ಪರಿಪಾಠಗಳಿಂದ ಕೂಡಿವೆ.

- **ಹೊರೆಯಿಂದ ಬೇಸರದೆಡೆಗೆ**: ಇಲ್ಲಿ ಬಹಳ ವ್ಯತ್ಯಾಸಗಳನ್ನು ಗಮನಿಸಲಾಗಿದೆ. ಒಂದೆಡೆ, ಕೆಲವು ಮಕ್ಕಳು ಅವಾಸ್ತವಿಕ ಮತ್ತು ಅನಪೇಕ್ಷಿತ ನಿರೀಕ್ಷೆಗಳ ಹೊರೆಗೆ ಸಿಲುಕಿ ಅತಿಯಾದ ಒತ್ತಡವನ್ನು ಅನುಭವಿಸುತ್ತಾರೆ. ಮತ್ತೊಂದೆಡೆ, ಏನೂ ಕೆಲಸಗಳು ನಡೆಯದ ಕೇಂದ್ರಗಳೂ ಇವೆ; ವಾಡಿಕೆಯ ಚಟುವಟಿಕೆಗಳೇ ಮರುಕಳಿಸುತ್ತವೆ, ಮತ್ತು ಮಕ್ಕಳು ಒಂದು ಜಾಗದಲ್ಲಿ ಸುಮ್ಮನೆ ಕುಳಿತುಕೊಳ್ಳಬೇಕು. ವೈವಿಧ್ಯತೆಯಿಲ್ಲದ ಈ ನಿತ್ಯದ ಕ್ರಮವು ಮಕ್ಕಳಿಗೆ ನೀರಸವಾಗಿ, ಸ್ವಾರಸ್ಯರಹಿತವಾಗಿ ಬೇಸರ ತರುತ್ತದೆ.
- **ಪ್ರವೇಶ ಪ್ರಕ್ರಿಯೆಗಳು**: ಶಾಲೆಗೆ ಪ್ರವೇಶ ಪಡೆಯಲು ಬಯಸುವ ಮಕ್ಕಳು ಮತ್ತು ಅವರ ತಂದೆತಾಯಂದಿರನ್ನು ಸಂದರ್ಶಿಸುವುದು ಹೆಚ್ಚಿನ ಖಾಸಗಿ ಶಾಲೆಗಳು ಅನುಸರಿಸುವ ಸಾಮಾನ್ಯ ಪರಿಪಾಠವಾಗಿದೆ. ಮಗುವಿಗೆ ಸಾಮಾನ್ಯ ಜ್ಞಾನವನ್ನು ಕುರಿತ ಪರೀಕ್ಷೆಯನ್ನು ನಡೆಸಲಾಗುತ್ತದೆ. ನಂತರ ಕೆಲವು ಕಾರ್ಯಚಟುವಟಿಕೆಗಳನ್ನು ನೀಡಲಾಗುತ್ತದೆ. ಪ್ರವೇಶ ಪಡೆದ ನಂತರ ಮಗುವು ತರಗತಿಯಲ್ಲಿ ನಿರ್ವಹಿಸಬೇಕೆಂದು ನಿರೀಕ್ಷಿಸಲಾಗುವ ಕಾರ್ಯಗಳನ್ನು ನಿರ್ವಹಿಸುವಂತೆ ಹೇಳಲಾಗುತ್ತದೆ.
- ಇದರ ಪರಿಣಾಮವಾಗಿ ಪಾಲಕರು ಮತ್ತು ಮಕ್ಕಳು ಇಬ್ಬರಿಗೂ ಒತ್ತಡ, ಉದ್ವೇಗ, ಆತಂಕವುಂಟಾಗುತ್ತದೆ ಮತ್ತು ಇದು ಮಕ್ಕಳ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ.
- **ಔಪಚಾರಿಕ ಕಲಿಕೆಯನ್ನು [structured learning] ಮುಂಚಿತವಾಗಿಯೇ ಪ್ರಾರಂಭಿಸುವುದು: ಇಂದು** ಹೆಚ್ಚಿನ ECE ಯೋಜನೆಗಳು ಪ್ರಾಥಮಿಕ ಶಿಕ್ಷಣ ಪ್ರಕ್ರಿಯೆಗಳನ್ನೇ ಕೆಳಗಿನ ಹಂತಗಳಿಗೆ ವಿಸ್ತರಿಸಿದಂತಿವೆ. ಬೆಳವಣಿಗೆಯ ದೃಷ್ಟಿಯಿಂದ ಇನ್ನೂ ಸಿದ್ಧವಾಗಿರದ ವಯಸ್ಸಿನಲ್ಲಿ ಮಕ್ಕಳಿಗೆ ಹೊರೆಯಾಗುವ ಪಠ್ಯಕ್ರಮವು ಮಕ್ಕಳನ್ನು ಕಂಠಪಾಠ ಮತ್ತು ಔಪಚಾರಿಕ ಕಲಿಕೆಗೆ ಗುರಿಮಾಡುತ್ತದೆ.
- **ನಿರೀಕ್ಷಿತ ಸಾಮರ್ಥ್ಯ ಮತ್ತು ಮಕ್ಕಳ ಬೆಳವಣಿಗೆಯ ಹಂತಗಳ ನಡುವಿನ ಸಂಘರ್ಷ:** ಅಂತಹ ಪೂರ್ವಪ್ರಾಥಮಿಕ ಶಾಲೆಗಳಲ್ಲಿನ ಪಠ್ಯಕ್ರಮವು ಮಕ್ಕಳ ಬೆಳವಣಿಗೆಯ ದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ. ಮಕ್ಕಳು ಒಂದು ಜಾಗದಲ್ಲಿ ಕುಳಿತು ಬಹಳ ಹೊತ್ತಿನವರೆಗೆ ಬರೆಯಬೇಕು. ಕೆಲವು ಸಂಜ್ಞಾನಾತ್ಮಕ ಕೌಶಲ್ಯಗಳನ್ನು ಕಲಿಸಿ, ಮಕ್ಕಳ ಸಮಗ್ರ ಬೆಳವಣಿಗೆಯನ್ನು ಕಡೆಗಣಿಸಲಾಗುತ್ತದೆ.
- **ಕಿಕ್ಕಿರಿದ ತರಗತಿಗಳು:** ಒಂದು ತರಗತಿಯಲ್ಲಿ ಅರವತ್ತು ವಿದ್ಯಾರ್ಥಿಗಳವರೆಗೆ ಒಡ್ಡಲಾಗುತ್ತದೆ, ತರಗತಿಯಲ್ಲಿ ಓಡಾಡುವ ಮತ್ತು ಇತರರೊಂದಿಗಿನ ಸಾಮಾಜಿಕ ಪಾರಸ್ಪರಿಕ ಕ್ರಿಯೆಗೆ ಯಾವುದೇ ಅವಕಾಶವಿರುವುದಿಲ್ಲ. ಶಿಕ್ಷಕರಿಗೆ ಪ್ರತೀ ವಿದ್ಯಾರ್ಥಿಗೂ ಪ್ರತ್ಯೇಕವಾಗಿ ಗಮನ ಕೊಡುವುದು ಸಾಧ್ಯವಾಗುವುದಿಲ್ಲ. ಅಂತಹ ಪರಿಸರವು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಲ್ಲ.

- **ಬೋಧನೆ ಮತ್ತು ಮೌಲ್ಯಮಾಪನದ ಔಪಚಾರಿಕ ವಿಧಾನ**: ಮಕ್ಕಳು ತಮ್ಮ ಹೆಚ್ಚಿನ ಸಮಯವನ್ನು ಬರೆಯುವುದು, ವರ್ಕ್ ಬುಕ್‌ಗಳೊಂದಿಗೆ ಕೆಲಸ ಮಾಡುವುದು ಅಥವಾ ಅಂಕಿಗಳೊಂದಿಗೆ ಲೆಕ್ಕ ಹಾಕುವುದರಲ್ಲಿ ಮಗ್ನರಾಗಿರುತ್ತಾರೆ. ಅವರ ದಿನಚರಿಯಲ್ಲಿ ಕಲೆ, ಸಂಗೀತ, ಪರಿಸರದ ಅಧ್ಯಯನ, ಅಥವಾ ಒಳಾಂಗಣ ಮತ್ತು ಹೊರಾಂಗಣ ಆಟಗಳಿಗೆ ಸೀಮಿತ ಅವಕಾಶವಿರುತ್ತದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ಕುರಿತ ಅರಿವು ಮತ್ತು ಕಾಳಜಿಯ ಕೊರತೆಯಿದೆ.
- **ಮೌಲ್ಯಮಾಪನ**: ಮೌಲ್ಯಮಾಪನವೂ ಸಹ ಪ್ರಾಥಮಿಕ ಶಾಲಾ ಹಂತದಲ್ಲಿ ಹೆಚ್ಚು ಸಮರ್ಪಕವಾಗಿ ಕಲಿಸಲ್ಪಡುವ ಸಾಮರ್ಥ್ಯಗಳ ಮೇಲೆಯೇ ಕೇಂದ್ರೀಕರಿಸುತ್ತದೆ. ಉದಾಹರಣೆಗೆ ಓದುವ, ಬರೆಯುವ, ಉಕ್ತಲೇಖನ, ಗಣಿತ ಮತ್ತು ಚಿತ್ರಕಲೆಯಲ್ಲಿನ ದಕ್ಷತೆ. ಬೆಳವಣಿಗೆಯ ದೃಷ್ಟಿಕೋನದಿಂದ ಮಗುವನ್ನು ಮೌಲ್ಯಮಾಪನ ಮಾಡುವುದರ ಮೇಲೆ ಒತ್ತು ನೀಡುವುದಿಲ್ಲ.
- **ಮನೆ ಅಭ್ಯಾಸ(Home work): ಪದೇಪದೇ** ಮಕ್ಕಳಿಗೆ ಕೊಡುವ ಮನೆ ಅಭ್ಯಾಸವು ಬರೆಯುವ ಕೆಲಸಗಳನ್ನು ಒಳಗೊಂಡಿರುತ್ತದೆ. ಮಕ್ಕಳು ಈ ಹಂತದಲ್ಲಿ ಬರೆಯುವುದಕ್ಕೆ ಸಿದ್ಧವಾಗಿರುವುದಿಲ್ಲ, ಗಂಟೆಗಟ್ಟಲೇ ಈ ಕೆಲಸದಲ್ಲಿ ಪ್ರಯಾಸಪಡುತ್ತಾರೆ. ಇದು ಅವರ ಆಟದ ಸಮಯವನ್ನು ದೋಚುತ್ತದೆ, ಆ ವಯಸ್ಸಿನಲ್ಲಿ ಅದು ಅವರ ಹಕ್ಕಾಗಿರುತ್ತದೆ.
- **ಸೂಕ್ತ ಸಾಮಗ್ರಿಗಳು ಹಾಗೂ ಆಟದ ಸಾಮಾನುಗಳ ಕೊರತೆ**: ಈ ಸಾಮಗ್ರಿಗಳು ಒಂದು ಮಿತಿಯಲ್ಲಿ ಸರಬರಾಜಾಗುತ್ತವೆ, ಮತ್ತು ಕೆಲವೊಮ್ಮೆ ಅವುಗಳನ್ನು ವಾಸ್ತವಿಕವಾಗಿ ಆಟಕ್ಕೆ ಬಳಸುವ ಬದಲು ಪ್ರದರ್ಶನದ ಉದ್ದೇಶಗಳಿಗೆ ಬಳಸುವುದೇ ಹೆಚ್ಚು. ಎಲ್ಲಾದರೂ ಒಮ್ಮೊಮ್ಮೆ ವಿಶೇಷ ಸಂದರ್ಭಗಳಲ್ಲಿ ಅಥವಾ ಮಕ್ಕಳ ಬೆನ್ನು ತಟ್ಟಲು ಆ ಸಾಮಗ್ರಿಗಳೊಂದಿಗೆ ಆಡಲು ಅವಕಾಶ ಮಾಡಿಕೊಡಲಾಗುತ್ತದೆ.[19]
- **ಶಿಕ್ಷಕರ ಸಂಭಾವನೆ**: ಹೆಚ್ಚಿನ ಶಿಕ್ಷಕರು ತರಬೇತಿ ಹೊಂದಿದವರಲ್ಲ, ಮಕ್ಕಳೊಂದಿಗೆ ವ್ಯವಹರಿಸುವಾಗಿನ ವಿಧಾನಗಳ ಬಗೆಗೆ ಅರಿವಿರುವುದಿಲ್ಲ. ಅವರಿಗೆ ಸಿಗುವ ಸಂಭಾವನೆಯೂ ಕಡಿಮೆಯಷ್ಟೇ ಅಲ್ಲದೆ, ಶಾಲೆಯಿಂದ ಶಾಲೆಗೆ ಅದು ಭಿನ್ನವಾಗಿರುತ್ತದೆ.

### 3.2.3 ಆರಂಭಿಕ ಬೋಧನೆಯ ಸವಾಲುಗಳು:

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (NEP) ಶಿಫಾರಸ್ಸು ಮಾಡಿದ ಹಾಗೆ ಆಟಗಳನ್ನು ಆಧರಿಸಿದ, ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡ ECE ಯೋಜನೆಗಳು ರೂಢಿಬದ್ಧವಾಗಿರದೇ, ಅದರ ಅಪವಾದದಂತಿವೆ ಎಂದು ದೇಶದಲ್ಲಿರುವ ಹತ್ತು ಮುಖ್ಯ ನಗರಗಳ 'ಪ್ರತಿಷ್ಠಿತ' ಶಾಲೆಗಳನ್ನು ಆಯ್ದುಕೊಂಡು NCERTಯು ನಡೆಸಿದ

[19] *Seth, 1996*

ಎಲ್ಲಾ ಸಮೀಕ್ಷೆಗಳೂ ಒಂದೇ ರೀತಿ ಸೂಚಿಸಿವೆ. ಎಲ್ಲಾ ಪ್ರಮುಖ ನಗರಗಳಲ್ಲಿನ ಪಠ್ಯಕ್ರಮ ಸಮೀಕ್ಷೆಗಳು ಸೂಚಿಸುವ ಹಾಗೆ 3-4 ವರ್ಷದ ಚಿಕ್ಕಮಕ್ಕಳಿಗೂ ಸಹ 1ನೇ ತರಗತಿಗೆ ನಿಗದಿಪಡಿಸಿದ ಪಠ್ಯಕ್ರಮಗಳನ್ನಷ್ಟೇ ಅಲ್ಲದೆ, 2ನೇ ತರಗತಿಯ ಪಠ್ಯಕ್ರಮಗಳನ್ನೂ ಕಲಿಸಲಾಗುತ್ತದೆ, ಈ ಹಂತದ ಕಲಿಕೆಗೆ ಅಷ್ಟು ಚಿಕ್ಕ ವಯಸ್ಸಿನ ಮಕ್ಕಳು ಬೌದ್ಧಿಕವಾಗಿ ಹಾಗೂ ದೈಹಿಕವಾಗಿ ಸಿದ್ಧರಾಗಿರುವುದಿಲ್ಲ. ಆ ಮಕ್ಕಳು ನಿಯತ (regular) ಕಿರುಪರೀಕ್ಷೆಗಳು, ಮತ್ತು ದೊಡ್ಡ ಪರೀಕ್ಷೆಗಳನ್ನು ಸಹ ಬರೆಯುತ್ತಾರೆ ಮತ್ತು ಅವರಿಗೆ ನಿಯತ ಮನೆ ಅಭ್ಯಾಸವನ್ನೂ (homework) ನೀಡಲಾಗುತ್ತದೆ[20, 21].

ಮಕ್ಕಳಿಗೆ ಬಹು ಮುಂಚೆಯೇ ಶುರುಮಾಡುವ ಬೋಧನೆಯ ಹಾನಿಕಾರಕ ಪರಿಣಾಮಗಳನ್ನು ಬಹುಶಿಸ್ತೀಯ ಸಂಶೋಧನೆಗಳು ತೋರಿಸಿಕೊಡುತ್ತವೆ. ಮಕ್ಕಳ ಆರೋಗ್ಯ ಹಾಗೂ ಅವರ ವೈಯಕ್ತಿಕ ಮತ್ತು ಸಾಮಾಜಿಕ ಬೆಳವಣಿಗೆಯ ಮೇಲೆ ಆಗುವ ಒತ್ತಡದ ಪರಿಣಾಮಗಳನ್ನು ಗುಲಾಟಿಯವರು[22] ಗಮನಿಸಿದ್ದಾರೆ. ಆರೋಗ್ಯಕ್ಕೆ ಸಂಬಂಧಿಸಿದಂತೆ, ಉಸಿರಾಟದ ಸಮಸ್ಯೆಗಳು, ಕೈ-ಕಾಲು ಮತ್ತು ಬೆನ್ನು ನೋವು, ಪದೇ ಪದೇ ಬರುವ ಜ್ವರ, ತೂಕ ಏರದೇ ಇರುವುದು ಸರ್ವೇಸಾಮಾನ್ಯವಾಗಿದ್ದವು. ಸುಮಾರು 82% ಮಕ್ಕಳ ಮಲವಿಸರ್ಜನೆಯ ಅಭ್ಯಾಸಗಳು ನಿಯತ ಕ್ರಮದಲ್ಲಿರಲಿಲ್ಲ, ಅದೂ ಕೂಡ ಅವರ ನಿದ್ದೆಯ ಮೇಲೆ ಪರಿಣಾಮ ಬೀರಿದ್ದಿತು.

ಎಲ್‌ಕೈಂಡ್ ಪ್ರಕಾರ ಔಪಚಾರಿಕ ಬೋಧನೆಯು ಮಕ್ಕಳಿಗೆ ಹಾನಿಯುಂಟುಮಾಡುತ್ತಿದೆ.[23] ಅವರ ಪರಿಭಾಷೆಯಲ್ಲಿ ಹೇಳುವುದಾದರೆ ಅದು ’ತಪ್ಪುಶಿಕ್ಷಣ’ (miseducation), ಅದರಿಂದಾಗಿ ಮಕ್ಕಳು ಉದ್ದೇಶವೇ ಇಲ್ಲದೆ ಅಪಾಯಕ್ಕೊಳಗಾಗುತ್ತಾರೆ. ಅವು ಅಲ್ಪಾವಧಿಯ ಮತ್ತು ದೀರ್ಘಾವಧಿಯ ಅಪಾಯಗಳು ಎಂದು ಅವರು ಗಮನಿಸುತ್ತಾರೆ. ಅಲ್ಪಾವಧಿಯ ಅಪಾಯಗಳು ಮಕ್ಕಳಲ್ಲಿ ಒತ್ತಡದ ಲಕ್ಷಣಗಳ ರೂಪದಲ್ಲಿ ವ್ಯಕ್ತವಾಗುತ್ತವೆ. ದೀರ್ಘಾವಧಿಯ ಅಪಾಯಗಳು ಮಕ್ಕಳ ಪ್ರೇರಕ, ಬೌದ್ಧಿಕ ಮತ್ತು ಸಾಮಾಜಿಕ ವರ್ತನೆಗಳ ಮೇಲಾಗುವ ದೀರ್ಘಕಾಲೀನ ಪರಿಣಾಮಗಳಾಗಿವೆ. ಕಲಿಯುವ ನಿಟ್ಟಿನ ಅಭಿಪ್ರೇರಣೆಯ ಮೇಲೆ ಉಂಟಾಗುವ ಪ್ರಬಲ ಹಾನಿಯನ್ನು ನೋಡಿದರೆ ನಮಗೆ ಆರಂಭಿಕ ಬೋಧನೆಯ ಅಪಾಯದ ಅರಿವಾಗುತ್ತದೆ. ಎಳೆಯ ವಯಸ್ಸಿನ ಮಕ್ಕಳು ಕಲಿಕೆಯ ಕುರಿತಂತೆ ತಮ್ಮದೇ ಆದ ಆದ್ಯತೆಗಳನ್ನು ಹೊಂದಿರುತ್ತಾರೆ, ಅದು ಸ್ವ-ನಿರ್ದೇಶಿತವಾಗಿರುತ್ತದೆ. ಈ ಸ್ವ-ನಿರ್ದೇಶಿತ ಕಲಿಕೆಯ ಕ್ಷೇತ್ರದೊಳಗೆ ವಯಸ್ಕರು ಹಸ್ತಕ್ಷೇಪ ಮಾಡಿ ತಮ್ಮ ಕಲಿಕಾ ಆದ್ಯತೆಗಳನ್ನು ಅಂದರೆ, ಓದುವುದು ಅಥವಾ ಬರೆಯುವುದನ್ನು ಒತ್ತಾಯಪೂರ್ವಕವಾಗಿ ಹೇರತೊಡಗಿದರೆ, ಅವರು ಮಕ್ಕಳ ಈ ಸ್ವ-ನಿರ್ದೇಶಿತ ಸ್ಫೂರ್ತಿಗೆ ಅಡ್ಡಿಪಡಿಸಿದಂತಾಗುತ್ತದೆ ಮತ್ತು ಸ್ವಂತದ ಹೊಸ ಪ್ರಯತ್ನಗಳನ್ನು

---

[20] *Kaul, V. 1997*

[21] *Upadhyay, G.C. 2000*

[22] *Gulati, A.K.1992*

[23] *Elkind, D. 1987*

ಹಾಳುಗೆಡವಿದಂತಾಗುತ್ತದೆ. ಆರಂಭಿಕ ಹಂತದಲ್ಲಿಯೇ ಶೈಕ್ಷಣಿಕ ಕೌಶಲ್ಯಗಳನ್ನು ಮಗುವಿಗೆ ಪರಿಚಯಿಸುವುದರಿಂದ ಆ ನಿಟ್ಟಿನಲ್ಲಿ ಅರ್ಜಿಸಿದ ಕೌಶಲ್ಯಗಳ ಬಳಕೆಗೆ ಸಂಬಂಧಿಸಿದಂತೆ ಮಗುವಿನ ಸ್ವಾಭಾವಿಕ ಪ್ರವೃತ್ತಿಯ ಬೆಳವಣಿಗೆಯನ್ನು ಅದು ದುರ್ಬಲಗೊಳಿಸಬಹುದು ಎಂದು ಕಾಟ್ಸ್[24] ನಂಬುತ್ತಾರೆ. ವಯಸ್ಸಿಗೆ ಮುಂಚೆಯೇ ಓದುವ ಕಸರತ್ತು ಮತ್ತು ಅಭ್ಯಾಸಗಳನ್ನು ಮಾಡಿಸಿದರೆ ಮಗುವು ಓದುಗನಾಗುವ ನಿಟ್ಟಿನ ಸ್ವಾಭಾವಿಕ ಪ್ರವೃತ್ತಿಯು ದುರ್ಬಲಗೊಳ್ಳಬಹುದು. ಕಾಟ್ಸ್ ಪ್ರಕಾರ ಆರಂಭದ ಹಂತದಲ್ಲಿಯೇ ಶೈಕ್ಷಣಿಕ ಕೌಶಲ್ಯಗಳನ್ನು ಪರಿಚಯಿಸಿದರೆ ಶಾಲೆಯಲ್ಲಿ ದೀರ್ಘಕಾಲಿಕ ಯಶಸ್ಸು ದೊರೆಯುವುದೆಂಬ ಖಾತರಿಯ ಕುರಿತು ಆಸಕ್ತಿದಾಯಕ ಪುರಾವೆಗಳೇನೂ ಇಲ್ಲ. ಮಗುವಿನ ಸಾಮಾಜಿಕ-ಭಾವನಾತ್ಮಕ ಬೆಳವಣಿಗೆಯ ಮೇಲೂ ಅದು ಪರಿಣಾಮ ಬೀರುತ್ತದೆ. ಔಪಚಾರಿಕ ಶಿಕ್ಷಣದಲ್ಲಿ ತಮ್ಮಿಂದ ನಿರೀಕ್ಷಿಸುವ ಕೆಲಸಗಳು ಅಥವಾ ವಿಷಯಗಳಿಗೆ ಯಾವುದೇ ಸಂಬಂಧ ಕಲ್ಪಿಸಿಕೊಳ್ಳಲಾಗದ ಮಕ್ಕಳು ತಾವು ಅಸಮರ್ಥರು ಎಂದು ಭಾವಿಸುವ ಸಾಧ್ಯತೆ ಇದೆ. ಶಾಲಾ ಕೆಲಸಗಳಿಗೆ ಸಂಬಂಧ ಕಲ್ಪಿಸಿಕೊಳ್ಳಲಾಗದ ಪುನರಾವರ್ತಿತ ಅನುಭವಗಳು ಮುಂದೆ 'ಕಲಿತ ದಡ್ಡತನ'[25] ಎಂದು ಏನು ಕರೆಯುತ್ತೇವೆಯೋ ಆ ಸಾಧ್ಯತೆಗಳಿಗೆ ಮಕ್ಕಳನ್ನು ದೂಡುತ್ತವೆ.

### 3.2.4 ಖಾಸಗಿ ಕ್ಷೇತ್ರದ ಅವಲೋಕನ

- ಈ ಬಹುತೇಕ ಶಾಲೆಗಳು ಬಹಳ ಕಳಪೆ ದರ್ಜೆಯವು ಮತ್ತು ಕೆಲವೊಮ್ಮೆ ಮಕ್ಕಳಿಗೆ ಹಾನಿಯನ್ನುಂಟುಮಾಡುವ ಅಥವಾ ಅಪಾಯಕಾರಿ ಪರಿಣಾಮಗಳನ್ನು ಉಂಟುಮಾಡುವ ರೀತಿಯಲ್ಲಿವೆ. ಆದರೂ ಮಿಲಿಯಗಟ್ಟಲೇ ಮಕ್ಕಳನ್ನು ಪ್ರಭಾವಿಸಲು ಅವುಗಳಿಗೆ ಅನುವುಮಾಡಿಕೊಡಲಾಗಿದೆ.
- ವರ್ಗ ಮತ್ತು ಅಧಿಕಾರದಂತಹ ಸಂಗತಿಗಳಿಂದ ಉಂಟಾಗುವ ಅವುಗಳ ಪ್ರಭಾವವು ಅಪಾಯಕಾರಿಯಾಗಿದೆ. ಆದರೂ ಅವು ಮಾನದಂಡಗಳನ್ನು ರೂಪಿಸುತ್ತಿವೆ ಮತ್ತು ಸಾರ್ವಜನಿಕ ಹಾಗೂ ಸ್ವಯಂಸೇವಾ ವಲಯಗಳ ಗತಿನಿರ್ಧಾರಕಗಳಾಗುತ್ತಿವೆ.
- ಆರ್ಥಿಕವಾಗಿ ಸಬಲರಾಗುತ್ತಿದ್ದಂತೆಯೇ ತಮ್ಮ ಮಕ್ಕಳನ್ನು ಸಾರ್ವಜನಿಕ ಶಾಲೆಗಳಿಂದ ಖಾಸಗಿ ಶಾಲೆಗಳಿಗೆ ವರ್ಗಾಯಿಸುವ ಪ್ರವೃತ್ತಿಯು ಪಾಲಕರಲ್ಲಿ ಕಾಣಿಸುತ್ತಿದೆ, ಅಲ್ಲಿನ ಶಿಕ್ಷಣವು ಎಷ್ಟೇ ದುಬಾರಿಯಾಗಿರಲಿ ತಮ್ಮ ಮಗುವಿಗೆ ಆ ಹೊಸ ಪರಿಸರದಿಂದ ಪ್ರಯೋಜನವಿದೆ ಎಂಬ ಭಾವನೆಯಿಂದ ಹೆಚ್ಚಿನ ಬೆಲೆಯನ್ನು ತೆರುವ ಹಾಗೂ ಉನ್ನತ ತ್ಯಾಗಕ್ಕೆಳೆಸುವ ಪಾಲಕರನ್ನು ಕಾಣುತ್ತಿದ್ದೇವೆ. ಈ ಪ್ರವೃತ್ತಿಯನ್ನು ಸಮುದಾಯಗಳ ಒಳಗೆ ಮಾತ್ರವಲ್ಲ, ಸಮುದಾಯಗಳ ನಡುವೆ ಮತ್ತು ಪ್ರಾಂತ್ಯಗಳಾದ್ಯಂತ ನೋಡುತ್ತಿದ್ದೇವೆ.

---

[24] *Katz, L. 1987*

[25] *Kaul, V. 1997*

- ಆದರೆ ಸರಕಾರಕ್ಕೆ ಈ ಖಾಸಗಿ ವಲಯವನ್ನು ಸುಧಾರಿಸುವ, ನಿಯಂತ್ರಿಸುವ ಅಥವಾ ಸಮೀಕ್ಷಿಸುವ ಆಸಕ್ತಿ ಇಲ್ಲ; ಅದು ಇತ್ತೀಚೆಗೆ ಹುಟ್ಟಿಕೊಂಡ ಖಾಸಗೀಕರಣ ಮತ್ತು ಉದಾರೀಕರಣದ ಸಿದ್ಧಾಂತಗಳ ಮೂಲಕ, ಹಾಗೂ ಮಾರುಕಟ್ಟೆಯ ಪವಿತ್ರ ಸ್ವರೂಪದಲ್ಲಿನ ನಂಬಿಕೆಯಿಂದಾಗಿ ಮತ್ತಷ್ಟು ಸಶಕ್ತಗೊಂಡಿದೆ. ಜೊತೆಗೆ, ವ್ಯಕ್ತಿಯ ಆಯ್ಕೆಯ ಸ್ವಾತಂತ್ರ್ಯವನ್ನು ಗೌರವಿಸಬೇಕೆಂಬ ಭಾವನೆಗಳೂ ಅದಕ್ಕೆ ಪುಷ್ಟಿ ನೀಡುತ್ತಿವೆ.
- ಇತ್ತೀಚಿನ ಸಾಂವಿಧಾನಿಕ ತಿದ್ದುಪಡಿಯು ಖಾಸಗಿ ಶಿಕ್ಷಣ ವಿಭಾಗದ ಹೊಣೆಗಾರಿಕೆಯನ್ನು ನಿರಾಕರಿಸುವ ಪ್ರವೃತ್ತಿಯನ್ನು ಕಾನೂನುಸಮ್ಮತಗೊಸಿರುವುದು ದುರದೃಷ್ಟಕರ. ಜೊತೆಗೆ, ಆಘಾತಕಾರಿ ದೌರ್ಜನ್ಯಗಳ 'ಉಪೇಕ್ಷೆಯನ್ನು' ಕಾನೂನುಸಮ್ಮತಗೊಳಿಸಿದೆ.

### 3.2.5 ಆರೈಕೆ ಎಂಬ ಅಂಶ

ದೈನಂದಿನ ಪಾಲನೆಯನ್ನು ಕುರಿತ ಅಧ್ಯಯನಗಳು ಸೂಚಿಸುವಂತೆ ಸೌಲಭ್ಯವಂಚಿತ ಉದ್ಯೋಗಸ್ಥ ಮಹಿಳೆಯರ ಮೇಲೆ ಇದು ಹೆಚ್ಚಿನ ಪರಿಣಾಮವನ್ನು ಬೀರುತ್ತದೆ. ಅವರಲ್ಲಿ ಸುಮಾರು 66% ಮಹಿಳೆಯರು ಯಾವ ಸಹಾಯವಿಲ್ಲದೆ ತಮ್ಮ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಾರೆ[26]. ಅವರಲ್ಲಿ ಕೃಷಿ ಕಾರ್ಮಿಕರು, ಗುತ್ತಿಗೆ ಕಾರ್ಮಿಕರು, ತುಂಡು ಕೆಲಸಗಳನ್ನು ಮಾಡುವವರು ಹಾಗೂ ಸ್ವಂತ ಉದ್ಯೋಗ ಮಾಡುವವರಿದ್ದಾರೆ. ಅಸಂಘಟಿತ ಕ್ಷೇತ್ರದ ಉದ್ಯೋಗಸ್ಥ ತಾಯಂದಿರ ಬಗೆಗೂ ಸೇಥಿಯವರು[27] ಇದೇ ರೀತಿಯ ಅಂಶಗಳನ್ನು ಗಮನಿಸಿದ್ದಾರೆ. ಕುಟುಂಬದವರ ಬೆಂಬಲವಿಲ್ಲದ ವಲಸೆ ತಾಯಂದಿರ ಮೇಲೆ ಇದು ಹೆಚ್ಚಿನ ಪರಿಣಾಮವನ್ನು ಬೀರಿದೆ ಎಂಬುದನ್ನು ಡಿ'ಸೋಜ[28] ಗಮನಿಸಿದ್ದಾರೆ: 78% ಮಹಿಳೆಯರಿಗೆ ತಮ್ಮ ಮಕ್ಕಳ ನಿಟ್ಟಿನ ಯಾವುದೇ ಸಹಾಯವಿರಲಿಲ್ಲ ಮತ್ತು 40% ಮಹಿಳೆಯರು ಮಕ್ಕಳನ್ನು ನೋಡಿಕೊಳ್ಳುವವರಿಲ್ಲದೆ ಅವರನ್ನು ಮನೆಯಲ್ಲಿಯೇ ಬಿಟ್ಟು ಕೆಲಸಕ್ಕೆ ಹೋಗುತ್ತಿದ್ದರು.

ಸೌಲಭ್ಯವಂಚಿತ ಮನೆಗಳ ಮಹಿಳೆಯರು ಸಾಮಾನ್ಯವಾಗಿ ತಮ್ಮ ಎಳೆಯ, ಬೆಳೆಯುತ್ತಿರುವ ಮಕ್ಕಳನ್ನು ದೊಡ್ಡ ಮಕ್ಕಳ ದೇಖರೇಖಿಯಲ್ಲಿ ಬಿಡುವುದು ರೂಢಿ. ಈ ದೊಡ್ಡ ಮಕ್ಕಳು ಸ್ವತಃ ಮಕ್ಕಳೇ ಆಗಿರುತ್ತಾರೆ, ಅವರಿಗೆ ಮಕ್ಕಳ ಪಾಲನೆಯ ಕೌಶಲ್ಯವಿರುವುದಿಲ್ಲ.[29] ಮಹಾರಾಷ್ಟ್ರದಲ್ಲಿ ನಡೆಸಿದ ಒಂದು ಅಧ್ಯಯನವು ಮಕ್ಕಳ ಆರೋಗ್ಯ ಸ್ಥಿತಿ ಮತ್ತು ಅವರನ್ನು ನೋಡಿಕೊಳ್ಳುವ ವಿವಿಧ ಪ್ರಕಾರದ ಜನರ ನಡುವಿನ ನಿರ್ದಿಷ್ಟ ಸಂಬಂಧವನ್ನು ತಿಳಿಸುತ್ತದೆ.[30] ಅಜ್ಜ-ಅಜ್ಜಿಯರಿಂದ

---

[26] *GoI 1985*

[27] *Sethi, R.M. 1982*

[28] *D'Souza 1979*

[29] *Sriram, R. and Ganapathy 1997*

[30] *Shah, P.M. et al 1979*

ಪಾಲಿಸಲ್ಪಟ್ಟ 21% ಮಕ್ಕಳು ಮತ್ತು ತಾಯಂದಿರ ಸುಪರ್ದಿಯಲ್ಲಿದ್ದ 8.5% ಮಕ್ಕಳು ಹಾಗೂ ೬ರಿಂದ ೮ ವರ್ಷ ವಯಸ್ಸಿನ ಹಿರಿಯ ಸಹೋದರ-ಸಹೋದರಿಯರಿಂದ ಆರೈಕೆ ಮಾಡಲ್ಪಟ್ಟ 55% ಎಳೆಯರು ಗಂಭೀರ ಸ್ವರೂಪದ ಅಪೌಷ್ಟಿಕತೆಯನ್ನು ಹೊಂದಿದ್ದಾರೆ.

1998ರಲ್ಲಿ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯ (Central Social Welfare Board-CSWB) ಬೆಂಬಲ ಪಡೆದು ಸಾರ್ವಜನಿಕ ಸಹಕಾರ ಮತ್ತು ಮಕ್ಕಳ ಅಭಿವೃದ್ಧಿಯ ರಾಷ್ಟ್ರೀಯ ಸಂಸ್ಥೆಯಿಂದ (National Institute for Public Cooperation and Child Development-NIPCCD)[31] ಕೈಗೊಳ್ಳಲಾದ ಶಿಶುವಿಹಾರಗಳನ್ನು ಕುರಿತ (13,000 ಶಿಶುವಿಹಾರಗಳು) ಅಧ್ಯಯನದಲ್ಲಿ ಕಂಡುಬಂದಂತೆ ಅರ್ಧಕ್ಕಿಂತ ಹೆಚ್ಚಿನ ಮಕ್ಕಳು 3ಕ್ಕಿಂತ ಹೆಚ್ಚು ವಯಸ್ಸಿನವರಾಗಿದ್ದರು, ವಾಸ್ತವದಲ್ಲಿ ಆ ಯೋಜನೆಯನ್ನು ಉದ್ಯೋಗಸ್ಥ ಮಹಿಳೆಯರ 0-6 ವರ್ಷದ ಮಕ್ಕಳ ಸಲುವಾಗಿ ರೂಪಿಸಲಾಗಿತ್ತು. ದಾಖಲೆಗಳನ್ನು ನಿರ್ವಹಿಸದ ಕಾರಣ, ಹೆಚ್ಚಿನ ತಾಯಂದಿರ ಉದ್ಯೋಗದ ಸ್ಥಾನಮಾನವು ಸ್ಪಷ್ಟವಿಲ್ಲ. ಬಹುತೇಕ ಪ್ರಕರಣಗಳಲ್ಲಿ, ಆರೈಕೆಯ ಗುಣಮಟ್ಟವು ಅತ್ಯಂತ ಕಳಪೆ ದರ್ಜೆಯದಾಗಿತ್ತು ಎನ್ನುವುದು ತಿಳಿಯಿತು.. ಕಾರ್ಯಕರ್ತರಿಗೆ ತರಬೇತಿ ಮತ್ತು ಪ್ರೇರಣೆ ದೊರೆಯದೇ ಇರುವುದು, ಅತ್ಯಲ್ಪ ಸಂಬಳ, ಸರಿಯಾದ ಮೇಲುಸ್ತುವಾರಿ ಇಲ್ಲದಿರುವುದು ಹಾಗೂ ಅತ್ಯಂತ ಸೀಮಿತ ಬಜೆಟ್ಟಿನ ದೆಸೆಯಿಂದ ಸೂಕ್ತ ಸಾಮಗ್ರಿಗಳು ಸಿಗದಿರುವುದು ಅದಕ್ಕೆ ಕಾರಣವೆನ್ನಲಾಗಿದೆ. ಆದರೆ ಬಾಲವಾಡಿ, ಶಿಶುವಿಹಾರ, ದೈನಂದಿನ ಪಾಲನಾ ಕೇಂದ್ರಗಳು ಇತ್ಯಾದಿ ಹೆಸರುಗಳಲ್ಲಿ ಚಾಲ್ತಿಯಲ್ಲಿರುವ ಮತ್ತು ರಾಷ್ಟ್ರೀಯ, ಅಂತರರಾಷ್ಟ್ರೀಯ ಹಾಗೂ ಮತಪಂಗಡಗಳ ಬೆಂಬಲದಿಂದ ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿರುವ ಅನೇಕ ECE ಕೇಂದ್ರಗಳ ಗುಣಮಟ್ಟವನ್ನು ಕುರಿತ ಯಾವ ಅಧ್ಯಯನಗಳೂ ನಡೆದಿಲ್ಲ.

ನಗರದ ಮಧ್ಯಮ ವರ್ಗಕ್ಕೆ ಸಂಬಂಧಿಸಿದಂತೆ ನೋಡಿದರೆ, ಶಾಲೆಯಿಂದ ಮನೆಗೆ ಮರಳುವ ಮಕ್ಕಳನ್ನು ನೋಡಿಕೊಳ್ಳಲು ಸರಿಯಾದ ಸೌಲಭ್ಯಗಳಿಲ್ಲದೇ ಹೆಚ್ಚಿನ ಮಕ್ಕಳು 'ಲ್ಯಾಚ್‌ಕೀ' ಮಕ್ಕಳಾಗಿರುವುದು ಸಾಮಾನ್ಯವಾಗಿದೆ. ಇದಕ್ಕೆ ಪರ್ಯಾಯವಾಗಿ ನಗರದ ಮಧ್ಯಮ ವರ್ಗದವರು ಆಯಾ ಅಥವಾ ಮನೆಗೆಲಸದ ಜೊತೆಗೆ ಮಕ್ಕಳನ್ನೂ ನೋಡಿಕೊಳ್ಳುವ ಮನೆಕೆಲಸದ ಸಹಾಯಕರ ಮೇಲೆ ಅವಲಂಬಿತರಾಗುತ್ತಾರೆ. ಆದರೆ ಈ ರೀತಿಯ ಆರೈಕೆಯನ್ನು ಹೊಂದಿದ ಮಕ್ಕಳು ಬೇರೆ ರೀತಿಯ ಆರೈಕೆಯನ್ನು ಪಡೆದ ಮಕ್ಕಳಿಗೆ ಹೋಲಿಸಿದರೆ ಬುದ್ಧಿಮತ್ತೆ ಮತ್ತು ಸಾಮಾಜಿಕ ಪರಿಪಕ್ವತೆಯ ಪರೀಕ್ಷೆಗಳಲ್ಲಿ ಕಡಿಮೆ ಅಂಕಗಳನ್ನು ಪಡೆಯುವುದು ಕಂಡುಬಂದಿದೆ.[32]

ಈ ಮೇಲಿನ ದತ್ತಾಂಶಗಳು, ECCEಯಲ್ಲಿ ಆರೈಕೆಯ ಅಂಶವು ದುರ್ಬಲವಾಗಿದೆ ಎಂಬುದನ್ನು ಮತ್ತು ಸರಿಯಾದ ಆರೈಕೆ ಸಿಗದ ಅಥವಾ ತಮ್ಮ ಆರೈಕೆಯನ್ನು ತಾವೇ

---

[31] *Gopal, A.K. 1998*

[32] *Datta, V. 1994*

ನೋಡಿಕೊಳ್ಳಬೇಕಾದ ದೊಡ್ಡ ಸಂಖ್ಯೆಯ ಮಕ್ಕಳನ್ನು ಒಳಗೊಳ್ಳುವ ನಿಟ್ಟಿನಲ್ಲಿ ತುರ್ತಾಗಿ ಗಮನಹರಿಸುವ ಅವಶ್ಯಕತೆಯನ್ನು ತಿಳಿಸುತ್ತವೆ.

### 3.2.6 ಸರ್ಕಾರೇತರ ಕ್ಷೇತ್ರ

ಮಕ್ಕಳ ಆರೈಕೆಯ ಸೇವೆಯಲ್ಲಿ ತೊಡಗಿಕೊಂಡ ಸರ್ಕಾರೇತರ ಸಂಸ್ಥೆಗಳ ಯಥಾರ್ಥ ಸಂಖ್ಯೆ ಅಥವಾ ಅವು ನೀಡುವ ಸೇವೆಗಳು ಯಾವ ರೀತಿಯದ್ದು ಎಂಬ ಸಂಗತಿಗಳ ಬಗೆಗೆ ಯಾವುದೇ ಸಮೀಕ್ಷೆ ಅಥವಾ ಅಂದಾಜು ಇಲ್ಲದ ಕಾರಣ, ಈ ಕ್ಷೇತ್ರದ ಬಗ್ಗೆ ನಿರ್ದಿಷ್ಟ ಮಾಹಿತಿಯಿಲ್ಲ. ಹೊಸ ಬಗೆಯ ಯೋಜನೆಗಳನ್ನು ಬೆಳೆಸುವ ದಿಶೆಯಲ್ಲಿ ಮುಂಚೂಣಿಯಲ್ಲಿರುವಂತಹ ಕೆಲವು ಅತ್ಯದ್ಭುತ ಸಂಸ್ಥೆಗಳು ಇವೆಯಾದರೂ ಅವು ಬೆರಳೆಣಿಕೆಯಷ್ಟಿವೆ. ಉಳಿದಂತೆ ಕೆಲವು ಸಂಸ್ಥೆಗಳು ಖಾಸಗಿ ಸಂಸ್ಥೆಗಳ ಮಾದರಿಯನ್ನು ಅನುಸರಿಸಲು ಪ್ರಯತ್ನಿಸುತ್ತವೆ, ಇನ್ನೂ ಕೆಲವು, ದೈನಂದಿನ ಪಾಲನಾ ಕೇಂದ್ರಗಳು ಅಥವಾ ಬಾಲವಾಡಿಯ ಸೇವೆಗಳನ್ನು ಒದಗಿಸುತ್ತವೆ.

ಹೊಸಬಗೆಯ ಯೋಜನೆಗಳಿಗೆ ಸಂಬಂಧಿಸಿದಂತೆ ಅಂತಹ ಎಂಟು ಸಂಸ್ಥೆಗಳ ಮೇಲೆ 1994-95ರಲ್ಲಿ ಎಂ.ಎಸ್.ಸ್ವಾಮಿನಾಥನ್ ಫೌಂಡೇಶನ್‌ನಿಂದ ಕೈಗೊಂಡ (ಸುರಕ್ಷಾ ಸರಣಿ ಎಂದು ಕರೆಯಲ್ಪಟ್ಟ) ಅಧ್ಯಯನ ಸರಣಿಯು ಈ ಕೆಳಗಿನ ಒಳನೋಟಗಳನ್ನು ನೀಡಿದೆ.[33] ಈ ಯೋಜನೆಗಳ ಗುಣಮಟ್ಟವನ್ನು ಹೆಚ್ಚಿಸಿದ ಕೆಲವು ಸಾಮಾನ್ಯ ಅಂಶಗಳು ಹೀಗಿವೆ: ಸ್ಥಳೀಯ ಅಗತ್ಯಗಳು ಮತ್ತು ಸಂದರ್ಭಗಳಿಗೆ ತಕ್ಕಂತೆ ಹೊಂದಾಣಿಕೆ ಮತ್ತು ಸ್ಪಂದನೆ; ಸಮುದಾಯಗಳ ಪಾಲ್ಗೊಳ್ಳುವಿಕೆ ಮತ್ತು ಬೆಂಬಲಯುತ ಸಂಪರ್ಕಗಳು; ವೈವಿಧ್ಯಮಯ ಧನಸಹಾಯ ಮತ್ತು ಸಮುದಾಯ ಸಂಪನ್ಮೂಲಗಳ ಸಂಗ್ರಹ; ದಕ್ಷತೆ ಮತ್ತು ಆತ್ಮವಿಶ್ವಾಸವನ್ನು ರೂಢಿಸಿದ ಕಾರ್ಯಪ್ರಕ್ರಿಯೆಗಳ ನಿಟ್ಟಿನ ಕಾರ್ಯಕರ್ತರ ತರಬೇತಿ ಹಾಗೂ ಸಮುದಾಯಗಳ ಸಶಕ್ತ ಬೆಂಬಲದಿಂದ ಆತ್ಮ ಗೌರವದ ಸಂವೃದ್ಧಿ; ನಿರ್ಣಯ ಕೈಗೊಳ್ಳುವ ಮತ್ತು ಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಜೊತೆಗೆ ಸಶಕ್ತ ಮುಂದಾಳತ್ವ; ಮತ್ತು ಉತ್ತಮ ದ್ವಿಮುಖೀ (two-way) ಸಂವಹನ. ಅತ್ಯುತ್ತಮ ಗುಣಮಟ್ಟಕ್ಕೆ ಹೆಚ್ಚಿನ ಖರ್ಚಾಗಬಹುದು, ಆದರೆ ಅಧಿಕ ಬೆಲೆಯು ಅತ್ಯುತ್ತಮ ಗುಣಮಟ್ಟವನ್ನು ಖಾತರಿಪಡಿಸುವುದಿಲ್ಲ. ಕೋಷ್ಟಕ 3.4ರಲ್ಲಿ ಬೆಲೆ ಮತ್ತು ಗುಣಮಟ್ಟದ ನಡುವಿನ ಸಂಬಂಧವು ವ್ಯಕ್ತವಾಗುತ್ತದೆ.

ಮತ್ತೊಂದೆಡೆ, ಅಧ್ಯಯನ ಮಾಡಿದ ಎಲ್ಲಾ ಯೋಜನೆಗಳೂ ಸೀಮಿತ ವಿಸ್ತರಣೆಯ ಸಣ್ಣ ಪ್ರಮಾಣದ ಯೋಜನೆಗಳಾಗಿದ್ದವು, ಇದು ಪ್ರಮಾಣ ಮತ್ತು ಗುಣಮಟ್ಟದ ನಡುವೆ ಒಂದು ವಿಲೋಮ ಸಂಬಂಧವನ್ನು ಸೂಚಿಸುತ್ತದೆ.

**ಕೋಷ್ಟಕ 3.4: ವೆಚ್ಚ ಮತ್ತು ಗುಣಮಟ್ಟದ ಸಂಬಂಧ**

| ಕ್ರಮ ಸಂಖ್ಯೆ | ಅಧಿಕ ವೆಚ್ಚ/ಅಧಿಕ ಗುಣಮಟ್ಟ | ಕಡಿಮೆ ವೆಚ್ಚ/ಕಡಿಮೆ ಗುಣಮಟ್ಟ |
|---|---|---|
| 1 | ಕೆಲಸಗಾರ-ಮಗುವಿನ ಅನುಪಾತ ಅಧಿಕ | ಕೆಲಸಗಾರ-ಮಗುವಿನ |

[33] *MSSRF and NIPPCD 1996*

| | | |
|---|---|---|
| | | **ಅನುಪಾತ ಕಡಿಮೆ** |
| 2 | **ಕೆಲಸಗಾರರ ಸಂಬಳ ಅಧಿಕ ಮತ್ತು ಕೆಲಸ ಮಾಡುವ ಸ್ಥಿತಿ ಉತ್ತಮವಿದ್ದರೆ ಸಂತೃಪ್ತಿ/ಪ್ರೇರಣೆ** | **ಸಂಬಳ ಕಡಿಮೆ ಮತ್ತು ಕೆಲಸ ಮಾಡುವ ಸ್ಥಿತಿ ಕಳಪೆಯಾಗಿದ್ದಲ್ಲಿ,** <br> **ಗೈರುಹಾಜರಿ, ನಿರಾಸಕ್ತಿ, ಪ್ರೇರಣೆ ಇಲ್ಲದಿರುವುದು ಮತ್ತು ಉದ್ಯೋಗದಲ್ಲಿನ ಅಸಂತೃಪ್ತಿಗೆ ಕಾರಣವಾಗುತ್ತದೆ.** |
| 3 | **ಮೇಲ್ವಿಚಾರಕರು-ಕೆಲಸಗಾರರ ನಡುವಿನ ಅನುಪಾತ ಅಧಿಕ** | **ಮೇಲ್ವಿಚಾರಕರು-ಕೆಲಸಗಾರರ ನಡುವಿನ ಅನುಪಾತ ಕಡಿಮೆ, ಅಥವಾ ಮೇಲ್ವಿಚಾರಕರೇ ಇಲ್ಲದಿರುವುದು** |
| 4 | **ಸಂದರ್ಭಕ್ಕೆ ಹೊಂದಿಕೊಳ್ಳುವ ಯೋಜನೆ** | **ನಿಶ್ಚಿತ ಯೋಜನೆ** |
| 5 | **ನಿರಂತರ ತರಬೇತಿ** | **ಕನಿಷ್ಠ ತರಬೇತಿ ಅಥವಾ ತರಬೇತಿಯೇ ಇಲ್ಲದಿರುವುದು, ಅಥವಾ ಕೇವಲ ಒಂದು ಬಾರಿಯ ಪ್ರಾರಂಭಿಕ ತರಬೇತಿ** |
| 6 | **ಸ್ಥಳೀಯ ಉಪಕ್ರಮಗಳು ಮತ್ತು ನಿರ್ಣಯಗಳ ನಿಟ್ಟಿನಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಮತ್ತು ಸಂರಚನೆಗಳು** | **ಸಮುದಾಯದ ಪಾಲ್ಗೊಳ್ಳುವಿಕೆಯೊಂದಿಗಿನ ಕೇಂದ್ರೀಕೃತ ನಿರ್ಧಾರಗಳು ಕಡಿಮೆ ಅಥವಾ ಇರುವುದಿಲ್ಲ** |

ಮೂಲ: *Learning from Innovation***.**

## 3.3 ಎಲ್ಲರಿಗೂ ಗುಣಮಟ್ಟದ ಖಾತರಿ

ಮಕ್ಕಳಿಗಾಗಿ ಯಾವುದೇ ಯೋಜನೆಯನ್ನು ರೂಪಿಸುವಾಗಲೂ ಅದರ ಫಲಿತಾಂಶವನ್ನು ನಿರ್ಧರಿಸುವ ಅತೀ ಮುಖ್ಯವಾದ ಅಂಶವು ಅದರ ಗುಣಮಟ್ಟವಾಗಿರುತ್ತದೆ. ಸಮರ್ಪಕವಾಗಿ ರೂಪಿಸಿದ ಆರಂಭಿಕ ಬಾಲ್ಯದ ಯೋಜನೆಗಳು ಮಕ್ಕಳ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆಯನ್ನು ಉಂಟು ಮಾಡಬಲ್ಲವು ಎಂದು ಅಧ್ಯಯನಗಳು ಸೂಚಿಸುತ್ತವೆ. ಅದರ ಜೊತೆಗೆ ಮುಂಚಿತವಾಗಿ ಆರಂಭಿಸಲಾದ ಮತ್ತು ಸಮಗ್ರ ದೃಷ್ಟಿಕೋನದ ಯೋಜನೆಯು ಉಂಟುಮಾಡುವ ಪರಿಣಾಮವು ಸಶಕ್ತವಾಗಿರುತ್ತದೆ; ಯೋಜನೆಯನ್ನು ಆರಂಭಿಸಿದ ನಂತರ ಅದರ ಮುಂದಿನ ಹಂತಗಳಲ್ಲಿ ನಿಯಮಿತವಾಗಿ ಎಲ್ಲ ಸರಿಯಾಗಿದೆಯೆ ಎಂದು ಖಚಿತಪಡಿಸಿಕೊಳ್ಳುತ್ತ ಮುಂದುವರೆದಲ್ಲಿ, ಉತ್ತಮಿಕೆಯನ್ನು ಮುಂದುವರೆಸಬಹುದು[34]. ಸ್ಥೂಲವಾಗಿ ಹೇಳುವುದಾದರೆ, ಉತ್ತಮ ಗುಣಮಟ್ಟದ ಆರಂಭಿಕ ಬಾಲ್ಯದ ಯೋಜನೆಗಳು ಮಕ್ಕಳಲ್ಲಿ ಆರೋಗ್ಯಪೂರ್ಣವಾದ ಮತ್ತು

---

[34] *Karoly et al*

ಕ್ರಮಬದ್ಧವಾದ ದೈಹಿಕ ಮತ್ತು ಮನೋಸಾಮಾಜಿಕ ಬೆಳವಣಿಗೆಯನ್ನು ಉತ್ತೇಜಿಸಬೇಕು, ಅದಕ್ಕೆ ಮಕ್ಕಳ ನಿತ್ಯದ ಅನುಭವಗಳು ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ಉತ್ತಮ ಗುಣಮಟ್ಟದ ಯೋಜನೆಯನ್ನು ರೂಪಿಸಲು ವಿವಿಧ ಆಯಾಮಗಳಲ್ಲಿನ ಸಂಘಟಿತ ಪ್ರಯತ್ನದ ಅವಶ್ಯಕತೆ ಇರುತ್ತದೆ. (ಕೋಷ್ಟಕ 3.1ನ್ನು ನೋಡಿ)

### 3.3.1 ನಿಯಮಗಳು ಮತ್ತು ಮಾನದಂಡಗಳನ್ನು ರೂಪಿಸುವುದು

ಸೂಚಕಗಳು ಅಥವಾ ಮಾನದಂಡಗಳನ್ನು ECCE ಯೋಜನೆಗಳಲ್ಲಿ ರೂಪಿಸಿದ ಉದ್ದೇಶಗಳಿಗೆ ಸಂಬಂಧಿಸಿದಂತೆ ಮತ್ತು ಪ್ರತೀ ಉದ್ದೇಶಕ್ಕೆ ಸಂಬಂಧಿಸಿದಂತೆ ಕೂಡಾ ನಿರ್ಧರಿಸಬೇಕಾಗುತ್ತದೆ. ಕೆಲವು ವ್ಯತ್ಯಾಸಗಳನ್ನು ಹೊರತುಪಡಿಸಿ, ಭಾರತದ ಮತ್ತು ಇಡೀ ಜಗತ್ತಿನಾದ್ಯಂತ ಆದ ಅನುಭವಗಳ[35] ಆಧಾರದ ಮೇಲೆ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಮೂಲಭೂತ ಅಥವಾ ಅತ್ಯಗತ್ಯ ಅಂಶಗಳನ್ನು ಗುರುತಿಸಲಾಗಿದೆ:

1. **ಪಠ್ಯಕ್ರಮ**: ಚಟುವಟಿಕೆಯನ್ನು ಆಧರಿಸಿರುತ್ತದೆ, ಮಗು-ಕೇಂದ್ರಿತ, ವಯಸ್ಸಿಗೆ ಸೂಕ್ತವಾದ, ಸರ್ವತೋಮುಖ ಬೆಳವಣಿಗೆಯ ಗುರಿಯನ್ನು ಹೊಂದಿದ್ದು, ಸಂದರ್ಭಕ್ಕೆ ತಕ್ಕ ಹೊಂದಾಣಿಕೆ.
2. **ಶಿಕ್ಷಕರು**: ಶಿಕ್ಷಕರು ಸೂಕ್ತ ಪ್ರೇರಣೆಯುಳ್ಳವರಾಗಿದ್ದು, ಅನುಭವಜನ್ಯ ತರಬೇತಿಯ ಮೂಲಕ ಎಳೆಯ ಮಕ್ಕಳೊಂದಿಗೆ ಕೆಲಸ ಮಾಡಲು ಸಮರ್ಪಕ ತರಬೇತಿ ಹೊಂದಿರಬೇಕು; ಅಧಿಕೃತವಾಗಿ ಶಿಕ್ಷಕ ಎಂದು ಗುರುತಿಸಲ್ಪಟ್ಟಿರಬೇಕು ಮತ್ತು ಸಮರ್ಪಕ ಸಂಬಳವಿರಬೇಕು.
3. **ಅನುಪಾತ ಮತ್ತು ಗುಂಪಿನ ಗಾತ್ರ**: ವಯಸ್ಕ- ಮತ್ತು ಮಗುವಿನ ನಡುವಿನ ಪಾರಸ್ಪರಿಕ ಕ್ರಿಯೆಗೆ ಸಹಾಯ ಮಾಡುತ್ತದೆ, ಮಕ್ಕಳ ವಯಸ್ಸಿಗೆ ಅನುಗುಣವಾಗಿ ವ್ಯತ್ಯಾಸಗಳಿರುತ್ತವೆ.
4. **ಮೂಲಸೌಕರ್ಯ**: ಮಕ್ಕಳ ಅಗತ್ಯಗಳಿಗೆ ಬೆಂಬಲ ನೀಡುವಂತಿರಬೇಕು, ಕಡಿಮೆ ವೆಚ್ಚದ್ದು ಮತ್ತು ಸಂಸ್ಕೃತಿ ನಿರ್ದಿಷ್ಟವಾಗಿರುವಂಥದ್ದು.
5. **ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆ**: ಗುಣಮಟ್ಟವನ್ನು ಸುಧಾರಿಸುವ ಪ್ರಯತ್ನಗಳನ್ನು ಪ್ರೋತ್ಸಾಹಿಸುತ್ತದೆ[36].

ಮಟ್ಟಗಳು, ಅಗತ್ಯಗಳು, ಸಂದರ್ಭಗಳು, ಮತ್ತು ಗ್ರಹಿಕೆಗಳಲ್ಲಿ ಇರುವ ವೈವಿಧ್ಯತೆಗಳನ್ನು ಪರಿಗಣಿಸಿದರೆ ಎಲ್ಲರಿಗೂ ಅನ್ವಯಿಸಬಹುದಾದ ಒಂದು ಏಕೈಕ ಮಾನದಂಡವನ್ನು ರೂಪಿಸಲು ಆಗುವುದಿಲ್ಲ. ಬೇರೆ ಬೇರೆ ಅಂಶಗಳನ್ನು, ಅಥವಾ ಅಂಶಗಳ ಬೇರೆ ಬೇರೆ ಸಂಯೋಜನೆಗಳನ್ನು ಒದಗಿಸುವ ಯೋಜನೆಗಳೂ ಇವೆ. ಆದರೆ ಪ್ರತೀ ತಂಡಕ್ಕೆ ಕೇವಲ ಒಂದು ನಿರ್ದಿಷ್ಟ ವ್ಯಾಪ್ತಿಯ ವ್ಯತ್ಯಾಸವಿರಬಲ್ಲದು.'ಅತ್ಯುತ್ತಮ ಅಭ್ಯಾಸಗಳ' ಅನೇಕ ದೃಷ್ಟಾಂತಗಳನ್ನು


---

[35] *Evans, J. 1996*

[36] *Love et al*

ಉದಾಹರಣೆಗಳನ್ನಾಗಿ ಅಥವಾ ಮಾದರಿಯನ್ನಾಗಿ ಬಳಸಬಹುದಾದರೂ ಅವುಗಳು ಕನಿಷ್ಠ ಸಂಖ್ಯೆಯಲ್ಲಿರತಕ್ಕದ್ದು,

ಸೂಚಕಗಳನ್ನು ನಿರ್ಧರಿಸಲು ಶಿಕ್ಷಣ ತಜ್ಞರು, ತರಗತಿಯ ಶಿಕ್ಷಕರು, ಮಗುವಿನ ಆರೈಕೆಯ ಕಾರ್ಯಕರ್ತರು, ಹೆತ್ತವರು, ಸಮುದಾಯ ಮತ್ತು ಸರಕಾರ (ಸೂಕ್ತ ಹಂತಗಳಲ್ಲಿ ಅಥವಾ ಶ್ರೇಣಿಗಳಲ್ಲಿ) -ಹೀಗೆ ಎಲ್ಲರನ್ನೂ ಒಳಗೊಳ್ಳುವುದು ಅವಶ್ಯ. ಶಿಕ್ಷಣ ತಜ್ಞರು ಮೂಲ ಮಾಹಿತಿಗಳನ್ನು ಒದಗಿಸಬಲ್ಲರು; ಹೆತ್ತವರ ಅಗತ್ಯಗಳು ಮತ್ತು ಅಭಿಪ್ರಾಯಗಳನ್ನು ಗೌರವಪೂರ್ವಕವಾಗಿ ಕೇಳಿಸಿಕೊಳ್ಳಬೇಕು; ಶಿಕ್ಷಕರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ನಿರ್ವಹಿಸಬೇಕು; ಜೊತೆಗೆ, ಮಹಿಳೆಯರನ್ನು ತೊಡಗಿಸಿಕೊಳ್ಳುವುದಕ್ಕೆ ವಿಶೇಷ ಪ್ರಾಧಾನ್ಯತೆಯನ್ನು ನೀಡುವ ನಿಟ್ಟಿನ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಒಂದು ಅತ್ಯಗತ್ಯ ಅವಶ್ಯಕತೆಯೆಂದು ಪರಿಗಣಿಸಬೇಕು. ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ (Convention on the Rights of the Child-CRC) ಪ್ರತಿಪಾದಿಸಿದಂತೆ, ಸರಕಾರವು ಅಭಿವೃದ್ಧಿ ಮತ್ತು ಶಿಕ್ಷಣವನ್ನು ಕುರಿತ ಮಕ್ಕಳ ಹಕ್ಕುಗಳನ್ನು ಕಾಯುವ ಮತ್ತು ಸಂರಕ್ಷಿಸುವ ಪಾತ್ರವನ್ನು ನಿರ್ವಹಿಸತಕ್ಕದ್ದು.




**ಚಿತ್ರ 3.1: ಗುಣಮಟ್ಟವನ್ನು ಕಾಯ್ದುಕೊಳ್ಳುವ ತಂತ್ರಗಳು**

Quality - ಗುಣಮಟ್ಟ
Early childhood care & education - ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಗುಣಮಟ್ಟ
Research– ಸಂಶೋಧನೆ

Curricuum for developmentally appropriate stimulation and learning programmes – ಬೆಳವಣಿಗೆಯ ದೃಷ್ಟಿಯಿಂದ ಸೂಕ್ತವಾಗಿ ಪ್ರಚೋದನೆ ನೀಡುವ ಪಠ್ಯಕ್ರಮ ಮತ್ತು ಕಲಿಕಾ ಯೋಜನೆಗಳು

Setting up norms & standards – ನಿಯಮಗಳು ಮತ್ತು ಮಾನದಂಡಗಳನ್ನು ರೂಪಿಸುವುದು

Regulations– ನಿಯಂತ್ರಣಗಳು

Quality workforce – ಗುಣಮಟ್ಟದ ಕಾರ್ಯಪಡೆ

Resources – ಸಂಪನ್ಮೂಲಗಳು

Advocacy – ಸಕ್ರಿಯ ಬೆಂಬಲ

### 3.3.2 ನಿಯಂತ್ರಣ ವ್ಯವಸ್ಥೆ

ಹಿಂದಿನ ಪುಟಗಳಲ್ಲಿನ ಪರಿಶೀಲನೆಗಳು ECCEಯ ಗುಣಮಟ್ಟವು ಅದರಲ್ಲೂ ಮುಖ್ಯವಾಗಿ ಖಾಸಗಿ ಕ್ಷೇತ್ರಗಳಲ್ಲಿನ ಶಾಲೆಗಳ ಗುಣಮಟ್ಟವು ಕಳಪೆಯಾಗಿರುವುದನ್ನು ಸ್ಪಷ್ಟವಾಗಿ ಹೊರಗೆಡಹುತ್ತವೆ. ಸರಕಾರವು ಅಣಬೆಗಳಂತೆ ಏಳುತ್ತಿರುವ ಕಳಪೆ ಗುಣಮಟ್ಟದ ECCE ಯೋಜನೆಗಳನ್ನು ಸಮರ್ಪಕ ನಿಯಂತ್ರಣ ವ್ಯವಸ್ಥೆಗಳ ಮೂಲಕ ನಿಯಂತ್ರಿಸುವ ಜವಾಬ್ದಾರಿಯನ್ನು ಹೊರುವುದು ಅತ್ಯಾವಶ್ಯಕ. ಸಾರ್ವಜನಿಕ, ಖಾಸಗಿ ಮತ್ತು ಸ್ವಯಂಸೇವಾ ಕ್ಷೇತ್ರಗಳನ್ನು ನಿರ್ವಹಿಸಲು ಬೇರೆ ಬೇರೆ ತಂತ್ರಗಳು ಮತ್ತು ವಿಧಾನಗಳನ್ನು ರೂಪಿಸಬೇಕಿದೆ. ಅವನ್ನು ಈ ಕೆಳಗೆ ಸೂಚಿಸಲಾಗಿದೆ:

1. **ಸರಕಾರೀ ಕ್ಷೇತ್ರ:** ಸೌಲಭ್ಯ ಮತ್ತು ಅವಕಾಶಗಳಿಂದ ಅತೀ ಹೆಚ್ಚು ವಂಚಿತರಾದವರಿಗೆ ಮತ್ತು ಅಂಚಿಗೆ ತಳ್ಳಲ್ಪಟ್ಟವರಿಗೆ ಆದ್ಯತೆಗಳನ್ನು ನೀಡುತ್ತ, ಅಗತ್ಯಕ್ಕೆ ತಕ್ಕಂತೆ ವಿವಿಧ ಸರಕಾರಿ ಇಲಾಖೆಗಳ ಮೂಲಕ, ನಿರ್ದಿಷ್ಟ ಸಂದರ್ಭಗಳನ್ನು, ಪ್ರಸ್ತುತತೆಯನ್ನು ಗಮನದಲ್ಲಿಟ್ಟುಕೊಂಡು, ಮತ್ತು ಸಂದರ್ಭಕ್ಕೆ ತಕ್ಕಂತೆ ಯೋಜನೆಯನ್ನು ಮಾರ್ಪಾಡು ಮಾಡಿಕೊಳ್ಳುತ್ತ ಉತ್ತಮ ಗುಣಮಟ್ಟದ ಸೇವೆಗಳನ್ನು ನೇರವಾಗಿ ಒದಗಿಸುವುದು.
2. **ಖಾಸಗಿ ಕ್ಷೇತ್ರ:** ವೈವಿಧ್ಯಮಯ ಸೇವೆಗಳನ್ನು ಪ್ರೋತ್ಸಾಹಿಸುವುದು, ಮಾರುಕಟ್ಟೆಯ ಸಾಮರ್ಥ್ಯವನ್ನು ಅವಲಂಬಿಸಿ ವೆಚ್ಚವನ್ನು ನಿರ್ಧರಿಸಲು ಅನುವು ಮಾಡಿಕೊಡುವುದು, ಆದರೆ ಅದೇ ಹೊತ್ತಿಗೆ ನಿಯಮಗಳು ಮತ್ತು ಮಾನದಂಡಗಳಿಗೆ ಬದ್ಧತೆಯನ್ನು ಖಚಿತಪಡಿಸಿಕೊಳ್ಳುವುದೂ ಅವಶ್ಯವಾಗುತ್ತದೆ. ದುರ್ಬಲರ ಶೋಷಣೆಯನ್ನು ತಡೆಗಟ್ಟುವುದು ಮತ್ತು ಸೂಕ್ತ ನಿಯಂತ್ರಣದೊಂದಿಗೆ ಪಂಥೀಯ ಮತ್ತು ನಿಷೇಧಕ ಪದ್ಧತಿಗಳನ್ನು ವಿರೋಧಿಸುವುದು.
3. **ಸ್ವಯಂಸೇವಾ ಕ್ಷೇತ್ರ:** ವೈವಿಧ್ಯಮಯ ಸೇವೆಗಳನ್ನು ಪ್ರೋತ್ಸಾಹಿಸುವುದು, ಉತ್ತೇಜಿಸುವುದು, ಬೆಂಬಲ ನೀಡುವುದು, ಆದರೆ ಅದೇ ಸಮಯದಲ್ಲಿ ಕನಿಷ್ಠ ಗುಣಮಟ್ಟದ ನಿರ್ವಹಣೆಯನ್ನು ಕಾಯ್ದುಕೊಳ್ಳುವುದು, ಮತಧರ್ಮಗಳನ್ನು ಆಧರಿಸಿ ದೂರವಿಡುವ ಪ್ರವೃತ್ತಿಗಳನ್ನು ನಿಯಂತ್ರಣ ವ್ಯವಸ್ಥೆಯ ಮೂಲಕ ವಿರೋಧಿಸುವುದು ಅವಶ್ಯ. ಕಷ್ಟಕರ ವಿಭಾಗಗಳನ್ನು ಪ್ರವೇಶಿಸಲು ಉತ್ತೇಜಕಗಳನ್ನು ನೀಡುವುದು ಮತ್ತು ಹೊಸಬಗೆಯ ಅಭ್ಯಾಸಗಳನ್ನು ರೂಪಿಸುವುದು.

ಖಾಸಗಿ ಕ್ಷೇತ್ರಗಳಲ್ಲಿನ ಕನಿಷ್ಠ ಮಾನದಂಡಗಳನ್ನು ಖಾತರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಪರವಾನಗಿಯನ್ನು ನೀಡುವ ವಿಧಾನವು ಹಲವು ದೇಶಗಳಲ್ಲಿ ಚಾಲ್ತಿಯಲ್ಲಿದೆ. ಆದರೆ ಭಾರತದಲ್ಲಿ ಈ ಉದ್ದೇಶಕ್ಕಾಗಿ ಅವಶ್ಯವಿರುವ ಬೃಹತ್ ಆಡಳಿತ ವ್ಯವಸ್ಥೆ ಮತ್ತು ಪರವಾನಗಿ ನೀಡುವ ವ್ಯವಸ್ಥೆಯಲ್ಲಿ ನಡೆಯಬಹುದಾದ ಅಕ್ರಮಗಳ ಸಾಧ್ಯತೆಗಳನ್ನು ಪರಿಗಣಿಸಿದಲ್ಲಿ, ಈ ಪದ್ದತಿಯು ಭಾರತದ ಸಂದರ್ಭದಲ್ಲಿ ಕಾರ್ಯಸಾಧ್ಯವಾಗುವುದಿಲ್ಲ. ಈ ಮಧ್ಯೆ, ನೋಂದಣಿಯು(ರಿಜಿಸ್ಟ್ರೇಶನ್) ಒಂದು ವಿಧಾನವಾಗಿದ್ದು, ಯೋಜನೆಗಳ ನೋಂದಣಿಯು ಕಡ್ಡಾಯವಾಗಿದೆ. ಅದಕ್ಕೆ ಸಂಬಂಧಿಸಿದ ನಿರ್ದಿಷ್ಟ ನಿಯಮಗಳನ್ನು ಪಾಲಿಸಬೇಕು. ಆದರೆ ಅದಕ್ಕೆ ಸಂಬಂಧಿಸಿದ ಕನಿಷ್ಠ ಅವಶ್ಯಕತೆಗಳನ್ನು ಒದಗಿಸುವ ನಿಟ್ಟಿನ ಆಡಳಿತ ಮಂಡಳಿಯ ಇಚ್ಛೆಯನ್ನು ಇದು ಬಹುವಾಗಿ ಅವಲಂಬಿಸಿದೆ. ಜೊತೆಗೆ ಪಾಲಕರು ಅಕ್ರಮಗಳನ್ನು  ವರದಿ ಮಾಡಬೇಕು. ಅಂತಹ ಅಕ್ರಮಗಳು ನಡೆದಿದ್ದು ಸಾಬೀತಾದರೆ ಆ ಯೋಜನೆಗಳ ನೋಂದಣಿಯನ್ನು ರದ್ದು ಮಾಡಬಹುದು. ಮೇಲುಸ್ತುವಾರಿ ಮತ್ತು ಮೇಲ್ವಿಚಾರಣೆಗಳೆರಡೂ ಮುಖ್ಯವಾದ ವಿಧಾನಗಳೇ ಆದರೂ ಈ ವಿಧಾನಗಳನ್ನು ಧನಸಹಾಯ ಮಾಡುವ ಏಜೆನ್ಸಿಗಳಿಗೆ ವರದಿ ಮಾಡುವಂತಹ ಯೋಜನೆಗಳಲ್ಲಿ ಸಾಮಾನ್ಯವಾಗಿ ಅಳವಡಿಸಿಕೊಳ್ಳಲಾಗುತ್ತದೆ. ಗುಣಮಟ್ಟವನ್ನು ನಿಯಂತ್ರಿಸಲು ಅಧಿಕೃತವಾಗಿ ಪ್ರಮಾಣೀಕರಿಸುವುದು ಒಂದು ಅತ್ಯುನ್ನತ ಮಟ್ಟದ ನಿಯಂತ್ರಣ ವ್ಯವಸ್ಥೆಯಾದರೂ ಅದನ್ನು ಜಾರಿಯಲ್ಲಿ ತರುವುದು ಬಹಳ ಕಷ್ಟದ ಕೆಲಸ. ಹಾಗಿದ್ದರೂ ಸ್ವ-ಮೌಲ್ಯಮಾಪನ ಮತ್ತು ಗುಣಮಟ್ಟವನ್ನು ಸುಧಾರಿಸಿಕೊಳ್ಳುವ ಮೂಲಕ ಯೋಜನೆಗಳನ್ನು ನಿರ್ವಹಿಸಿದಲ್ಲಿ, ಅದು ಉತ್ತಮ ಫಲಿತಾಂಶಗಳನ್ನು ನೀಡಬಲ್ಲದು.

ನಾವು ಎಳೆಯ ಮಕ್ಕಳ ಬೆಳವಣಿಗೆಯನ್ನು ನಿರ್ವಹಿಸುವಾಗ, ಅವರಿಗೆ ಒದಗಿಸುವ ಯೋಜನೆಗಳ ಗುಣಮಟ್ಟವು ಸಮರ್ಪಕವಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಒಂದು ಹಾದಿ ಇರಲೇಬೇಕು, ಆಗ ಅದು ಮಕ್ಕಳ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ. ಇವತ್ತಿನ ಸನ್ನಿವೇಶದಲ್ಲಿ ಈ ಯೋಜನೆಗಳನ್ನು ಯಾರು ನಡೆಸಬೇಕು, ಹೇಗೆ ನಡೆಸಬೇಕು ಮತ್ತು ಮಕ್ಕಳ ಬೆಳವಣಿಗೆಗೆ ಸಂಬಂಧಿಸಿದಂತೆ ಸಕಾರಾತ್ಮಕ ಫಲಿತಾಂಶಗಳನ್ನು ಪಡೆಯಲು ಗರಿಷ್ಠ ಪ್ರಮಾಣದ ಗುಣಮಟ್ಟವನ್ನು ಸಾಧಿಸುವ ನಿಟ್ಟಿನಲ್ಲಿ ಹೇಗೆ ಕೆಲಸ ಮಾಡಬೇಕು ಎನ್ನುವುದರ ಬಗೆಗೆ ಸರಕಾರದಿಂದ ಸೂಚನೆಗಳಿಲ್ಲ,

ಮಹಾರಾಷ್ಟ್ರದ ಫೋರ್ಸಸ್ ಸಂಸ್ಥೆ (FORCES: Forum for Cre’che and Child Care Services), ಮುಂಬೈನ ಶಾಲಾಪೂರ್ವ ಶಿಕ್ಷಣದ ಭಾರತೀಯ ಅಸೋಸಿಯೇಶನ್ (IAPE:Indian Association for Preschool Education) ಮತ್ತು ಮಹಾರಾಷ್ಟ್ರ ಬಾಲ ಶಿಕ್ಷಣ ಪರಿಷದ್ ವತಿಯಿಂದ ರೂಪುಗೊಂಡ ಮಹಾರಾಷ್ಟ್ರದ ಮಕ್ಕಳ ಅಭಿವೃದ್ಧಿ ಮಂಡಳಿ (Maharastra Child Development Board), ನಿಯಂತ್ರಣ ವ್ಯವಸ್ಥೆಯನ್ನು ಕುರಿತ ಒಂದು

ಉದಾಹರಣೆಯಾಗಿದ್ದು, ಅದು ಸ್ವಯಂಪ್ರೇರಿತ ಯತ್ನವಾಗಿದೆ. ಈ ಮಂಡಳಿಯು ದಾಖಲಾತಿ, ನೋಂದಣಿ, ಮಾನ್ಯತೆ ಮತ್ತು ಅಧಿಕೃತ ಪ್ರಮಾಣೀಕರಣದ ಪ್ರಕ್ರಿಯೆಗಳನ್ನು ರೂಪಿಸಿದೆ. ಪ್ರತೀ ಹಂತದಲ್ಲೂ ನಿಯಮಗಳನ್ನು ಮಾಡಲಾಗಿದೆ, ಸ್ಟಾರ್ ವ್ಯವಸ್ಥೆಯ ಮೂಲಕ ನಿಗದಿತ ಅವಧಿಯವರೆಗೆ ಮಾನ್ಯತೆ ಹಾಗೂ ಅಧಿಕೃತ ಪ್ರಮಾಣೀಕರಣಗಳನ್ನು ನೀಡಲಾಗುತ್ತದೆ. ಈ ಬಗೆಯ ವ್ಯವಸ್ಥೆಯು ಸ್ವಯಂಪ್ರೇರಿತವಾಗಿ ಪಾಲ್ಗೊಳ್ಳಲು ಉತ್ತೇಜನ ಮತ್ತು ಕನಿಷ್ಠ ಪರಿಪಾಠಗಳಿಂದ ಉತ್ತಮ ಪರಿಪಾಠಗಳಿಗೆ ಉನ್ನತಿಯನ್ನು ಹೊಂದಲು ECCE ಕೇಂದ್ರಗಳಿಗೆ ಸಹಾಯವನ್ನು ನೀಡುತ್ತದೆ. ಎರಡನೆಯದಾಗಿ, ಸಂಸ್ಥೆಯೊಂದು ವ್ಯವಸ್ಥೆಯೊಳಗೆ ನೋಂದಣಿ ಮಾಡಿಕೊಳ್ಳುವುದರಿಂದ ಲಭ್ಯವಾಗುವ ಸಂಖ್ಯೆಗಳನ್ನು ಮತ್ತು ಅವು ಯಾವ ಪ್ರಕಾರದ ಯೋಜನೆಗಳು ಎಂಬ ದತ್ತಾಂಶಗಳನ್ನು ಒಟ್ಟುಗೂಡಿಸಲು ಸಹಾಯವಾಗುತ್ತದೆ. ಸಂಪೂರ್ಣವಾಗಿ ಹೊಸ ಪ್ರಕ್ರಿಯೆಗಳನ್ನು ಪರಿಚಯಿಸುವುದಕ್ಕಿಂತ ಅಥವಾ ಅಳವಡಿಸಿಕೊಳ್ಳುವುದರ ಬದಲು ಈ ವ್ಯವಸ್ಥೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಮಾರ್ಗದರ್ಶನ ನೀಡಿ, ಪರಿಷ್ಕರಣೆಯನ್ನೂ ಮಾಡಬಹುದು. ನಿಯಂತ್ರಣ ವ್ಯವಸ್ಥೆಯು ರಾಜ್ಯದ ಜವಾಬ್ದಾರಿಯಾಗಿರುವುದರಿಂದ ಈ ರೀತಿಯ ಮಕ್ಕಳ ಅಭಿವೃದ್ಧಿ ಮಂಡಳಿಗಳಿಗೆ ಸರಕಾರವು ಧನಸಹಾಯ ನೀಡುವುದರ ಜೊತೆಗೆ ಮಾನ್ಯತೆಯನ್ನೂ ನೀಡತಕ್ಕದ್ದು. ನಿಯಂತ್ರಣ ಪ್ರಕ್ರಿಯೆಯಲ್ಲಿ ಆರಂಭಿಕ ಬಾಲ್ಯದ ಬಗೆಗಿನ ವೃತ್ತಿಪರರನ್ನು ನೇಮಿಸಿಕೊಂಡರೆ ನ್ಯಾಯಯುತವಾದ ಮತ್ತು ಸಮರ್ಪಕ ಪರಿಪಾಠಗಳ ಪರಿಚಯ ಮತ್ತು ಅನುಷ್ಠಾನವನ್ನು ಖಚಿತಪಡಿಸಿದಂತಾಗುತ್ತದೆ.

### 3.3.3 ಸಮರ್ಥನೆ: ಪಾಲಕರು, ಕುಟುಂಬ ಮತ್ತು ಸಮುದಾಯದ ಸಬಲೀಕರಣ

ಉತ್ತಮ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ಮತ್ತು ಉತ್ತೇಜಿಸಲು ಪಾಲಕರು, ಸಮುದಾಯಗಳು ಮತ್ತು ಸ್ಥಳೀಯ ಪ್ರಾಧಿಕಾರಗಳನ್ನು ಒಳಗೊಳ್ಳುವ ನಿಟ್ಟಿನ ಪ್ರಮುಖ ಕ್ರಮವೆಂದರೆ, ECCEಯ ಬಗೆಗೆ, ಅದರ ಉದ್ದೇಶಗಳು, ಸ್ವರೂಪ, ಮತ್ತು ಉತ್ತಮ ಗುಣಮಟ್ಟದ ECCE ಸಲುವಾಗಿ ವಕಾಲತ್ತು ಮಾಡಲು ವಿಸ್ತೃತ ಜಾಗೃತಿಯನ್ನುಂಟುಮಾಡಬೇಕಾಗುತ್ತದೆ. ನಿರ್ದಿಷ್ಟವಾಗಿ ಈ ಕಾರ್ಯಕ್ಕಾಗಿ ಧನಸಹಾಯವನ್ನು ನೀಡಲು, ECCEಯಲ್ಲಿನ ಉತ್ತಮ ಪರಿಪಾಠಗಳ ಸಕಾರಾತ್ಮಕ ಉದಾಹರಣೆಗಳನ್ನು ಪ್ರೋತ್ಸಾಹಿಸಲು ಮತ್ತು ಕಳಪೆ ಗುಣಮಟ್ಟ ಹಾಗೂ ಅವುಗಳ ನಕಾರಾತ್ಮಕ ಪರಿಣಾಮಗಳ ಬಗೆಗೆ ನಕಾರಾತ್ಮಕ ಪ್ರಚಾರಕ್ಕಾಗಿ ಸಮೂಹ ಮಾಧ್ಯಮಗಳನ್ನು ಒಳಗೊಳ್ಳುವ ಬಗ್ಗೆ ಇಲ್ಲಿ ಸರಕಾರವು ಪ್ರಮುಖ ಪಾತ್ರವನ್ನು ವಹಿಸತಕ್ಕದ್ದು.

ಮೊದಲನೆಯದಾಗಿ, ಎಲ್ಲಾ ರೀತಿಯ, ಎಲ್ಲ ಹಂತದ ಪಾಲಕರಿಗೆ, ಅಂದರೆ ಸಾಮಾನ್ಯ ಜನತೆಗೆ ತಮ್ಮ ಮಕ್ಕಳ ಬದುಕಿನ ಈ ಅವಧಿಯ ಮಹತ್ವದ ಬಗೆಗೆ ಅಥವಾ, ತಮ್ಮ ಮಕ್ಕಳ ಬೆಳವಣಿಗೆಯನ್ನು ಹೇಗೆ ಉತ್ತೇಜಿಸಬಹುದು ಎನ್ನುವುದರ ಬಗೆಗೆ ಬಹಳ ಕಡಿಮೆ ಅರಿವಿದೆ, ಅಥವಾ ಏನೂ ತಿಳಿದಿಲ್ಲ ಎನ್ನಬಹುದು. ಜೊತೆಗೆ ತಮ್ಮ ಮಕ್ಕಳಿಗೆ ಬಹಳ 'ಮುಂಚಿನಿಂದಲೇ ಶಿಕ್ಷಣವನ್ನು ಆರಂಭಿಸಿದರೆ' ನಂತರದ ಅವರ ಶೈಕ್ಷಣಿಕ

ಸಾಧನೆಗಳಿಗೆ ಸಹಾಯವಾಗುತ್ತದೆ, ಮತ್ತು ಸಮಾಜದಲ್ಲಿ ಮೇಲ್ಮುಖ ಚಲನೆಗೆ ಅನುಕೂಲವಾಗುತ್ತದೆ ಎಂಬ ನಂಬಿಕೆಯ ನಿಟ್ಟಿನಲ್ಲಿ ಪಾಲಕರು ಪ್ರಭಾವಿತರಾಗುತ್ತಿದ್ದಾರೆ. ಪರಿಣಾಮಕಾರಿ ECCE ಯೋಜನೆಗಳ ಪಾತ್ರ, ವಿಷಯ, ಮತ್ತು ಪ್ರಕ್ರಿಯೆಗಳ ಬಗೆಗೆ ದೀರ್ಘಕಾಲೀನ ಸಮರ್ಥನೆಯಿಲ್ಲದ ಕಾರಣ, ಲಭ್ಯವಿರುವ ಏಕೈಕ ಮಾದರಿಯೆಂದರೆ 'ಔಪಚಾರಿಕ' ಪೂರ್ವಪ್ರಾಥಮಿಕ ಶಾಲೆ. ಇದು ಕೇವಲ ಮಕ್ಕಳ 2 ಅಥವಾ 3ನೇ ವರ್ಷದಿಂದ 'ಓದು, ಬರಹ ಮತ್ತು ಅಂಕಗಣಿತ'(Three 'R's)ವನ್ನು ಯಾಂತ್ರಿಕವಾಗಿ ಕಲಿಸಲು ಪ್ರಯತ್ನಿಸುತ್ತದೆ ಹೀಗಾಗಿ, ಇದು ಬರಿಯ ಕಂಠಪಾಠದೊಂದಿಗೆ ಕೊನೆಗೊಳ್ಳುತ್ತದೆ. ಮತ್ತೊಂದು ನಿಟ್ಟಿನ ಸಾರ್ವಜನಿಕ ವಲಯದಲ್ಲಿ ಸರಿಯಾದ ಪರಿಕಲ್ಪನೆಗಳ ಬಗೆಗೆ ಕೇವಲ ತೋರಿಕೆಯ ಮಾತುಗಳನ್ನಾಡುತ್ತಾರೆ, ಪ್ರಾಯೋಗಿಕ ಹಂತದಲ್ಲಿ ಅವುಗಳ ಗ್ರಹಿಕೆ ಕಡಿಮೆ; ಏಕೆಂದರೆ, ಶಿಕ್ಷಕರಿಗೆ ಸರಿಯಾದ ತರಬೇತಿಯಿರುವುದಿಲ್ಲ, ಅವರ ಮೇಲುಸ್ತುವಾರಿಯೂ ಕಳಪೆ. ಅಸಮರ್ಪಕವಾದ ಕಲಿಕಾ ಸಾಮಗ್ರಿಗಳು ಶೋಚನೀಯ. ಹೀಗಾಗಿ ಸೇವೆಗಳ ವಾಸ್ತವಿಕ ಗುಣಮಟ್ಟವು ಕಳಪೆಯಾಗಿರುತ್ತದೆ. ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸಲು ಆದ್ಯತೆ ನೀಡುವ ಪಾಲಕರಿಗೆ ಹುಸಿ ಆಯ್ಕೆಗಳನ್ನು ನೀಡಲಾಗುತ್ತದೆಯಲ್ಲದೆ, ಇದಕ್ಕಾಗಿ ಅವರು ಹಣವನ್ನು ಪಾವತಿಸತಕ್ಕದ್ದು. ಮಕ್ಕಳನ್ನು ಸಾರ್ವಜನಿಕ ಶಾಲೆಗೆ ಕಳುಹಿಸಲು ಪಾಲಕರಿಗೆ ಕಳಪೆ ಗುಣಮಟ್ಟದ ಸೇವೆಗಳನ್ನು ಪಡೆಯದೇ ಬೇರೆ ಆಯ್ಕೆಯಿಲ್ಲ. ಆದ್ದರಿಂದ ಲಭ್ಯವಿರುವ ಎಲ್ಲಾ ಮಾಧ್ಯಮಗಳನ್ನು ಬಳಸಿ ಬೃಹತ್ ಪ್ರಮಾಣದಲ್ಲಿ ಜನಜಾಗೃತಿ ಆಂದೋಲನಗಳು ನಡೆಯಬೇಕಿದೆ.

ನೀಡುವ ಸಂದೇಶವು ಒಂದೇ ಆಗಿರತಕ್ಕದ್ದು – ಮಾನವರ ಬೆಳವಣಿಗೆ ಮತ್ತು ಮೆದುಳಿನ ವಿಕಾಸದ ನಿಟ್ಟಿನಲ್ಲಿ ಈ ಅವಧಿಯ ಮಹತ್ವ; ಆರಂಭಿಕ ಅಪೌಷ್ಟಿಕತೆ ಮತ್ತು ಅದನ್ನು ಕಡೆಗಣಿಸುವುದರ ಅಪಾಯಗಳು; ECCEಯ ಉದ್ದೇಶ, ವಿಷಯ, ವ್ಯಾಪ್ತಿ ಮತ್ತು ಅರ್ಥ; ಸೂಕ್ತ ವಯಸ್ಸಿಗೂ ಸಾಕಷ್ಟು ಮುಂಚೆಯೇ ವಯೋಮಾನಕ್ಕೆ ಸೂಕ್ತವಲ್ಲದ ಔಪಚಾರಿಕ ಶಿಕ್ಷಣವನ್ನು ಪರಿಚಯಿಸುವುದರ ಅಪಾಯಗಳು; ಮಗುವಿಗೆ ಪರಿಚಿತವಿರುವ ಭಾಷೆಯಲ್ಲಿ ಪಠ್ಯಕ್ರಮದ ನಿರ್ವಹಣೆಯ ಮಹತ್ವ; ಆರೈಕೆಯೊಂದಿಗಿನ ಆರೋಗ್ಯ ಮತ್ತು ಪೌಷ್ಟಿಕತೆಯ ಸಮನ್ವಯ, ಈ ಹಂತದಲ್ಲಿನ ಬೆಳವಣಿಗೆ ಮತ್ತು ಶಿಕ್ಷಣ; ಮಕ್ಕಳ ಹಿತಾಸಕ್ತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಿಥ್ಯಾಕಲ್ಪನೆಗಳನ್ನು ತೊಡೆದು ಹಾಕಿ ಖಚಿತವಾದ ಮಾಹಿತಿಯನ್ನು ಒದಗಿಸುವುದು. ಅದೇ ಕಾಲಕ್ಕೆ ಪಾಲಕರ ಆಕಾಂಕ್ಷೆಗಳು, ಕನಸುಗಳ ಬಗೆಗೂ ವಿಚಾರ ಮಾಡಬೇಕಿದೆ. ಕೆಲವೊಮ್ಮೆ ಪಾಲಕರ ಆಸೆಗಳು ಅವಾಸ್ತವಿಕವಾಗಿರಬಹುದು. ಒಂದು ವೇಳೆ ಕಲಿಕೆ ಮತ್ತು ಬೆಳವಣಿಗೆಯ ಒಟ್ಟಾರೆ ಸಂದರ್ಭದಲ್ಲಿ ECCEಯ ಮಹತ್ವವು ಪಾಲಕರಿಗೆ ಅರಿವಾದರೆ ಪೂರ್ವಪ್ರಾಥಮಿಕ ಹಂತದಲ್ಲಿ ಔಪಚಾರಿಕ ಬೋಧನೆ ಮತ್ತು ಕಲಿಕೆಯ ನಿಟ್ಟಿನ ಒತ್ತಡವು ಕಡಿಮೆಯಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಪಾಲಕರ ಒಳಗೊಳ್ಳುವಿಕೆಯು ಖಾಸಗಿ ಕ್ಷೇತ್ರದಲ್ಲಿ ಇಲ್ಲವೇ ಇಲ್ಲ ಎನ್ನಬಹುದು, ಅಲ್ಲಿ

ಪಾಲಕರನ್ನು ವಿರೋಧಿಸುವ ನಿಲುವನ್ನೇ ನೋಡಬಹುದು, ಜೊತೆಗೆ ಶಾಲೆ ಮತ್ತು ಪಾಲಕರ ನಡುವೆ ಸಂವಹನವೂ ಕಡಿಮೆ. ಮತ್ತೊಂದೆಡೆ, ಸಾರ್ವಜನಿಕ ಕ್ಷೇತ್ರದಲ್ಲಿ 'ಸಮುದಾಯದ ಪಾಲ್ಗೊಳ್ಳುವಿಕೆ' ಎಂಬ ಶೀರ್ಷಿಕೆಯಡಿಯಲ್ಲಿ ಸಾರ್ವಜನಿಕರಿಂದ ಕೊಡುಗೆಗಳನ್ನು ನಿರೀಕ್ಷಿಸಲಾಗುತ್ತದೆ. ಪಾಲಕರು ಮತ್ತು ಸಮುದಾಯದ ಶಿಕ್ಷಣದಿಂದ ಮೊದಲ್ಗೊಂಡು, ಸಮುದಾಯಕ್ಕೆ ಸಂಬಂಧಿಸಿದ ಇತರ ಸಮಸ್ಯೆಗಳನ್ನು ಮತ್ತು ಸೇವೆಗಳನ್ನು ಪ್ರಸ್ತುತಪಡಿಸಲು ಅಥವಾ ಪರಿಚಯಿಸಲು ECCEಯನ್ನು ಪ್ರವೇಶ ದ್ವಾರದಂತೆ ಬಳಸಿಕೊಳ್ಳುವ ಮತ್ತು ECCE ಸಲುವಾಗಿ ಸಮುದಾಯದ ಸಂಪನ್ಮೂಲಗಳನ್ನು ಸಂಘಟಿಸುವವರೆಗೆ ಸರ್ಕಾರೇತರ ಸಂಸ್ಥೆಗಳ ಕ್ಷೇತ್ರವು ಬಹುಶಃ ಸಮುದಾಯಗಳನ್ನು ಹಲವು ವಿಧಾನಗಳಲ್ಲಿ ಒಳಗೊಳ್ಳುತ್ತಾ, ಈ ದಿಶೆಯಲ್ಲಿ ಅತ್ಯಂತ ಮುಂದೆ ಸಾಗಿದೆ.

ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ECCE ಯೋಜನೆಗಳ ರೂಪರೇಖೆ, ಅನುಷ್ಠಾನ, ಮತ್ತು ಮೇಲ್ವಿಚಾರಣೆಯ ಪ್ರಕ್ರಿಯೆಯಲ್ಲಿ ಪಾಲಕರ ಮತ್ತು ಸಮುದಾಯಗಳ ಪಾಲ್ಗೊಳ್ಳುವಿಕೆಯು ಬಹಳ ಮುಖ್ಯವಾಗುತ್ತದೆ. ಯೋಜನೆಗಳ ರೂಪರೇಖೆ, ಅನುಷ್ಠಾನ, ಮೇಲುಸ್ತುವಾರಿ, ಶಿಕ್ಷಕರಿಗೆ ಬೆಂಬಲ, ಮತ್ತು ಸಂಪನ್ಮೂಲಗಳ ಸಂಘಟನೆಗೆ ಇದು ಸಮುದಾಯಗಳನ್ನು ಸಬಲೀಕರಿಸುತ್ತದೆ. ಈ ಕಾರ್ಯಕ್ಕೆ ಪಂಚಾಯತ್ ರಾಜ್ ವ್ಯವಸ್ಥೆಯಂತಹ ಸ್ಥಳೀಯ ಆಡಳಿತ ಸಂರಚನೆಗಳು ಸೂಕ್ತವಾಗುತ್ತವೆ. ಅಲ್ಲಿ ಪಾಲಕರು ತಮ್ಮ ಅಗತ್ಯಗಳು, ಆಸೆಗಳನ್ನು ನೇರವಾಗಿ ಚರ್ಚಿಸಬಹುದು, ಜೊತೆಗೆ ತಮ್ಮ ಸಮಸ್ಯೆಗಳು, ದೂರುಗಳನ್ನು ಮಂಡಿಸಬಹುದು. ಅಲ್ಲದೇ ಯೋಜನೆಗೆ ನೇರವಾಗಿ ತಮ್ಮ ದೇಣಿಗೆ ನೀಡುವ ಮೂಲಕ ಸಂಪನ್ಮೂಲಗಳನ್ನು ಸಂಘಟಿಸಲು ಸಹಾಯ ಮಾಡಬಹುದು.

ICDSನಂತಹ ಬೃಹತ್ ಪ್ರಮಾಣದ ಯೋಜನೆಗಳನ್ನು ಸಮುದಾಯ ಮಟ್ಟದಲ್ಲಿ ವಿಕೇಂದ್ರೀಕರಿಸಿ ಆ ವ್ಯವಸ್ಥೆ ಕಾರ್ಯನಿರ್ವಹಿಸಲು ಹೆಚ್ಚಿನ ಸ್ವಾಯತ್ತತೆಯನ್ನು ನೀಡಿ, ಆ ಮೂಲಕ ಸಮುದಾಯಗಳ ಅತ್ಯಧಿಕ ಪಾಲ್ಗೊಳ್ಳುವಿಕೆ, ಬೆಂಬಲವನ್ನು ಪಡೆದು ಸಂದರ್ಭಕ್ಕೆ ಒಗ್ಗುವಂತಹ ಮತ್ತು ವೈವಿಧ್ಯತೆಯನ್ನು ಒಳಗೊಂಡ ಪಠ್ಯಕ್ರಮನ್ನು ಹೊಂದಿದ ಭವಿಷ್ಯವನ್ನು ನಾವು ಯೋಜಿಸಬೇಕು. ಇದಕ್ಕೆ ಸಂಬಂಧಿಸಿದ ಸರಕಾರಿ ಇಲಾಖೆಯ ಪಾತ್ರವೇನೆಂದರೆ ಅದಕ್ಕೆ ಅಗತ್ಯವಿರುವ ನಿಯಮಗಳನ್ನು, ಮಾನದಂಡಗಳನ್ನು ನಿರ್ದಿಷ್ಟಪಡಿಸುವುದು; ಸಾಮರ್ಥ್ಯ ನಿರ್ಮಾಣ; ಸಂಪನ್ಮೂಲಗಳು, ಸಾಮಗ್ರಿಗಳು, ಮಾರ್ಗದರ್ಶನ, ಮೇಲ್ವಿಚಾರಣೆ ಮತ್ತು ಅದರೊಂದಿಗೆ ಆರ್ಥಿಕ ಬೆಂಬಲವನ್ನೂ ಒದಗಿಸುವುದು.

### 3.3.4 ಗುಣಮಟ್ಟದ ಕಾರ್ಯಪಡೆ

ಆರಂಭಿಕ ಬಾಲ್ಯದ ಯೋಜನೆಯನ್ನು ನಿರ್ವಹಿಸುವ ಸಿಬ್ಬಂದಿಗಳೇ ಆ ಯೋಜನೆಗಳ ಗುಣಮಟ್ಟವನ್ನು ನಿರ್ಧರಿಸುವ ಅತೀ ಮುಖ್ಯವಾದ ಏಕೈಕ ಅಂಗವೆನಿಸಿದ್ದಾರೆ, ಆದರೂ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇದು ಅತ್ಯಂತ ಕಡೆಗಣಿಸಲ್ಪಟ್ಟ ವಿಷಯವಾಗಿದೆ. ಅವರ ತರಬೇತಿಗೆ ಬಹಳ ಮಹತ್ವವಿದ್ದಾಗ್ಯೂ, ಅದರ ಮೇಲೆ ಒತ್ತು

ನೀಡುವುದಿಲ್ಲ. ECCEಯಲ್ಲಿ ಸಮರ್ಪಕ ತರಬೇತಿಯಿಲ್ಲದ ಅಥವಾ ತರಬೇತಿಯೇ ಇಲ್ಲದ 'ಶಿಕ್ಷಕ'ರಿಂದ ಸೃಷ್ಟಿಯಾದ ತೆರವುಗಳನ್ನು ತುಂಬಲು ಮತ್ತು ಹೊಸಬರಿಗೆ ತರಬೇತಿ ನೀಡಿ ಅವರನ್ನು ಸಮರ್ಥರನ್ನಾಗಿಸಲು ಬಹಳ ಸಮಯ ಹಿಡಿಯುತ್ತದೆ. ಆರಂಭಿಕ ಬಾಲ್ಯದ ಯೋಜನೆಗಳಲ್ಲಿ ಕೆಲಸ ಮಾಡಲು ಮಕ್ಕಳನ್ನು ಪ್ರೀತಿಸುವ ಯಾರೇ ಆಗಲಿ, ಅಥವಾ ತಾನೇ ಸ್ವತಃ ತಾಯಿಯಾದವಳು ಉತ್ತಮ ಸಿಬ್ಬಂದಿಯಾಗಬಲ್ಲರು ಎಂಬ ನಂಬಿಕೆಯು ಈಗಲೂ ಇದೆ. ಅಲ್ಲದೆ, ತರಬೇತಿಯ ಅವಧಿ, ವಿಧಾನಶಾಸ್ತ್ರ, ಸಿದ್ಧಾಂತ ಮತ್ತು ಅಭ್ಯಾಸದ ನಿಟ್ಟಿನ ಅನಾವರಣದ ನಿಟ್ಟಿನಲ್ಲಿ ಸಿಬ್ಬಂದಿಗೆ ನೀಡುವ ತರಬೇತಿಯೂ ವಿಭಿನ್ನವಾಗಿರುತ್ತದೆ. ಒಂದು ತುದಿಗೆ ವಿಶ್ವವಿದ್ಯಾಲಯ ಮತ್ತು ಸರಕಾರದಿಂದ ಮಾನ್ಯತೆ ಪಡೆದ ನಿಗದಿತ ಪಠ್ಯಕ್ರಮ ಮತ್ತು ಅವಧಿಯ ಕೋರ್ಸುಗಳಿದ್ದು, ಇಲ್ಲಿ ತರಬೇತಿ ನೀಡುವವರಿಗೆ ಮತ್ತು ಸಂಸ್ಥೆಗಳಿಗೆ[37] ಕೆಲವು ಮಾನದಂಡಗಳೂ ನಿಗದಿಯಾಗಿವೆ. ಆದರೆ ಇನ್ನೊಂದು ತುದಿಯಲ್ಲಿ ಖಾಸಗಿ ಸಂಸ್ಥೆಗಳು (ಜಾಗತೀಕರಣದ ಕಾಲದಲ್ಲಿ ದ್ವಿಗುಣಗೊಂಡಿವೆ) ತಮ್ಮದೇ ಸ್ವಂತ ಕೋರ್ಸುಗಳನ್ನು ನಡೆಸುತ್ತವೆ, ಅಲ್ಲಿ ಪಠ್ಯಕ್ರಮ ಮತ್ತು ಅವಧಿಗೆ ಸಂಬಂಧಿಸಿದಂತೆ ಯಾವ ಮಾನದಂಡಗಳೂ ಇರುವುದಿಲ್ಲ. ಅದರ ಪರಿಣಾಮವಾಗಿ ಚಿಕ್ಕ ಮಕ್ಕಳಿಗೆ ಆರೋಗ್ಯಪೂರ್ಣ ಯೋಜನೆಗಳನ್ನು ರೂಪಿಸಲು ಅಸಮರ್ಥರಾದಂತಹ ವ್ಯಕ್ತಿಗಳು ಹೊರಬರುತ್ತಾರೆ. (ಕೋಷ್ಟಕ 3.5 ನ್ನು ನೋಡಿ.)

**ಕೋಷ್ಟಕ 3.5: ECCE ಸಿಬ್ಬಂದಿಯ ಪ್ರಚಲಿತ ತರಬೇತಿ ಕಾರ್ಯಕ್ರಮಗಳು**

| | | |
|---|---|---|
| A. ಸರಕಾರ-ಎಲ್ಲಾ ಮೂರು ಹಂತಗಳು, ಅರೆ-ಸರಕಾರಿ ಮತ್ತು ಅನುದಾನಿತ ವಲಯ | ಯೋಜನೆ ಅಥವಾ ಕಾರ್ಯಕ್ರಮ ಆಧಾರಿತ | ಸಂಪೂರ್ಣ ಕಾರ್ಯಾತ್ಮಕ, ಅನುದಾನ ಪಡೆದ ವಲಯದ ಮೇಲ್ಮುಖ ಚಲನೆಗೆ ಅಥವಾ ಅದೇ ಕ್ಷೇತ್ರದಲ್ಲಿನ ಉದ್ಯೋಗಗಳಿಗೆ ಮಾನ್ಯತೆ ಕೊಡುವ ಯಾವುದೇ ಅವಕಾಶವಿಲ್ಲ. |
| B. ಸ್ವಯಂಸೇವಾ ವಲಯ | ಯೋಜನೆ ಅಥವಾ ಕಾರ್ಯಕ್ರಮ ಆಧಾರಿತ | ಗಾತ್ರದಲ್ಲಿ ಸಣ್ಣದು, ಆದರೆ ಗುಣಮಟ್ಟದಲ್ಲಿ ಉತ್ತಮವಾಗಿದೆ. ತರಬೇತಿ ಪಡೆದವರಿಗೆ ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿರುವುದರಿಂದ ಕೋರ್ಸುಗಳು ಕ್ರಮೇಣವಾಗಿ ಕಡಿಮೆಯಾಗುತ್ತಿವೆ. |
| C. ಖಾಸಗಿ ಕ್ಷೇತ್ರ | ಪೂರ್ವಪ್ರಾಥಮಿಕ ಹಾಗೂ ನರ್ಸರಿ ಶಿಕ್ಷಕರ ತರಬೇತಿ | -ನಿರ್ದಿಷ್ಟ ನಿಯಮಗಳಿಂದಾಗಿ, ಕೆಲವು ಉತ್ತಮ ಕಾರ್ಯಕ್ರಮಗಳಿಗೆ ಕುತ್ತಾಗಿದೆ.<br>- ನಿಯಮಗಳು ಅಥವಾ ಮಾನದಂಡಗಳಿಲ್ಲದ ಶಿಕ್ಷಕ ತರಬೇತಿ ಶಾಲೆಯ ರೂಪದಲ್ಲಿ |

[37] *Kaul, V. 1998*

| | | |
|---|---|---|
| | | ಹರಡಿಕೊಳ್ಳುತ್ತಿದೆ. |

ಆದರೆ ರಾಜ್ಯ ಸರ್ಕಾರವು ಸಿಬ್ಬಂದಿಗಳ ಅರ್ಹತೆಗಳನ್ನು ಅಥವಾ ಸಂಬಳವನ್ನು ಕುರಿತ ನಿಯಮಗಳನ್ನು ಹಾಗೂ ECCE ಸಿಬ್ಬಂದಿಯನ್ನು ಶಿಕ್ಷಕರೆಂದು ಗುರುತಿಸಲು ಮಾರ್ಗಸೂಚಿಗಳನ್ನು ರೂಪಿಸಿಲ್ಲವಾದ್ದರಿಂದ ತರಬೇತಿ ಹೊಂದಿದ ಸಿಬ್ಬಂದಿಗೆ ಯಾವ ಬೇಡಿಕೆಯೂ ಇಲ್ಲ. ಮುಂಬೈಯಲ್ಲೇ ದೈನಂದಿನ ಪಾಲನಾ ಕೇಂದ್ರದ 83% ಸಿಬ್ಬಂದಿ ಯಾವ ತರಬೇತಿಯನ್ನೂ ಹೊಂದಿರಲಿಲ್ಲ ಎನ್ನುವುದು ಕಂಡುಬಂದಿದೆ[38], ECCEಯ ಸರಕಾರಿ ಯೋಜನೆಗಳ ಅಥವಾ ಅನುದಾನ ಪಡೆದ ಯೋಜನೆಗಳ 37% ಸಿಬ್ಬಂದಿಯೂ ತರಬೇತಿ ಹೊಂದಿರಲಿಲ್ಲ. ತರಬೇತಿಯು ಒಂದು ತಿಂಗಳಿಂದ ಒಂದು ವರ್ಷದವರೆಗೆ ವಿಭಿನ್ನ ಅವಧಿಯನ್ನು ಹೊಂದಿದ್ದಿತು.[39],[40] ಈ ತರಬೇತಿ ಕಾರ್ಯಕ್ರಮಗಳಲ್ಲಿ ಮಕ್ಕಳ ಕಲಿಕೆ ಮತ್ತು ಬೆಳವಣಿಗೆಯನ್ನು ಕುರಿತ ಮಾಹಿತಿಗಳ ಕೊರತೆ ಸರ್ವೇಸಾಮಾನ್ಯ. ICDS ಯೋಜನೆಯು (ಇದಕ್ಕೂ ಮೊದಲು ಇದು, ನಾಲ್ಕು ತಿಂಗಳ ತರಬೇತಿ ಕಾರ್ಯಕ್ರಮವಾಗಿದ್ದು, ಈಗ ಅದರ ಅವಧಿಯು ಒಂದು ತಿಂಗಳು) ರಾಷ್ಟ್ರಮಟ್ಟದಲ್ಲಿ ಸಿಬ್ಬಂದಿಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಅತ್ಯುತ್ತಮವಾಗಿ ಸಂಘಟಿಸುತ್ತದೆ. ಆದರೂ ಪರಿಣಾಮಕಾರಿಯಾದ ಮಾನವ ಸಂಪನ್ಮೂಲವನ್ನು ತಯಾರು ಮಾಡಲು ವಿಫಲವಾಗಿದೆ ಎಂದು ಆಗಾಗ್ಗೆ ಅದನ್ನು ಟೀಕಿಸಲಾಗುತ್ತದೆ. ಅಂಗನವಾಡಿ ಕಾರ್ಯಕರ್ತರ ಪಠ್ಯಕ್ರಮವು ಮಕ್ಕಳ ಸಮಗ್ರ ಬೆಳವಣಿಗೆಯ ತತ್ವಗಳನ್ನೇ ಆಧರಿಸಿದ್ದರೂ ಕಾರ್ಯಕರ್ತರಿಗೆ ಆರಂಭಿಕ ಬಾಲ್ಯದ ಶಿಕ್ಷಣವನ್ನು ಕುರಿತು ಸೂಕ್ತ ವಿವರಗಳನ್ನು ಒದಗಿಸುವುದಿಲ್ಲ, ಹಾಗಾಗಿ ಕಾರ್ಯಕರ್ತರು ಚಟುವಟಿಕೆಗಳು ಮತ್ತು ಬೆಳವಣಿಗೆಯ ಪ್ರಕ್ರಿಯೆಯ ನಡುವಿನ ಸಂಬಂಧವನ್ನು ಗ್ರಹಿಸುವುದಿಲ್ಲ, ಅಥವಾ ತಮ್ಮದೇ ಸ್ವಂತದ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುವ ನಿಟ್ಟಿನಲ್ಲೂ ಸಕ್ರಿಯರಾಗಿರುವುದಿಲ್ಲ.[41] ಇತ್ತೀಚಿನ ದಿನಗಳಲ್ಲಿ ಖಾಸಗಿ ಶಾಲೆಗಳು ಬಿ.ಎಡ್ ಮತ್ತು ಡಿ.ಎಡ್ ಪದವಿಯ ಸಿಬ್ಬಂದಿಯನ್ನು ಆರಂಭಿಕ ಬಾಲ್ಯದ ಶಿಕ್ಷಕರನ್ನಾಗಿ ನೇಮಿಸಿಕೊಳ್ಳುತ್ತಿವೆ, ಆದರೆ ಇವರು ಮಕ್ಕಳ ಬೆಳವಣಿಗೆಯ ತತ್ವಗಳನ್ನು ಅನ್ವಯಿಸಲು, ಅಥವಾ ಎಳೆಯ ಮಕ್ಕಳಿಗೆ ಸೂಕ್ತವಾದ ಬೋಧನಾಕ್ರಮವನ್ನು ಬಳಸಲು ತರಬೇತಿ ಹೊಂದಿದವರಲ್ಲ.

1. ತರಬೇತಿ ಮತ್ತು ವೃತ್ತಿಸಂಬಂಧಿತ ಪ್ರಗತಿಯ ಜೊತೆಗೆ ಕೆಲಸದ ಸ್ಥಿತಿಗಳೂ ಸಂಬಂಧಪಟ್ಟಿವೆ. ರಾಜ್ಯದಾದ್ಯಂತ ನಡೆದ ಅಧ್ಯಯನಗಳಲ್ಲಿ ಕಂಡುಬಂದಂತೆ ಆರಂಭಿಕ ಬಾಲ್ಯದ ಅಭಿವೃದ್ಧಿ ಯೋಜನೆಗಳ ಸಿಬ್ಬಂದಿಗೆ

---

[38] *Datta, V. 2001 a)*

[39] *Datta, V. 2002*

[40] *Christina, J. R.1999*

[41] *Datta, V. 2001a*

ಬಹಳ ಕಡಿಮೆ ಸಂಬಳ ದೊರೆಯುತ್ತಿದ್ದು, ಅವರಿಗೆ ಸಾಮಾಜಿಕ ಸುರಕ್ಷೆ ಇಲ್ಲ, ವೃತ್ತಿಯಲ್ಲಿನ ಉನ್ನತಿಗೆ ಅವಕಾಶವಿಲ್ಲ, ಶಿಕ್ಷಕರೆಂಬ ಸ್ಥಾನಮಾನವೂ ಇರುವುದಿಲ್ಲ.[42],[43],[44] ಈ ಸಂಗತಿಗಳನ್ನು ಪರಿಗಣಿಸಿದರೆ, ಆರಂಭಿಕ ಬಾಲ್ಯದ ಕ್ಷೇತ್ರದಲ್ಲಿ ದುಡಿಯುವ ವೃತ್ತಿನಿರತರ ತರಬೇತಿಗೆ ಈ ಕೆಳಗಿನ ಕೆಲವು ವಿಷಯಗಳನ್ನು ಕುರಿತ ಹೊಸ ಆಲೋಚನೆ ಮತ್ತು ಜಾಗರೂಕ ಪರಿಗಣನೆಯು ಅವಶ್ಯ. ತರಬೇತಿ ಕಾರ್ಯಕ್ರಮಗಳು 8 ವರ್ಷದವರೆಗಿನ ಮಕ್ಕಳನ್ನು ಒಳಗೊಳ್ಳುವ ಯಾವುದೇ ಯೋಜನೆಯಲ್ಲಿಯೂ ಶಿಕ್ಷಕರಿಗೆ ಕಲಿಸುವ ಅವಕಾಶಗಳನ್ನು ಒದಗಿಸುವಂತಿರಬೇಕು.

2. ತರಬೇತಿಯು ಸಂದರ್ಭದ ಅಗತ್ಯಕ್ಕೆ ತಕ್ಕಂತೆ ರೂಪುಗೊಳ್ಳುವಂತಿರಬೇಕು, ಅದಕ್ಕಾಗಿ ಮಾಡ್ಯುಲರ್ ಕಾರ್ಯಕ್ರಮಗಳನ್ನು ರೂಪಿಸಬಹುದು. ಆಗ ಶಿಕ್ಷಕರು ಸರ್ಟಿಫಿಕೇಟ್ ಕೋರ್ಸಿನಿಂದ ಡಿಪ್ಲೊಮ, ಮತ್ತು ನಂತರ ಪದವಿಯವರೆಗೆ ಮುಂದುವರೆಯಬಹುದು. ಈ ಪ್ರತಿಯೊಂದು ಸಾಧನೆಗಳೂ ಅವರನ್ನು ನಿರ್ದಿಷ್ಟ ಕಾರ್ಯಕ್ರಮಗಳಿಗೆ ಅರ್ಹರನ್ನಾಗಿಸುತ್ತವೆ, ಅಂದರೆ ಅವರು ದೈನಂದಿನ ಪಾಲನಾ ಕೇಂದ್ರಗಳ ಶಿಕ್ಷಕರಾಗಬಹುದು, ಬಾಲವಾಡಿ ಶಿಕ್ಷಕರಾಗಬಹುದು ಅಥವಾ ಶಾಲಾ ಶಿಕ್ಷಕರಾಗಬಹುದು.
3. ಶಿಕ್ಷಕರು ಅಥವಾ ಆರೈಕೆ ಮಾಡುವವರ ಕೌಶಲ್ಯಗಳು ಮತ್ತು ಜ್ಞಾನವನ್ನು ಉನ್ನತೀಕರಿಸುವಂತಹ ಮಾಡ್ಯೂಲ್‌ಗಳನ್ನು ಸಿದ್ಧಪಡಿಸಬೇಕು. ಐದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರ ಶಿಕ್ಷಕರು ಪುನಶ್ಚೇತನದ ಕೋರ್ಸುಗಳನ್ನು ತೆಗೆದುಕೊಳ್ಳಲು ಶಕ್ತರಾಗತಕ್ಕದ್ದು.
4. ಪ್ರಚಲಿತ ತರಬೇತಿ ಕಾರ್ಯಕ್ರಮಗಳ ಜೊತೆಗೆ (ಬಿ.ಎಡ್, ಡಿ.ಎಡ್, ಎ.ಡಬ್ಲ್ಯು.ಡಬ್ಲ್ಯು, ಬಾಲಸೇವಿಕಾ ಮತ್ತು ಬೃಹತ್ ಸಂಖ್ಯೆಯ ಖಾಸಗಿ ತರಬೇತಿ ಕಾರ್ಯಕ್ರಮಗಳು) ಮತ್ತ್ಯಾವುದಾದರೂ ಹೊಸ ಉಪಕ್ರಮಗಳನ್ನು ಗಮನಿಸುವುದು.
5. ಪ್ರಚಲಿತ ತರಬೇತಿ ಸಂಸ್ಥೆಗಳು ಮತ್ತು ತರಬೇತಿ ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸಲು ಸ್ಪಷ್ಟವಾದ ರೂಪರೇಖೆಯನ್ನು ರೂಪಿಸಬೇಕು.
6. ಮೇಲ್ವಿಚಾರಕರು, ಸಹಾಯಕರು ಮತ್ತು ಇತರ ಸಿಬ್ಬಂದಿಗಳಿಗೆ ಸೂಕ್ತವಾಗಿ ಯೋಜಿಸಲಾದ ತರಬೇತಿಯ ಮಾಹಿತಿಗಳನ್ನು ಪರಿಚಯಿಸಬೇಕು.
7. ಕುಟುಂಬ ಪಾಲನಾ ಕೇಂದ್ರದ (family day care) ಕಾರ್ಯಕರ್ತರಂತಹ ಮಕ್ಕಳ ಆರೈಕೆಯ

ನಿಟ್ಟಿನ ಕೆಲವು ವರ್ಗದ ಕಾರ್ಯಕರ್ತರಿಗೆ ವಿಶೇಷ ಮಾಹಿತಿಗಳು ಅಗತ್ಯವಿರಬಹುದು.

---

[42] *Christina, J. R.1999*

[43] *Datta, V. 2001b*

[44] *Shanmugavelayutham, K. 2003*

ಎಲ್ಲಾ ವಲಯಗಳ, ಎಲ್ಲಾ ಪ್ರಕಾರದ, ಎಲ್ಲಾ ಹಂತಗಳ ಕಾರ್ಯಕ್ರಮಗಳಲ್ಲಿ ದುಡಿಯುವ ಆರಂಭಿಕ ಬಾಲ್ಯದ ವೃತ್ತಿಪರರಿಗೆ ನೀಡುವ ತರಬೇತಿಯನ್ನು ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು (DEE&L) ನಿರ್ವಹಿಸಬೇಕು. ತರಬೇತಿ ನೀಡುವ ಶಿಕ್ಷಕರ ಸಾಮರ್ಥ್ಯ ನಿರ್ಮಾಣ, ಕಲಿಸುವ ಮತ್ತು ಇತರ ಬೋಧನಾ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಸಂಪನ್ಮೂಲಗಳನ್ನು ಸೃಜನೆ, ಕ್ಷೇತ್ರಕಾರ್ಯದ ಅನುಭವಗಳಿಗೆ ಅವಕಾಶದ ಒದಗಣೆ ಮತ್ತು ಆರ್ಥಿಕ ಮತ್ತು ಸಾಂಸ್ಥಿಕ ಬೆಂಬಲಕ್ಕೆ ಆದ್ಯತೆ ನೀಡಬೇಕು. ತರಬೇತಿ ಸಾಮರ್ಥ್ಯದ[45] ನಿರ್ಮಾಣದ ಮೂಲತತ್ವಗಳನ್ನು ಈ ಕೆಳಗಿನಂತೆ ಮಂಡಿಸಬಹುದು:

- ವೈವಿಧ್ಯಮಯ ಸನ್ನಿವೇಶಗಳು, ಸಂದರ್ಭಗಳು, ಘಟಕಗಳು ಮತ್ತು ಹಂತಗಳನ್ನು ನಿರ್ವಹಿಸಲು ಸಾಧ್ಯವಾಗುವಂತಹ ವೈವಿಧ್ಯಮಯ ಅಗತ್ಯಗಳನ್ನು ಗಮನದಲ್ಲಿಡಬೇಕು. (ಸಹಾಯಕರಿಂದ ಮೊದಲ್ಗೊಂಡು ಶಿಕ್ಷಕ ತರಬೇತಿದಾರರವರೆಗೆ)
- ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಹೊಂದಾಣಿಕೆಯನ್ನು ಮತ್ತು ಹೊಸ ಆಲೋಚನೆಗಳನ್ನು ಪ್ರೋತ್ಸಾಹಿಸಿ.
- ಹಳೆಯ ಕಾಲದ, ಔಪಚಾರಿಕ ಮತ್ತು ಸೈದ್ಧಾಂತಿಕ ವಿಧಾನಗಳಿಗೆ ಜೋತುಬೀಳದೆ 'ಮಾಡಿ ಕಲಿಯುವ' ಪ್ರಾಯೋಗಿಕ ವಿಧಾನದ ತರಬೇತಿಗೆ ಅದರಲ್ಲೂ ನಿರ್ದಿಷ್ಟವಾಗಿ ತಳಮಟ್ಟದಲ್ಲಿ ಕೆಲಸ ಮಾಡುವ ಕಾರ್ಯಕರ್ತರಿಗೆ ನೀಡುವಂತಹ ತರಬೇತಿಗೆ ಒತ್ತು ನೀಡಿ.
- ಅಲ್ಪಾವಧಿಯ ಮತ್ತು ಮಧ್ಯಮ ಅವಧಿಯ ಕಾರ್ಯಕ್ರಮಗಳು, ಸೇವಾ ಪೂರ್ವದ ತರಬೇತಿಗಿಂತ ಸೇವೆಯಲ್ಲಿ ನಿರತರಾದವರಿಗೆ (in-service) ನೀಡುವ ತರಬೇತಿಗೆ ಒತ್ತು ನೀಡಬೇಕು.
- ಮುಖ್ಯವಾಗಿ ಖಾಸಗಿ ಕ್ಷೇತ್ರದಲ್ಲಿ ದೊಡ್ಡ ಸಂಖ್ಯೆಯ 'ತರಬೇತಿ ಪಡೆಯದ' ಕೆಲಸಗಾರರ ಅಗತ್ಯಗಳನ್ನು ಪೂರೈಸಲು ಹೊಸಬಗೆಯ ಮತ್ತು ಪ್ರಾಯೋಗಿಕ ರೂಪದ, ನಿರ್ದಿಷ್ಟ ಅವಧಿಯ ಸೇವಾ ನಿರತರ ಕೋರ್ಸುಗಳನ್ನು, ದೂರ ಶಿಕ್ಷಣ ಕೋರ್ಸುಗಳನ್ನು ರೂಪಿಸಿ.
- ವಿವಿಧ ಕಾರ್ಯಕರ್ತರನ್ನು ಅದರಲ್ಲೂ ಮುಖ್ಯವಾಗಿ ಶಿಕ್ಷಕರನ್ನು ಒಳಗೊಳ್ಳಲು ಪಾಲ್ಗೊಳ್ಳುವಿಕೆಯ ವಿಧಾನಗಳನ್ನು ಅಳವಡಿಸಿಕೊಂಡ ತರಬೇತಿಯ ವಿಧಾನಗಳು ಮತ್ತು ಕೋರ್ಸುಗಳನ್ನು ರೂಪಿಸಿ.
- ಉತ್ತಮ ಗುಣಮಟ್ಟದ ಸೇವೆಗಳನ್ನು ಒದಗಿಸುವ ಸ್ವ-ಉದ್ಯೋಗ ಮತ್ತು ಉದ್ಯೋಗವನ್ನು ಉತ್ತೇಜಿಸಲು ECCE ತರಬೇತಿಯನ್ನು ದೃಢೀಕರಿಸಿ ಮತ್ತು ಮಾನ್ಯಮಾಡಿ.
- ECCEಯಲ್ಲಿ ಅಂತರ-ವಿಭಾಗೀಯ ಅಭಿವೃದ್ಧಿ, ಸಹಭಾಜನ(sharing), ಹಾಗೂ ಸಂಪನ್ಮೂಲ ವಿಶೇಷಜ್ಞತೆ ಮತ್ತು ಸಂಪನ್ಮೂಲ ಸಾಮಗ್ರಿಗಳ ಸಂಪರ್ಕಜಾಲವನ್ನು ಬಲಪಡಿಸಿ.

---

[45] *Swaminathan, M. 2003*

- ಬೋಧನೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನಾಧರಿಸಿದ ಅಧ್ಯಾಪನೆಯ ವಿಧಾನಶಾಸ್ತ್ರವನ್ನು ರೂಪಿಸಲು ತರಬೇತಿದಾರರ ಸಾಮರ್ಥ್ಯ ನಿರ್ಮಾಣದ ಕಾರ್ಯಕ್ರಮವನ್ನು ಕೈಗೊಳ್ಳಿ.

ಈ ಮೇಲಿನ ಉದ್ದೇಶಗಳನ್ನು ಸಾಧಿಸಲು ಬಹುಮಾದರಿಗಳನ್ನುಳ್ಳ ತರಬೇತಿಯನ್ನು ರೂಪಿಸಿ ಜಾರಿಗೊಳಿಸಬೇಕು. ವೈವಿಧ್ಯಮಯ ಸಂದರ್ಭಗಳಲ್ಲಿನ ವಿವಿಧ ಯೋಜನೆಗಳಿಗೆ ಸೂಕ್ತವಾದ ತರಬೇತಿ ಪಡೆದ ಸಿಬ್ಬಂದಿಯನ್ನು ತಯಾರು ಮಾಡಬೇಕೆಂದರೆ ನಿರ್ದಿಷ್ಟ ಯೋಜನೆಯನ್ನು ಉದ್ದೇಶಿಸಿದ ವೃತ್ತಿ ತರಬೇತಿ ಕೋರ್ಸುಗಳು, ಮೊಬೈಲ್ ತರಬೇತಿ, ವಿಶ್ವವಿದ್ಯಾಲಯಗಳ ಔಪಚಾರಿಕ ಪದವಿ ಕೋರ್ಸುಗಳು, ದೂರ ಶಿಕ್ಷಣ, ಮತ್ತು ಅದೇ ರೀತಿಯ ಹಲವು ಬಗೆಯ ಮಾದರಿಗಳನ್ನು ಮಾನ್ಯ ಮಾಡಬೇಕು. (ಚಿತ್ರ 3.2ನ್ನು ನೋಡಿ.)

ECCE ಯೋಜನೆಗಳಲ್ಲಿನ ಸಿಬ್ಬಂದಿಯ ಗುಣಮಟ್ಟವು ಅವರಿಗೆ ನೀಡುವ ತರಬೇತಿಯ ಗುಣಮಟ್ಟವನ್ನು ಅವಲಂಬಿಸಿರುತ್ತದೆ. ಈಗ ದೇಶದಲ್ಲಿ ಶಿಕ್ಷಕ ತರಬೇತಿ ಸಂಸ್ಥೆಗಳಿಗೆ ಮಾನ್ಯತೆಯನ್ನು ನೀಡುವ ಒಂದೇ ವ್ಯವಸ್ಥೆಯೆಂದರೆ ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಮಂಡಳಿ (NCTE: National Council for Teacher Education). ಇಡೀ ದೇಶದಲ್ಲಿ ಒಟ್ಟು 68 ECCE ಕೇಂದ್ರಗಳಿವೆ. ಶಿಕ್ಷಕ ತರಬೇತಿ ಸಂಸ್ಥೆಗಳಿಗೆ ಮತ್ತು ಕೋರ್ಸುಗಳಿಗೆ ಅಧಿಕೃತವಾಗಿ ಮಾನ್ಯತೆ ನೀಡುವ ಇನ್ನೂ ಹೆಚ್ಚಿನ ಸೂಕ್ತ ವಿಧಾನಗಳನ್ನು ರೂಪಿಸಬೇಕಿದೆ. ತರಬೇತಿ ಸಂಸ್ಥೆಗಳ ಮೇಲ್ವಿಚಾರಣೆ ಮಾಡುವ ಸರಕಾರದ ಮಾನ್ಯತೆಯನ್ನು ಪಡೆದ ಮೇಲ್ವಿಚಾರಣಾ/ ಅಧಿಕೃತ ಮಾನ್ಯೀಕರಣದ ವ್ಯವಸ್ಥೆಯೊಂದನ್ನು ಸ್ಥಾಪಿಸಬೇಕಿದೆ. ಈ ವ್ಯವಸ್ಥೆಯು ಆರೈಕೆ ಮತ್ತು ಶಿಕ್ಷಣವನ್ನು ಕುರಿತಂತೆ, ECCE ಯೋಜನೆಯ ಸಿಬ್ಬಂದಿಗೆ ಅವಶ್ಯವಿರುವ ವಿವಿಧ ವಿವರಗಳನ್ನು ಪರಿಗಣಿಸಬೇಕಲ್ಲದೆ, ಅಧಿಕೃತ ಮಾನ್ಯತೆಯನ್ನು ನೀಡುವ ಪ್ರಕ್ರಿಯೆಗಳಲ್ಲಿ ಪರಿಣತರನ್ನು ಒಳಗೊಳ್ಳಬೇಕು.

**ಚಿತ್ರ 3.2: ಗುಣಮಟ್ಟದೆಡೆಗೆ**

ವಯೋಮಾನ

| | | |
|---|---|---|
| < 3 ವರ್ಷಗಳು | 3-5 ವರ್ಷಗಳು | 5-8 ವರ್ಷಗಳು |

ಯೋಜನೆಗಳ ಪ್ರಕಾರಗಳು

| | | |
|---|---|---|
| ದೈನಂದಿನ ಪಾಲನಾ ಕೇಂದ್ರ/ ಶಿಶುವಿಹಾರ/ಕುಟುಂಬ ಪಾಲನಾ ಕೇಂದ್ರ | ಬಾಲವಾಡಿ, ಅಂಗನವಾಡಿ, ನರ್ಸರಿ, ಕಿಂಡರ್‌ಗಾರ್ಟನ್ | ಶಾಲಾ ಶಿಕ್ಷಣ 1 - 2ನೇ ತರಗತಿ |

ಸಿಬ್ಬಂದಿಗಳ ಹಂತಗಳು

| | | | |
|---|---|---|---|
| ಸಿಬ್ಬಂದಿಗೆ ತರಬೇತಿ ನೀಡುವ ತರಬೇತಿದಾರರು ↔ | ಆಡಳಿತಗಾರ/ಮೇಲ್ವಿಚಾರಕ | ಶಿಕ್ಷಕ | ಸಹಾಯಕ |

ತರಬೇತಿಯ ಮಾದರಿಗಳು

| | | | | | | |
|---|---|---|---|---|---|---|
| ಸೇವಾಪೂರ್ವ | ಸೇವಾ ನಿರತ | ಪುನಶ್ಚೇತನದ ಕೋರ್ಸುಗಳು | ವಿಸ್ತರಿಸಲ್ಪಟ್ಟ ಪುನಶ್ಚೇತನದ ಕೋರ್ಸುಗಳು | ದೂರ ಶಿಕ್ಷಣ | ಗತಿಶೀಲ ತರಬೇತಿ | ಶಿಕ್ಷಣದ ಮುಂದುವರಿಕೆ |

ತರಬೇತಿ ಸಂಸ್ಥೆಗಳು

| | | | |
|---|---|---|---|
| ಸರಕಾರಿ, DIET, ICDS, MLTC, AWTC | ಖಾಸಗಿ ಸಂಸ್ಥೆಗಳು | ವಿಶ್ವವಿದ್ಯಾಲಯಗಳು, ಸಂಶೋಧನಾ ಮತ್ತು ತರಬೇತಿ ಸಂಸ್ಥೆಗಳು | ಸರ್ಕಾರೇತರ ಸಂಸ್ಥೆ |

ಅಧಿಕೃತ ಮನ್ನಣೆ

| |
|---|
| ಅಧಿಕೃತ ಮನ್ನಣೆಯನ್ನು ನೀಡಲು ಮತ್ತು ಎಲ್ಲ ಸಂಪನ್ಮೂಲಗಳನ್ನು ಒಮ್ಮುಖಗೊಳಿಸಲು ಮಾನ್ಯತೆಯನ್ನು ಪಡೆದ ಮತ್ತು ಅಧಿಕಾರ ಹೊಂದಿದ ಸರಕಾರಿ ಸಂಸ್ಥೆ |

DIET: ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (District Institute for Education and Training)
ICDS: ಸಮಗ್ರ ಶಿಶು ಅಭಿವೃದ್ಧಿ ಯೋಜನೆ (Integrated Child Development Services)
MLTCs: ಮಧ್ಯ ಹಂತದ ತರಬೇತಿ ಸಂಸ್ಥೆಗಳು (Middle-Level Training Centers)
AWTCs: ಅಂಗನವಾಡಿ ತರಬೇತಿ ಸಂಸ್ಥೆ (Anganwadi Training Centers)

### 3.3.5 ಪಠ್ಯಕ್ರಮ


ಒಂದು ಉತ್ತಮ ಪಠ್ಯಕ್ರಮವು ಮಕ್ಕಳ ಕಲಿಕೆ ಮತ್ತು ಬೆಳವಣಿಗೆಗೆ ಪುಷ್ಟಿ ನೀಡುವ ಎಲ್ಲಾ ಸಂಗತಿಗಳನ್ನೂ ಒಳಗೊಳ್ಳುತ್ತದೆ. ಕಲಿಕೆಯ ಪ್ರಕ್ರಿಯೆಗೆ ಮಗುವನ್ನು ಸಬಲೀಕರಿಸುವ ಮತ್ತು ಅವಳು ಅದರಲ್ಲಿ ಸಕ್ರಿಯವಾಗಿ ಭಾವಹಿಸುವಂತೆ ಮಾಡುವ ಮಗು-ಕೇಂದ್ರಿತ ವಿಧಾನವು ಬೇಕಾಗುತ್ತದೆ. ಭಾರತದಲ್ಲಿ ಸಾಂದರ್ಭಿಕ

ವೈವಿಧ್ಯತೆಗಳನ್ನು ಮುಖ್ಯವಾಗಿ ಪರಿಗಣಿಸಿ, ಪಠ್ಯಕ್ರಮವು ಸಾಂದರ್ಭಿಕ ಅಗತ್ಯಗಳಿಗೆ ತಕ್ಕಂತೆ ಮಾರ್ಪಡುವಂತಿರಬೇಕು. ಹೀಗೆ ಪಠ್ಯಕ್ರಮವು ಸಾಮಾಜಿಕವಾಗಿ ಸಹಾಯಕವೆನಿಸಿದ, ಭಾಷೆಯ ಸಮೃದ್ಧಿಯನ್ನು ಹೆಚ್ಚಿಸುವ, ಮಕ್ಕಳನ್ನು ಸುರಕ್ಷೆ ಮತ್ತು ನೆಮ್ಮದಿಯ ವಾತಾವರಣದಲ್ಲಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ತೊಡಗಿಸಿಕೊಳ್ಳುವ ರೀತಿಯದ್ದಾಗಿರಬೇಕು. 5ನೇ ವಿಭಾಗದಲ್ಲಿ ಪಠ್ಯಕ್ರಮವನ್ನು ವಿವರವಾಗಿ ಚರ್ಚಿಸಲಾಗಿದೆ.

### 3.3.6 ಸಂಶೋಧನೆ

ನೀತಿಗಳು, ಕಾರ್ಯರೀತಿ(practice) ಮತ್ತು ಸಂಶೋಧನೆಗಳನ್ನು ಸಶಕ್ತವಾಗಿ ಸಂಪರ್ಕಿಸದಿದ್ದಲ್ಲಿ, ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿಯು ಸಾಧ್ಯವಾಗುವುದಿಲ್ಲ. (ಚಿತ್ರ 3.3ನ್ನು ನೋಡಿ)

ಸಂಶೋಧನೆಯು ನೀತಿಗಳು ಮತ್ತು ಯೋಜನೆಯ ಕಾರ್ಯರೀತಿಗಳಿಗೆ ತಲುಪಬೇಕು. ಅದೇ ಕಾಲಕ್ಕೆ ಯೋಜನೆಯ ಕಾರ್ಯರೀತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಅವು ಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲು ಮತ್ತು ECCEಯ ಉತ್ತಮ ಕಾರ್ಯರೀತಿಗಳನ್ನು ಬಲಪಡಿಸಲು ಅಧ್ಯಯನ ಮಾಡಬೇಕು. ಇಂದು ಹೆಚ್ಚಿನ ದೇಶಗಳು ಮಕ್ಕಳನ್ನು ಕುರಿತ ಸಂಶೋಧನೆಯ ಮೇಲೆ ಹೆಚ್ಚು ಗಮನಹರಿಸತೊಡಗಿವೆ, ಮತ್ತು ಯೋಜನೆಗಳಿಗೆ ಮಾರ್ಗದರ್ಶನವನ್ನು ನೀಡಲು ಸಮೃದ್ಧ ದತ್ತಾಂಶ ಸಂಚಯವನ್ನೂ ರೂಪಿಸುತ್ತಿವೆ. ನಿರ್ದಿಷ್ಟ ಮಧ್ಯಪ್ರವೇಶಗಳಿಗೆ ಸಂಶೋಧನೆಗಳು ಮಹತ್ವಪೂರ್ಣ ಮಾರ್ಗದರ್ಶನ ನೀಡುತ್ತವೆ, ಅಥವಾ ಈ ಮಧ್ಯಪ್ರವೇಶಗಳ ವೆಚ್ಚ ಪರಿಣಾಮಕಾರಿತ್ವವನ್ನು ಅರ್ಥ ಮಾಡಿಕೊಳ್ಳಲೂ ಸಹಾಯ ಮಾಡುತ್ತವೆ. ಭಾರತದಲ್ಲಿ ಕೂಡಾ ಸಾಮಾನ್ಯ ಪ್ರಮಾಣದಲ್ಲಿ ಸಂಶೋಧನೆ ನಡೆಯುತ್ತದೆಯಾದರೂ ಅದು ನೀತಿಗಳು ಮತ್ತು ಯೋಜನೆಗಳಿಗೆ ತಲುಪುವುದಿಲ್ಲ.




**ಚಿತ್ರ 3.3: ಸಂಶೋಧನೆ, ನೀತಿ ಮತ್ತು ಕಾರ್ಯರೀತಿ**

Practice - ಕಾರ್ಯರೀತಿ, Research – ಸಂಶೋಧನೆ, Policy - ನೀತಿ

### 3.3.7 ಸಂಪನ್ಮೂಲಗಳು

ಮಕ್ಕಳ ಆರೈಕೆ ಮತ್ತು ಬೆಳವಣಿಗೆಗೆ ಸಂಬಂಧಿಸಿದಂತೆ ನಾವು ಮಾಡುವ ಹೂಡಿಕೆಗಳಲ್ಲಿ ರಾಜಿಯ ಪ್ರಶ್ನೆಯೆ ಬರುವುದಿಲ್ಲ. ಈ ಕ್ಷೇತ್ರಕ್ಕೆ ಹಣ, ಮಾನವ ಸಂಪನ್ಮೂಲ ಮತ್ತು ಕಲಿಕೆಯ ಅಥವಾ ಬೋಧನೆಯ ಸಾಮಗ್ರಿಗಳನ್ನು ವಿಫುಲವಾಗಿ ನೀಡತಕ್ಕದ್ದು.

**1. ಹಣ ಬೆಂಬಲ**

ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರಕಾರವು ತನ್ನ ಹೊಣೆಯಿಂದ ತಪ್ಪಿಸಿಕೊಳ್ಳುವಂತಿಲ್ಲವಾದರೂ ನಿಧಿಯನ್ನು ಹೆಚ್ಚಿಸಲು ವಿಭಿನ್ನ ತಂತ್ರೋಪಾಯಗಳನ್ನು ಅದು ರೂಪಿಸಬಹುದು. ಅವುಗಳಲ್ಲಿ ಕೆಲವು ಹೀಗಿವೆ:

- ಜಿಡಿಪಿಯ ನಿಗದಿತ ಶೇಕಡಾವಾರು ಭಾಗವನ್ನು ಅಂದರೆ ಕೊನೆಪಕ್ಷ 1%ರಷ್ಟನ್ನು ವಿನಿಯೋಗಿಸಬಹುದು.
- ಎಲ್ಲಾ ಉದ್ಯೋಗದಾತರಿಗೆ ಒಂದು ಸೆಸ್ ಅನ್ನು ರೂಪಿಸಬಹುದು.
- ರಾಜ್ಯಗಳಿಗೆ ವಿಭಾಗೀಯ ಅನುದಾನವನ್ನು (block grant) ನೀಡಬಹುದು.
- ಇತರ ಯೋಜನೆಗಳು ಅಥವಾ ಇಲಾಖೆಗಳಿಂದ ನಿಧಿಯನ್ನು ಒಗ್ಗೂಡಿಸಬಹುದು.

- ರಾಜ್ಯ ಮತ್ತು ಕೇಂದ್ರಗಳ ಸಹಭಾಗಿತ್ವವನ್ನು ಸೃಷ್ಟಿಸಬಹುದು.
- ಸ್ಥಳೀಯ ಮತ್ತು ಸಮುದಾಯದ ಸಂಪನ್ಮೂಲಗಳನ್ನು ಒಗ್ಗೂಡಿಸಬಹುದು.
- ECCE ನಿಧಿಯ ದೇಣಿಗೆಗಳಿಗೆ ತೆರಿಗೆ ಪ್ರೋತ್ಸಾಹನದ ಕೊಡುಗೆಗಳನ್ನು ನೀಡಬಹುದು.


**2. ಮಾನವ ಸಂಪನ್ಮೂಲದ ಅಭಿವೃದ್ಧಿ**

ಮಾನವ ಸಂಪನ್ಮೂಲದ ಅಭಿವೃದ್ಧಿಯನ್ನು ಸರಕಾರಿ ಇಲಾಖೆಗಳು, ಇತರ ಸಂಸ್ಥೆಗಳು, ಸಮುದಾಯ, ಮತ್ತು ಪಾಲಕರಿಂದ ನಿರ್ವಹಿಸತಕ್ಕದ್ದು. ಯೋಜನೆಯ ನೇರ ಹೊಣೆ ಇರುವವರಿಗೆ ನಿರಂತರವಾಗಿ ಯೋಜನೆಯ ಅಭಿವೃದ್ಧಿಯನ್ನು ಕುರಿತ ಸಲಹೆ ಮತ್ತು ಮಾಹಿತಿಗಳು ಬೇಕಾಗುತ್ತವೆ. ಇತರರು ಗುಣಮಟ್ಟದ ECCE ಯೋಜನೆಗಳ ಸಲುವಾಗಿ ಬೇಡಿಕೆಯನ್ನು ಸೃಷ್ಟಿಸಬೇಕು. ECCE ಯಾವತ್ತೂ ಯಾರದ್ದೂ ಅಲ್ಲದ ಶಿಶುವಾಗಿದೆ. ಈಗ ಎಲ್ಲಾ ಭಾಗೀದಾರರೂ ಅದು ತಮ್ಮದೆಂದು ಭಾವಿಸಿ ಪೋಷಿಸುವ ಅಗತ್ಯವಿದೆ.

**3. ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು**

ECCE ಪಠ್ಯಕ್ರಮವು ಚಟುವಟಿಕೆಯನ್ನು ಆಧರಿಸಿದೆ ಎಂಬ ಅಂಶವನ್ನು ಪರಿಗಣಿಸಿದಲ್ಲಿ, ಇದಕ್ಕಾಗಿ ಬಹಳಷ್ಟು ಸೃಜನಾತ್ಮಕ ಕಲಿಕಾ ಸಾಮಗ್ರಿಗಳನ್ನು ರೂಪಿಸುವ ಅಗತ್ಯವಿದೆ. ಶಿಕ್ಷಕರು ತಮ್ಮದೇ ಕಲಿಕಾ ಸಾಮಗ್ರಿಗಳನ್ನು ತಯಾರಿಸಿಕೊಳ್ಳುತ್ತಾರಲ್ಲದೆ, ಪರಿಸರದಲ್ಲಿ ಸಿಗುವಂತಹ ಸಂಪನ್ಮೂಲಗಳನ್ನು ಬಳಸಿಕೊಳ್ಳುತ್ತಾರಾದರೂ ದೈಹಿಕ ಚಟುವಟಿಕೆ ಮತ್ತು ಸಂಜ್ಞಾನಾತ್ಮಕ ಹಾಗೂ

ಭಾಷಾ ಕೌಶಲ್ಯಗಳಿಗೆ ಬೇಕಾಗುವ ಕೆಲವು ಮೂಲಭೂತ ಸಲಕರಣೆಗಳನ್ನು ಎಲ್ಲಾ ಯೋಜನೆಗಳಲ್ಲಿಯೂ ಒದಗಿಸಬೇಕಾಗುತ್ತದೆ (ಚಿತ್ರ 3.4ನ್ನು ನೋಡಿ.)




**ಚಿತ್ರ 3.4: ಕಲಿಕಾ/ ಬೋಧನಾ ಸಾಮಗ್ರಿಗಳ ಪ್ರಕಾರಗಳು**

Teaching and Learning Materials - ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು
Commercial - ವಾಣಿಜ್ಯಿಕ
Collected - ಸಂಗ್ರಹಿತ
Created - ತಯಾರಿಸಲ್ಪಟ್ಟದ್ದು

### 3.4 ಭಾಷೆಗೆ ಸಂಬಂಧಪಟ್ಟ ವಿಷಯಗಳು

ಸಂವಹನಕ್ಕೆ, ಮಾಹಿತಿ ವಿನಿಮಯಕ್ಕೆ, ಓದುವ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದಕ್ಕೆ, ಗ್ರಹಿಕೆಯೊಂದಿಗಿನ ಓದಿಗೆ, ಮತ್ತು ನಂತರದ ವರ್ಷಗಳಲ್ಲಿ ಶೈಕ್ಷಣಿಕವಾಗಿ ಯಶಸ್ಸನ್ನು ಸಾಧಿಸಲು ಭಾಷೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದರೂ ECCEಯ ಯೋಜನೆಗಳಲ್ಲಿ ಭಾಷೆಗೆ ಸಂಬಂಧಿಸಿದ ಚಟುವಟಿಕೆಗಳು ಮತ್ತು ಅನುಭವಗಳಿಗೆ ಹೆಚ್ಚಿನ ಗಮನ ನೀಡುತ್ತಿಲ್ಲ.

ಪರಿಕಲ್ಪನೆಗಳು ರೂಪುಗೊಳ್ಳುವ ಆರಂಭದ ವರ್ಷಗಳಲ್ಲಿ ಮಗುವಿನ ಮೊದಲ ಭಾಷೆ ಅಥವಾ ಮಾತೃಭಾಷೆಯಲ್ಲಿ ಕಲಿಸುವುದನ್ನು ಮಕ್ಕಳೊಂದಿಗೆ ತೊಡಗಿಸಿಕೊಳ್ಳುವ ಅತ್ಯಂತ ಸೂಕ್ತ ವಿಧಾನವೆಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾನ್ಯ ಮಾಡಲಾಗಿದೆ. ಮಕ್ಕಳ ಮಾತೃಭಾಷೆಯಲ್ಲಿಯೇ ನಡೆಸಿದ ಶಾಲಾಪೂರ್ವ ಕಾರ್ಯಕ್ರಮಗಳಿಗೆ ಹಾಜರಾದ ಮಕ್ಕಳಿಗೆ ಮಾತೃಭಾಷೆಯಲ್ಲದ ಅನ್ಯ ಭಾಷಾ ಮಾಧ್ಯಮದಲ್ಲಿ ಬೋಧಿಸಲ್ಪಟ್ಟ ಮಕ್ಕಳಿಗಿಂತ ಗ್ರಹಿಕೆಯ ನಿಟ್ಟಿನಲ್ಲಿ ಕಡಿಮೆ ಸಮಸ್ಯೆಗಳಿದ್ದವು. ಇದು ಎಲ್ಲಾ ಪಾಲಕರೂ ಸಹಜವಾಗಿಯೇ ಗುರುತಿಸುವ ಮತ್ತು ಅರ್ಥ ಮಾಡಿಕೊಳ್ಳುವ ಒಂದು ಸಾಮಾನ್ಯ ಅರಿವಿನ ನೋಟವಾಗಿದೆ.

ಆದರೆ ಬಹುಭಾಷೆಗಳನ್ನು ಮಾತನಾಡುವ ಸನ್ನಿವೇಶವಿರುವ ನಮ್ಮ ದೇಶದಲ್ಲಿ ಭಾಷಾ ಬೋಧನೆಯು ಒಂದು ಸಂಕೀರ್ಣವಾದ ವಿಷಯವಾಗಿದೆ. ಶಿಕ್ಷಕರು ತರಗತಿಕೋಣೆಯಲ್ಲಿ ಏಕಕಾಲಕ್ಕೆ ಹಲವು ಭಾಷೆಗಳೊಂದಿಗೆ ವ್ಯವಹರಿಸಬೇಕಾಗಬಹುದು. ಶಾಲಾಪೂರ್ವ ಹಂತದಲ್ಲಿ ಬೋಧನಾ ಮಾಧ್ಯಮವನ್ನಾಗಿ ಯಾವುದೇ ಒಂದು ಭಾರತೀಯ ಭಾಷೆಯನ್ನು ಬಳಸಿದರೂ, ಮುಖ್ಯವಾಗಿ ನಗರಗಳಲ್ಲಿ ವಿವಿಧ ಭಾಷೆಗಳು ಮತ್ತು ಉಪಭಾಷೆಗಳ ಹಿನ್ನೆಲೆಯಿಂದ ಬರುವ ಮಕ್ಕಳಿಗೆ ಸಮಸ್ಯೆಯಾಗಬಹುದು. ಈ ಮಕ್ಕಳಿಗೆ ಅದು ಒಂದು ವಿದೇಶೀ ಭಾಷೆಯನ್ನು ಕಲಿತಂತೆ ಭಾಸವಾಗಬಹುದು ಮತ್ತು ECCE ಕಾರ್ಯಕರ್ತರಿಗೆ ಕೂಡಾ ಅದು ಸವಾಲಿನ ಸಂಗತಿಯೇ ಆಗಿರುತ್ತದೆ. ಮಗುವಿಗೆ ಮನೆಭಾಷೆ/ಉಪಭಾಷೆ ಹಾಗೂ ಶಾಲೆಯ ಭಾಷೆಯ ನಡುವಿನ ಅಂತರವನ್ನು ಹೋಗಲಾಡಿಸುವಲ್ಲಿ ನೆರವನ್ನು ನೀಡಲು ಶಿಕ್ಷಕರ ಸಂವೇದನಾಶೀಲತೆ ಮತ್ತು ತರಬೇತಿ ಎರಡೂ ಅತ್ಯವಶ್ಯ.

ಹಂತಹಂತವಾಗಿ ಭಾಷೆಗೆ ಒಡ್ಡಿಕೊಳ್ಳುವ ಮೂಲಕ ಮಕ್ಕಳು ತಮ್ಮ ಪ್ರಾದೇಶಿಕ ಅಥವಾ ಶಾಲಾ ಭಾಷೆಯನ್ನು ದಕ್ಕಿಸಿಕೊಳ್ಳುವ ಜೊತೆಜೊತೆಗೇ ತಮ್ಮ ಮನೆಭಾಷೆಯಲ್ಲಿ ತಮಗನಿಸಿದ್ದನ್ನು ಅಭಿವ್ಯಕ್ತಿಸುವ ಅವಕಾಶವೂ ಇರಬೇಕು. ಈ ಅವಧಿಯಲ್ಲಿ ಅದು ಸಾಧ್ಯವಾಗುತ್ತದೆ, ಏಕೆಂದರೆ ತರಗತಿಯಲ್ಲಿ ಅವರು ಮಾಡುವ ಮುಖ್ಯವಾದ ಚಟುವಟಿಕೆಯೆಂದರೆ ಆಲಿಸುವುದು ಮತ್ತು ಮಾತನಾಡುವುದಾಗಿರುತ್ತದೆ, ಮತ್ತು ಸಂಗಡಿಗರೊಂದಿಗೆ ಮುಕ್ತವಾಗಿ ಆಡುತ್ತಿರುತ್ತಾರೆ. ಶಿಕ್ಷಕರೂ ಸಹ ಮಗುವಿನ ಮನೆ ಭಾಷೆಯ ಕೆಲವು ಪದಗಳು ಮತ್ತು ಪದಗುಚ್ಛಗಳನ್ನು ಕಲಿಯಲು ಯತ್ನಿಸಬೇಕು. ಬಹುಭಾಷಾ ತರಗತಿಕೋಣೆಯಲ್ಲಿ ಮಕ್ಕಳು ತಮ್ಮ ಸ್ವಂತದ ಭಾಷೆಯಲ್ಲಿ ಅಭಿವ್ಯಕ್ತಿಸಲು, ಪರಸ್ಪರರೆಡೆಗೆ ಗಮನವಿಡಲು ಮತ್ತು ಒಬ್ಬರು ಇನ್ನೊಬ್ಬರಿಂದ ಕಲಿಯಲು ಪ್ರೋತ್ಸಾಹ ಸಿಗಬೇಕು. ಇದು ಆಟವಾಡುವ ಸನ್ನಿವೇಶಗಳಲ್ಲಿ ಒಂದು ಸಹಜವಾದ ಮತ್ತು ಸುಲಭವಾದ ಪ್ರಕ್ರಿಯೆ.

ಮತ್ತೊಂದೆಡೆ, ಚಿಕ್ಕ ಮಕ್ಕಳು ಹೊಸ ಭಾಷೆಗಳನ್ನು ಸುಲಭವಾಗಿ ಕಲಿಯಬಲ್ಲರು ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಸಂಶೋಧನೆಗಳು ತೋರಿಸಿಕೊಡುವ ಹಾಗೆ 7ಕ್ಕಿಂತ ಮುಂಚಿನ ವರ್ಷಗಳು ಹೊಸ ಭಾಷೆಗಳನ್ನು ಕಲಿಯುವುದಕ್ಕೆ ಬಹುಶಃ ಪ್ರಶಸ್ತವಾದ ಅವಧಿಯಾಗಿದೆ, ಮತ್ತು ಚಿಕ್ಕ ಮಕ್ಕಳು ವಯಸ್ಕರಿಗಿಂತ ಶೀಘ್ರವಾಗಿ ಹೊಸ ಭಾಷೆಯನ್ನು ಕಲಿಯುತ್ತಾರೆ ಎನ್ನುವುದನ್ನು ವೀಕ್ಷಣೆಗಳು ದೃಢಪಡಿಸುತ್ತವೆ. ಕೋಷ್ಟಕ 1.1 ಸೂಚಿಸುವಂತೆ 2-5 ವರ್ಷದ ಅವಧಿಯು ಬಹುಭಾಷೆಗಳನ್ನು ಕಲಿಯಲು ಉತ್ತಮ ಅವಧಿಯಾಗಿದೆ. ಗಣತಿಗಳು ಹೊರಗೆಡಹುವ ಮಾಹಿತಿಯ ಪ್ರಕಾರ ಭಾರತದಲ್ಲಿ 20% ಜನರಿಗೆ ಇಂಗ್ಲಿಷನ್ನು ಹೊರತುಪಡಿಸಿ ಎರಡು ಅಥವಾ ಅದಕ್ಕಿಂತ ಹೆಚ್ಚು ಭಾಷೆಗಳು ಗೊತ್ತಿರುತ್ತವೆ. ಇವುಗಳಲ್ಲಿ ಹೆಚ್ಚಿನ ಪಾಲು ಶಾಲೆಯ ಹೊರಗೆ ಪರಿಸರದಲ್ಲಿ ಅನೌಪಚಾರಿಕ ಕಲಿಕೆಯನ್ನು ಒಳಗೊಂಡಿರುತ್ತದೆ, ಆದ್ದರಿಂದ ಸಾಮಾನ್ಯ ಜನರಿಗೆ ಹೆಚ್ಚಿನ ಶಿಕ್ಷಣವಿಲ್ಲದೇ ಇದ್ದರೂ ಹೆಚ್ಚಿನ ಭಾರತೀಯ ಭಾಷೆಗಳನ್ನು ಕಲಿಯುವುದು ಕಷ್ಟವಲ್ಲ. ಅಧಿಕ ಸಂಖ್ಯೆಯ ಮಕ್ಕಳು ಮನೆಯಲ್ಲಿ ಬೇರೆ ಭಾಷೆಯನ್ನು ಮಾತನಾಡಿದರೂ ಸಹ ಶಾಲೆಯಲ್ಲಿ, ಪ್ರಾದೇಶಿಕ ಭಾಷಾ ಮಾಧ್ಯಮದಲ್ಲಿ ನಿರಾತಂಕವಾಗಿ ಕಲಿಯುತ್ತಾರೆ. ಮಗುವು ಪ್ರಾಥಮಿಕ ಶಿಕ್ಷಣವನ್ನು ಪ್ರವೇಶಿಸುವ

ಮೊದಲಿನ ಆರಂಭಿಕ ಬಾಲ್ಯದ ವರ್ಷಗಳು ಅವನಿಗೆ/ಅವಳಿಗೆ ಪ್ರಾದೇಶಿಕ ಅಥವಾ ಶಾಲಾ ಭಾಷೆಯನ್ನು ಪರಿಚಯಿಸುವುದಕ್ಕೆ ಉತ್ತಮ ಅವಧಿಯೆಂಬುದು ಸ್ಪಷ್ಟ. ಆದ್ದರಿಂದ, ಬಹುಭಾಷೀಯತೆ ಅಥವಾ ಮಕ್ಕಳ ಕಲಿಕಾ ಸಾಮರ್ಥ್ಯವು ಇಲ್ಲಿನ ಸಮಸ್ಯೆಯಲ್ಲ, ಬದಲಿಗೆ ಈ ಸಮಸ್ಯೆಯನ್ನು ಪರಿಗಣಿಸಿ ತಕ್ಕ ಪರಿಹಾರಗಳನ್ನು ಹುಡುಕಬಲ್ಲ ಶೈಕ್ಷಣಿಕ ವ್ಯವಸ್ಥೆಯ ಸಾಮರ್ಥ್ಯದ ಪ್ರಶ್ನೆ ಇದಾಗಿದೆ.

ಈ ವಾದವನ್ನು ಆದಿವಾಸಿ ಸಮುದಾಯದ ಮಕ್ಕಳ ಸಂದರ್ಭಕ್ಕೆ ಇನ್ನೂ ಹೆಚ್ಚಿನ ಯುಕ್ತತೆಯೊಂದಿಗೆ ಅನ್ವಯಿಸಬಹುದು. ಅವರು ನೇರವಾಗಿ ಪ್ರಾಥಮಿಕ ಹಂತಕ್ಕೆ ಪ್ರವೇಶಿಸುತ್ತಾರೆ, ಮತ್ತು ಪ್ರಾಥಮಿಕ ಶಾಲೆಯಲ್ಲಿ ಅವರಿಗೆ ಸಂಪೂರ್ಣ ಅಪರಿಚಿತವೆನಿಸಿದ ರಾಜ್ಯದ ಭಾಷೆಯು ಬೋಧನಾ ಮಾಧ್ಯಮವಾಗಿರುತ್ತದೆ. ಇತ್ತೀಚಿನ ಅಧ್ಯಯನವೊಂದು[46] ಈ ಮಕ್ಕಳು ದೇಶದ ವಿವಿಧೆಡೆಗಳಲ್ಲಿ ಎದುರಿಸುವ ಅಗಾಧ ಕಷ್ಟಗಳನ್ನು ಕುರಿತು ದಾಖಲಿಸುತ್ತದೆ, ಹಲವು ಸಂದರ್ಭಗಳಲ್ಲಿ ಐದನೆಯ ತರಗತಿಯ ನಂತರವೂ ಈ ಮಕ್ಕಳು ರಾಜ್ಯದ ಭಾಷೆಯಲ್ಲಿ ಅರ್ಥಮಾಡಿಕೊಂಡು ಓದಲು ಅಸಮರ್ಥರಾಗುತ್ತಾರೆ. ಇದು ಇನ್ನೂ ಉಲ್ಬಣಗೊಂಡು ಶಿಕ್ಷಕ ಕೇಂದ್ರಿತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಈ ಮಕ್ಕಳು ದಿನನಿತ್ಯವೂ ವೈಫಲ್ಯ ಮತ್ತು ಅಸಮರ್ಥತೆಯ ಭಾವವನ್ನು ಅನುಭವಿಸುವಂತಾಗುತ್ತದೆ. ಇದರ ಪರಿಣಾಮವಾಗಿ ಅವರು ಶೈಕ್ಷಣಿಕ ವ್ಯವಸ್ಥೆಯಿಂದಲೇ ನಿರ್ಗಮಿಸುವ ಒತ್ತಾಯಕ್ಕೆ ಒಳಗಾಗುತ್ತಾರೆ. ಪ್ರಾಥಮಿಕ ಹಂತದಲ್ಲಿ ಓದುವುದು ಮತ್ತು ಬರೆಯುವುದನ್ನು ಕಲಿಯುವ ಮೊದಲು ಶಾಲಾಪೂರ್ವ ಹಂತದಲ್ಲಿ ಆಲಿಸುವ ಮತ್ತು ಮಾತನಾಡುವ ನಿಟ್ಟಿನ ಕೇವಲ ಮೌಖಿಕ ವಿಧಾನದ ಮೂಲಕವೇ ಹೊಸ ಭಾಷೆಯನ್ನು ಪರಿಚಯಿಸುವ ECCE ಬೋಧನಾಕ್ರಮಕ್ಕೆ ಇಲ್ಲಿ ಕಾರಣವು ಸ್ಪಷ್ಟವಾಗುತ್ತದೆ. ಈ ಕ್ಷೇತ್ರಗಳಲ್ಲಿ ECCEಯನ್ನು ಪರಿಚಯಸಲಾಗದಿದ್ದರೆ ಪ್ರಾಥಮಿಕ ಹಂತದ ಮೊದಲ ವರ್ಷವನ್ನು ಈ ಬಗೆಯ ಅನೌಪಚಾರಿಕ ವಿಧಾನದ ಮೂಲಕ ಪ್ರಾದೇಶಿಕ ಭಾಷೆಯನ್ನು ಕಲಿಯಲು ಬಳಸಬೇಕು. ಈ ದಿಶೆಯಲ್ಲಿ ಸಹಾನುಭೂತಿಯಿಂದ ಕೂಡಿದ ವರ್ತನೆ, ಶಿಕ್ಷಕರಿಗೆ ಆದಿವಾಸಿ ಭಾಷೆ ಅಥವಾ ಉಪಭಾಷೆಯ ಸ್ವಲ್ಪಮಟ್ಟಿನ ತಿಳುವಳಿಕೆ, ಅಥವಾ ಆ ಭಾಷಾ ಸಮುದಾಯದ ಶಿಕ್ಷಕರನ್ನೇ ನೇಮಿಸಿಕೊಳ್ಳುವುದು ಮತ್ತು ಶಿಕ್ಷಕರನ್ನು ಆ ದೃಷ್ಟಿಯಲ್ಲಿ ತಯಾರು ಮಾಡುವುದು ಇವೆಲ್ಲ ದೀರ್ಘಾವಧಿಯಲ್ಲಿ ನೆರವಾಗುತ್ತವೆ.

### 3.4.1 ಇಂಗ್ಲಿಷಿಗಾಗಿ ಬೇಡಿಕೆ

ಇಲ್ಲಿ ದಿನದಿಂದ ದಿನಕ್ಕೆ ಎಲ್ಲೆಡೆ ಹಬ್ಬುತ್ತಿರುವ ಮತ್ತೊಂದು ಬೆಳವಣಿಗೆಯೆಂದರೆ ಇಂಗ್ಲಿಷ್ ಮಾಧ್ಯಮಕ್ಕಾಗಿ ಹೆಚ್ಚುತ್ತಿರುವ ಬೇಡಿಕೆ. ಇಂಗ್ಲಿಷ್ ಜ್ಞಾನವು ಸಮಾಜದಲ್ಲಿ ಮೇಲ್ಮುಖ ಚಲನೆಗೆ ಸಹಾಯ ಮಾಡುತ್ತದೆಯಾದ್ದರಿಂದ ಎಲ್ಲಾ ವರ್ಗಗಳ, ವೃತ್ತಿಗಳ, ಮತ್ತು ಪ್ರದೇಶಗಳ ಪಾಲಕರಲ್ಲಿ ಹೆಚ್ಚಿನವರು ತಮ್ಮ ಮಕ್ಕಳು ಇಂಗ್ಲಿಷ್ ಕಲಿತುಕೊಳ್ಳಲಿ ಎಂದು ಬಯಸುತ್ತಾರೆ. ಅದು ಇಂದಿನ ಜಗತ್ತಿನಲ್ಲಿ ಸಮಂಜಸವಾಗಿಯೂ ಇದೆ. ದುರದೃಷ್ಟವಶಾತ್, ಬಹುತೇಕ ಜನರು ಇಂಗ್ಲಿಷ್

---

[46] *Jhingran, D. 2005*

ಕಲಿಕೆಯನ್ನು 'ಇಂಗ್ಲಿಷ್ ಮಾಧ್ಯಮ'ದೊಂದಿಗೆ ಗೊಂದಲಗೊಳಿಸುತ್ತಾರೆ, ಹಾಗೂ ಇಂಗ್ಲಿಷ್ ಮಾಧ್ಯಮ ಶಾಲೆಗಳ ಜನಪ್ರಿಯತೆಯು ಹೆಚ್ಚುತ್ತಿರುವುದಕ್ಕೂ ಪ್ರಾಥಮಿಕ ಮತ್ತು ಪೂರ್ವಪ್ರಾಥಮಿಕ ಹಂತಗಳ ಶಿಕ್ಷಣವು ವೇಗವಾಗಿ ಹೆಚ್ಚು ಖಾಸಗೀಕರಣಗೊಳ್ಳುತ್ತಿರುವುದಕ್ಕೂ ನಿಕಟ ಸಂಬಂಧವಿದೆ. ಸೌಲಭ್ಯ ಉಳ್ಳವರು ಮತ್ತು ಇತರರ ನಡುವಿನ ವಿಭಾಜಕ ರೇಖೆಯಾಗಿರುವ ಇಂಗ್ಲಿಷ್, ನಮ್ಮ ಶೈಕ್ಷಣಿಕ ವ್ಯವಸ್ಥೆಯೊಳಗಿನ ಮುಂದುವರಿಯುತ್ತಿರುವ ಎರಡು ಕವಲುಗಳಿಗೆ ಮೂಲಾಧಾರವಾಗಿ ಪರಿಣಮಿಸಿದೆ. ಇವು ಬೋಧನಾ ವಿಧಾನದ ಸಮಸ್ಯೆಗಳು ಎನ್ನುವುದಕ್ಕಿಂತಲೂ ವರ್ಗ, ಅಧಿಕಾರ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯ ಸಮಸ್ಯೆಗಳಾಗಿರುವುದರಿಂದ ಇವುಗಳೊಂದಿಗೆ ರಾಜಕೀಯ ನೆಲೆಯಲ್ಲಿ ವ್ಯವಹರಿಸಬೇಕಾಗುತ್ತದೆ. ಒಂದೊಮ್ಮೆ ಪಠ್ಯಕ್ರಮ ಚೌಕಟ್ಟನ್ನು ಪಾಲಕರ ಆಕಾಂಕ್ಷೆಗಳಿಗೆ ಅನುಗುಣವಾಗಿ ಹೊಂದಿಸುವುದಾದರೆ ಆಗ ಇದು ಒಂದು ಮುಖ್ಯವಾದ ಸಮಸ್ಯೆಯಾಗುತ್ತದೆ. ಶೈಕ್ಷಣಿಕ ನೆಲೆಯಲ್ಲಿ ಎರಡನೇ ಭಾಷೆಯನ್ನು ಪರಿಚಯಿಸಲು ಸೂಕ್ತವಾದ ವಯಸ್ಸು ಯಾವುದೇ ಇರಲಿ ಸಾಮಾಜಿಕ-ರಾಜಕೀಯ ವಾಸ್ತವಗಳ ದೃಷ್ಟಿಯಲ್ಲಿ ಅದನ್ನು ಮುಂಚಿತವಾಗಿಯೇ ಅಂದರೆ, ಹಲವು ರಾಜ್ಯಗಳಲ್ಲಿ ಈಗಾಗಲೇ ಮಾಡಿದಂತೆ 1ನೇ ತರಗತಿಯಲ್ಲಿ ಅಥವಾ ಶಾಲಾಪೂರ್ವ ಹಂತದಲ್ಲಿ ಪರಿಚಯಿಸಬೇಕು. ಆಗ ಅದನ್ನು ಕಲಿಸುವ ಅತ್ಯುತ್ತಮ ವಿಧಾನಶಾಸ್ತ್ರವನ್ನು ಶಿಕ್ಷಣ ತಜ್ಞರು ಕಂಡುಕೊಳ್ಳಬೇಕಾಗುತ್ತದೆ.

ನೀತಿಯ ಮಟ್ಟದಲ್ಲಿ ಎರಡು ಪ್ರಶ್ನೆಗಳಿವೆ:

- ಖಾಸಗಿ ಮತ್ತು ಸಾರ್ವಜನಿಕ (ಸರಕಾರಿ) ಎರಡೂ ಕ್ಷೇತ್ರಗಳಲ್ಲಿನ ಎಲ್ಲಾ ಶಿಕ್ಷಣವೂ ಮಗುವಿನ ಮನೆಭಾಷೆಯಲ್ಲಿಯೇ ನಡೆಯಬೇಕು, ಅಥವಾ ಅದು ತಪ್ಪಿದರೆ ಅತ್ಯಂತ ಪರಿಚಿತ ಅಥವಾ ಪ್ರಾದೇಶಿಕ ಭಾಷೆಯಲ್ಲಿರತಕ್ಕದ್ದೆಂದು ಸಾರ್ವಜನಿಕರ ಮತ್ತು ಪಾಲಕರ ಮನವೊಲಿಸಲು ಸಾಧ್ಯವೆ? ಇದು ಸಾಧ್ಯವಾಗಬೇಕಾದರೆ ಅದಕ್ಕೆ ಖಾಸಗಿ ಕ್ಷೇತ್ರದ ಸಹಕಾರ ಅಗತ್ಯ; ಹಿಂದೆ ಪ್ರಸ್ತಾಪಿಸಿದ ನಿಯಂತ್ರಣದ ವ್ಯವಸ್ಥೆಯ ವಿಚಾರವು ಇದಕ್ಕೆ ಸಂಬಂಧಿಸಿದೆ.
- ಎರಡನೆಯ ಭಾಷೆಯನ್ನು, (ಅದು ಇಂಗ್ಲಿಷ್ ಆಗಿರಬಹುದು), ಮುಂಚಿತವಾಗಿ, ಅಂದರೆ ಆರಂಭಿಕ ಬಾಲ್ಯದ ಶಿಕ್ಷಣದ ಅವಧಿಯಲ್ಲಿಯೇ ಪರಿಚಯಿಸಬೇಕು ಎನ್ನುವುದರ ಕುರಿತು ಅವರ ಮನವೊಲಿಸಲು ಸಾಧ್ಯವೆ?

ಎರಡೂ ಪ್ರಶ್ನೆಗಳು ಒಂದಕ್ಕೊಂದು ನಿಕಟವಾಗಿ ಸಂಬಂಧಪಟ್ಟಿವೆ. ಎಲ್ಲಾ ಮಕ್ಕಳೂ ಒಂದು ಭಾರತೀಯ ಭಾಷೆಯಲ್ಲಿ ನೈಪುಣ್ಯತೆಯನ್ನು ಸಾಧಿಸುವ ಗುರಿಯನ್ನು ಹೊಂದಿರುವ ವೈಚಾರಿಕ ಭಾಷಾ ನೀತಿಯು ಇಂಗ್ಲಿಷನ್ನು ಎರಡನೇ ಭಾಷೆಯನ್ನಾಗಿ ಬಹಳ ಮುಂಚಿನ ವಯಸ್ಸಿನಲ್ಲಿಯೇ ಪರಿಚಯಿಸುವ ಗುರಿಯ ಮತ್ತೊಂದು ರೂಪವಷ್ಟೇ. ಅದನ್ನು ಕಾರ್ಯರೂಪದಲ್ಲಿ ಅಳವಡಿಸುವ ಹಂತದಲ್ಲಿ (ಅಥವಾ ಆಚರಣೆಯ ಹಂತದಲ್ಲಿ) ಎರಡು ಸಮಸ್ಯೆಗಳಿವೆ:

- ಸ್ವತಃ ತಮಗೇ ಇಂಗ್ಲಿಷ್ ಬರದ ಶಿಕ್ಷಕರಿಂದ ಮಕ್ಕಳಿಗೆ, ಅದರಲ್ಲೂ ಮುಖ್ಯವಾಗಿ ಮನೆಯಲ್ಲಿ ಇಂಗ್ಲಿಷ್‌ನ ಬಗ್ಗೆ ಅರಿವಿಲ್ಲದ ಪಾಲಕರ ಮಕ್ಕಳಿಗೆ ನಾವು ಇಂಗ್ಲಿಷನ್ನು ಕಲಿಸಲು ಸಾಧ್ಯವೆ?
- ECEಯ ವಿಧಾನಶಾಸ್ತ್ರವನ್ನು ಇಂಗ್ಲಿಷ್ ಕಲಿಕೆಗೆ ಹೇಗೆ ಅನ್ವಯಿಸಲು ಸಾಧ್ಯ?

### 3.4.2 ಸಮೂಹ ಮಾಧ್ಯಮದ ಮೂಲಕ ಇಂಗ್ಲಿಷನ್ನು ಕಲಿಸುವುದು

ಮೊದಲನೆಯ ಪ್ರಶ್ನೆಗೆ ಉತ್ತರಿಸುವುದಾದರೆ ನಮ್ಮ ದೇಶದಲ್ಲಿ ಈ ಹಿಂದೆ ಬಳಸುತ್ತಿದ್ದ ಅಮೂಲಾಗ್ರವಾಗಿ ಭಿನ್ನವಾದ ವಿಧಾನವೊಂದನ್ನು ಅದು ಒಳಗೊಂಡಿದೆ. ಶಿಕ್ಷಕರಿಗೆ (ಅಥವಾ ಎಲ್ಲಾ ವಯಸ್ಕರಿಗೆ) ಇಂಗ್ಲಿಷನ್ನು ಕಲಿಸಲು ಒಂದು ಬೃಹತ್ ಪ್ರಮಾಣದ ಸಾರ್ವಜನಿಕ ಆಂದೋಲನದ ಅಗತ್ಯವಿದ್ದು, ಇಂಗ್ಲಿಷನ್ನು ಮಾತನಾಡಲು ಕಲಿಸುವ ತರಗತಿಗಳನ್ನು ಅದು ಒಳಗೊಂಡಿದೆ.:

- ರೇಡಿಯೋ (ಆಲ್ ಇಂಡಿಯಾ ರೇಡಿಯೋ, ಸಮುದಾಯ ಮತ್ತು ಎಫ್ ಎಮ್)
- ದೂರದರ್ಶನ (ದೂರದರ್ಶನ, ಉಪಗ್ರಹ ಚಾನೆಲ್ಲುಗಳು)
- ದೂರ ಶಿಕ್ಷಣ (ಮುಕ್ತ ವಿಶ್ವವಿದ್ಯಾಲಯಗಳು ಮತ್ತು ಶಾಲೆಗಳು)
- ಹೊಸ ಶೈಕ್ಷಣಿಕ ಉಪಗ್ರಹ ಜಾಲಗಳು; ಮತ್ತು
- ಇತರ ಎಲ್ಲ ಸಂಭಾವ್ಯ ಮಾಧ್ಯಮ

### 3.4.3 ಅಂತಹ ಪ್ರಯತ್ನಗಳನ್ನು ಚೀನಾದಲ್ಲಿ ಮಾಡಲಾಗಿದೆ, ಉದಾಹರಣೆಗೆ

ಅಂತಹ ಸೌಲಭ್ಯಗಳು ಶಿಕ್ಷಕರನ್ನು ಗುರಿಯಾಗಿಸಿಕೊಂಡಿದ್ದರೂ ಅದರ ಪ್ರಯೋಜನವನ್ನು ಯಾವುದೇ ವಯಸ್ಕರು ಅಥವಾ ವಿದ್ಯಾರ್ಥಿಗಳು ಪಡೆಯಬಹುದಾಗಿದೆ; ಅದು ಲಕ್ಷ್ಯವಿಟ್ಟ ಗುಂಪನ್ನಷ್ಟೇ ಅಲ್ಲದೆ, ವಿಸ್ತೃತ ಪ್ರಯೋಜನವನ್ನು ಹೊಂದಿದೆ. ಆದಾಗ್ಯೂ, ಭಾರತದಲ್ಲಿ ಇದು ಹೊಸ ವಿಧಾನವಾಗಿದೆ, ಇದಕ್ಕೆ ಶಿಕ್ಷಣ ಕ್ಷೇತ್ರ, ಸಮೂಹ ಮಾಧ್ಯಮಗಳು ಮತ್ತು ಮಾಹಿತಿ-ಸಂವಹನ ತಂತ್ರಜ್ಞಾನ (ICT: Information and Communication Technology) ಒಟ್ಟಾಗಿ ಪರಸ್ಪರ ಸಹಕಾರದೊಂದಿಗೆ ಕೆಲಸವನ್ನು ನಿರ್ವಹಿಸಬೇಕಲ್ಲದೆ, ಹೊಸ ಶೈಕ್ಷಣಿಕ ತಂತ್ರಜ್ಞಾನವನ್ನೂ ಬಳಸಬೇಕಾಗುತ್ತದೆ. ಈ ಸವಾಲಿಗೆ ನಾವು ತಯಾರಿದ್ದೇವೆಯೆ? ಮತ್ತು ಎರಡು ಕವಲುಗಳ ವ್ಯವಸ್ಥೆಯು ಪ್ರತಿನಿಧಿಸುವ ಅಸಮಾನತೆಯ ಆವರ್ತನವನ್ನು ಮುರಿಯಲು ಬಯಸುತ್ತೇವೆಯೆ?

ಎರಡನೆಯ ಪ್ರಶ್ನೆಗೆ ಪ್ರತಿಕ್ರಿಯಿಸುವ ನಿಟ್ಟಿನಲ್ಲಿ, ECCE ದೃಷ್ಟಿಕೋನ ಅಥವಾ ವಿಕಾಸಾತ್ಮಕ ಬೋಧನಾವಿಧಾನವು ಸೂಚಿಸುವಂತೆ ಭಾಷೆಯನ್ನು 'ಆಲಿಸು-ಮಾತನಾಡು-ಓದು-ಬರೆ' ಎಂಬ ಕ್ರಮಾಗತ ಪ್ರಕ್ರಿಯೆಗಳ ಮೂಲಕ ಕಲಿಯಬೇಕು. ಆದರೆ ಹೆಚ್ಚಿನ ಶಾಲೆಗಳಲ್ಲಿ ನಾವು ಇದಕ್ಕೆ ವಿರುದ್ಧವಾದ ಕ್ರಮವನ್ನು ಕಾಣುತ್ತೇವೆ, ಆರಂಭಿಕ ಬಾಲ್ಯದಲ್ಲಿ ಭಾಷೆಯ ಬೋಧನೆಯು (ಇಂಗ್ಲಿಷ್ ಅಥವಾ ಯಾವುದೇ ಭಾರತೀಯ ಭಾಷೆ) ಮೊದಲು ಮಕ್ಕಳು ಬರೆಯುವುದರಿಂದ ಪ್ರಾರಂಭಿಸಿ, ನಂತರ ಓದುವುದು, ಕೆಲವೊಮ್ಮೆ ಆಲಿಸುವುದನ್ನು ಒಳಗೊಳ್ಳುತ್ತದೆ, ಮಾತನಾಡುವುದಂತೂ

ಹೆಚ್ಚುಕಡಿಮೆ ಇಲ್ಲವೇ ಇಲ್ಲ ಎನ್ನಬಹುದು. ಭಾಷಾ ಕಲಿಕೆಯಲ್ಲಿ ಇದು, ECCE ಬೋಧನಾವಿಧಾನವು ಮುಖ್ಯವಾಗಿ ಪ್ರಾಥಮಿಕ ಶಾಲೆಯ ಆರಂಭಿಕ ವರ್ಷಗಳಲ್ಲಿ ನೀಡಬಹುದಾದ ಮತ್ತೊಂದು ಪ್ರಮುಖ ಕೊಡುಗೆಯೆನಿಸಿದೆ.

## 4. ಮುನ್ನಡೆ: ನೀತಿ ಮಾದರಿಗಳ ಬದಲಾವಣೆ

ಹೆಚ್ಚಿನ ಪ್ರಸ್ತುತ ಸಮಸ್ಯೆಗಳು ಮತ್ತು ECCEಗೆ ಸಂಬಂಧಿಸಿದ ವಿಷಯಗಳು ಹಿಂದಿನ ನೀತಿಗಳು ಮತ್ತು ಚಾರಿತ್ರಿಕ ಬೆಳವಣಿಗೆಗಳ ಪರಿಣಾಮವಾಗಿರುವುದರಿಂದ ಚಿಕ್ಕ ಮಕ್ಕಳಿಗೆ ನ್ಯಾಯ ಒದಗಿಸುವ ಯಾವುದೇ ಪ್ರಯತ್ನದಲ್ಲಿ ಪಠ್ಯಕ್ರಮ ಸುಧಾರಣೆಗಳನ್ನು ಅನುಷ್ಠಾನಕ್ಕೆ ತರುವ ಮಾತಿಗಿಂತ ಮೊದಲು ನೀತಿಗಳಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡುವ ಅಗತ್ಯವಿದೆ. ಇಲ್ಲದೆ ಇದ್ದರೆ ಪಠ್ಯಕ್ರಮದ ಬದಲಾವಣೆಗಳು ಅರ್ಥಹೀನ ಪ್ರಯತ್ನವಾಗುತ್ತವೆ ಮತ್ತು ಇಂದಿನ ಅನ್ಯಾಯದ ಶೈಕ್ಷಣಿಕ ವ್ಯವಸ್ಥೆಯನ್ನು ಅದು ಬದಲಾಯಿಸಲಾರದು.

### 4.1 ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ ಮೌಲ್ಯ ಹಾಗೂ ಅದನ್ನು 'ಎಲ್ಲರಿಗೂ ಶಿಕ್ಷಣ' ಕಾರ್ಯಕ್ರಮದ ಒಂದು ಅಂಗವಾಗಿ ಪರಿಗಣಿಸುವುದು

ಎಲ್ಲಕ್ಕಿಂತ ಮೊದಲು ECCEಯು ಎಲ್ಲಾ ಮಕ್ಕಳ ಬೆಳವಣಿಗೆಯ ದೃಷ್ಟಿಯಿಂದ ಅತ್ಯವಶ್ಯಕ, ಹಾಗೂ ಪ್ರತೀ ಮಗುವಿಗೂ ಸಮಾನ ಗುಣಮಟ್ಟದ ಆರಂಭಿಕ ಆರೈಕೆ ಮತ್ತು ಶಿಕ್ಷಣದ ಹಕ್ಕಿದೆ ಎನ್ನುವುದರ ಪರಿಗಣನೆಯು ಮುಖ್ಯವಾಗುತ್ತದೆ. ಇದು ಇತ್ತೀಚೆಗೆ ನಡೆದ, ನಮ್ಮ ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಎಳೆಯ ಮಕ್ಕಳ ಪ್ರಾತಿನಿಧ್ಯದ ಹಕ್ಕನ್ನು ಕಸಿದುಕೊಂಡ ಸಾಂವಿಧಾನಿಕ ತಿದ್ದುಪಡಿಯ ಹಿನ್ನೆಲೆಯಲ್ಲಿ ಒಂದು ಆದರ್ಶರಾಜ್ಯದ ಬೇಡಿಕೆಯಂತೆ ಅನಿಸಬಹುದು. ಆದರೂ ಅನುಚ್ಛೇದ 21 ಮತ್ತು ಉನ್ನಿಕೃಷ್ಣನ್[47] ಅವರ ತೀರ್ಪುಗಳು ಅವಕಾಶವೊಂದನ್ನು ನೀಡಿದ್ದು, ಈ ಕುರಿತ ಚರ್ಚೆಗಳನ್ನು ಮರಳಿ ಚಾಲನೆಗೊಳಿಸಲು ಅದನ್ನು ಬಳಸಿಕೊಳ್ಳಬಹುದು ಮತ್ತು ನೀತಿಯನ್ನು ಬದಲಾಯಿಸಬಹುದು. ಇದಕ್ಕೆ ಸಮಯ ಹಿಡಿಯಬಹುದು, ಆದರೆ ಪ್ರಯತ್ನವನ್ನಂತೂ ಈಗ ಶುರು ಮಾಡಬೇಕು. ECCEಯನ್ನು ಎಲ್ಲಾ ಮಕ್ಕಳ ಪಠ್ಯಕ್ರಮದ ಒಂದು ಅವಿಭಾಜ್ಯ ಅಂಗವೆಂದು ಒಪ್ಪಿಕೊಳ್ಳುವುದು ಮತ್ತು ಅದನ್ನು 'ಎಲ್ಲರಿಗೂ ಶಿಕ್ಷಣ' ಕಾರ್ಯಕ್ರಮದ ಭಾಗವನ್ನಾಗಿ ಕಾಣುವುದು ಈ ನಿಟ್ಟಿನ ಗುರಿಯಾಗಿದೆ.


### 4.2 ಸಂಪನ್ಮೂಲ ವಿತರಣೆ

ಎಲ್ಲರಿಗೂ ಸಮಾನ ಗುಣಮಟ್ಟದ ECCEಯನ್ನು ಒದಗಿಸಬೇಕಾದರೆ ಸಂಪನ್ಮೂಲಗಳ ವಿತರಣೆಯೂ ವಿಸ್ತೃತವಾಗಿ ವೃದ್ಧಿಸಬೇಕು. ಜಾಗತಿಕ ಸಂಶೋಧನೆಗಳು ಸೂಚಿಸುವಂತೆ ಒಂದು ಮಗುವಿನ ಮೆದುಳಿನ 85% ಮುಖ್ಯ ಸಂರಚನೆಯು ಆರಂಭದ ವರ್ಷಗಳಲ್ಲಿಯೇ ಪೂರ್ಣಗೊಂಡಿರುತ್ತದೆ, ಆದರೆ ವಾಸ್ತವದಲ್ಲಿ ಎಲ್ಲಾ ರಾಜ್ಯಗಳಲ್ಲಿ ನಡೆಯುತ್ತಿರುವುದನ್ನು ನೋಡಿದರೆ, 6ರಿಂದ

[47] *Supreme Court 1993*

14ವರ್ಷದವರೆಗಿನ ಮಕ್ಕಳ ಮೇಲೆ ವಿನಿಯೋಗಿಸುವ ಖರ್ಚಿನ 1/8ರಷ್ಟು ಭಾಗವನ್ನು ಮಾತ್ರ 6 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪ್ರತಿ ಮಗುವಿನ ಮೇಲೆ ವಿನಿಯೋಗಿಸಲಾಗುತ್ತದೆ. ಮಗುವಿನ ಬುನಾದಿಪ್ರಾಯವಾದ ಅವಧಿಯನ್ನು ನಿರ್ಲಕ್ಷ ಮಾಡಲಾಗುತ್ತಿದೆ ಎನ್ನುವುದನ್ನು ಇದು ತೋರಿಸುತ್ತದೆ. (ಚಿತ್ರ 6.4ನ್ನು ನೋಡಿ) ಎಲ್ಲಾ ಹಂತಗಳಲ್ಲಿ ಸಂಪನ್ಮೂಲಗಳನ್ನು ಸಂಘಟಿಸುವ ಮೂಲಕ ಈ ಸನ್ನಿವೇಶವನ್ನು ಗಮನಾರ್ಹವಾಗಿ ಬದಲಾಯಿಸಬಹುದು.

**ಚಿತ್ರ 6.4: ಮೆದುಳಿನ ಬೆಳವಣಿಗೆಯಲ್ಲಿ ನಿರ್ಣಾಯಕ ಅವಧಿ – ವಿತ್ತೀಯ ಅಂತರ**




ಮೂಲ: *Reaching Out to the Child, HDS, World Bank, 2004.*

Cumulative brain growth (%) – ಮೆದುಳಿನ ಸಂಚಿತ ಬೆಳವಣಿಗೆ (%)
Spending per beneficiary of the age - ಪ್ರತಿ ಫಲಾನುಭವಿಗೆ ವಯಸ್ಸಿಗೆ ಅನುಗುಣವಾಗಿ ವಿನಿಯೋಗಿಸಲಾಗುವ ಹಣ AGE - ವಯಸ್ಸು
Average spending per beneficiary child in the group - ಗುಂಪಿನಲ್ಲಿ ಪ್ರತಿ ಫಲಾನುಭವಿ ಮಗುವಿಗೆ ವಿನಿಯೋಗಿಸಲಾಗುವ ಸರಾಸರಿ ಹಣ

## 4.3 ಎಲ್ಲರಿಗೂ ಗುಣಮಟ್ಟದ ಶಿಕ್ಷಣ: ತಂತ್ರೋಪಾಯಗಳು ಮತ್ತು ಸಾಧನಗಳು

ಅನೇಕ ಬಗೆಯ ಮಾದರಿಗಳು ಮತ್ತು ವೈವಿಧ್ಯಮಯ ಕ್ಷೇತ್ರಗಳನ್ನು, ಹಾಗೂ ಕಾಲಾನುಕ್ರಮೇಣ ರೂಪಿಸಿದಂತಹ ಅನೇಕ ಬಗೆಯ ಕಾರ್ಯವಿಧಾನಗಳನ್ನು ಮಾನ್ಯ ಮಾಡಬೇಕು ಮತ್ತು ಸ್ವೀಕರಿಸಬೇಕು; ಆದರೆ ಒಂದು ಸಾಮಾನ್ಯವಾದ ಚೌಕಟ್ಟಿನ ಒಳಗೆ ಕೆಲವು ಮೂಲಭೂತ ನಿಯಮಗಳು ಮತ್ತು ಮಾನದಂಡಗಳಿಗೆ ಬದ್ಧವಾಗಿ ಹಾಗೂ ಬೇರೆ ಬೇರೆ ಸಾಂದರ್ಭಿಕ ವಾಸ್ತವಗಳಿಗೆ ಹೊಂದಿಕೊಂಡು ಅರ್ಥಪೂರ್ಣ ಭಾಷಾನೀತಿಯೊಂದಿಗೆ ಅದನ್ನು ನಿರ್ವಹಿಸಬೇಕು. ನ್ಯಾಯ ಮತ್ತು ಸಮಾನತೆಯನ್ನು ಕಾಯ್ದುಕೊಳ್ಳಬೇಕು. ಅದು DEE&Lನಿಂದ ಅಥವಾ DWCDಯಿಂದ ಅಥವಾ ಸರ್ಕಾರೇತರ ಸಂಸ್ಥೆಯಿಂದ ಅಥವಾ ಖಾಸಗಿ ಸಂಸ್ಥೆಯಿಂದ ನಡೆಯುತ್ತಿದ್ದಾಗ್ಯೂ, ಎಲ್ಲವೂ ಮೂಲನಿಯಮಗಳು ಮತ್ತು ಮಾನದಂಡಗಳಿಗೆ ಬದ್ಧವಾಗಿರಬೇಕು, ಮತ್ತು ಮೊದಲಿನದನ್ನು ತ್ಯಾಗ ಮಾಡದೇ ಸಾಂದರ್ಭಿಕ ವಾಸ್ತವಗಳಿಗೆ ಹೊಂದಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ, ಭಾರತದಲ್ಲಿರುವ ಮಕ್ಕಳ ಬೆಳವಣಿಗೆಯ ತಜ್ಞರು ECCE ಯೋಜನೆಗಳ ಮೌಲ್ಯಮಾಪನಕ್ಕೆ ಈಗಾಗಲೇ ನಿಯಮಗಳನ್ನು ರೂಪಿಸುತ್ತಿದ್ದಾರೆ ಎನ್ನುವುದನ್ನು ಗಮನದಲ್ಲಿಡಬೇಕು, ಮತ್ತು ಆ ಪ್ರಕ್ರಿಯೆಯಲ್ಲಿ ಅವರು ಶಿಕ್ಷಕ-ಮಗುವಿನ ನಡುವಿನ ಪರಸ್ಪರ ಸಂವಹನಕ್ಕೆ, ಪಠ್ಯಕ್ರಮದ ನಿರ್ವಹಣೆ ಮತ್ತು ಮೂಲಸೌಕರ್ಯಗಳು, ಕಟ್ಟಡಗಳು, ಮತ್ತು ವಿಸ್ತೃತ ಸಾಧನ-ಸಲಕರಣೆಗಳಿಗಿಂತ ಮಾನವ ಸಂಬಂಧಗಳ ಮೇಲೆ ಹೆಚ್ಚು ಒತ್ತನ್ನು ನೀಡುತ್ತಿದ್ದಾರೆ, ಆಗ ಆರ್ಥಿಕವಾಗಿ ಹೆಚ್ಚು ಶಕ್ತರಾದವರಿಗೆ ಅನಗತ್ಯವಾಗಿ ಹೆಚ್ಚಿನ ಕೃಪೆ ಸಲ್ಲುವುದಿಲ್ಲ.

## 4.4 ಸಕ್ರಿಯ ಬೆಂಬಲಕ್ಕಾಗಿ ಜನಜಾಗೃತಿ

ಪಾಲಕರಿಂದ, ನೀತಿನಿರ್ಮಾತೃಗಳವರೆಗೆ ಎಲ್ಲಾ ಹಂತಗಳಲ್ಲಿ ಸಾರ್ವಜನಿಕರು ಸ್ಪಂದಿಸುವಂತೆ. ಒಂದು ವಿಸ್ತೃತ ಮತ್ತು ನಿರಂತರ ಸಮರ್ಥಕ ಆಂದೋಲನವನ್ನು ಹಮ್ಮಿಕೊಂಡು, ಇದರಲ್ಲಿ ಸಮೂಹ ಮಾಧ್ಯಮಗಳನ್ನೂ ಒಳಗೊಳ್ಳಬೇಕು. ಇದಕ್ಕೆ ಸಮರ್ಪಕ ಸಂಪನ್ಮೂಲಗಳನ್ನು ಒದಗಿಸಿ, ಸರಕಾರವು ಅದರ ಮುಂದಾಳತ್ವವನ್ನು ವಹಿಸಬೇಕಲ್ಲದೆ, ಬೇಕಾಗುವ ಸಾಮಗ್ರಿಗಳನ್ನು ತಯಾರಿಸಲು, ಸರಕಾರದ ಹೊರಗಿನ ಬೇರೆ ಬೇರೆ ಶೈಕ್ಷಣಿಕ ವಿಭಾಗಗಳ ತಜ್ಞರು ಮತ್ತು ಅನುಭವಿ ವೃತ್ತಿನಿರತರನ್ನು ಒಳಗೊಳ್ಳಬೇಕು. ಸಾಮಗ್ರಿಗಳು ವಿವಿಧ ಪ್ರಕಾರಗಳಲ್ಲಿದ್ದು, ಇವೆಲ್ಲವನ್ನೂ ಮಗುವಿನ ಬೆಳವಣಿಗೆಯ ಈ ಅವಧಿಯ ಮಹತ್ವವನ್ನು ತಿಳಿಸುವ, ಈ ಅವಧಿಯನ್ನು ಕಡೆಗಣಿಸಿದರೆ ಆಗುವ ಅಪಾಯಗಳ ಬಗೆಗೆ ಎಚ್ಚರಿಸುವ ಮತ್ತು ECCEಯ ವ್ಯಾಪ್ತಿ, ಉದ್ದೇಶಗಳು ಮತ್ತು ಅರ್ಥವನ್ನು ವಿವರಿಸುವ ನಿಟ್ಟಿನಲ್ಲಿ ರೂಪಿಸತಕ್ಕದ್ದು. ಈ ಸಮರ್ಥಕ ಅಭಿಯಾನವವನ್ನು ಸಮೂಹ ಮಾಧ್ಯಮಗಳು, ಜನಪದ ಮಾಧ್ಯಮ ಮತ್ತು ಸ್ಥಳೀಯ ಕ್ಷೇತ್ರಕಾರ್ಯಕರ್ತರಿಂದ ಮುಖಾಮುಖಿ ಸಂವಾದಗಳ ಮೂಲಕ ಕೈಗೊಳ್ಳಬೇಕು.

ಉದಾಹರಣೆಗೆ, ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ಎಲ್ಲಾ ಶಾಲಾಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಕಡ್ಡಾಯಗೊಳಿಸಿದ ಈ ದೇಶದಲ್ಲಿ 18

ತಿಂಗಳಿನ ಶಿಶುಗಳಿಂದ 3 ವರ್ಷದವರೆಗಿನ ಮಕ್ಕಳ ಸಲುವಾಗಿ ಯಾವ ನಿಯಮವನ್ನೂ ಮಾಡಲಿಲ್ಲ, ಈ ವಯಸ್ಸಿನ ಮಕ್ಕಳೇ ಅಪೌಷ್ಟಿಕತೆಯ ಅಪಾಯವನ್ನು ಹೆಚ್ಚು ಎದುರಿಸುವುದು ಮತ್ತು ಅದರ ಪರಿಣಾಮಗಳನ್ನು ಅನುಭವಿಸುವುದು. ಬಡವರಿರಲಿ ಶ್ರೀಮಂತರಿರಲಿ, ಸಮಾಜದ ಎಲ್ಲಾ ಭಾಗಗಳ ಜನರಿಗೂ ಈ ಅರಿವನ್ನು ಮೂಡಿಸುವ ಅಗತ್ಯವನ್ನು ಇದು ಒತ್ತಿ ಹೇಳುತ್ತದೆ, ಎಲ್ಲರೂ ತಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ಸುಭದ್ರಗೊಳಿಸುವ ಆಸೆಯನ್ನು ಹೊಂದಿರುತ್ತಾರೆ.

### 4.5 ಸಾಮರ್ಥ್ಯ ನಿರ್ಮಾಣ

ನಂತರ ನೇರವಾಗಿ ಎಲ್ಲಾ ಹಂತಗಳಲ್ಲಿ ಸಾಮರ್ಥ್ಯ ನಿರ್ಮಾಣಕ್ಕಾಗಿ ಒಂದು ಬೃಹತ್ ಪ್ರಮಾಣದ ಮತ್ತು ದೀರ್ಘಾವಧಿಯ ಯೋಜನೆಯನ್ನು ಆರಂಭಿಸಬೇಕು. ಮೊದಲಿಗೆ, ಇಲ್ಲಿ ಅನೇಕ ಪ್ರಕಾರದ ಶಿಕ್ಷಕರು/ಶಿಶು ವಿಹಾರಗಳ ಕಾರ್ಯಕರ್ತರು/ಆರೈಕೆ ಮಾಡುವವರು ಮುಂತಾದವರಿದ್ದು, ಅವರೆಲ್ಲರ ಪಾತ್ರಗಳನ್ನು ಮಾನ್ಯ ಮಾಡಬೇಕಲ್ಲದೆ, ಅವರನ್ನು ಕಾರ್ಯಕರ್ತರು/ಶಿಕ್ಷಕರೆಂದು ದೃಢೀಕರಿಸಬೇಕು, ಜೊತೆಗೆ ಅವರ ಕೆಲಸಕ್ಕೆ ತಕ್ಕ ಪ್ರತಿಫಲ ಅಥವಾ ನ್ಯಾಯಬದ್ಧ ವೇತನವು ಅವಶ್ಯವೆಂಬುದನ್ನು ಒಪ್ಪಿಕೊಳ್ಳಬೇಕು.

ಮೂಲ ಶಿಕ್ಷಕ/ಮಕ್ಕಳ ಆರೈಕೆಯ ಕಾರ್ಯಕರ್ತ, ಸಹಾಯಕ ಮತ್ತು ಮೇಲಿನ ಹಂತದ ಮೇಲ್ವಿಚಾರಕ, ತರಬೇತಿದಾರ ಮತ್ತು ಮುಖ್ಯಸ್ಥ – ಈ ಮೂರು ಹಂತಗಳಿಗೆ ಸಂಬಂಧಿಸಿದ ಬೇರೆ ಬೇರೆ ಕೋರ್ಸುಗಳು ಇರಬೇಕು. ಆ ವೃತ್ತಿಗಳಿಗೆ ಪ್ರತಿ ಹಂತದಲ್ಲೂ ಕನಿಷ್ಠ ವೇತನದ ಹಂತಗಳನ್ನು ನಿರ್ಧರಿಸತಕ್ಕದ್ದು. ಅಲ್ಲದೇ ಅಲ್ಲಿ ವೃತ್ತಿಗೆ ಹೊಸತಾಗಿ ಸೇರುವ ಅಭ್ಯರ್ಥಿಗಳಿಗಾಗಿ ಸೇವಾಪೂರ್ವ ತರಬೇತಿ ಕೋರ್ಸುಗಳಿದ್ದರೆ ಮಾತ್ರ ಸಾಲದು, ಅದರ ಜೊತೆಗೆ ಈಗಾಗಲೇ ಸೇವೆಯಲ್ಲಿರುವ 'ತರಬೇತಿ ಹೊಂದದ' ದೊಡ್ಡ ಸಂಖ್ಯೆಯ ಕೆಲಸಗಾರರಿಗೆ ಬೇರೆ ಬೇರೆ ವಿಧದ ಅಲ್ಪಾವಧಿ ಮತ್ತು ದೀರ್ಘಾವಧಿ ಪುನಶ್ಚೇತನದ ಕೋರ್ಸುಗಳಿರಬೇಕು, ಇದು ಮುಖ್ಯವಾಗಿ ಖಾಸಗಿ ಕ್ಷೇತ್ರಗಳಲ್ಲಿ ಹೆಚ್ಚು ಅನ್ವಯವಾಗುತ್ತದೆ. ಏಕೆಂದರೆ ಅಲ್ಲಿ ಕೆಲಸ ಮಾಡುವವರಿಗೆ ದೀರ್ಘಾವಧಿ ಅನುಭವವಿದ್ದು, ಕೆಲವು ಕೌಶಲ್ಯಗಳೂ ಇರುತ್ತವೆಯಾದರೂ, ಔಪಚಾರಿಕ ತರಬೇತಿಯನ್ನು ಅವರು ಪಡೆದಿರುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಯೋಜನೆ, ಆಡಳಿತ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ಹಂತಗಳಲ್ಲಿ ನೌಕರರಿಗೆ ಮಾತ್ರವಲ್ಲದೆ ಚುನಾಯಿತ ಸಂಸ್ಥೆಗಳ ಸದಸ್ಯರಿಗೆ ಮತ್ತು ಅನೇಕ ನಾಗರಿಕ ಸಮಾಜದ ಸಂಸ್ಥೆಗಳ ಸದಸ್ಯರಿಗೆ ಸಹ ಸಮಾನವಾಗಿ ಸಾಮರ್ಥ್ಯ ನಿರ್ಮಾಣವನ್ನು ಕೈಗೊಳ್ಳಬೇಕು. ಎಲ್ಲೆಲ್ಲಿ ಸಾಮರ್ಥ್ಯಗಳು ಮತ್ತು ಸಂಸ್ಥೆಗಳು ಅಸ್ತಿತ್ವದಲ್ಲಿವೆಯೋ ಅಲ್ಲಿ, DEE&L, ಸಮನ್ವಯದ ಗಣನೀಯ ಪಾತ್ರವನ್ನು ವಹಿಸುವುದರೊಂದಿಗೆ, ಕಾರ್ಯಗತಗೊಳಿಸುವ ಎಲ್ಲಾ ಏಜೆನ್ಸಿಗಳೂ ಈ ಸಾಮರ್ಥ್ಯ ನಿರ್ಮಾಣದ ಹೊಣೆಯನ್ನು ಹಂಚಿಕೊಳ್ಳತಕ್ಕದ್ದು.

### 4.6 ಸಂಗಮ (convergence)

ಈ ಒಂದು ಬೃಹತ್ ಗಾತ್ರದ, ವೈವಿಧ್ಯತೆಯುಳ್ಳ ಮತ್ತು ಸಂಕೀರ್ಣ ಯೋಜನೆಯನ್ನು ನಿರ್ವಹಿಸಲು ಚಿಕ್ಕ ಮಕ್ಕಳಿಗೆ ಸಂಬಂಧಿಸಿದ ಎಲ್ಲಾ

ಸಚಿವಾಲಯಗಳ ಒಗ್ಗೂಡಿಸುವಿಕೆ, ಈಗಾಗಲೇ ಅಸ್ತಿತ್ವದಲ್ಲಿರುವ National Council for Teacher Education-NCTEಯಂತಹ ಮತ್ತು ಮುಂದೆ ಸ್ಥಾಪನೆಯಾಗುವ ಅನೇಕ ಸ್ವಾಯತ್ತ ಪ್ರಾಧಿಕರಣಗಳ ನಡುವಿನ ಸಹಕಾರ ಮತ್ತು ಈ ವಿಷಯವಾಗಿ ವಿವಿಧ ಅಂಶಗಳನ್ನು ನಿರ್ವಹಿಸುವ ಅನೇಕ ಶೈಕ್ಷಣಿಕ ಸಂಸ್ಥೆಗಳ ನಡುವಿನ ಸಂಪರ್ಕಜಾಲವನ್ನು ಬೆಳೆಸುವುದು ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ (DEE&L ) ಮತ್ತೊಂದು ಮುಖ್ಯ ಹೊಣೆಯಾಗಿರುತ್ತದೆ.

ಅದರ ಜೊತೆಗೆ ಈ ಕೆಳಗಿನ ಮುಖ್ಯ ಅಂಶಗಳ ಮೇಲೂ ಗಮನಹರಿಸಬೇಕಾಗುತ್ತದೆ:

- ಸರಳವಾದ ವಿವರಗಳ ಪಟ್ಟಿಯಿಂದ ಆರಂಭಿಸಿ, ನಂತರ ನೋಂದಣಿ ಮಾಡುವುದು ಮತ್ತು ಈಗಾಗಲೇ ಇರುವ ದತ್ತಾಂಶ ಸಂಗ್ರಹ ವ್ಯವಸ್ಥೆ, ರಾಷ್ಟ್ರೀಯ ವರದಿ ವ್ಯವಸ್ಥೆ ಹಾಗೂ ಲೆಕ್ಕವಿಡುವ ವ್ಯವಸ್ಥೆಗಳೊಂದಿಗೆ ಸಂಪರ್ಕವೇರ್ಪಡಿಸುವ ಮೂಲಕ ಒಂದು ದತ್ತಾಂಶ ಸಂಚಯಕ್ಕಾಗಿ ವರದಿ ವ್ಯವಸ್ಥೆಗಳನ್ನು ರೂಪಿಸುವುದು.
- ಎಲ್ಲಾ ಹಂತಗಳಲ್ಲಿ ಸಮರ್ಪಕ ಏಜೆನ್ಸಿಗಳಿಂದ ಸಂಯೋಜಿಸಲ್ಪಟ್ಟ ಅವಶ್ಯಕ ಸಾಂಸ್ಥಿಕ ಕಾರ್ಯವಿಧಾನಗಳನ್ನು ರೂಪಿಸುವುದು.
- ನೋಡಲ್ ಏಜೆನ್ಸಿಗಳ ಸಹಕಾರದೊಂದಿಗೆ ವಿವಿಧ ಹಂತಗಳಲ್ಲಿ ಸಂಶೋಧನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನಕ್ಕಾಗಿ ಸೂಕ್ತ ವ್ಯವಸ್ಥೆಗಳು ಮತ್ತು ಸಂಸ್ಥೆಗಳನ್ನು ಸ್ಥಾಪಿಸುವುದು.

## 4.7 ಮುಕ್ತಾಯ

ಇದಾದ ನಂತರ ಪಠ್ಯಕ್ರಮ ಸುಧಾರಣೆಗಳು ಕಾರ್ಯರೂಪಕ್ಕೆ ಬರುವ ನಿಟ್ಟಿನಲ್ಲಿ ಈ ಮುಂದಿನ ಅವಶ್ಯಕ ಹೆಜ್ಜೆಗಳನ್ನಿಡುವುದು ಸಾಧ್ಯವಾಗುತ್ತದೆ:

1. ಬೆಳವಣಿಗೆಯನ್ನು ಹೆಚ್ಚಿಸುವ ಉದ್ದೇಶದೊಂದಿಗೆ ಪ್ರತೀ ವಯೋಮಾನದ ಮಕ್ಕಳಿಗೆ ಸೂಕ್ತವಾಗುವಂತಹ ಪಠ್ಯಕ್ರಮ ಮತ್ತು ವೈವಿಧ್ಯಮಯ ಯೋಜನೆಗಳನ್ನು ರೂಪಿಸಬೇಕು, ಅದೇ ಹೊತ್ತಿಗೆ ಮೊದಲು ಪ್ರಸ್ತಾಪಿಸಿದಂತೆ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ವೈವಿಧ್ಯತೆಗಳನ್ನು, ಸ್ಥಳೀಯ ಸಂದರ್ಭಗಳನ್ನು ಮತ್ತು ಅಗತ್ಯಗಳನ್ನು ಹಾಗೂ ವಿವಿಧ ಸಾಂಸ್ಥಿಕ ಚೌಕಟ್ಟುಗಳನ್ನೂ ಪರಿಗಣಿಸಬೇಕಾಗುತ್ತದೆ.
2. ಪ್ರತೀ ಹಂತದಲ್ಲಿಯೂ ವಿವಿಧ ಪ್ರಕಾರದ ತರಬೇತಿ ಕೋರ್ಸುಗಳಿಗೆ ಸಮರ್ಪಕ ವಿಷಯಗಳು ಮತ್ತು ವಿಧಾನಶಾಸ್ತ್ರವನ್ನು ರೂಪಿಸಿ, ವೈವಿಧ್ಯತೆ ಮತ್ತು ಸಾಂದರ್ಭಿಕ ಅಗತ್ಯಗಳಿಗೆ ತಕ್ಕಂತೆ ಬದಲಾಯಿಸಿಕೊಳ್ಳಬೇಕಾದ ಅಗತ್ಯವನ್ನು, ವಿವಿಧ ಶೈಕ್ಷಣಿಕ ಹಂತಗಳಿಗೆ ಒಗ್ಗೊಡುವ ಅವಶ್ಯಕತೆಗಳನ್ನು ಹಾಗೂ ಸೇವಾ ಪೂರ್ವ, ಸೇವಾ ನಿರತ, ಪುನಶ್ಚೇತನ  ತರಬೇತಿ ಮತ್ತು ದೂರಶಿಕ್ಷಣದಂತಹ ವಿವಿಧ ವಿಧಾನಗಳನ್ನು ರೂಪಿಸುವ ಅಗತ್ಯವನ್ನು ಮನದಲ್ಲಿಡಿ.
3. ಮೇಲೆ ಉಲ್ಲೇಖಿಸಿದ ಗುರಿಗಳನ್ನು ಸಾಧಿಸಲು ಶಿಕ್ಷಕರ ಶಿಕ್ಷಕರಿಗೆ ತರಬೇತಿ ನೀಡುವ ಮೂಲಕ, ಸಂಪನ್ಮೂಲಗಳು ಮತ್ತು ತರಬೇತಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವ ಮೂಲಕ, ಮತ್ತು ಸಮರ್ಪಕ ಪ್ರಾಯೋಗಿಕ

ಅನುಭವವನ್ನು ಮತ್ತು ಅವರಿಗೆ ಅನಾವರಣದ ಅವಕಾಶವನ್ನು ಒದಗಿಸುವ ಮೂಲಕ ಉನ್ನತ ಸ್ತರದಲ್ಲಿ ಸಾಮರ್ಥ್ಯವನ್ನು ಬೆಳೆಸಿ.

4. ಶಾಲಾಪೂರ್ವ ಕೇಂದ್ರಗಳಿಗೆ ಮತ್ತು ತರಬೇತಿ ಕೋರ್ಸ್/ಸಂಸ್ಥೆಗಳಿಗೆ ಮೂಲಭೂತ ನಿಯಮಗಳು ಮತ್ತು ಮಾನದಂಡಗಳನ್ನು ರೂಪಿಸಿ.
5. ಖಾಸಗಿ ಮತ್ತು ಸ್ವಯಂಸೇವಾ ಕ್ಷೇತ್ರಗಳಿಗೆ ಸಮರ್ಪಕ ನಿಯಂತ್ರಕ ಚೌಕಟ್ಟುಗಳನ್ನು ರೂಪಿಸಿ.

ಇವು MHRDಯು ನಿರ್ವಹಿಸಬೇಕಾದ ಮೂಲಭೂತ ಕಾರ್ಯಗಳು. ಇವು ECCEಯನ್ನು ಶೈಕ್ಷಣಿಕ ವ್ಯವಸ್ಥೆಯ ಮುಖ್ಯವಾಹಿನಿಯ ಒಂದು ಅಂಗವನ್ನಾಗಿ ಪರಿಗಣಿಸಿದ ನಂತರ ಆಗುವಂಥದ್ದು.

## 5. ECCEಯ ಪಠ್ಯಕ್ರಮ ಚೌಕಟ್ಟು

ಮಕ್ಕಳ ಬದುಕಿನಲ್ಲಿ ಈ ಅವಧಿಗೆ ಇರುವ ಮಹತ್ವ ಮತ್ತು ಮಗುವಿನ ಸಮರ್ಪಕವಾದ ಸಮಗ್ರ ಬೆಳವಣಿಗೆಗೆ ಪುಷ್ಟಿ ನೀಡುವಂತಹ ಪಠ್ಯಕ್ರಮದ ಅಗತ್ಯವನ್ನು ಈಗಾಗಲೇ ಸಾಬೀತುಪಡಿಸಲಾಗಿದೆ. ಆ ರೀತಿಯ ಬೆಳವಣಿಗೆಗೆ ಯಾವ ರೀತಿಯ ಪಠ್ಯಕ್ರಮದ ಅಗತ್ಯವಿರುತ್ತದೆ? ಈ ಮುಂದಿನ ಪುಟಗಳಲ್ಲಿ ಅಂತಹ ಒಂದು ಸೂಕ್ತ ಪಠ್ಯಕ್ರಮದ ಚೌಕಟ್ಟನ್ನು ನಿರ್ಧರಿಸಲು ಅಗತ್ಯವಿರುವ ಸ್ಥೂಲ ತತ್ವಗಳನ್ನು ಪ್ರಸ್ತುತಪಡಿಸಲಾಗುತ್ತದೆ. ಅವುಗಳನ್ನು ಸೂಚಕ ಮಾರ್ಗದರ್ಶನಗಳೆಂದು ಪರಿಗಣಿಸಬೇಕು, ಕಟ್ಟಳೆಗಳೆಂದಲ್ಲ.

ಪಠ್ಯಕ್ರಮವು ಮಕ್ಕಳಿಗೆ ಒದಗಿಸಲಾಗುವ ಎಲ್ಲಾ ರೀತಿಯ ಅನುಭವಗಳ ಒಂದು ಮೊತ್ತವಾಗಿರುತ್ತದೆ, ಅದನ್ನು ಒಂದು ಪಾಠಸೂಚಿಗೆ(ಸಿಲಬಸ್) ಇಳಿಸಲಾಗದು. ಹೀಗಾಗಿ ಅದನ್ನು ವಿವಿಧ ಸಂದರ್ಭಗಳಲ್ಲಿ ಮಗುವಿನ ಅಗತ್ಯಗಳಿಗೆ ತಕ್ಕಂತೆ ರಚಿಸಬೇಕಾಗುತ್ತದೆ, ಮತ್ತು ಅದು ಮಗುವಿನ ವಯಸ್ಸು, ಅಗತ್ಯಗಳು, ಸಾಮರ್ಥ್ಯಗಳಿಗೆ ತಕ್ಕಂತೆ ಇರಬೇಕಾಗುತ್ತದೆ. ಅದನ್ನು ರೂಪಿಸುವ ಮತ್ತು ತರಗತಿಕೋಣೆಯಲ್ಲಿ ನಿರ್ವಹಿಸುವ ಎರಡೂ ಕಾರ್ಯಗಳಲ್ಲಿ ಶಿಕ್ಷಕರು ಸಂಪೂರ್ಣವಾಗಿ ತೊಡಗಿಕೊಳ್ಳಬೇಕು. ಪಠ್ಯಕ್ರಮವು ನೀರಸವಾಗಿರಬಾರದು, ಅರ್ಥಹೀನವೆನಿಸಬಾರದು ಮತ್ತು ಇಂದು ಶಾಲಾಪೂರ್ವ ಶಿಕ್ಷಣದ ಹೆಸರಿನಲ್ಲಿ ಮಕ್ಕಳ ಮೇಲೆ ಅವರ ವಯಸ್ಸು ಮತ್ತು ಅಗತ್ಯಗಳಿಗೆ ಅತ್ಯಂತ ಅನುಚಿತವಾದವುಗಳನ್ನೇ ಹೇರುವ ಕ್ರೂರ ಪ್ರಕ್ರಿಯೆಗಳು ಕೂಡ ಸಲ್ಲ ಎನ್ನುವುದನ್ನು ಪುನರುಚ್ಚರಿಸುವುದು ಮುಖ್ಯ. ಮಗುವಿಗೆ ಕಲಿಯುವ ಆಸೆಯು ಸಹಜವಾಗಿಯೇ ಇರುತ್ತದೆ, ಆದರೆ ಪ್ರಚಲಿತ ವಿದ್ಯಮಾನಗಳು ಹೆಚ್ಚಿನದನ್ನು ಕಲಿಯುವ ನಿಟ್ಟಿನ ಮಗುವಿನ ತೀವ್ರ ಆಸೆಯನ್ನೇ ಹೊಸಕಿ ಹಾಕುತ್ತಿವೆ, ಮಾತ್ರವಲ್ಲ, ಮಗುವಿನ ಆತ್ಮವಿಶ್ವಾಸವನ್ನೂ, ಆತ್ಮ ಗೌರವವನ್ನೂ ಕುಂಠಿತಗೊಳಿಸುತ್ತಿವೆ; ಅದರ ಪರಿಣಾಮವಾಗಿ ಶಾಲೆಯಲ್ಲಿ ಮಗುವಿನ ಶೈಕ್ಷಣಿಕ ಸಾಧನೆ ಕಳಪೆಯಾಗುತ್ತದೆ ಮತ್ತು ಮುಂದಿನ ಹಂತದಲ್ಲಿ ಅರ್ಧದಲ್ಲೇ ಶಿಕ್ಷಣವನ್ನು ಮೊಟಕುಗೊಳಿಸುವುದಕ್ಕೂ ಅದು ಕಾರಣವಾಗುತ್ತದೆ. ಈ ಹಂತದಲ್ಲಿ ಎದುರಾಗುವ ಅನೇಕ ಕಾರ್ಯರೀತಿಗಳು ಬೇಸರ

ಹುಟ್ಟಿಸುವುದೊಂದೇ ಅಲ್ಲ, ಮಗುವಿಗೆ ಅದು ಅರ್ಥಹೀನ ದಿನಚರಿಯೂ ಆಗಿರುತ್ತದೆಯಲ್ಲದೆ, ಅವು ಮಾರಕವೂ ಅಪಾಯಕಾರಿಯೂ ಆಗಬಹುದು.

**5.1 ಬೋಧನಾಕ್ರಮದ ಪ್ರಕ್ರಿಯೆಗಳು**

ECCEಯ ಸಾಮಾನ್ಯ ಉದ್ದೇಶಗಳನ್ನು ಈ ಕೆಳಗಿನಂತೆ ವಿವರಿಸಬಹುದು:

a. ಮಗುವು ತನ್ನ ಸಾಮರ್ಥ್ಯದ ಗರಿಷ್ಠ ಮಿತಿಯನ್ನು ತಲುಪುವಂತೆ ಮಾಡುವ ಮೂಲಕ ಅದರ ಭವಿಷ್ಯದ ಒಂದು ಆರೋಗ್ಯಕರ, ಉತ್ಪಾದಕ, ಮತ್ತು ಸಂತೃಪ್ತಿಯ ಬದುಕಿಗೆ ಅಡಿಪಾಯವನ್ನು ಹಾಕುವುದು;

b. ಪ್ರಾಥಮಿಕ ಶಾಲಾಹಂತಕ್ಕೆ ಪ್ರವೇಶಿಸಿ ಯಶಸ್ಸನ್ನು ಸಾಧಿಸಲು ಮಗುವನ್ನು ಸಿದ್ಧಗೊಳಿಸುವುದು; ಮತ್ತು

c. ಮಹಿಳೆಯರು ಮತ್ತು ಬಾಲಕಿಯರು ಶಾಲಾಶಿಕ್ಷಣವನ್ನು ಪ್ರವೇಶಿಸಲು/ಶಿಕ್ಷಣವನ್ನು ಮುಂದುವರೆಸಲು ಮತ್ತು ತರಬೇತಿ ಪಡೆದು ಕಾರ್ಯಪಡೆಯ ಒಂದು ಭಾಗವಾಗಲು ಬೆಂಬಲ ಸೇವೆಗಳನ್ನು ಒದಗಿಸುವುದು

ಈ ಉದ್ದೇಶಗಳನ್ನು ಸಾಧಿಸಲು ಪಠ್ಯಕ್ರಮವು ಹೀಗಿರಬೇಕು:

- ಬೆಳವಣಿಗೆಯ ದೃಷ್ಟಿಯಿಂದ ಸೂಕ್ತವಾಗಿದ್ದು, ಚಟುವಟಿಕೆಯನ್ನು ಆಧರಿಸಿರಬೇಕು, ಮಗುವಿನ ಅಗತ್ಯಗಳು, ಆಸಕ್ತಿಗಳು, ಸಾಮರ್ಥ್ಯಗಳು ಮತ್ತು ವಯಸ್ಸಿಗೆ ಅನುಗುಣವಾಗಿರಬೇಕು.
- ಎಲ್ಲಾ ಕ್ಷೇತ್ರಗಳಲ್ಲಿಯೂ ಸಮಗ್ರ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಪೋಷಿಸಲು ನಾನಾ ಅನುಭವಗಳ ಒಂದು ಸಮನ್ವಯೀಕೃತ ಸಮುಚ್ಚಯವನ್ನು ಹೊಂದಿರಬೇಕು, ಉದಾಹರಣೆಗೆ ಆರೋಗ್ಯ ಮತ್ತು ಸ್ವಾಸ್ಥ್ಯ, ಹಾಗೂ ಸಂಜ್ಞಾನಾತ್ಮಕ, ದೈಹಿಕ, ಸಾಮಾಜಿಕ, ಭಾವನಾತ್ಮಕ, ಮತ್ತು ಭಾಷಾ ಬೆಳವಣಿಗೆಗಳನ್ನು ಅಂತರ್‌ಸಂಬಂಧಿತ ಕೊಂಡಿಗಳ ಮೂಲಕ ಪೋಷಿಸುವಂತಿರಬೇಕು.
- ನಮ್ಮ ದೇಶದ ವಿವಿಧ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಮತ್ತು ಭಾಷಾ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತಿರಬೇಕು, ಜೊತೆಗೆ ಮಕ್ಕಳಲ್ಲಿ ಇರಬಹುದಾದ ವ್ಯಕ್ತಿಗತ ಭಿನ್ನತೆಗಳಿಗೆ ಅನುಗುಣವಾಗಿ ಅಳವಡಿಸುವಂತಿರಬೇಕು.
- ಮಗುವಿನ ಪ್ರಾಥಮಿಕ ಶಾಲೆಯ ದಿನಚರಿಗಳಿಗೆ ಮತ್ತು ಇನ್ನೂ ಹೆಚ್ಚಿನ ಔಪಚಾರಿಕ ಬೋಧನೆಯ ಅವಶ್ಯಕತೆಗಳಿಗೆ ಹೊಂದಿಕೊಳ್ಳಲು ಸಹಾಯ ಮಾಡುವಂತಿರಬೇಕು.

**5.2 ಪಠ್ಯಕ್ರಮ ಚೌಕಟ್ಟಿನ ಮೂಲತತ್ವಗಳು**

ಬಹಳ ಹಿಂದಿನಿಂದಲೇ ಚಿಂತಕರು ಬಾಲ್ಯದ ಸ್ವರೂಪ ಮತ್ತು ಸಾಮಾಜೀಕರಣದ ಬಗೆಗೆ ಆಲೋಚಿಸುತ್ತ ಬಂದಿದ್ದಾರೆ. ಪ್ಲೇಟೋನ ಕಾಲಮಾನಕ್ಕೂ ಶತಮಾನಗಳ ನಂತರದ ಗಾಂಧಿಯವರ, ಕರಕೌಶಲ್ಯಗಳನ್ನು ಆಧರಿಸಿದ ಮೂಲಭೂತ ಶಿಕ್ಷಣದ ವಿಚಾರಗಳು ಅವರ ಸಮಕಾಲೀನರಿಗೆ ಕ್ರಾಂತಿಕಾರಿ ಮತ್ತು

ಅಸ್ವೀಕಾರಾರ್ಹವೆನಿಸಿದ್ದ ರೀತಿಯಲ್ಲೇ, ಚಿಕ್ಕ ಮಕ್ಕಳಿಗೆ ಪ್ರಭುತ್ವದಿಂದ ನಿರ್ವಹಿಸಲ್ಪಡುವ ಶಾಲೆಗಳಲ್ಲಿ ಮಾರ್ಗದರ್ಶನವನ್ನು ನೀಡಬೇಕೆನ್ನುವ ಪ್ಲೇಟೋನ ಕಾಲದಲ್ಲಿನ ಆತನ ವಿಚಾರಗಳು ಸಹ ಪರಿಗಣಿಸಲ್ಪಟ್ಟಿದ್ದವು. ಆ ಕಾಲಕ್ಕೆ ಪಾಶ್ಚಾತ್ಯ ಚಿಂತಕರಾದ ರೂಸೋ, ಫ್ರೊಬೆಲ್, ಡ್ಯೂವಿ, ಮಾಂಟೆಸರಿ ಮತ್ತು ಇತರರು ಆರಂಭಿಕ ಬಾಲ್ಯದ ಶಿಕ್ಷಣವನ್ನು ಕುರಿತ ಆಂದೋಲನದ ಆದ್ಯ ಪ್ರವರ್ತಕರಾಗಿದ್ದಾರೆ. ಅವರ ವಿಚಾರಗಳು ಪಠ್ಯಕ್ರಮದ ವಿಷಯಗಳನ್ನು ರೂಪಿಸುವ ನಿಟ್ಟಿನ ಸಂವೇದಕಗಳು ಮತ್ತು ಪ್ರಾಯೋಗಿಕ ಚಟುವಟಿಕೆಗಳಿಗೆ ದಾರಿಯನ್ನು ತೆರೆದಿವೆ. ಆಟ, ಕಲೆ, ತಾಳ, ಪ್ರಾಸ, ಚಲನೆ, ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಯ ಮಹತ್ವವನ್ನು ಕುರಿತು ಅವರು ನೀಡಿದ ಪ್ರಾಧಾನ್ಯತೆ ಮತ್ತು ಒಳನೋಟಗಳು ತರಗತಿಯ ಗತಿಶೀಲತೆಯಲ್ಲಿ ಈ ಅಂಶಗಳನ್ನು ಒಳಗೊಳ್ಳುವ ಹಾಗೆ ಮಾಡಿವೆ. ಭಾರತೀಯ ಚಿಂತಕರು ಚಿಕ್ಕ ಮಕ್ಕಳನ್ನು ಕುರಿತ ಅವಲೋಕನಗಳು ಮತ್ತು ವಿವಿಧ ಸಾಮಗ್ರಿಗಳನ್ನು ಬಳಸಿದ ಚಟುವಟಿಕೆಗಳು ಮಕ್ಕಳಿಗೆ ಆಸಕ್ತಿಯನ್ನುಂಟು ಮಾಡುತ್ತವೆ ಎಂಬುದನ್ನು ಕುರಿತ ತಮ್ಮ ಕಾಣ್ಕೆಗಳ ಮೂಲಕವೂ ಮಾರ್ಗದರ್ಶನವನ್ನು ಪಡೆದಿದ್ದಾರೆ. ಚಿಕ್ಕಮಕ್ಕಳಿಗೆ ಸಂಬಂಧಿಸಿದ ಆರೈಕೆ ಮತ್ತು ಶಿಕ್ಷಣದಲ್ಲಿ ಮಗು ಕೇಂದ್ರಿತ ವಿಧಾನದ ಪರಿಕಲ್ಪನೆಯನ್ನು ರೂಪಿಸಿದವರಲ್ಲಿ ಗಾಂಧಿ, ಟ್ಯಾಗೋರ್, ಗಿಜುಭಾಯಿ ಬಡೇಖಾ, ತಾರಾಬಾಯಿ ಮೋದಕ್ ಪ್ರಪ್ರಥಮ ಭಾರತೀಯರಾಗಿದ್ದಾರೆ.

ಇತ್ತೀಚಿನ ಕಾಲದಲ್ಲಿ ಪಿಯಝೆ, ಬ್ರೂನರ್ ಮತ್ತು ವ್ಯಗೋಟ್ಸ್ಕಿಯವರಂತಹ ಬೆಳವಣಿಗೆಯ ಮನೋವಿಜ್ಞಾನ ಮತ್ತು ಮಕ್ಕಳ ಬೆಳವಣಿಗೆಯನ್ನು ಕುರಿತ ವಿದ್ವಾಂಸರು ತಮ್ಮ ಸಂಶೋಧನೆಗಳ ಆಧಾರದ ಮೇಲೆ ಮಗುವಿಗೆ ಆಟ ಮತ್ತು ಚಟುವಟಿಕೆಗಳೇ ಕಲಿಕೆಯ ನೈಸರ್ಗಿಕ ವಿಧಾನಗಳು ಎಂಬ ಅಂಶವನ್ನು ಒತ್ತಿ ಹೇಳುತ್ತಾರೆ. ಈ ವೃತ್ತಿನಿರತರು ಮತ್ತು ಚಿಂತಕರ ಒಳನೋಟಗಳು ಮತ್ತು ತತ್ವಗಳ ಆಧಾರದ ಮೇಲೆ ನಮಗೆ ಈಗ ಬಾಲ್ಯದ ಮೂಲ ಸ್ವರೂಪವನ್ನು ವ್ಯಾಖ್ಯಾನಿಸುವ ಕಲಿಕೆಯ ವಿನ್ಯಾಸಗಳ ಗ್ರಹಿಕೆಯನ್ನು ಈ ಯೋಜನೆಗಳು ಆಧರಿಸತಕ್ಕದ್ದು ಎಂಬ ಅರಿವು ಮೂಡಿದೆ. ಆರಂಭಿಕ ಬಾಲ್ಯದ ಆರೈಕೆ ಮತ್ತು ಶಿಕ್ಷಣದ (ECCE) ಶಿಕ್ಷಕನು ಈ ಕೆಳಗಿನ ಮೂಲ ತತ್ವಗಳನ್ನು ಅರ್ಥ ಮಾಡಿಕೊಂಡು ಸಜ್ಜಾಗಬೇಕು:

- ಆಟವನ್ನಾಧರಿಸಿದ ಕಲಿಕೆ
- ಕಲೆಯನ್ನಾಧರಿಸಿದ ಶಿಕ್ಷಣ
- ಮಕ್ಕಳ ಆಲೋಚನೆಯ ವಿಶೇಷ ಲಕ್ಷಣಗಳನ್ನು ಗುರುತಿಸುವುದು
- ಪಠ್ಯ (ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆ) ಮತ್ತು ಸಾಂಸ್ಕೃತಿಕ ಆಯಾಮಗಳ ಬೆಸುಗೆ
- ಔಪಚಾರಿಕ ಮತ್ತು ಅನೌಪಚಾರಿಕ ಪಾರಸ್ಪರಿಕ ಕ್ರಿಯೆಗಳ ಮಿಶ್ರಣ
- ನಿತ್ಯದ ದಿನಚರಿಯಲ್ಲಿ ಪರಿಚಿತ ಮತ್ತು ಅನಿರೀಕ್ಷಿತ ಸವಾಲುಗಳ ಅನುಭವಗಳು.
- ಪರಿಣತಿಗಿಂತ ಅನುಭವಕ್ಕೆ ಹೆಚ್ಚು ಪ್ರಾಮುಖ್ಯತೆ
- ಬೆಳವಣಿಗೆಯ ದೃಷ್ಟಿಯಿಂದ ಸೂಕ್ತವಾದ ಅಭ್ಯಾಸಗಳು ಮತ್ತು ಸಾಂದರ್ಭಿಕ ಹೊಂದಾಣಿಕೆ.

- ಸ್ಥಳೀಯ ಸಾಮಗ್ರಿಗಳು, ಕಲೆಗಳು ಮತ್ತು ಜ್ಞಾನವನ್ನು ಬಳಸುವುದು.
- ಆರೋಗ್ಯಕರ ಅಭ್ಯಾಸಗಳನ್ನು ಆಧರಿಸಿ ಆರೋಗ್ಯ ಮತ್ತು ಸ್ವಾಸ್ಥ್ಯದ ಸಮನ್ವಯ

ಈ ತತ್ವಗಳ ಸೂಚ್ಯಾರ್ಥಗಳನ್ನು ಹೆಚ್ಚು ವಿಸ್ತೃತವಾಗಿ ಹೇಳುವುದಕ್ಕಿಂತ ಮೊದಲು ಈ ಕೆಳಗಿನ ಅಂಶಗಳತ್ತ ಸಂಕ್ಷಿಪ್ತವಾಗಿ ಒಮ್ಮೆ ಕಣ್ಣು ಹಾಯಿಸುವುದು ಸಹಾಯಕ.

a. ಬೆಳವಣಿಗೆಯ ವಿವಿಧ ಕ್ಷೇತ್ರಗಳು
b. ಮಕ್ಕಳ ಬೇರೆ ಬೇರೆ ವಯಸ್ಸುಗಳಲ್ಲಿ ಬೆಳವಣಿಗೆಗೆ ಸಂಬಂಧಿಸಿದ ಗುಣಲಕ್ಷಣಗಳು
c. ಮಕ್ಕಳ ಕಲಿಕೆಯ ಅಗತ್ಯಗಳ ಸ್ವರೂಪ

**a. ಬೆಳವಣಿಗೆಯ ಕ್ಷೇತ್ರಗಳು**

- ಅಂಗಚಲನೆಯ ಕ್ಷೇತ್ರ
- ಸಂವೇದಕ ಕ್ಷೇತ್ರ
- ಅರಿವಿಗೆ ಸಂಬಂಧಿಸಿದ ಕ್ಷೇತ್ರ (ಸಂಜ್ಞಾನಾತ್ಮಕ)
- ಭಾಷಾ ಕ್ಷೇತ್ರ
- ಭಾವಗಳ ಕ್ಷೇತ್ರ
- ಸಾಮಾಜಿಕ ಕ್ಷೇತ್ರ
- ವೈಯಕ್ತಿಕ ಕ್ಷೇತ್ರ

ಪ್ರತೀ ಕ್ಷೇತ್ರದೊಳಗೆ ಇರುವ ವಿವಿಧ ಕೌಶಲ್ಯಗಳ ಬೆಳವಣಿಗೆಯು ನಿರಂತರ ಪ್ರಕ್ರಿಯೆಯಾಗಿದೆ; ಬೆಳವಣಿಗೆಯ ಹಂತಗಳ ವಿವರಗಳು ಮಕ್ಕಳ ಬೆಳವಣಿಗೆಯನ್ನು ಕುರಿತು ಸಾಮಾನ್ಯವಾಗಿ ಲಭ್ಯವಿರುವ ಯಾವುದೇ ಪುಸ್ತಕಗಳಲ್ಲಿ ಅಥವಾ ಶಿಕ್ಷಕರ ಕೈಪಿಡಿಗಳಲ್ಲಿ ಸಿಗಬಹುದು.[48]

ಬೆಳವಣಿಗೆಯ ಕ್ಷೇತ್ರಗಳೆಲ್ಲ ಅಂತರ್‌ಸಂಬಂಧಗಳನ್ನು ಹೊಂದಿವೆ. ಮಕ್ಕಳ ಕಲಿಕೆಯು ಸಂಕುಚಿತವಾಗಿ ವ್ಯಾಖ್ಯಾನಿಸಲ್ಪಟ್ಟ ವಿಷಯಗಳ ಕ್ಷೇತ್ರದಲ್ಲಿ ಆಗುವುದಿಲ್ಲ; ಬೆಳವಣಿಗೆ ಮತ್ತು ಕಲಿಕೆಗಳು ಒಂದಕ್ಕೊಂದು ಸಂಬಂಧ ಹೊಂದಿವೆ. ಒಂದು ಆಯಾಮವನ್ನು ಪ್ರಚೋದಿಸುವ ಯಾವುದೇ ಚಟುವಟಿಕೆಯು ಉಳಿದ ಇತರ ಆಯಾಮಗಳ ಮೇಲೂ ಪರಿಣಾಮ ಬೀರುತ್ತದೆ.

ಉದಾಹರಣೆಗೆ ತರಗತಿಕೋಣೆಯಲ್ಲಿ ಕತೆ ಹೇಳುವುದು: ಮೂರು ವರ್ಷದ ಮಕ್ಕಳು ಸಣ್ಣ ಕತೆಗಳನ್ನು ಕೇಳುತ್ತಾರೆ. ಅವರ ಆಸಕ್ತಿಯನ್ನು ಹಿಡಿದಿಡಬೇಕಾದರೆ ಸೂತ್ರದ ಗೊಂಬೆಗಳು ಮತ್ತು ಅವುಗಳ ಜೊತೆಗಿನ ಶಬ್ದಗಳೊಂದಿಗಿನ ಆಟ, ಅಥವಾ ಪ್ರಾಸಗಳನ್ನು ಬಳಸಬಹುದು. ಕತೆಯ ನಿರೂಪಣೆಯು ಘಟನಾವಳಿಗಳನ್ನು ಅರ್ಥ ಮಾಡಿಕೊಳ್ಳಲು, ತಮ್ಮ ಸ್ವಂತದ ಭಾವಗಳನ್ನು ಶೋಧಿಸಲು, ಭಾಷೆಯ ಮೇಲೆ ಗಮನವಿಡಲು ಸಹ ಮಕ್ಕಳಿಗೆ ಸಹಾಯ ಮಾಡುತ್ತದೆ. ಆಲಿಸುವ ಕೌಶಲ್ಯವನ್ನು ಮಕ್ಕಳಲ್ಲಿ ನೆಲೆಗೊಳಿಸುವ ಮೂಲಕ ಶಬ್ದಜ್ಞಾನವನ್ನು ವಿಸ್ತರಿಸುವ ಮತ್ತು ಅರಿವಿನ

[48] *Swaminathan, M.Daniel,P 2000*

ವ್ಯಾಪ್ತಿಯನ್ನೂ ಹಿಗ್ಗಿಸುವ ನಿಟ್ಟಿನ ಕ್ಷಮತೆಯನ್ನು ಅರ್ಜಿಸಲು ಅವರಿಗೆ ನೆರವು ನೀಡಬಹುದು.

ಜೆಝೆಲ್‌ರವರ ನಿಯಮಗಳು, ಉತ್ತಮ ಅಂಗಚಲನೆಯ ಕೌಶಲ್ಯಗಳು ಬೆಳೆಯುವ ಹಂತದಲ್ಲಿ ಮಕ್ಕಳ ಪರಿವರ್ತನಶೀಲ ಕ್ಷಮತೆಗಳನ್ನು ವಿವರಿಸುತ್ತವೆ. ಉದಾಹರಣೆಗೆ, 3 ವರ್ಷದ ಮಕ್ಕಳು ಒಂದು ವೃತ್ತವನ್ನು ಅಥವಾ ಒಂದು ಸರಳರೇಖೆಯನ್ನು ನಕಲು ಮಾಡಬಹುದು; 4 ವರ್ಷದವರು ಕ್ರಾಸ್ ಚಿನ್ಹೆಯನ್ನು ನಕಲು ಮಾಡಬಹುದು; 5 ವರ್ಷದವರು ವಜ್ರಾಕೃತಿಯನ್ನು ಅಥವಾ ತ್ರಿಕೋನವನ್ನು ಮತ್ತು ಒಂದು ಪ್ರಿಸಮ್ ಅನ್ನೂ ನಕಲು ಮಾಡಬಹುದು. ಈ ಗ್ರಹಿಕೆಯನ್ನು ಆಧರಿಸಿ, ಮಕ್ಕಳು ವಿವಿಧ ವಿನ್ಯಾಸಗಳ ಚಿತ್ರ ಬಿಡಿಸುವ ಚಟುವಟಿಕೆಗಳನ್ನು ಮಾಡಬಹುದು, ಇದು ಬರವಣಿಗೆಯ ಅಭ್ಯಾಸದ ನಿಟ್ಟಿನ ಸನ್ನದ್ಧತೆಯನ್ನು ಪ್ರೋತ್ಸಾಹಿತ್ತದೆ.

**b. ಮಕ್ಕಳ ವಿವಿಧ ವಯಸ್ಸುಗಳಲ್ಲಿನ ಬೆಳವಣಿಗೆಗೆ ಸಂಬಂಧಿಸಿದ ಗುಣಲಕ್ಷಣಗಳು**

**ಶಿಶುಗಳು ಮತ್ತು ಅಂಬೆಗಾಲಿಡುವ ಮಕ್ಕಳು (0-2+ವಯಸ್ಸಿನ)**

ಶಿಶುಗಳು ಮತ್ತು ಅಂಬೆಗಾಲಿಡುವ ಮಕ್ಕಳು ತಮ್ಮ ಇಂದ್ರಿಯಗಳ ಮೂಲಕ (ನೋಡುವುದು, ಆಲಿಸುವುದು, ರುಚಿ ನೋಡುವುದು, ವಾಸನೆ ಗ್ರಹಿಸುವುದು ಮತ್ತು ಸ್ಪರ್ಶನ (feeling)), ದೈಹಿಕ ಚಲನೆ ಮತ್ತು ಸಾಮಾಜಿಕವಾಗಿ ಸ್ಪಂದಿಸುವ ವಯಸ್ಕರ ನಡುವಿನ ಇರುವಿಕೆಯ ನಿಟ್ಟಿನಲ್ಲಿ ಸುತ್ತಲಿನ ಪರಿಸರವನ್ನು ಅನುಭವಿಸಿ ಕಲಿಯುತ್ತಾರೆ. ಇನ್ನೂ ಓಡಾಡಲು ಬರದ ಶಿಶುಗಳೂ ಸಹ ತಮ್ಮ ಸುತ್ತಲಿನ ಜಗತ್ತಿನ ಅನೇಕ ವಿವರಗಳನ್ನು ಅಂತರ್ಗತಗೊಳಿಸಿಕೊಂಡು ಸಂಯೋಜಿಸಿಕೊಳ್ಳುತ್ತವೆ ಹಾಗು ಅವರನ್ನು ಎತ್ತಿಕೊಂಡು ಓಡಾಡಿಸುವ, ಸುತ್ತಲಿನ ಅನೇಕ ಆಸಕ್ತಿಕರ ಸಂಗತಿಗಳನ್ನು ಮತ್ತು ಜನರನ್ನು ಪರಿಚಯಿಸುವ ಪೋಷಕರಿಂದಲೂ ಲಾಭ ಪಡೆಯುತ್ತವೆ. ಓಡಾಡಲು ಬರುವ ಶಿಶುಗಳು ಮತ್ತು ಅಂಬೆಗಾಲಿಡುವ ಮಕ್ಕಳು ತಮ್ಮ ಆಟದಲ್ಲಿ ಆಟಿಕೆಗಳು, ಭಾಷೆ, ಮತ್ತು ಇತರ ಕಲಿಕಾ ಸಾಮಗ್ರಿಗಳನ್ನು ಬಳಸುವುದು ಹೆಚ್ಚುತ್ತಾ ಹೋಗುತ್ತದೆ. ಶಿಶುಗಳು ಮತ್ತು ಅಂಬೆಗಾಲಿಡುವ ಮಕ್ಕಳ ಸಾಮಾಜೀಕರಣದಲ್ಲಿ ವಯಸ್ಕರು ಮಹತ್ವಪೂರ್ಣ ಪಾತ್ರವಹಿಸುತ್ತಾರೆ ವಯಸ್ಕರೊಂದಿಗಿನ ಆಪ್ತವಾದ ಮತ್ತು ಸಕಾರಾತ್ಮಕವಾದ ಸಂಬಂಧಗಳು ಶಿಶುಗಳು ತಮ್ಮ ಸುತ್ತಲಿನ ಪ್ರಪಂಚದಲ್ಲಿ ಭರವಸೆಯ ಭಾವವನ್ನು ಬೆಳೆಸಿಕೊಳ್ಳಲು ನೆರವಾಗುತ್ತವೆ ಮತ್ತು ಅವರೊಳಗೆ ತಮ್ಮ ಸಾಮರ್ಥ್ಯದ ಭಾವಗಳನ್ನು ಮೂಡಿಸುತ್ತವೆ. ಮಗುವಿನ ಆರೋಗ್ಯಕರ ಆತ್ಮ-ಗೌರವದ ಬೆಳವಣಿಗೆಗೆ ಈ ಬಗೆಯ ಒಡನಾಟಗಳು ಬಹಳ ಮುಖ್ಯವಾಗುತ್ತವೆ. ಹೀಗೆ ವಿಶ್ವಸನೀಯ ವಯಸ್ಕರು, ಓಡಾಡುವ ಶಿಶು ಅಥವಾ ಅಂಬೆಗಾಲಿಡುವ ಮಕ್ಕಳಿಗೆ ಸುರಕ್ಷಿತ ನೆಲೆಯೆನಿಸುತ್ತಾರೆ, ಅದರ ಮೂಲಕ ಅಂಬೆಗಾಲಿಡುವ ಮಕ್ಕಳು ಪರಿಸರವನ್ನು ಅನ್ವೇಷಿಸುತ್ತಾರೆ. ಒಂಟಿಯಾಗಿ ಆಟವಾಡುವುದು (0-2 ವರ್ಷಗಳು) ಈ ವಯಸ್ಸಿನಲ್ಲಿ ರೂಢಿಗತವಾಗಿರುತ್ತದೆ. ವಯಸ್ಕರು ಅಥವಾ ದೊಡ್ಡ ವಯಸ್ಸಿನ

ಮಗುವಿನೊಂದಿಗಿನ ಆಟವನ್ನು ಮಕ್ಕಳು ಆನಂದಿಸಿದರೂ, ಸಮವಯಸ್ಕರೊಂದಿಗೆ ಅಷ್ಟಾಗಿ ಬೆರೆಯಲಾರರು.

ಈ ವರ್ಷಗಳಲ್ಲಿ ಮುಖ್ಯವಾದ ಕೌಶಲ್ಯಗಳನ್ನು, ಉದಾಹರಣೆಗೆ ಶೌಚಾಲಯದ ಬಳಕೆ, ಆಹಾರ ಸೇವನೆ ಮತ್ತು ಉಡುಪು ಧರಿಸುವುದು ಮೊದಲಾದ ವೈಯಕ್ತಿಕ ಕಾಳಜಿಯ ಅಭ್ಯಾಸಗಳನ್ನು ಅವರು ದಕ್ಕಿಸಿಕೊಳ್ಳುತ್ತಾರೆ. ಇವು ಬದುಕಿನ ಅತೀ ಅವಶ್ಯವಾದ ಕೌಶಲ್ಯಗಳು. ಮಗುವು ತಾನೇ ಪ್ರಾರಂಭಿಸಿದ ಪುನರಾವರ್ತನೆಗಳನ್ನು ಬಳಸಲು, ಹೊಸತಾಗಿ ಕಲಿತ ಕೌಶಲ್ಯಗಳನ್ನು ಅಭ್ಯಾಸ ಮಾಡಲು, ಮತ್ತು ಸ್ವಾಯತ್ತತೆ ಮತ್ತು ಯಶಸ್ಸಿನ ಭಾವಗಳನ್ನು ಅನುಭವಿಸಲು ಭರಪೂರ ಅವಕಾಶಗಳನ್ನು ನೀಡುವುದು ಈ ವಯಸ್ಸಿನ ಮಕ್ಕಳಿಗೆ ಹೆಚ್ಚು ಸೂಕ್ತವಾದ ಬೋಧನಾ ತಂತ್ರವಾಗಿದೆ. ಶಿಶುಗಳು ತಮ್ಮ ಆಟಿಕೆಗಳನ್ನು ಬೀಸುತ್ತವೆ, ಹಿಡಿದುಕೊಳ್ಳುತ್ತವೆ, ಅಪ್ಪಳಿಸುತ್ತವೆ, ಅಥವಾ ಬೀಳಿಸುತ್ತಿರುತ್ತವೆ. ಅಂಬೆಗಾಲಿಡುವ ಮಗು ಸ್ವೆಟರ್ ಹಾಕಿಕೊಳ್ಳುವಾಗ ಕಷ್ಟಪಡುವ ಕಾರಣ, ತಾಳ್ಮೆ ಅವಶ್ಯ. ಅನುಕರಿಸುವುದು, ಅಡಗಿಕೊಳ್ಳುವುದು, ಹೆಸರಿಡುವ ಆಟಗಳು ಕೂಡಾ ಈ ವಯಸ್ಸಿನಲ್ಲಿ ಕಲಿಕೆಗೆ ಮುಖ್ಯವಾಗುತ್ತವೆ. ವಾಸ್ತವರೂಪದ ಆಟಿಕೆಗಳು ಮಕ್ಕಳಿಗೆ ಸಂಕೀರ್ಣ ರೂಪದ ಆಟಗಳನ್ನು ಆಡಲು ಕಲಿಸುತ್ತವೆ.

ಎರಡು ವರ್ಷದ ಮಕ್ಕಳು ಭಾಷೆಯ ತ್ವರಿತ ಸೃಜನೆಗಾಗಿ ಕಲಿಯತೊಡಗುತ್ತವೆ. ಈಗ ಅವರಿಗೆ ಸರಳ ಪುಸ್ತಕಗಳು, ಚಿತ್ರಗಳು, ಪಜಲ್ಸ್, ಸಂಗೀತ, ಮತ್ತು ಸಕ್ರಿಯ ಆಟಗಳಿಗೆ, ಅಂದರೆ ಜಿಗಿಯಲು, ಓಡಲು, ಕುಣಿಯಲು ಸಮಯ ಮತ್ತು ಸ್ಥಳವು ಅವಶ್ಯ. ಅಂಬೆಗಾಲಿಡುವ ಮಕ್ಕಳು ಸಾಮಾಜಿಕ ಕೌಶಲಗಳನ್ನು ಅರ್ಜಿಸಲು ಪ್ರಾರಂಭಿಸುತ್ತಾರಾದರೂ ಗುಂಪುಗಳಲ್ಲಿ ಒಂದೇ ನಮೂನೆಯ ಹಲವು ಆಟಿಕೆಗಳನ್ನು ಇಡತಕ್ಕದ್ದು. ಏಕೆಂದರೆ ಅಂಬೆಗಾಲಿಡುವ ಸ್ವ-ಕೇಂದ್ರಿತ ಮಕ್ಕಳಿಗೆ ಸಹಭಾಜನದ ಭಾವನೆಯಿನ್ನೂ ಅರ್ಥವಾಗುವುದಿಲ್ಲ.

**3ರಿಂದ 5 ವರ್ಷದವರು**

ಮೂರು ವರ್ಷದವರಿಗೆ ಮಾತನಾಡಲು ಮತ್ತು ಆಲಿಸಲು ಇಷ್ಟ, ಆದರೆ ಅವರಿಗೆ ದೊಡ್ಡ ಸ್ನಾಯುಗಳ ಚಟುವಟಿಕೆಗೆ ಹೆಚ್ಚಿನ ಒತ್ತು ನೀಡುವ ಚಟುವಟಿಕೆ ಮತ್ತು ಚಲನೆಯು ಅವಶ್ಯ. ಅವರು ನಾಟಕೀಯ ಆಟಗಳು, ಚಕ್ರವಿರುವ ಆಟಿಕೆಗಳು ಮತ್ತು ಹತ್ತುವ ವಸ್ತುಗಳು, ಪಜಲ್‌ಗಳು ಮತ್ತು ಬ್ಲಾಕ್‌ಗಳು, ಹಾಗೂ ಸಂಭಾಷಿಸುವ ಮತ್ತು ಸರಳ ಕತೆಗಳನ್ನು ಆಲಿಸುವ ಅವಕಾಶಗಳನ್ನು ಆನಂದಿಸುತ್ತಾರೆ.

ನಾಲ್ಕು ವರ್ಷದವರು ಹೆಚ್ಚು ವೈವಿಧ್ಯಮಯ ಅನುಭವಗಳನ್ನು ಮತ್ತು ಜೋಡಿ ಕತ್ತರಿಗಳನ್ನು ಬಳಸುವುದು, ಚಿತ್ತಾರಗಳ ರಚನೆ, ಪಜಲ್‌ನಂತಹ ಚಾಲಾಕಿನ ವಸ್ತುಗಳು ಹಾಗೂ ಅಡುಗೆಯಂತಹ ಸಣ್ಣ ಸ್ನಾಯುಗಳ ಚಟುವಟಿಕೆಗಳನ್ನು ಹೆಚ್ಚಾಗಿ ಆನಂದಿಸುತ್ತಾರೆ. ಅವರು ಗಮನವನ್ನು ಕೇಂದ್ರೀಕರಿಸುವ ನಿಟ್ಟಿನಲ್ಲಿ ಹೆಚ್ಚು ಶಕ್ತರು ಮತ್ತು ವಸ್ತುಗಳನ್ನು ಅವುಗಳ ಆಕಾರ, ಬಣ್ಣ, ಅಥವಾ ಗಾತ್ರಕ್ಕೆ ಅನುಗುಣವಾಗಿ ನೆನಪಿಟ್ಟುಕೊಳ್ಳುತ್ತಾರೆ ಮತ್ತು ಗುರುತಿಸುತ್ತಾರೆ. ನಾಲ್ಕು ವರ್ಷದವರು

ಮೂಲಭೂತ ಗಣಿತೀಯ ಪರಿಕಲ್ಪನೆಗಳ ಗ್ರಹಿಕೆಯನ್ನು ಮತ್ತು ಸಮಸ್ಯಾ ಪರಿಹಾರದ ಕೌಶಲ್ಯಗಳನ್ನು ರೂಢಿಸಿಕೊಳ್ಳುತ್ತಿರುತ್ತಾರೆ. 3+ವಯೋಮಾನದ ಹಂತದಲ್ಲಿ ಮಕ್ಕಳು ಇತರೆ ಇಬ್ಬರು ಅಥವಾ ಮೂವರೊಂದಿಗೆ ಆಡಲು ಇಷ್ಟಪಡುತ್ತಾರೆ; 4+ವಯೋಮಾನದ ಹಂತದಲ್ಲಿ 4ರಿಂದ 8 ಮಕ್ಕಳಿರುವ ಗುಂಪಿನ ಚಟುವಟಿಕೆಗಳಲ್ಲಿ ಸಹಜವಾಗಿ ಭಾಗವಹಿಸಿ, ಸಹಕರಿಸುತ್ತಾರೆ, ಗುಂಪಿನ ಆಟಗಳನ್ನು ಸ್ವತಂತ್ರವಾಗಿ ನಿರ್ವಹಿಸಲು ಸಹ ಸಿದ್ಧರಾಗಿರುತ್ತಾರೆ.

ನಾಲ್ಕು ವರ್ಷದ ಕೆಲವು ಮಕ್ಕಳು ಮತ್ತು ಐದು ವರ್ಷದ ಬಹುತೇಕ ಮಕ್ಕಳು ವಿಚಾರಗಳನ್ನು ಇನ್ನೂ ಹೆಚ್ಚಿನ ಸಂಕೀರ್ಣ ಸಂಬಂಧಗಳನ್ನಾಗಿ ಸಂಯೋಜಿಸಬಲ್ಲರು (ಉದಾಹರಣೆಗೆ, ಒಂದಕ್ಕೊಂದು ಅನುಗುಣವಾದ ಅಂಕಿಗಳ ಪರಿಕಲ್ಪನೆಗಳು). ಅವರ ನೆನಪಿನ ಶಕ್ತಿ ಹಾಗೂ ಸಣ್ಣ ಸ್ನಾಯುಗಳ ದೈಹಿಕ ಕೌಶಲ್ಯಗಳು ವೃದ್ಧಿಸುತ್ತಿರುತ್ತವೆ. ನಾಲ್ಕು ವರ್ಷದ ಕೆಲವರು ಮತ್ತು ಐದು ವರ್ಷದ ಬಹುತೇಕರಲ್ಲಿ ಲಿಖಿತ ಭಾಷೆಯ ಕ್ರಿಯಾತ್ಮಕ ಅಂಶಗಳಲ್ಲಿ ಆಸಕ್ತಿಯು ಹೆಚ್ಚುತ್ತಿರುವುದು ಕಂಡುಬರುತ್ತದೆ. ಉದಾಹರಣೆಗೆ, ಅರ್ಥಪೂರ್ಣ ಶಬ್ದಗಳನ್ನು ಗುರುತಿಸುವುದು ಮತ್ತು ತಮ್ಮ ಸ್ವಂತ ಹೆಸರುಗಳನ್ನು ಬರೆಯುವ ಪ್ರಯತ್ನ. ಈ ವಯಸ್ಸಿನವರಿಗೆ ಕೇವಲ ಅಕ್ಷರ, ಪದಗಳ ಉಚ್ಚಾರಣೆ, ಅಕ್ಷರಕೌಶಲವನ್ನು ಅಭ್ಯಾಸ ಮಾಡಿಸುವುದಕ್ಕಿಂತ ಒಂದು ಅರ್ಥಪೂರ್ಣ ಸನ್ನಿವೇಶದಲ್ಲಿ ಭಾಷೆಯ ಮತ್ತು ಅಕ್ಷರಜ್ಞಾನದ ಕೌಶಲ್ಯಗಳನ್ನು ಪ್ರಚೋದಿಸುವಂತಹ ಮುದ್ರಣ ಸಮೃದ್ಧ ಪರಿಸರವನ್ನು ಒದಗಿಸುವುದು ಹೆಚ್ಚು ಸೂಕ್ತವೆನಿಸುತ್ತದೆ.

ತನ್ನ ಬಗ್ಗೆ, ಮನೆ ಅಥವಾ ಕುಟುಂಬವನ್ನು ಕುರಿತಂತೆ ಮಗುವಿನ ತಕ್ಷಣದ ಅನುಭವಗಳಾಚೆಗೆ 4 ಮತ್ತು 5 ವರ್ಷದ ಬಹುತೇಕರು ಕ್ರಮಿಸಬಲ್ಲರು. ಐದು ವರ್ಷದವರು ತಮ್ಮ ಸ್ವಂತದ ಪರಿಸರದಾಚೆಗಿನ ಸಮುದಾಯ ಮತ್ತು ಪ್ರಪಂಚದಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಿರುತ್ತಾರೆ ಮತ್ತು ವಿಶೇಷ ಘಟನೆಗಳನ್ನು ಮತ್ತು ಸಂಚಾರವನ್ನು ಆಸ್ವಾದಿಸುತ್ತಾರೆ.

**6ರಿಂದ 8 ವರ್ಷದವರು**

ಆರು ವರ್ಷದವರು ಬಹಳ ಸಕ್ರಿಯವಾಗಿರುತ್ತಾರೆ ಮತ್ತು ಅವರಿಗೆ ಈಗ ತಕ್ಕ ಪ್ರಮಾಣದ ಮಾತಿನ ಸಾಮರ್ಥ್ಯವೂ ಬಂದಿರುತ್ತದೆ, ಈ ಅನುಭವಗಳ ಆಧಾರದ ಮೇಲೆ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಬಲ್ಲರು ಮತ್ತು ಸಮಸ್ಯೆಗಳನ್ನು ಬಗೆಹರಿಸುವ ಕೌಶಲ್ಯಗಳನ್ನು ಬೆಳೆಸಿಕೊಳ್ಳುತ್ತಾರೆ. ಈಗ ಅವರು ನಿಯಮಗಳನ್ನು ಅರ್ಥ ಮಾಡಿಕೊಳ್ಳಬಲ್ಲರು ಮತ್ತು ನಿಯಮಗಳೊಂದಿಗೆ ಇನ್ನೂ ದೊಡ್ಡ ಹರಹಿನ ಆಟಗಳನ್ನೂ ಆಡಬಲ್ಲರು. ಸ್ಪರ್ಧಾತ್ಮಕ ಮತ್ತು ತಂಡಗಳೊಂದಿಗೆ ಆಟವಾಡುವ ಕೌಶಲ್ಯವು ಸಿದ್ಧಿಸುವುದು ಈ ಹಂತವನ್ನು ತಲುಪಿದ ನಂತರವೇ. 6 ವರ್ಷದ ಬಹುತೇಕರಿಗೆ 7 ಮತ್ತು 8 ವರ್ಷದ ಅನೇಕರಿಗೆ ದೈಹಿಕ ಪ್ರಬುದ್ಧತೆಗಿಂತಲೂ ಮಾನಸಿಕ ಪ್ರಬುದ್ಧತೆಯು ಹೆಚ್ಚಾಗಿರುತ್ತದೆ. ಆದ್ದರಿಂದ ಒಂದೆಡೆ ಕೂತು

ನಿರ್ವಹಿಸುವ ಯಾಂತ್ರಿಕ ಓದು-ಬರವಣಿಗೆಯ ಆಯಾಸಕರ ಕೆಲಸಕ್ಕಿಂತ ಕ್ರಿಯಾಶೀಲ ಚಟುವಟಿಕೆ ಮತ್ತು ಪ್ರಯೋಗಶೀಲತೆಯು ಈ ವಯಸ್ಸಿಗೆ ಬಹಳ ಸೂಕ್ತವಾದದ್ದು.

ಏಳು ವರ್ಷದವರು ತಾವು ಹೊಸದಾಗಿ ಕಲಿತ ಹಲವಾರು ದೈಹಿಕ ಮತ್ತು ಜ್ಞಾನಗ್ರಹಣ ಕೌಶಲ್ಯಗಳನ್ನು ಕೈಗೂಡಿಸಿಕೊಳ್ಳಲು ಮತ್ತು ಅಭ್ಯಸಿಸಲು ಸಮಯ ತೆಗೆದುಕೊಳ್ಳುತ್ತಾರೆ. ಅವರು ವಿವೇಚಿಸಲು, ಇನ್ನೊಬ್ಬರು ಹೇಳಿದ್ದನ್ನು ಆಲಿಸಲು ಮತ್ತು ಸಾಮಾಜಿಕ ಕೊಡುಕೊಳೆಯನ್ನು ತೋರ್ಪಡಿಸಲು ಹೆಚ್ಚು ಸಮರ್ಥರಾಗುತ್ತಿರುತ್ತಾರೆ.

ಎಂಟು ವರ್ಷದವರು ಹೆಚ್ಚಿನ ಸಾಮಾಜಿಕ ಆಸಕ್ತಿಯೊಂದಿಗೆ ಅಪಾರ ಕುತೂಹಲವನ್ನು ಸಂಯೋಜಿಸುತ್ತಾರೆ. ಈಗ ಅವರು ಬಹಳ ದೂರದದಲ್ಲಿರುವ ಇತರ ಜನರ ಬಗೆಗೂ ತಿಳಿದುಕೊಳ್ಳಬಲ್ಲರು ಒಂದು, ಎರಡು ಮತ್ತು ಮೂರನೆಯ ತರಗತಿಗಳಲ್ಲಿ ಪುಸ್ತಕಗಳನ್ನು ಓದುವ ಮತ್ತು ಕತೆಗಳನ್ನು ಕೇಳುವ ಸಾಂಕೇತಿಕ ಅನುಭವಗಳಿಂದ ಮಕ್ಕಳು ಕಲಿಯಬಲ್ಲರು. ಹಾಗಿದ್ದರೂ ಓದಿದ್ದನ್ನು ಕುರಿತ ಅವರ ಗ್ರಹಿಕೆಯು ಲಿಖಿತ ಪದಕ್ಕೂ (ಲಿಖಿತ ಪದವನ್ನು) ತಮ್ಮ ಸ್ವಂತದ ಅನುಭವಕ್ಕೂ ಸಂಬಂಧವನ್ನು ಕಲ್ಪಿಸಿಕೊಳ್ಳಬಲ್ಲ ಅವರ ಸಾಮರ್ಥ್ಯವನ್ನು ಅವಲಂಬಿಸಿದೆ. ಪ್ರಾಥಮಿಕ ಶ್ರೇಣಿಯ ಮಕ್ಕಳು ತಮ್ಮ ಅನುಭವಗಳು ಅಥವಾ ರಮ್ಯಕಲ್ಪನೆಗಳನ್ನು ಕತೆಗಳ ರೂಪದಲ್ಲಿ ಬರೆಯುವ ಅಥವಾ ಹೇಳಿ ಬರೆಸುವ ಮೂಲಕ ಲಿಖಿತ ಭಾಷೆಯೊಂದಿಗೆ ಸಂವಹಿಸಲು ಕಲಿಯುತ್ತಾರೆ. ಅಂಕಿಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳ ಬೆಳವಣಿಗೆಯಲ್ಲೂ ಇದನ್ನೇ ಕಾಣಬಹುದಾಗಿದೆ. ಅಡುಗೆ ಅಥವಾ ಮರಗೆಲಸದ ಚಟುವಟಿಕೆಗಳಂತಹ ಪರಿಮಾಣ ಮಾಪನದ ಅಗತ್ಯವಿರುವ ವಾಸ್ತವ ಬದುಕಿನ ಅನುಭವಗಳು ಮತ್ತು ಆಟದ ಸಮಯದಲ್ಲಿನ ಅವರ ಸ್ವಂತ ಆಲೋಚನೆಗಳ ಮೂಲಕ ಮಕ್ಕಳು ಗಣಿತೀಯ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುತ್ತಾರೆ.

**c. ಮಗುವಿನ ಅಗತ್ಯಗಳ ಸ್ವರೂಪ**

ಮಕ್ಕಳು ತಮ್ಮ ಬೆಳವಣಿಗೆಯ ಗುರಿಗಳನ್ನು ತಲುಪಬೇಕಾದರೆ ಈ ಕೆಳಕಂಡ ರೀತಿಯ ಅನುಭವಗಳು ಅಗತ್ಯ.

**ಈ ಕೆಳಗಿನ ಅಂಶಗಳ ಮೂಲಕ ವಯಸ್ಕರ ಅನಗತ್ಯ ನಿರ್ಬಂಧಗಳಿಂದ ಸ್ವಾತಂತ್ರ್ಯ**

- ಅನ್ವೇಷಣೆ
- ಪ್ರಯೋಗಶೀಲತೆ
- ಪ್ರೋತ್ಸಾಹ
- ಸವಾಲು

**ವ್ಯಕ್ತಿಗೆ ಈ ಕೆಳಗಿನ ಅಂಶಗಳ ಮೂಲಕ ಸಾಧನೆಯ ಖುಶಿ**

- ಅವಕಾಶ
- ಮಾರ್ಗದರ್ಶನ
- ಬೆಂಬಲ
- ಸುರಕ್ಷೆ ಮತ್ತು ಭದ್ರತೆ

**ಈ ಕೆಳಗಿನ ಸಂಗತಿಗಳ ಮೂಲಕ ಸಮೂಹವೊಂದರ ಸದಸ್ಯರಾಗಿ ಹೊಂದಿಕೊಳ್ಳುವುದು**

- ಸಹಕರಿಸುವುದು
- ಆಲಿಸುವುದು
- ಹಂಚಿಕೊಳ್ಳುವುದು
- ಸಹಾನುಭೂತಿ ತೋರಿಸುವುದು

### 5.3 ಶಿಶುಗಳು ಮತ್ತು ಅಂಬೆಗಾಲಿಡುವ ಮಕ್ಕಳಿಗೆ ಪಠ್ಯಕ್ರಮ (0-2+ ವಯಸ್ಸಿನ)[49]

ಮಗುವು ಮನೆಯಲ್ಲಿರುತ್ತದೆಯೋ ಅಥವಾ ಒಂದು ಸಾಂಸ್ಥಿಕ ವ್ಯವಸ್ಥೆಯಲ್ಲಿರುತ್ತದೆಯೋ ಎನ್ನುವ ನಿಟ್ಟಿನಲ್ಲಿ ಈ ಅಂಶಗಳು ಅನ್ವಯವಾಗುತ್ತವೆ. ಮೊದಲಿನ ಸನ್ನಿವೇಶವಾದರೆ ಕುಟುಂಬದ ಪೋಷಕರಿಗೆ ಅನೇಕ ವಿಧದ ಮಾರ್ಗದರ್ಶನ ಬೇಕಾಗಬಹುದು. ಎರಡನೆಯ ಸನ್ನಿವೇಶವಾದರೆ ತರಬೇತಿಯ ಪ್ರಾಮುಖ್ಯತೆಯನ್ನು ಪುನರುಚ್ಚರಿಸತಕ್ಕದ್ದು.

ಚಿಕ್ಕ ಮಕ್ಕಳು ಬಹಳ ಸುಲಭವಾಗಿ ದುಃಖ ಮತ್ತು ಆತಂಕಕ್ಕೆ ಒಳಗಾಗಬಲ್ಲರು. ಅವರಿಗೆ ಇನ್ನೂ ಹೆಚ್ಚಿನ ಸ್ಪಂದನೆ ಸಿಗುವಂತಹ ಸಂವೇದನಾಶೀಲ ಪರಿಸರ ಮತ್ತು ಪೋಷಣಾತ್ಮಕ ಪರಿಸರವನ್ನು ಒದಗಿಸಲು, ಅನುಪಾತದ ನಿಟ್ಟಿನಲ್ಲಿ ಮಕ್ಕಳ ಸಂಖ್ಯೆಗಿಂತ ದೊಡ್ಡವರ ಸಂಖ್ಯೆಯು ಹೆಚ್ಚಾಗಿರುವುದು ಅವಶ್ಯ.

ಅತೀ ಚಿಕ್ಕ ವಯಸ್ಸಿನ ಮಕ್ಕಳಿಗೆ ಒದಗಿಸುವ ECCE ಪರಿಸರವು ಸಾಮಾನ್ಯವಾಗಿ ವರ್ಣರಂಚಿತವಾಗಿದ್ದು, ಕೌಶಲ್ಯಪೂರಿತ ವಸ್ತುಗಳು ಸಮೃದ್ಧವಾಗಿರಬೇಕು ಅಥವಾ ಅವಶ್ಯವಿದ್ದಾಗ ಜಾಗರೂಕ ಮೇಲುಸ್ತುವಾರಿ ಮತ್ತು ಮಧ್ಯಪ್ರವೇಶದೊಂದಿಗೆ ಶಿಶುಗಳು ಮತ್ತು ಅಂಬೆಗಾಲಿಡುವ ಮಕ್ಕಳನ್ನು ಆಕರ್ಷಿಸುವ, ತೂಗಾಡುವ ಗೊಂಬೆಗಳು ಅವಶ್ಯ. ಆಪ್ತ ಮತ್ತು ಪ್ರತಿಕ್ರಿಯಾಶೀಲ ವಯಸ್ಕರು, ವಯಸ್ಕರು ಮತ್ತು ಮಗುವಿನ ನಡುವೆ ವಿಶ್ವಾಸಾರ್ಹ ಸಂಬಂಧಗಳನ್ನು ಸೃಷ್ಟಿಸುವ ಮೂಲಕ ಮಕ್ಕಳಲ್ಲಿ ವಿಶ್ವಾಸ ಮತ್ತು ಭರವಸೆಯನ್ನು ಮೂಡಿಸುತ್ತಾರೆ. ಮಕ್ಕಳು ಇತರರೊಂದಿಗೆ ಸಮೃದ್ಧ ಸಂವೇದಕ ಚಟುವಟಿಕೆಗಳ (sensory activities) ಮೂಲಕ ಸಂಬಂಧದ ಸೃಜನೆಯನ್ನು ಕಲಿಯುತ್ತಾರೆ, ಅದು ಪರಿಕಲ್ಪನೆಗಳ ಸಂರಚನೆಗೆ ಬುನಾದಿಯನ್ನು ಹಾಕುತ್ತದೆ. ಶಿಶುಗಳು ಮತ್ತು ಅಂಬೆಗಾಲಿಡುವ ಮಕ್ಕಳು ಪ್ರಯತ್ನಿಸುವ, ತಪ್ಪುಗಳನ್ನು ಮಾಡುವ, ಪುನರಾವರ್ತಿಸುವ, ಅನುಕರಿಸುವ ಮತ್ತು ಗುರುತಿಸುವ ನಿಟ್ಟಿನ ತಮ್ಮದೇ ಅನುಭವಗಳ ಮೂಲಕ ಕಲಿಯುತ್ತಾರೆ. 3 ವರ್ಷಕ್ಕಿಂತಲೂ ಕಡಿಮೆ ವಯೋಮಾನದವರನ್ನು ಕುರಿತ ಸಮರ್ಪಕವಾದ ಒಂದು ಯೋಜನೆಯು, ಆಟಗಳು, ಸಕ್ರಿಯ ಅನ್ವೇಷಣೆ, ನೆಚ್ಚತಕ್ಕ ದಿನಚರಿಗಳ ಚೌಕಟ್ಟಿನ ಒಳಗೆ ಚಲನವಲನ ಮತ್ತು ಅತಿಯಾದ ಒತ್ತಡದಿಂದ ರಕ್ಷಣೆ ಇವೆಲ್ಲವನ್ನು ಒಳಗೊಂಡಿರುತ್ತದೆ. ಮಕ್ಕಳ ಅನುಭವಗಳ ಗುಣಮಟ್ಟಕ್ಕೆ ಆಪ್ತವಾದ ಮತ್ತು ಬೆಂಬಲ ನೀಡುವ ಸಾಮಾಜಿಕ ಸಂಬಂಧಗಳು ಬಹಳ ಮುಖ್ಯವಾದ ಮತ್ತು ಅತ್ಯಾವಶ್ಯವಾದ ಕೊಡುಗೆಗಳಾಗಿರುತ್ತವೆ.

ಎಲ್ಲಾ ಶಿಶುಗಳೂ ವಿಶಿಷ್ಟವಾಗಿರುತ್ತಾರೆ, ಮತ್ತು ಅವರ ಅಗತ್ಯಗಳು ಹಾಗೂ ಸ್ಥಿತಿಗಳು ಕ್ಷಣದಿಂದ ಕ್ಷಣಕ್ಕೆ ಬದಲಾಗುತ್ತಿರುತ್ತವೆ. ವಯಸ್ಕರು ಮಕ್ಕಳ ಬದಲಾಗುವ

---

[49] *Swaminathan, M. 1989*

ಸಂಜ್ಞೆಗಳಿಗೆ ಸಂವೇದನಾಪೂರ್ವಕವಾಗಿ ಸ್ಪಂದಿಸಬೇಕು. ನಿರಂತರವಾಗಿ ಸ್ಥಿರ ರೂಪದ ಆರೈಕೆ ನೀಡುವುದು ಬಹಳ ಮುಖ್ಯ. ಶಿಶುಗಳ ಅಗತ್ಯಗಳಿಗೆ ತಕ್ಕಂತೆ ವಯಸ್ಕರ ದಿನಚರಿಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಮಗುವಿನ ಆದ್ಯತೆಗೆ ತಕ್ಕಂತೆ ಎತ್ತಿಕೊಳ್ಳುವುದು ಮತ್ತು ಸ್ಪರ್ಶಿಸುವುದನ್ನು ನಿರ್ಧರಿಸಲಾಗುತ್ತದೆ. ಮನೆಯೊಳಗೆ ತಾಯಿ ಮಾಲೀಶು ಮಾಡುತ್ತಾಳೆ, ಶಿಶುಗೀತೆಗಳನ್ನು ಹಾಡುತ್ತಾಳೆ, ಪರಿಚಿತ ಮುಖಕ್ಕೂ ಅಪರಿಚಿತರ ಮುಖಕ್ಕೂ ಇರುವ ವ್ಯತ್ಯಾಸಗಳನ್ನು ಗುರುತಿಸುವ ನಿಟ್ಟಿನಲ್ಲಿ ಮಗುವನ್ನು ಪ್ರಚೋದಿಸುವ ಮಗುವಿನ ಆಟಗಳನ್ನು ಆಡುತ್ತಾಳೆ. ಈ ಕೌಶಲ್ಯವನ್ನು ಮಗುವು 9ನೇ ತಿಂಗಳಿನಿಂದ ಕರಗತಮಾಡಿಕೊಂಡಿರುತ್ತದೆ.

ಮೊದಲನೆ ವರ್ಷದ ಕೊನೆಯ ಭಾಗದಲ್ಲಿ ಮಗು ಪ್ರಾರಂಭಾವಸ್ಥೆಯ ಭಾಷಿಕ ಧ್ವನಿಗಳನ್ನು ತ್ವರಿತವಾಗಿ ಹೊರಡಿಸಲು ಆರಂಭಿಸುತ್ತದೆ ಮತ್ತು ಅದಕ್ಕೆ ಭಾಷಾ ಪರಿಸರದಿಂದ ಪುನರಾಶ್ವಾಸನೆಯು ಬೇಕಿರುತ್ತದೆ. ಶಿಶುಗಳನ್ನು ಎತ್ತಿಕೊಳ್ಳಬೇಕು, ಮಾತನಾಡಿಸಬೇಕು, ತೂಗಬೇಕು, ಮತ್ತು ಮುದ್ದಿಸಬೇಕು. ಇದು ದೈಹಿಕ ಚಲನೆಯ ಬಯಕೆಯನ್ನೂ ಪ್ರಚೋದಿಸುತ್ತದೆ. ವಸ್ತು ಮತ್ತು ಜನರ ಲಘು ಅನುಪಸ್ಥಿತಿಯ ಹೊರತಾಗಿಯೂ ಅವು/ಅವರು ಅಲ್ಲೇ ಇರುತ್ತವೆ/ತ್ತಾರೆ ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳಲು ಆರಂಭಿಸುತ್ತಾರೆ. ಇಂತಹ ವಿನೋದಪ್ರಿಯತೆಯು ಸಕಾರಾತ್ಮಕ ಮಮತೆಯ ಸಂಬಂಧಗಳನ್ನು, ಪ್ರೇರಕ ಅನ್ವೇಷಣೆ ಹಾಗೂ ಪ್ರಯೋಗಶೀಲತೆಯನ್ನು ಪ್ರಚೋದಿಸುತ್ತದೆ.

ಮನೆಯಲ್ಲಿಯಾಗಲಿ ಅಥವಾ ಸಂಸ್ಥೆಯಲ್ಲಾಗಲಿ, ಶಿಶುಗಳ ನಿತ್ಯದ ಅನುಭವಕ್ಕೆ ದಿನಚರಿ ಮತ್ತು ಸ್ಪಂದನಾಶೀಲ ಕ್ರಿಯೆಗಳೆರಡೂ ಮುಖ್ಯವಾಗುತ್ತವೆ ಎನ್ನುವುದು ಆರೈಕೆಗಾರರಿಗೆ ತಿಳಿದಿರಬೇಕು. ಹಿಡಿದುಕೊಳ್ಳಲು ಮತ್ತು ಕುಶಲತೆಯಿಂದ ನಿರ್ವಹಿಸಲು ಚಾಕ್ಷುಷ ಪ್ರೇರಣೆ (visual stimulus) ಮತ್ತು ವಸ್ತುಗಳು ಇರತಕ್ಕದ್ದು. ಇನ್ನೂ ನಡೆಯಲು ಆರಂಭಿಸದ ಶಿಶುಗಳನ್ನು ಎತ್ತಿಕೊಂಡು ಸುತ್ತಮುತ್ತ ಓಡಾಡಿಸಬೇಕಾಗುತ್ತದೆ, ಆ ಮೂಲಕ ಶಿಶುಗಳು ಚಲನೆ ಹಾಗೂ ನಂತರದಲ್ಲಿ ಅನ್ವೇಷಣೆಗೆ ಮಹತ್ತ್ವವನ್ನು ನೀಡುತ್ತಾರೆ. ನಿಯತ ಅವಧಿಗಳಲ್ಲಿ ಊಟವನ್ನು ನೀಡಬೇಕು ಮತ್ತು ಆರೋಗ್ಯ ಸಂಬಂಧಿತ ಪ್ರಕ್ರಿಯೆಗಳು, ನಿದ್ರೆಯ ಅವಧಿಗಳೆಲ್ಲವನ್ನು ಕಾಳಜಿಯಿಂದ ನಿರ್ವಹಿಸಬೇಕಾಗುತ್ತದೆ.

ಎರಡನೆ ವರ್ಷದಲ್ಲಿ ಶಿಶು ಜನರನ್ನು ಗುರುತಿಸಲು ಆರಂಭಿಸುತ್ತದೆ ಮತ್ತು ಭಾಷೆಯನ್ನು ಆರಂಭಿಸುತ್ತದೆ. ಶಿಶುವಿನ ಪರಿಸರದಲ್ಲಿ ಸಂಭಾಷಣೆಗಳು, ಚಿತ್ರ ಪುಸ್ತಕಗಳು, ಮತ್ತು ವಸ್ತುಗಳು ಅತ್ಯಾವಶ್ಯಕ ಭಾಗವಾಗುತ್ತವೆ. ಹೊರಾಂಗಣ ಆಟ ಮತ್ತು ಇತರೆ ಆಟದ ಸಂಗಾತಿಗಳ ಒಡನಾಟವು ಕುತೂಹಲವನ್ನು ಮತ್ತು ಸ್ವಯಂಪ್ರೇರಿತರಾಗಿ ಏನನ್ನಾದರೂ ಮಾಡುವ ಭಾವವನ್ನು ಪೋಷಿಸುತ್ತದೆ.

ಎರಡು ವರ್ಷದವರಿಗೆ ಮರಳಿನ ಆಟ, ಚೆಂಡಾಟ, ಸಣ್ಣ ಸ್ನಾಯುಗಳ ಅನುಭವಗಳಿಗೆ ಅವಕಾಶವನ್ನು ನೀಡುವ ತುಂಬುವ ಹಾಗೂ ಚೆಲ್ಲುವ ಚಟುವಟಿಕೆಗಳು ಅಗತ್ಯ. ಈ ಕಲಿಕೆಗೆ ವಯಸ್ಕರು ಮಾರ್ಗದರ್ಶನ ಮಾಡುತ್ತಾರೆ ಮತ್ತು ಪರಿಸರವು ಸುರಕ್ಷಿತವಾಗಿದೆಯೆ ಮತ್ತು ಭಾವನಾತ್ಮಕವಾಗಿ ಅವರಿಗೆ ಅದು ಬೆಂಬಲ ನೀಡುತ್ತದೆಯೆ ಎನ್ನುವುದರ ಮೇಲೆ ನಿಗಾ ಇಡುತ್ತಾರೆ. 3 ವರ್ಷಕ್ಕಿಂತ ಕಡಿಮೆ

ವಯಸ್ಸಿನ ಮಕ್ಕಳ ಆರೈಕೆ ಮತ್ತು ಪೋಷಣೆಯ ಸಲುವಾಗಿ ವಯಸ್ಕ ಮತ್ತು ಮಗುವಿನ ನಡುವಿನ ಸಂವಹನಗಳು ಭಾಷೆಯ ನಿಟ್ಟಿನಲ್ಲಿ ಸಮೃದ್ಧವಾಗಿದ್ದು, ಉಲ್ಲಾಸಕರವಾಗಿರಬೇಕಲ್ಲದೆ, ಸಕ್ರಿಯ ಹಾಗೂ ಸಹಯೋಗಪೂರ್ಣ ಅನ್ವೇಷಣೆಗೆ ಅವಕಾಶವಿರತಕ್ಕದ್ದು. ತಾಯಿ ಅಡುಗೆ ಮಾಡುತ್ತಿರುವಾಗ ಆಕೆಯ ಪಕ್ಕದಲ್ಲಿ ಕುಳಿತು ಪಾತ್ರೆಗಳು, ಲೋಟಗಳ ಜೊತೆ ಆಡುವ ಮಕ್ಕಳು ಭಾವನಾತ್ಮಕವಾಗಿ ಸುರಕ್ಷಿತ ಪರಿಸರದಲ್ಲಿ ಸಕ್ರಿಯವಾಗಿ ಆಟದಲ್ಲಿ ತೊಡಗಿರುತ್ತಾರೆ. ದೈನಂದಿನ ಪಾಲನಾ ಕೇಂದ್ರದಲ್ಲಿ ಅಥವಾ ಇತರೆ ಸಾಂಸ್ಥಿಕ ಪರಿಸರಗಳಲ್ಲಿ ಎಚ್ಚರಿಕೆಯಿಂದ ವಸ್ತುಗಳನ್ನು ಒಪ್ಪವಾಗಿಡುವುದನ್ನು ಯೋಜಿಸಬೇಕಾಗುತ್ತದೆ. ಪರಿಚಿತ ವಯಸ್ಕರೊಂದಿಗಿನ ಸಂಬಂಧಗಳ ಮಹತ್ವವು 3 ವರ್ಷಕ್ಕಿಂತ ಕಡಿಮೆ ವಯಸ್ಸಿನವರನ್ನು ಕುರಿತ ಮಾರ್ಗದರ್ಶಕ ತತ್ತ್ವವೆನಿಸಿದೆ.

### 5.4: 3ರಿಂದ 5+ ವರ್ಷದವರೆಗಿನ ಮಕ್ಕಳ ಪಠ್ಯಕ್ರಮ ಚೌಕಟ್ಟು

ಪಠ್ಯಕ್ರಮವು ತರಗತಿ ಕೋಣೆಯಲ್ಲಿ ಸಂಭವಿಸುವ ಎಲ್ಲವುಗಳ ಮೊತ್ತವಾಗಿದ್ದು, ಅದರ ವಿಷಯಗಳನ್ನು ಮಗುವಿನ ಇಡೀ ನೈಸರ್ಗಿಕ ಮತ್ತು ಸಾಮಾಜಿಕ ಜಗತ್ತಿನಿಂದ ಪಡೆದುಕೊಳ್ಳಬಹುದಾಗಿದೆ. ಶಿಕ್ಷಕರು ಅನುಸರಿಸಬೇಕಾದ ಕಾರ್ಯತಂತ್ರಗಳು ಮತ್ತು ವಿಧಾನಗಳನ್ನು ಈ ಮೂಲ ತತ್ವಗಳಿಂದ ಪಡೆದು, ಮಗುವಿನ ವಯಸ್ಸಿಗೆ ಅನುಗುಣವಾಗಿ ಅನ್ವಯಿಸತಕ್ಕದ್ದು.

#### 5.4.1: ಆಟವನ್ನು ಆಧರಿಸಿದ ಕಲಿಕೆ

ಮಕ್ಕಳ ಕಲಿಕೆಗೆ ಆಟವು ಮುಖ್ಯ ಎನ್ನುವುದನ್ನು ಹೆಚ್ಚಿನ ECCE ಚಿಂತಕರು ತಿಳಿಯಪಡಿಸಿದ್ದಾರೆ. ಏಕೆಂದರೆ ಆಟವು ನೈಸರ್ಗಿಕವಾದುದು, ಸ್ವಯಂಪ್ರೇರಿತವಾದುದು, ಮನಸ್ಸನ್ನು ಸೆಳೆಯುವಂಥದ್ದು ಆನಂದಿಸುವಂಥದ್ದು, ಫಲದಾಯಕವಾದದ್ದು ಮತ್ತು ಮಕ್ಕಳು ಸ್ವ-ಸ್ವಇಚ್ಛೆಯೊಂದಿಗೆ ಅದರಲ್ಲಿ, ತೊಡಗುತ್ತಾರೆ. ಆಟಗಳಿಂದ ಕಲಿಯಬಹುದು ಎಂಬ ಕಾರಣಕ್ಕೆ ಮಕ್ಕಳು ಆಟದಲ್ಲಿ ತೊಡಗುವುದಿಲ್ಲ, ಆದರೂ ಆಟವು ಬೆಳವಣಿಗೆಯ ಪ್ರತೀ ಕ್ಷೇತ್ರದಲ್ಲಿಯೂ ಬೆಳವಣಿಗೆ ಮತ್ತು ಪ್ರಗತಿಯನ್ನು ಉಂಟುಮಾಡುತ್ತದೆ ಎನ್ನುವುದು ಕಂಡುಬಂದಿದೆ.[50] ಉದಾಹರಣೆಗೆ ಅದು ಕುತೂಹಲ ಮತ್ತು ಅನ್ವೇಷಣೆಯನ್ನು ಪ್ರಚೋದಿಸುತ್ತದೆ, ಹಾಗೂ ದೇಹದ ನಿಯಂತ್ರಣದ ಪರಿಣತಿಗೆ ಅನುವುಮಾಡಿಕೊಡುತ್ತದೆ, ಸೃಜನಶೀಲತೆಯನ್ನು ಮತ್ತು ಸಾಮಾಜಿಕ ಕೌಶಲ್ಯಗಳನ್ನು ಉತ್ತೇಜಿಸುತ್ತದೆ, ಭಾವನೆಗಳ ನಿಯಂತ್ರಣವನ್ನು ಬೆಳೆಸುತ್ತದೆ ಮತ್ತು ಭಾಷಾ ಕೌಶಲ್ಯಗಳನ್ನು ಬೆಳೆಸುತ್ತದೆ. ಹಾಗಿದ್ದರೂ ಎಲ್ಲಾ ಹಂತಗಳಲ್ಲಿ ಪಾಲಕರು ಕಲಿಕೆಯ ಎದುರು ಆಟವು ನಿರರ್ಥಕ, ಸಮಯ ಹಾಳು ಎಂಬಂತೆ ನೋಡುತ್ತಾರೆ. ಹೀಗಾಗಿಯೇ 'ಚಟುವಟಿಕೆಗಳನ್ನು ಆಧರಿಸಿದ ಪಠ್ಯಕ್ರಮ'ಕ್ಕೆ ಬದಲಾಗಿ ಕೆಲವೊಮ್ಮೆ 'ಆಟವನ್ನಾಧರಿಸಿದ ಪಠ್ಯಕ್ರಮ'ಕ್ಕೆ ಆದ್ಯತೆ ನೀಡಲಾಗುತ್ತದೆ. ಚಿತ್ರ 5.1ರಲ್ಲಿ ಈ

[50] *Piaget*

ಹಂತದಲ್ಲಿನ ಪ್ರತೀ ಕ್ಷೇತ್ರದಲ್ಲಿಯೂ ಕೌಶಲ್ಯಗಳನ್ನು ಪೋಷಿಸುವ ವಿವಿಧ ಬಗೆಯ ಆಟದ ಚಟುವಟಿಕೆಗಳನ್ನು ಸಾರಾಂಶೀಕರಿಸಲಾಗಿದೆ.[51] ಪ್ರತೀ ಚಟುವಟಿಕೆಯೂ ಹಲವು ಕ್ಷೇತ್ರಗಳನ್ನು ಒಳಗೊಳ್ಳುತ್ತದೆ, ಏಕೆಂದರೆ ಎಲ್ಲಾ ಕ್ಷೇತ್ರಗಳೂ ಒಂದಕ್ಕೊಂದು ಸಂಬಂಧಿಸಿವೆ. ಪ್ರತೀ ಚಟುವಟಿಕೆಯೂ ಬೆಳವಣಿಗೆಯ ದೃಷ್ಟಿಯಿಂದ ತನ್ನ ಕೊಡುಗೆ ನೀಡುವ ಸಾಮರ್ಥ್ಯವನ್ನು ಹೊಂದಿರುತ್ತದೆ.


.

ECCE ವ್ಯವಸ್ಥೆಗಳು ಚೆಂಡುಗಳು, ಮರಳಿನ ಡಬ್ಬಿಗಳು, ಜೋಕಾಲಿ, ಹಾಗೂ ತೂಗಾಡುವ ಗೊಂಬೆಗಳೊಂದಿಗಿನ ಮೇಲುಸ್ತುವಾರಿಯುಳ್ಳ ಆಟದ ಅಗತ್ಯಗಳನ್ನು ಪೂರೈಸಬೇಕು. ಆಟದ ಜಾಗವು ಪರಿಶೋಧನಾತ್ಮಕ ಚಟುವಟಿಕೆಗಳಿಗೆ ಮತ್ತು ದೈಹಿಕ ಸಾಮರ್ಥ್ಯದಲ್ಲಿ ಮೇಲುಗೈಯನ್ನು ಪಡೆಯಲು ಸೂಕ್ತವಾಗಿರಬೇಕು. ಕಂಬಿ ಏಣಿ(jungle gym)ಯ ಮೇಲಿನ ಆಟ, ಜಾಗಗಳ ಸಮತೋಲನ ಮತ್ತು ನಡಿಗೆಯಲ್ಲಿ ಸಮಯವನ್ನು ಕಳೆಯುವುದರಿಂದ ಮಕ್ಕಳು ಆತ್ಮವಿಶ್ವಾಸವನ್ನು ಗಳಿಸಲು ನೆರವಾಗುತ್ತದೆ. ಓಡುವುದು, ಜಿಗಿಯುವುದು, ಸಮತೋಲನ ಸಾಧಿಸುವುದು ಇವೆಲ್ಲ 3ರಿಂದ 5 ವರ್ಷದ ಮಕ್ಕಳಿಗೆ ಅವಶ್ಯ. ಮುಕ್ತವಾಗಿ ಆಡುವ ಆಟಗಳು ಒಳಾಂಗಣ ಅಥವಾ ಹೊರಾಂಗಣ-ಎರಡೂ ರೀತಿಯ ಆಟಗಳಾಗಿರಬಹುದು. ಹೊರಾಂಗಣ ಆಟಗಳು ಒಟ್ಟಾರೆ ಸ್ನಾಯು ಬೆಳವಣಿಗೆಗೆ ಹೆಚ್ಚು ಅನುಕೂಲಕರವಾಗಿದ್ದು, ಮಣಿ ಪೋಣಿಸುವುದು, ಮೊಳೆಮಣೆ (pegboard), ಪಜಲ್‌ಗಳಂತಹ ಒಳಾಂಗಣ ಆಟಗಳು ಸಣ್ಣ-ಸ್ನಾಯುಗಳ ಕೌಶಲ್ಯಗಳನ್ನು ಬೆಳೆಸುವುದಕ್ಕೆ ಹೆಚ್ಚು ಸಹಾಯಮಾಡುತ್ತವೆ. ಯಂತ್ರದಿಂದ ಚಲಿಸುವ ಗೊಂಬೆಗಳು ಸಣ್ಣ ಸ್ನಾಯುಗಳ ಕೌಶಲ್ಯಗಳ ಬೆಳವಣಿಗೆಯನ್ನು ಹೆಚ್ಚಿಸಲು ಅನುಕೂಲಕರ. ಒಳಾಂಗಣ ಮುಕ್ತ ಆಟಗಳು ಚಿಕ್ಕ ಗುಂಪುಗಳಲ್ಲಿ ಆಡುವುದಕ್ಕೆ ಸಹ ಸಮಯವನ್ನು ಒದಗಿಸುತ್ತವೆ, ಉದಾಹರಣೆಗೆ ಪಜಲ್‌ಗಳನ್ನು ಬಿಡಿಸುವುದು, ಗೊಂಬೆಯ ಆಟದಲ್ಲಿ ತೊಡಗುವುದು ಅಥವಾ ಅನುಕರಣಾತ್ಮಕ ಆಟದ ಇತರ ಕ್ರಿಯೆಗಳು.

ಆಟವು, ಗೆರೆಗಳನ್ನು ಎಳೆಯುವುದು, ಬಣ್ಣದಲ್ಲಿ ಕೈಯಾಡಿಸುವುದು, ಮತ್ತು ಕೆಲವೊಮ್ಮೆ ಹೊಂದಿಸುವ-ಮತ್ತು-ಜೋಡಿಸುವ ಚಟುವಟಿಕೆಗಳನ್ನು ಒಳಗೊಳ್ಳಬಹುದು. ವರ್ಕ್‌ಶೀಟ್‌ಗಳು, ಆಗಾಗ ರೇಖಾಕೃತಿಗಳ ಒಳಗೆ ಬಣ್ಣ ತುಂಬುವುದನ್ನು ಮತ್ತು ಪರಿಚಿತ ವಸ್ತುಗಳನ್ನು ಹೊಂದಿಸುವುದನ್ನು ಒಳಗೊಳ್ಳಬಹುದು. ಇಂತಹ ಚಟುವಟಿಕೆಗಳನ್ನು ಸ್ವತಂತ್ರವಾಗಿ ಚಿತ್ರವನ್ನು ರಚಿಸುವಂತಹ ಅವಕಾಶಗಳೊಂದಿಗೆ ಸಮತೋಲಿತಗೊಳಿಸುವುದು ಅವಶ್ಯ. ಅಲ್ಲಿ ಕ್ರೆಯಾನ್‌ಗಳು ಮತ್ತು ಬಣ್ಣಗಳು ಅಭಿವ್ಯಕ್ತಿಯ ವಿಧಾನಗಳಾಗಿರುತ್ತವೆ.

---

[51] *Swaminathan, M. and Daniel, P. 2004*




**ಚಿತ್ರ 5.1: ಆಟವನ್ನಾಧರಿಸಿದ ಸೂಚಿತ ಚಟುವಟಿಕೆಗಳು**

ಮೂಲ: *Play Activities for child Development: A Guide to Preschool Teachers. Mina Swaminathan and Prema Daniel National Book Trust, New Delhi. 2004*

**ಒಳಗಿನ ವರ್ತುಲ**:

Cognitive - ಸಂಜ್ಞಾನಾತ್ಮಕ (ಅರಿವಿಗೆ ಅಥವಾ ಜ್ಞಾನಗ್ರಹಣಕ್ಕೆ ಸಂಬಂಧಿಸಿದ)

Language & communication ಭಾಷೆ ಮತ್ತು ಸಂವಹನ

Emotional & aesthetics - ಭಾವನಾತ್ಮಕ ಮತ್ತು ಕಲಾನುಭವ (ಸೌಂದರ್ಯಪ್ರಜ್ಞೆ)

Personal – ವೈಯಕ್ತಿಕ

Social – ಸಾಮಾಜಿಕ

Physical gross motor - ದೈಹಿಕವಾಗಿ ಸಂಪೂರ್ಣ ಅಂಗ ಚಲನೆ

Fine motor – ಸಣ್ಣ ಸ್ನಾಯು

Sensory - ಸಂವೇದಕ

**ಹೊರಗಿನ ವರ್ತುಲ**:

**ಸಂಜ್ಞಾನಾತ್ಮಕ:**

- social & natural science -ಸಾಮಾಜಿಕ ಮತ್ತು ನೈಸರ್ಗಿಕ ವಿಜ್ಞಾನ
- experience - ಅನುಭವ

- nature walk – ನಿಸರ್ಗದಲ್ಲಿನ ನಡಿಗೆ
- mathematics - ಗಣಿತ
- matching - ಹೊಂದಿಸುವುದು
- naming - ಹೆಸರಿಸುವುದು
- classifying - ವರ್ಗೀಕರಿಸುವುದು
- identifying - ಗುರುತಿಸುವುದು
- sorting - ವಿಂಗಡಿಸುವುದು
- sequencing – ಅನುಕ್ರಮಣ
- seriating ಸರಣಿಯಲ್ಲಿ ಜೋಡಿಸುವುದು
- discussion - ಚರ್ಚೆ
- puzzles - ಪಜಲ್‌ಗಳು
- riddles ಒಗಟುಗಳು
- maze - ಗೋಜಲು ಹಾದಿ
- sand - ಮರಳು
- water play - ನೀರಿನ ಆಟ
- gardening - ತೋಟಗಾರಿಕೆ
- celebrations - ಸಂಭ್ರಮಾಚರಣೆಗಳು
- festivals - ಹಬ್ಬಗಳು
- cooking - ಅಡುಗೆ
- building blocks - ಕಟ್ಟಡದ ಅಚ್ಚುಗಳು
- constructional materials - ನಿರ್ಮಾಣ ಸಾಮಗ್ರಿಗಳು

**ಭಾಷೆ ಮತ್ತು ಸಂವಹನ:**

- songs & rhymes - ಹಾಡುಗಳು ಮತ್ತು ಶಿಶುಗೀತೆಗಳು
- stories - ಕತೆಗಳು
- conversation –ಸಂಭಾಷಣೆ
- informal talk –ಅನೌಪಚಾರಿಕ ಮಾತುಕತೆ
- books - ಪುಸ್ತಕಗಳು
- picture/chart reading – ಚಿತ್ರ/ಚಾರ್ಟ್ ಓದುವುದು
- labelling - ಗುರುತುಚೀಟಿ ಹಚ್ಚುವುದು
- dramatic play - ನಾಟಕೀಯ ಆಟ
- puppet play - ಕೀಲುಗೊಂಬೆಯಾಟ
- vocabulary/command games - ಶಬ್ದಜ್ಞಾನ/ಆದೇಶದ ಆಟಗಳು
- sound games - ಶಬ್ದದ ಆಟಗಳು
- riddles - ಒಗಟುಗಳು
- rhyming games - ಪ್ರಾಸದ ಆಟಗಳು
- d0ll play - ಗೊಂಬೆ ಆಟ
- show and tell-recall story - ತೋರಿಸಿ ನೆನಪಿಸಿಕೊಂಡು ಹೇಳುವ ಕತೆ
- draw and talk - ಚಿತ್ರ ಬರೆ ಮತ್ತು ಮಾತನಾಡು
- auditory and visual games - ಶ್ರವ್ಯ ಮತ್ತು ಚಾಕ್ಷುಷ ಆಟಗಳು

**ಭಾವನಾತ್ಮಕ ಮತ್ತು ಕಲಾನುಭವ:**

- music and movement - ಸಂಗೀತ ಮತ್ತು ಚಲನೆ
- dance - ನೃತ್ಯ

- creative drama action play and games - ಸೃಜನಶೀಲ ನಾಟಕ, ದೃಶ್ಯಾಭಿನಯ ಮತ್ತು ಆಟಗಳು
- college work – ಅಂಟಿಕೆಚಿತ್ರ
- clay work - ಜೇಡಿಮಣ್ಣಿನ ಕಲೆ
- care of animals and garden - ಪ್ರಾಣಿ ಮತ್ತು ಹೂತೋಟದ ಕಾಳಜಿ

**ವೈಯಕ್ತಿಕ:**

- dramatisation - ನಾಟಕೀರಿಸುವುದು
- role play - ಪಾತ್ರಾಭಿನಯ
- doll play - ಗೊಂಬೆ ಆಟ
- meal time activities - ಊಟದ ಸಮಯದ ಚಟುವಟಿಕೆಗಳು
- cleaning and grooming self - ತಮ್ಮ ಸ್ವಚ್ಛತೆ ಮತ್ತು ತಮ್ಮನ್ನು ತಾವು ಅಲಂಕರಿಸಿಕೊಳ್ಳುವುದು
- cleaning and tidying up - ಸ್ವಚ್ಛತೆ ಮತ್ತು ಓರಣ

**ಸಾಮಾಜಿಕ:**

- stories - ಕತೆಗಳು
- songs - ಹಾಡುಗಳು
- rhymes - ಶಿಶುಗೀತೆಗಳು
- puppet activities - ಕೀಲುಬೊಂಬೆಗಳ ಚಟುವಟಿಕೆ
- dramatisation – ನಾಟಕೀಕರಿಸುವುದು
- group/team - ಗುಂಪು/ತಂಡ
- games doll play - ಗೊಂಬೆಗಳೊಂದಿಗೆ ಆಟ
- dressing up play - ಅಲಂಕರಿಸಿಕೊಳ್ಳುವ, ಉಡುಪು ಧರಿಸುವ ಆಟ
- blocking building – ಬ್ಲಾಕ್‌ಗಳ ಮೂಲಕ ನಿರ್ಮಿತಿ
- sports - ಕ್ರೀಡೆಗಳು
- festivals and birthdays - ಹಬ್ಬಗಳು ಮತ್ತು ಹುಟ್ಟುಹಬ್ಬಗಳು
- participation in daily chores and routines - ನಿತ್ಯದ ಕೆಲಸಗಳು ಮತ್ತು ದಿನಚರಿಗಳಲ್ಲಿ ಭಾಗವಹಿಸುವುದು

**ದೈಹಿಕವಾಗಿ ಸಂಪೂರ್ಣ ಅಂಗಚಲನೆ:**

- running race - ಓಟದ ಸ್ಪರ್ಧೆ
- games - ಆಟಗಳು
- exercises - ವ್ಯಾಯಾಮಗಳು
- pushing - ನೂಕುವುದು
- pulling - ಎಳೆಯುವುದು
- stretching - ಹಿಗ್ಗಿಸುವುದು
- bouncing - ಚಿಮ್ಮುವುದು
- sliding - ಜಾರುವುದು
- rocking - ತೂಗುವುದು
- throwing - ಎಸೆಯುವುದು
- catching - ಹಿಡಿಯುವುದು
- kicking - ಒದೆಯುವುದು
- rolling - ಉರುಳುವುದು
- swinging - ಓಲಾಡುವುದು
- climbing - ಹತ್ತುವುದು
- balancing - ಸಮತೋಲನ

- hopping – ನೆಗೆಯುವುದು
- jogging – ನಿಧಾನವಾಗಿ ಓಡುವುದು
- gardening – ತೋಟಗಾರಿಕೆ
- cycling - ಸೈಕಲ್ ತುಳಿಯುವುದು
- nature walk - ನಿಸರ್ಗದಲ್ಲಿ ನಡೆಯುವುದು
- walking - ನಡೆಯುವುದು

**ಸೂಕ್ಷ್ಮ ಅಂಗ ಚಲನೆ:**

- finger play - ಬೆರಳುಗಳ ಆಟ
- action songs - ಅಭಿನಯಿಸುತ್ತ ಹಾಡುವುದು
- block building – ಬ್ಲಾಕ್‌ಗಳ ಮೂಲಕ ನಿರ್ಮಿತಿ
- threading - ಸೂಜಿಗೆ ದಾರ ಹಾಕುವುದು
- stitching - ಹೊಲಿಯುವುದು
- tearing - ಹರಿಯುವುದು
- cutting - ಕತ್ತರಿಸುವುದು
- pasting paper - ಕಾಗದ ಅಂಟಿಸುವುದು
- drawing - ಚಿತ್ರರಚನೆ
- colouring - ಬಣ್ಣ ಹಚ್ಚುವುದು
- painting – ಬಣ್ಣ ಹಾಕುವುದು
- chalk/slate - ಬಳಪ/ಸ್ಲೇಟು

pattern making - ವಿನ್ಯಾಸಗಳನ್ನು ರಚಿಸುವುದು

**ಸಂವೇದಕ ಚಟುವಟಿಕೆಗಳು (sensory):**

- hearing - ಆಲಿಸುವುದು
- smelling - ವಾಸನೆ ಗ್ರಹಿಸುವುದು
- tasting - ರುಚಿ ನೋಡುವುದು
- seeing - ನೋಡುವುದು
- feeling - ಭಾವನೆ/ಸಂವೇದನೆ
- activities - ಚಟುವಟಿಕೆಗಳು
- water play - ನೀರಾಟ
- sand play - ಮರಳಿನಾಟ
- creative art – ರಚನಾತ್ಮಕ ಕಲೆ
- clay work - ಜೇಡಿಮಣ್ಣಿನ ಕಲೆ
- tearing - ಹರಿಯುವುದು
- finger painting – ಬೆರಳು ಚಿತ್ರಕಲೆ
- using manipulative material – ಕುಶಲತೆಯಿಂದ ನಿರ್ವಹಿಸುವ ವಸ್ತುಗಳ ಬಳಕೆ

## 5.4.2: ಕಲೆಯನ್ನಾಧರಿಸಿದ ಶಿಕ್ಷಣ

ECCEಯು ಮಕ್ಕಳಲ್ಲಿ ಕಲಿಕೆಯನ್ನು ಕುರಿತ ಆಸಕ್ತಿಯನ್ನು ಮತ್ತು ಸಕಾರಾತ್ಮಕ ದೃಷ್ಟಿಕೋನವನ್ನು ಬೆಳೆಸಲು ಒಂದು ತಳಹದಿಯನ್ನು ಒದಗಿಸುತ್ತದೆಯಾದ್ದರಿಂದ ಹಲವು ರೂಪಗಳ ಕಲೆಗಳನ್ನು ಬಳಸಿ ಮಕ್ಕಳು ಆನಂದದಿಂದ ಅಭಿವ್ಯಕ್ತಿಸುವ ಮತ್ತು ಗ್ರಹಿಸುವ ಸಂದರ್ಭಗಳನ್ನು ಸೃಷ್ಟಿಸಬಹುದು. ಮಕ್ಕಳ ಆಸಕ್ತಿಗಳನ್ನು ಬೆಳೆಸುವ ಪ್ರಕ್ರಿಯೆಯಲ್ಲಿ ಕಲೆಗಳು ಅವಿಭಾಜ್ಯ ಅಂಗಗಳಾಗಿವೆ ಮತ್ತು ಮಕ್ಕಳಲ್ಲಿ ಅಭಿವ್ಯಕ್ತಿಯ ಹರಿವನ್ನು ಸಹಜವಾಗಿಯೇ ಸ್ಫುರಿಸುವಂತಹ ಒಂದು ಪ್ರವೃತ್ತಿಯನ್ನು ಕಲೆಗಳಲ್ಲಿ ಕಾಣಬಹುದು. ತಮ್ಮ ಚಲನೆಯ ಅಪೇಕ್ಷೆಯನ್ನು ಅನ್ವೇಷಿಸುವ ನಿಟ್ಟಿನಲ್ಲಿ ಮಕ್ಕಳಿಗೆ

ಸಮಯದ ವಿಭಜನೆಗಳು ಸ್ವಾತಂತ್ರ್ಯವನ್ನು ನೀಡತಕ್ಕದ್ದು. ಸಂಗೀತ ಮತ್ತು ಕಲೆಗಳ ನಿಟ್ಟಿನ ಕಲಾನುಭವವು ಸುಲಭವಾಗಿ ಅವರ ದಿನಚರಿಯ ಭಾಗವಾಗಬಹುದು, ಉದಾಹರಣೆಗೆ, ದಿನವನ್ನು ಹಾಡುಗಳು, ಗುಂಪುಗಳೊಂದಿಗಿನ ನಡಿಗೆ ಮತ್ತು ದೈಹಿಕ ವ್ಯಾಯಾಮದೊಂದಿಗೆ ಆರಂಭಿಸುವುದು. ಮಕ್ಕಳು ಹಾಡುಗಳನ್ನು ಅಥವಾ ಶಿಶುಪ್ರಾಸಗಳನ್ನು ಪುನರಾವರ್ತಿಸುವಾಗ, ಪ್ರತಿ ದಿನವೂ ಹಾಡಿನ ಸಮಯವನ್ನು ಹೊಂದಿರಬೇಕು.

ಸೃಜನಶೀಲ ನಾಟಕವು ಮಕ್ಕಳ ನೋಟವನ್ನು ಮತ್ತು ಅವಲೋಕನವನ್ನು ಹರಿತಗೊಳಿಸುವಂತಹ ವಿಶೇಷ ಅನುಭವವಾಗಿದೆ. ನಾಟಕಗಳನ್ನು ಮಕ್ಕಳ ತರಗತಿಕೋಣೆಯ ಸಂಪನ್ಮೂಲದಂತೆ ಬಹಳ ವಿಭಿನ್ನವಾಗಿ ಪರಿಚಯಿಸಬಹುದು. ಉದಾಹರಣೆಗೆ  ಅನ್ವೇಷಣೆ ಮತ್ತು ತಾವು ಯಾರೊಂದಿಗೆ ವಾಸಿಸುತ್ತಿದ್ದಾರೋ ಅವರಂತೆ ನಟಿಸುವ ಅವಕಾಶವನ್ನು ಪಡೆಯಲು ಪರಿಚಿತ ವ್ಯವಸ್ಥೆಗಳನ್ನುಳ್ಳ ಗೊಂಬೆ ಮನೆಯ ಒದಗಣೆ. ಮಕ್ಕಳು ತಮ್ಮ ರಮ್ಯಲೋಕದೊಳಗೆ ಮುಕ್ತವಾಗಿ ವಿಹರಿಸಲು ಅದು ಅನುವು ಮಾಡಿಕೊಡುತ್ತದೆ ಹಾಗೂ ಶಾಲೆಯ ಪರಿಧಿಯಾಚೆಗಿನ ಮಕ್ಕಳ ಸಾಮಾಜಿಕ ಮತ್ತು ಭಾವನಾತ್ಮಕ ಕ್ಷೇತ್ರಗಳ ಬಗೆಗೆ ಒಳನೋಟಗಳನ್ನು ನೀಡುತ್ತದೆ. ಮಕ್ಕಳಿಗೆ ಆಟವಾಡಲು ಮತ್ತು ತಮ್ಮ ಪರಿಸರಗಳಲ್ಲಿ ವಾಸಿಸುವ ವಯಸ್ಕರಂತೆ ಅಭಿನಯಿಸಿ, ಆನಂದಿಸಲು ಚಪ್ಪಲಿಗಳು ಮತ್ತು ಶೂಗಳು, ಹಳೆಯ ಕನ್ನಡಕ, ಪರ್ಸುಗಳು, ಚೀಲಗಳು, ದುಪಟ್ಟಾ, ಊರುಗೋಲು, ಮುಂತಾದ ಸುರಕ್ಷಿತ ವಸ್ತುಗಳನ್ನುಳ್ಳ ಬುಟ್ಟಿಯು ಸುಲಭವಾಗಿ ದೊರೆಯುವಂತೆ ವ್ಯವಸ್ಥೆಗೊಳಿಸಬಹುದು. ತಾವು 'ಬೇರೆಯವರಾಗಿದ್ದೇವೆ' ಎಂಬುದೇ ಅವರಿಗೆ ಖುಶಿ ಕೊಡುತ್ತಿರುತ್ತದೆ. ಇಂತಹ ಅವಕಾಶಗಳು ಅವರಲ್ಲಿ ಕುತೂಹಲವನ್ನು, ಆತ್ಮವಿಶ್ವಾಸವನ್ನು ಮತ್ತು ಉಲ್ಲಾಸಶೀಲತೆಯನ್ನು ಪೋಷಿಸುವ ಕ್ರಿಯೆಗಳಿಗೆ ದಾರಿಮಾಡಿಕೊಡುತ್ತವೆ. ಸಾಧ್ಯವಿದ್ದರೆ ಸ್ಥಳೀಯ ಕಲಾವಿದರ ಉಪಸ್ಥಿತಿಯನ್ನು ಅನುಭವಿಸಲು ಮಕ್ಕಳಿಗೆ ಅವಕಾಶವನ್ನು ನೀಡತಕ್ಕದ್ದು. ಕಲಾವಿದರೊಂದಿಗಿನ ಒಡನಾಟದಿಂದ ಕಲಾವಿದರ ಕಾರ್ಯ ಮತ್ತು ಕಲಾ ಜಗತ್ತಿನೊಳಗೆ ಇಣುಕುವ ಒಂದು ಅವಕಾಶವಾಗುತ್ತದೆ. ಎಳೆಯ ಮಕ್ಕಳ ಶಿಕ್ಷಕರು ಸ್ವತಃ ಮಕ್ಕಳೊಂದಿಗಿನ ನಿತ್ಯದ ಒಡನಾಟದಲ್ಲಿ ಕಲೆಗಳನ್ನು ಬಳಸುವ ನೈಪುಣ್ಯವನ್ನು ಬೆಳೆಸಿಕೊಳ್ಳಬೇಕು.

### 5.4.3: ಮಕ್ಕಳ ಆಲೋಚನೆಗಳ ವಿಶಿಷ್ಟ ಲಕ್ಷಣಗಳನ್ನು ಗುರುತಿಸುವುದು

ಕಲಿಕೆಯ ನಂತರದ ವರ್ಷಗಳಲ್ಲಿ ಮಕ್ಕಳ ಆಸಕ್ತಿಗಳು ಮತ್ತು ನಿರ್ವಹಣೆಯ ನಿಟ್ಟಿನಲ್ಲಿ ECCEಯ ಪಠ್ಯಕ್ರಮವು ಮಹತ್ವಪೂರ್ಣ ಪರಿಣಾಮವನ್ನು ಬೀರುತ್ತದೆ. ಕಲಿಯಲು ಮತ್ತು ತಮ್ಮ ಸುತ್ತಲಿನ ಜಗತ್ತನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ಸ್ವಾಭಾವಿಕ ಹಂಬಲ ಮತ್ತು ಸಾಮರ್ಥ್ಯವಿರುತ್ತದೆ. ಜನರು ಮತ್ತು ವಾಸ್ತವಿಕ ವಸ್ತುಗಳ ಜೊತೆ ಒಡನಾಡುವ ಮೂಲಕ, ಹಾಗೂ ನಿರ್ದಿಷ್ಟ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುತ್ತ ಅವರು ತಮ್ಮ ಮತ್ತು ಇತರರ ಬಗೆಗೆ ಹಾಗೂ ತಮ್ಮ ಸುತ್ತಲಿನ ಪ್ರಪಂಚದ ಬಗ್ಗೆ  ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುತ್ತಾರೆ. ಬಾಟಲಿಗಳಿಗೆ ನೀರು

ತುಂಬುವ, ಕಪ್ಪುಗಳಿಗೆ ಮರಳನ್ನು ತುಂಬುವ, ಮಣಿಗಳನ್ನು ಎಣಿಸುವ, ತಿಂಡಿಗೆ ತಟ್ಟೆಗಳನ್ನು ಹಂಚುವಂತಹ ಕೆಲಸಗಳ ಮೂಲಕ ಅವರು ಗಣಿತ ಮತ್ತು ವಿಜ್ಞಾನವನ್ನು ಕಲಿಯುತ್ತಾರೆ. ವಸ್ತುಗಳನ್ನು ವಿಂಗಡಿಸುವುದು ಮತ್ತು ಇಳಿಕೆಯ ಅಥವಾ ಏರಿಕೆಯ ಕ್ರಮದಲ್ಲಿ ಒಪ್ಪವಾಗಿಡುವುದನ್ನು ಅವರು ಆನಂದಿಸುತ್ತಾರೆ. ಗಿಡಗಳು ಬೆಳೆಯುವುದನ್ನು ವೀಕ್ಷಿಸುತ್ತ ಪರಿಸರದಲ್ಲಾಗುವ ಮಾರ್ಪಾಡನ್ನು ಕಲಿಯುತ್ತಾರೆ. ECCEಯ ಶಿಕ್ಷಕರು ಸಂಭಾಷಣೆಗಳ ಮೂಲಕ ಅಂತಹ ಕ್ರಿಯೆಗಳತ್ತ ಮಕ್ಕಳ ಗಮನವನ್ನು ಸೆಳೆಯಬೇಕು. ಮಕ್ಕಳು ಸಂವಹಿಸಲು ಕಲಿಯುತ್ತಾರೆ, ಅಭಿವ್ಯಕ್ತಿಸಲು ಕಲಿಯುತ್ತಾರೆ ಮತ್ತು ಒಂದು ವಿಶ್ವಾಸಾರ್ಹ ವಾತಾವರಣದಲ್ಲಿ ತಮ್ಮ ಸುತ್ತಲಿನ ಜಗತ್ತನ್ನು ಅರ್ಥ ಮಾಡಿಕೊಳ್ಳುತ್ತಾರೆ. ಕತೆ ಹೇಳುವುದು, ತಮ್ಮ ವೈಯಕ್ತಿಕ ಇಷ್ಟಾನಿಷ್ಟಗಳನ್ನು ಕುರಿತು ಮಾತಾಡುವುದು, ತಮ್ಮ ಭಾವೋದ್ವೇಗ ಮತ್ತು ಭಾವನೆಗಳನ್ನು ವರ್ಣಿಸುವುದು ಮುಂತಾದವು ಮಕ್ಕಳ ಅರ್ಥಗ್ರಹಿಕೆಯ ಪ್ರಕ್ರಿಯೆಗಳಾಗಿವೆ. ಅಂತಹ ಸಕ್ರಿಯ ಆಯ್ಕೆಗಳು ಮತ್ತು ಸಂಭಾಷಣೆಯ ಅವಕಾಶಗಳ ಪ್ರತಿಪಾದನೆಯು ಮಕ್ಕಳು ತಮ್ಮ ಕಲಿಕೆಯ ಕ್ರಿಯೆಗಳನ್ನು ಕುರಿತು ಯೋಚಿಸಲು ಮತ್ತು ತನ್ಮೂಲಕ ಬೆಳೆದು ಪ್ರಬುದ್ಧರಾಗಲು ಅವಕಾಶವನ್ನು ನೀಡುತ್ತದೆ. ECCEಯ ಶಿಕ್ಷಕರು ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಾಯ ಮಾಡಬಹುದು, ಮತ್ತು ಮುಂದಿನ ಶೈಕ್ಷಣಿಕ ಹಂತಕ್ಕೆ ಹೋಗಲು ಪೂರ್ವತಯಾರಿಯ ರೂಪದಲ್ಲಿ ಕಲಿಯುವುದನ್ನು ಕುರಿತ ಅವರ ಸಹಜ ಸಾಮರ್ಥ್ಯವನ್ನು ಪ್ರೋತ್ಸಾಹಿಸುತ್ತ ಅವರ ಆಸಕ್ತಿಗೆ ಮತ್ತಷ್ಟು ಇಂಧನವನ್ನು ಒದಗಿಸಬಹುದು.


**5.4.4: ಪಠ್ಯ (ಮೂಲಭೂತ ಸಾಕ್ಷರತೆ ಮತ್ತು ಗಣಿತಜ್ಞತೆ) ಮತ್ತು ಸಾಂಸ್ಕೃತಿಕ ಆಯಾಮಗಳ ಬೆಸುಗೆ**

ಆಟವನ್ನಾಧರಿಸಿದ ಪಠ್ಯಕ್ರಮವನ್ನು ಕುರಿತು ಅನೇಕ ಬಾರಿ ಕೇಳಿಬರುವ ದೂರೆಂದರೆ ಓದುವುದು-ಬರೆಯುವುದು-ಲೆಕ್ಕ(ಅಂಕಗಣಿತ)ಗಳಿಗೆ (Three 'R's) ಮಹತ್ವವನ್ನು ನೀಡಲಾಗಿಲ್ಲ ಎನ್ನುವುದು. ಈ ಹಂತದಲ್ಲಿ ಎಳೆಯ ವಯಸ್ಸಿನಲ್ಲಿ ಮಕ್ಕಳು ಅಮೂರ್ತ ವಿಷಯಗಳೊಂದಿಗೆ ಹೆಣಗಬೇಕೆದು ನಿರೀಕ್ಷಿಸುವುದು ನ್ಯಾಯವಲ್ಲ. ಆದರೂ ಪ್ರಮಾಣ- ಭಾರ-ಹಗುರ, ಹೆಚ್ಚು-ಕಡಿಮೆ, ಕೆಲವು-ಬಹಳ ಎಂಬ ಶಬ್ದಾವಳಿಗಳ ಕಲಿಕೆ ಮತ್ತು ಚಟುವಟಿಕೆಗಳ ಮೂಲಕ ವ್ಯತ್ಯಾಸದ ಗ್ರಹಿಕೆಯು ಅಂಕಿಕಲಿಕೆಯ ಪೂರ್ವಭಾವಿ ಪರಿಕಲ್ಪನೆಗಳನ್ನು ಸ್ಪಷ್ಟಗೊಳಿಸುತ್ತದೆ. ಮಕ್ಕಳು ಈ ಪರಿಕಲ್ಪನೆಗಳನ್ನು ಆಟಗಳು, ವರ್ಕ್ ಶೀಟ್‌ಗಳು, ಮತ್ತು ಇತರೆ ನೇರ ಸಂವೇದಕ ಮೂಲಗಳ (ವಸ್ತುಗಳೊಂದಿಗೆ ಆಡುವುದು ಅಥವಾ ಅನುಕರಣಾತ್ಮಕ ಆಟಗಳು) ಮೂಲಕ ಗ್ರಹಿಸಬಹುದು. ಅಕ್ಷರ ಕಲಿಕೆಯ ಪೂರ್ವಭಾವಿ ಹಂತವು (pre-literacy) ಆಕಾರಗಳು, ಗಾತ್ರಗಳೊಂದಿಗೆ ಆಡುವುದು ಹಾಗೂ ನರ ಮತ್ತು ಸ್ನಾಯುಗಳ ಕಾರ್ಯಗಳಲ್ಲಿ ಪರಿಣತಿಯನ್ನು ಪಡೆಯಲು ಸಣ್ಣ ಸ್ನಾಯು ಕೌಶಲ್ಯಗಳನ್ನು ಕರಗತ ಮಾಡಿಕೊಳ್ಳುವ ನಿಟ್ಟಿನ ಕಲಿಕೆಯನ್ನು ಒಳಗೊಳ್ಳುತ್ತದೆ. ಅಕ್ಷರಕಲಿಕೆಯ ಪೂರ್ವಭಾವಿ ಚಟುವಟಿಕೆಗಳೊಂದಿಗೆ ಕಲಾ ಚಟುವಟಿಕೆಗಳು ಸೇರಿಕೊಳ್ಳುತ್ತವೆ. ಮಕ್ಕಳು ಹೆಚ್ಚು ಹೆಚ್ಚು ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು, ಅದರಿಂದ ಅವರಿಗೆ ವಸ್ತುಗಳ ಹೆಸರುಗಳು ಪರಿಚಯವಾಗುತ್ತವಲ್ಲದೆ, ಶಬ್ದಗಳು ಮತ್ತು ಪದಗಳನ್ನು ಗುರುತಿಸಲು ಕಲಿಯುತ್ತಾರೆ. ಕತೆ-ಕವನಗಳನ್ನು ಆಲಿಸುವುದು, ಕ್ಷೇತ್ರ ಪ್ರವಾಸಗಳಿಗೆ

ತೆರಳುವುದು, ಚಾರ್ಟುಗಳು ಮತ್ತು ಪೋಸ್ಟರ್‌ಗಳನ್ನು ನೋಡುವುದು - ಇವೆಲ್ಲ ಓದುವುದು ಮತ್ತು ಬರೆಯುವ ಪ್ರಕ್ರಿಯೆಯಲ್ಲಿ ಅವರಿಗೆ ಆಸಕ್ತಿಯನ್ನು ಹುಟ್ಟಿಸುವ ಮೂಲಭೂತ ಅಂಶಗಳು.

### 5.4.5 ಔಪಚಾರಿಕ ಮತ್ತು ಅನೌಪಚಾರಿಕ ಪಾರಸ್ಪರಿಕ ಕ್ರಿಯೆಗಳ ಮಿಶ್ರಣ

ಕೂತು ಮಾಡುವ ಚಟುವಟಿಕೆಗಳ ಜೊತೆಗೆ ಆಟವನ್ನು ಮೇಳೈಸಿದರೆ ಅವಿಶ್ರಾಂತಿ(restlessness), ಸಾಮರ್ಥ್ಯ ಮತ್ತು  ಚಿಕ್ಕ ಮಕ್ಕಳ ಕ್ರಿಯಾಶೀಲ ಪ್ರವೃತ್ತಿಗಳನ್ನು ನಿರ್ದಿಷ್ಟ ಮಾರ್ಗದಲ್ಲಿ ತೊಡಗಿಸಬಹುದು. ಮಕ್ಕಳು ಸುರಕ್ಷೆಯ ಭಾವವನ್ನು ಅನುಭವಿಸತಕ್ಕದ್ದು ಹಾಗೂ ಅವರು ತಮ್ಮ ಅನನ್ಯತೆಯನ್ನು ಕಳೆದುಕೊಳ್ಳುವ ಭಯವಿಲ್ಲದೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಸಾಧ್ಯವಾಗಬೇಕು. ಇಂತಹ ಸುರಕ್ಷತೆಯು ಮಗುವು ಅನ್ಯೋನ್ಯತೆಯನ್ನು ಅನುಭವಿಸಿದಾಗ ಮಾತ್ರ ಸಾಧ್ಯ. ಚಿಕ್ಕ ಮಕ್ಕಳಿಗೆ ’ಬೋಧನೆಯ ಜಾಗಗಳನ್ನು ವೈಯಕ್ತೀಕರಿಸುವುದು’ (ಅಥವಾ ತರಗತಿಯಲ್ಲಿ ಮಕ್ಕಳಿಗೆ ಮನೆಯಲ್ಲಿರುವಂತೆ ಭಾಸವಾಗುವ ಭಾವವನ್ನು ಮೂಡಿಸುವುದು) ಬಹಳ ಮುಖ್ಯವಾಗುತ್ತದೆ. ತರಗತಿಯ ದಿನಚರಿಯಲ್ಲಿ ಮಕ್ಕಳು ತಮ್ಮ ವೈಯಕ್ತಿಕ ಆದ್ಯತೆಗಳು, ಆಸಕ್ತಿಗಳ ಬಗೆಗೆ ಮಾತನಾಡುವಂತೆ ಅವರನ್ನು ಪ್ರೋತ್ಸಾಹಿಸಿದಾಗ ಅಥವಾ ತಮಗೆ ವಿಶೇಷವೆನಿಸಿದ ಘಟನೆಗಳ ಬಗೆಗೆ ವಿವರಿಸುವಾಗ ಒಂದು ನಿರ್ದಿಷ್ಟ ಸಮಯವನ್ನು ಮೀಸಲಿಡಬಹುದು. ತರಗತಿ ಕೋಣೆಯಲ್ಲಿ ಮಕ್ಕಳು ಸಣ್ಣ ತಂಡಗಳಲ್ಲಿ ಕೆಲಸಮಾಡಲು ಮತ್ತು ದೊಡ್ಡ ಗುಂಪಿನ ಚಟುವಟಿಕೆಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ ಜೊತೆಗೂಡಲು ಅವಕಾಶವನ್ನು ನೀಡಿದಲ್ಲಿ, ತರಗತಿಕೋಣೆಯು ವಿಶಿಷ್ಟ ಅರ್ಥವನ್ನು ಪಡೆದುಕೊಳ್ಳುತ್ತದೆ. ತರಗತಿಕೋಣೆಗಳು ಸಣ್ಣ ಗುಂಪಿನ ಜಾಗಗಳನ್ನು ಮತ್ತು ಇಡೀ ಗುಂಪು ಭೇಟಿಯಾಗಿ, ಪಾರಸ್ಪರಿಕ ಕ್ರಿಯೆಗಳನ್ನು ನಿರ್ವಹಿಸಲು ’ದೊಡ್ಡ ವರ್ತುಲದ ಸಮಯ’ವನ್ನೂ ವ್ಯವಸ್ಥೆಗೊಳಿಸಬೇಕು. ಮಗುವೊಂದು ಕೆಲ ಹೊತ್ತಿನವರೆಗೆ ತಾನೊಂದೇ ಕೆಲಸ ಮಾಡಲು ಬಯಸುತ್ತದೆಯಾದರೆ ಅದಕ್ಕೆ ಆ ಸ್ವಾತಂತ್ರ್ಯವಿರಬೇಕು ಮತ್ತು ಸೂಕ್ತ ಜಾಗವೂ ಇರಬೇಕು.




**ಚಿತ್ರ 5.2: ಸಂತುಲಿತ ವೇಳಾಪಟ್ಟಿ**

All-round development - ಸರ್ವತೋಮುಖ ಬೆಳವಣಿಗೆ
Active & noisy - ಸಕ್ರಿಯ ಮತ್ತು ಗದ್ದಲ
Outdoor – ಹೊರಾಂಗಣ
Individual- ವ್ಯಕ್ತಿಗತ
Free play - ಸ್ವತಂತ್ರ ಆಟ
Child led - ಮಗುವಿನ ಇಚ್ಛೆಯನ್ನು ಅವಲಂಬಿಸಿದ್ದು
Regular routine -ನಿಯತ ದಿನಚರಿ
Passive and restful – ನಿಷ್ಕ್ರಿಯ ಮತ್ತು ವಿಶ್ರಾಂತ
Indoor – ಒಳಾಂಗಣ
Group –ಗುಂಪು
Structured play - ಸಂರಚಿತ (ವ್ಯವಸ್ಥಿತ) ಆಟ
Teacher led - ಶಿಕ್ಷಕರ ಮುಂದಾಳತ್ವದಲ್ಲಿ
New activity or event - ಹೊಸ ಚಟುವಟಿಕೆ ಅಥವಾ ಪ್ರಸಂಗ

## 5.4.6 ನಿತ್ಯದ ದಿನಚರಿಗಳಲ್ಲಿನ ನಿಕಟ ಪರಿಚಯ ಮತ್ತು ಸವಾಲು

ಮಕ್ಕಳು ಹಾಡುಗಳು, ಕತೆಗಳನ್ನಷ್ಟೇ ಅಲ್ಲದೆ ಚಟುವಟಿಕೆಗಳನ್ನೂ ಪುನರಾವರ್ತಿಸಬೇಕು. ಆರಂಭದ ವರ್ಷಗಳಲ್ಲಿ ಪುನರಾವರ್ತನೆಯು ಒಂದು ಅತ್ಯಗತ್ಯವಾದ ಕಲಿಕಾ ವಿಧಾನವಾಗಿದೆ. ಆದ್ದರಿಂದ ನಿತ್ಯದ ವೇಳಾಪಟ್ಟಿಯಲ್ಲಿ ನಿತ್ಯವೂ ಕೆಲವು ನಿರ್ದಿಷ್ಟ ಚಟುವಟಿಕೆಗಳನ್ನು ಸೇರಿಸಬೇಕು. ಚಿತ್ರ 5.2ನ್ನು ನೋಡಿ. ಇದು ಮಕ್ಕಳಲ್ಲಿ ಭದ್ರತೆಯ ಭಾವವನ್ನು ಮೂಡಿಸುತ್ತದೆ. ಆದರೆ ದಿನಚರಿಯು ಕಟ್ಟುನಿಟ್ಟಾಗಿರದೆ, ಸಮಯ-ಸಂದರ್ಭಕ್ಕೆ ಹೊಂದಿಕೊಳ್ಳುವಂತಿರಬೇಕು, ಮಕ್ಕಳ

ಸಲಹೆಗಳಿಗೆ ಮುಕ್ತವಾಗಿದ್ದು, ಭೇಟಿಗಾರರು(visitors) ಅಥವಾ ಸಂಭ್ರಮಾಚರಣೆಯಂತಹ ಅನಿರೀಕ್ಷಿತ ಘಟನೆಗಳಿಗೆ ಹೊಂದಿಕೊಳ್ಳುವಂತಿರಬೇಕಲ್ಲದೆ, ಮಕ್ಕಳ ಬದಲಾಗುವ ಗಮನದ ವ್ಯಾಪ್ತಿಗಳು ಮತ್ತು ಮನಸ್ಥಿತಿಗಳಿಗೆ ಅನುಗುಣವಾಗಿ ಹೊಂದಿಕೊಳ್ಳಬೇಕು. ಸವಾಲುಗಳಿರಬೇಕು ಎಂದೆಣಿಸಿದಲ್ಲಿ, ವೈವಿಧ್ಯತೆಯು ಯಾವುದೇ ಚಟುವಟಿಕೆಯ ಮೂಲ ಅಗತ್ಯವಾಗುತ್ತದೆ.

### 5.4.7 ಅನುಭವಕ್ಕೆ ಆದ್ಯತೆ, ಪರಿಣಿತಿಗಲ್ಲ

ECCE ತರಗತಿಕೋಣೆಯು ಚೇತೋಹಾರಿಯಾಗಿರಬೇಕು, ಮತ್ತು ಮಕ್ಕಳು ಬೌದ್ಧಿಕವಾಗಿ ಕುತೂಹಲಿಗಳಾಗಿರಲು ಅಲ್ಲಿ ವಿಸ್ತೃತ ಹರಹಿನ ಚಟುವಟಿಕೆಗಳಿರಬೇಕು. ಒದಗಿಸುವ ಪ್ರಕ್ರಿಯೆಗಳನ್ನು ಮಕ್ಕಳಿಗೆ ನಿರ್ವಹಿಸಲು ಸಾಧ್ಯವಾಗದಿದ್ದರೆ ಎನ್ನುವ ಒಂದು ಆತಂಕವು ಆಗಾಗ ಪ್ರಭಾವಿಸುತ್ತದೆ. ಖಂಡಿತವಾಗಿಯೂ ಕಸೂತಿಯನ್ನು ಮಕ್ಕಳಿಗೆ ಒಂದು ಚಟುವಟಿಕೆಯನ್ನಾಗಿ ಸೂಚಿಸುವುದು ಸಾಧ್ಯವಿಲ್ಲ, ಆದರೆ ಬಟ್ಟೆಗಳು ಹಲವು ಬಣ್ಣಗಳಲ್ಲಿರುತ್ತವೆ ಮತ್ತು ಹಲವು ನೇಯ್ಗೆಯ ವಿನ್ಯಾಸಗಳನ್ನು ಹೊಂದಿರುತ್ತವೆ ಎನ್ನುವುದನ್ನಂತೂ ಅವರು ಕಲಿಯಬಹುದು. ಮಕ್ಕಳು ಹಾಡುಗಳು, ಸಂಗೀತದಂತಹ ವೈವಿಧ್ಯಮಯ ಚಟುವಟಿಕೆಗಳ ಅನುಭವವನ್ನು ಹೊಂದಬೇಕು, ವಿವಿಧ ಜನರ ಉಡುಪುಗಳು, ಆಹಾರ ಕ್ರಮ, ಹಬ್ಬಗಳ ಆಚರಣೆ ಇತ್ಯಾದಿಗಳನ್ನು ಕಲಿಯಬೇಕು. ಸಾಮಾಜಿಕ ವೈವಿಧ್ಯತೆಯ ಬಗೆಗಿನ ಅರಿವನ್ನು ಮೂಡಿಸುವುದು ಸಹಿಷ್ಣುತೆಯನ್ನು ಕಲಿಸಲು ಮತ್ತು ಬಹುಸಂಸ್ಕೃತಿಯ ಸನ್ನಿವೇಶಗಳಲ್ಲಿ ಶಾಂತಿಯುತ ವರ್ತನೆಗಳನ್ನು ಬೇರೂರಿಸಲು ಬಹಳ ಮುಖ್ಯವಾಗುತ್ತದೆ. ಈ ದೃಷ್ಟಿಯಲ್ಲಿ ಬಹುಭಾಷಾ ತರಗತಿಕೋಣೆಯು ಒಂದು ಸಮೃದ್ಧ ಸಂಪನ್ಮೂಲವಾಗುತ್ತದೆ ಮತ್ತು ಅದರ ಪ್ರಯೋಜನವನ್ನು ಶಿಕ್ಷಕರು ಪಡೆದುಕೊಳ್ಳಬಹುದು.

### 5.4.8 ಸ್ಥಳೀಯ ಸಾಮಗ್ರಿಗಳು, ಕಲೆಗಳು ಮತ್ತು ಜ್ಞಾನದ ಬಳಕೆ

ಯಾವುದೇ ಒಬ್ಬ ECCE ಶಿಕ್ಷಕನಿಗೆ ಸುಲಭವಾಗುವ ಕೆಲಸವೆಂದರೆ, ನೆಲದಿಂದ ಎಲೆಗಳು, ಉರುಟುಗಲ್ಲುಗಳು(pebbles), ಹೂವಿನ ದಳಗಳನ್ನು ಆರಿಸಿ, ಬಣ್ಣ, ಆಕಾರ ಅಥವಾ ಗಾತ್ರಕ್ಕೆ ತಕ್ಕಂತೆ ವರ್ಗೀಕರಿಸುವ ಚಟುವಟಿಕೆಗಳಲ್ಲಿ ಅವನ್ನು ಬಳಸಿಕೊಳ್ಳುವುದು. ರಂಗೋಲಿ ಕಲೆ, ಕೋಲಂ ಮತ್ತು ಅಲ್ಪನ, ಭಾರತದಲ್ಲಿನ ಬೇರೆ ಬೇರೆ ಪ್ರದೇಶಗಳಲ್ಲಿ ಇರುವ ನೆಲದ ಮೇಲೆ ಮೂಡಿಸುವ ಕಲೆಗಳೆನಿಸಿದ್ದು ಈ ನಿಟ್ಟಿನ ಸಾಮಗ್ರಿಗಳನ್ನು ಸೃಜನಾತ್ಮಕವಾಗಿ ಬಳಸಲು ಮಕ್ಕಳಿಗೆ ಸಹಾಯ ಮಾಡಬಹುದು. ಸಾಮಾನ್ಯ ವಸ್ತುಗಳಿಗೆ ಸ್ಥಳೀಯ ಭಾಷೆಯಲ್ಲಿ ಬೇರೆ ಬೇರೆ ಹೆಸರುಗಳು ಅಥವಾ ಪದಗಳಿರುತ್ತವೆ. ಇಂತಹ ಜ್ಞಾನವು ವಿವಿಧ ಭಾಷಾ ಪ್ರಭೇದಗಳ ಬಗ್ಗೆ ಕಲಿಕೆಯ ಮೂಲಕ ಸಹಿಷ್ಣುತೆಯನ್ನು ಸಹ ಪೋಷಿಸಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಅಥವಾ ಮಹಾನಗರದ ಸಂದರ್ಭಗಳಲ್ಲಿ ಸ್ಥಳೀಯ ಕಲೆಗಳು, ಕರಕುಶಲ ವಸ್ತುಗಳು, ಕತೆಗಳು, ಜನಪದ ಕತೆಗಳು ಹಾಗೂ ಹಾಡುಗಳು, ಹಾಡುಗಳು ಮತ್ತು ಭಾಷಾ ಭಿನ್ನತೆಗಳನ್ನು ಪರಿಚಯ ಮಾಡಿಕೊಳ್ಳುವ ಮೂಲಕ ಮಕ್ಕಳು ಬಹಳಷ್ಟನ್ನು ಕಲಿಯಬಹುದು. ಈ ಅಂಶಗಳನ್ನು ಒಳಗೊಳ್ಳುವ ಮೂಲಕ ECCE ವ್ಯವಸ್ಥೆಯು ಸಮುದಾಯದ ಒಂದು ವಿಸ್ತರಣೆಯಂತೆ ಅನಿಸುತ್ತದೆ. ಅಂತಹ ಅನುಭವಗಳು ಮಕ್ಕಳ

ಸಾಮಾಜಿಕ ಸಾಮರ್ಥ್ಯವನ್ನು ಮತ್ತು ಬೇರೆ ಬೇರೆ ಜನರ ಸಮಾಜೋ-ಸಾಂಸ್ಕೃತಿಕ ಹಿನ್ನೆಲೆಗಳ ಬಗೆಗಿನ ಅರಿವನ್ನೂ ಹೆಚ್ಚಿಸುತ್ತದೆ. ಅದೇ ರೀತಿ ಗ್ರಾಮೀಣ ಪ್ರದೇಶದ ಶಾಲಾಪೂರ್ವ ಹಂತದ ಮಕ್ಕಳೂ ಸಹ ಇಂದು ಲಭ್ಯವಿರುವ ಕ್ರೆಯಾನ್‌ಗಳು, ಬಣ್ಣಗಳು ಅಥವಾ ಜನಪ್ರಿಯ ಹಾಡುಗಳನ್ನು ಕಲಿಯುವ ಅವಕಾಶ ಹೊಂದಿರಬೇಕು.

**5.4.9 ಬೆಳವಣಿಗೆಯ ದೃಷ್ಟಿಯಿಂದ ಸೂಕ್ತವಾದ ಅಭ್ಯಾಸಗಳು**

ಅಭ್ಯಾಸಗಳು – ದೈಹಿಕ, ಸಾಮಾಜಿಕ, ಭಾವನಾತ್ಮಕ ಮತ್ತುಸಂಜ್ಞಾನಾತ್ಮಕ - ಈ ಎಲ್ಲಾ ಕ್ಷೇತ್ರಗಳನ್ನು ಒಳಗೊಳ್ಳಬೇಕಲ್ಲದೆ, ವಯೋಮಿತಿಯನ್ನು ಆಧರಿಸಿ ಭಾಷಾ ಸಮೃದ್ಧವಾಗಿರಬೇಕು, ಪ್ರತಿ ಮಗುವಿಗೂ ಸೂಕ್ತವಾಗಿರಬೇಕು ಮತ್ತು ಸಂದರ್ಭಕ್ಕೆ ತಕ್ಕಂತೆ ಅರ್ಥಪೂರ್ಣವಾಗಿರಬೇಕು. ಕಲಿಕೆಯು ಅನ್ಯೋನ್ಯಕ್ರಿಯೆಯ (interactive process) ಮೂಲಕ ನಡೆಯುವ ಪ್ರಕ್ರಿಯೆಯಾದ್ದರಿಂದ ಕಲಿಕಾ ಚಟುವಟಿಕೆಗಳು ಸ್ಪಷ್ಟವಾಗಿರಬೇಕು, ವಾಸ್ತವವಾಗಿರಬೇಕು, ಮತ್ತು ಮಕ್ಕಳ ಬದುಕಿಗೆ ಸಂಬಂಧಪಟ್ಟಿರಬೇಕು. ಕಲಿಕೆಯು ಬಹುಸಾಂಸ್ಕೃತಿಕ ಸನ್ನಿವೇಶಗಳನ್ನು ಮತ್ತು ಲಿಂಗ ಮತ್ತು ಜಾತಿ/ಜನಾಂಗೀಯ ಕಾಳಜಿಗಳನ್ನು ಕುರಿತು ಸೂಕ್ಷ್ಮ ಸಂವೇದನೆಯನ್ನೊಳಗೊಂಡಿರಬೇಕು. ಮಾರ್ಪಾಡುಗಳಿಗೆ ತೆರೆದುಕೊಳ್ಳುವ ವಿಧಾನವು ನಮ್ಮ ದೇಶದ ಅಪಾರ ಸಾಮಾಜಿಕ, ಸಾಂಸ್ಕೃತಿಕ, ಪರಿಸರ, ಆರ್ಥಿಕ ಮತ್ತು ಭಾಷಾ ವೈವಿಧ್ಯತೆಗಳನ್ನು ಬಿಂಬಿಸುವಂತಹ ಬಹುತ್ವವನ್ನೊಳಗೊಂಡ ಮತ್ತು ಸಂದರ್ಭಕ್ಕೆ ತಕ್ಕ ಪಠ್ಯಕ್ರಮ ಮಾದರಿಗಳಿಗೆ ಅನುವುಮಾಡಿಕೊಡುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಯಾವುದೇ ಪಠ್ಯಕ್ರಮವನ್ನು ನಿರ್ವಹಿಸುವವರು, ಶಿಕ್ಷಕರೇ ಆದುದರಿಂದ ಶಿಕ್ಷಕರ ಪಾತ್ರ ಮತ್ತು ಮಾರ್ಗದರ್ಶನಕ್ಕಿರುವ ಮಹತ್ವವನ್ನು ಕಡೆಗಣಿಸುವಂತಿಲ್ಲ.[52]

**5.4.10: ಆರೋಗ್ಯ, ಸ್ವಾಸ್ಥ್ಯ ಮತ್ತು ಆರೋಗ್ಯಕರ ಅಭ್ಯಾಸಗಳು**

ECCE ವ್ಯವಸ್ಥೆಯು ಹಲ್ಲು ಮತ್ತು ಉಗುರುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಕಿವಿಗಳ ಹಿಂದೆ ಮತ್ತು ಕಾಲ್ಬೆರಳುಗಳ ಸಂದಿಯನ್ನು ಸ್ವಚ್ಛವಾಗಿಟ್ಟುಕೊಳ್ಳುವಂತಹ ಜೀವನ ಕೌಶಲ್ಯದೆಡೆಗೆ ಮಕ್ಕಳನ್ನು ಪ್ರವೃತ್ತಗೊಳಿಸಹುದಲ್ಲದೆ, ಅನಾರೋಗ್ಯದ ಸೂಚಕಗಳ ಬಗೆಗೆ ಮತ್ತು ಕೆಲವು ನಿರ್ದಿಷ್ಟ ಅಭ್ಯಾಸಗಳನ್ನು ತೊರೆಯುದರ ಬಗೆಗೆ ಅರಿವು ಮೂಡಿಸಬಲ್ಲದು. 3ರಿಂದ 8 ವರ್ಷದ ಮಕ್ಕಳು, ಅಭ್ಯಾಸಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿರುತ್ತಾರೆ. ಮಕ್ಕಳಿಗೆ ಆರೋಗ್ಯಕರ ಅಭ್ಯಾಸಗಳನ್ನು ಕಲಿಸುವುದರಿಂದ ಅವರಲ್ಲಿ ಸ್ವಂತ-ಕಾಳಜಿ ಮತ್ತು ಸ್ವಚ್ಛ ಬದುಕಿನ ವರ್ತನೆಗಳು ಬೆಳೆಯುತ್ತವೆ, ಸ್ವ-ಮೇಲ್ವಿಚಾರಣೆಯ ಸಾಮರ್ಥ್ಯಗಳಿಗೆ ಪ್ರೋತ್ಸಾಹವನ್ನು ನೀಡಿದಂತಾಗುತ್ತದೆ.

ಮಧ್ಯಾಹ್ನದ ಊಟವು ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ಒಂದು ಅವಕಾಶವಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಾಗಿ, ಎಲ್ಲರೂ ಒಟ್ಟಿಗೇ ಕೂತು ಊಟವನ್ನು ಹಂಚಿಕೊಳ್ಳುವ, ಆಹ್ಲಾದಕರ ವಾತಾವರಣದಲ್ಲಿ ತಿನ್ನುವ ಸದವಕಾಶವೂ ಹೌದು. ಅದು ಮಧ್ಯಾಹ್ನದ ಊಟದ ಯೋಜನೆಯಡಿಯಲ್ಲಿ ಒದಗಿಸಿದ ಆಹಾರವಿರಬಹುದು, ಅಥವಾ ಎಲ್ಲರನ್ನೂ ಉದ್ದೇಶಿಸಿ ಮಾಡಿದ ಅಡುಗೆಯಿರಬಹುದು, ಅಥವಾ ಮಕ್ಕಳು

[52] *Vygotsky*

ಮನೆಯಿಂದ ತಂದ ಊಟವಿರಬಹುದು. ಇವೆಲ್ಲವೂ ಸಾಮಾಜಿಕವಾಗಿ, ಜ್ಞಾನಗ್ರಹಣ ಮತ್ತು ಭಾಷಾಕಲಿಕೆಯ ದೃಷ್ಟಿಯಿಂದ ಒಂದು ವಿಶಿಷ್ಟ ಅವಕಾಶವೆನಿಸುತ್ತವೆ. ಸಸ್ಯಗಳು ಮತ್ತು ತರಕಾರಿಯ ಅಂಶಗಳ ಹೆಸರುಗಳು, ವಿವಿಧ ರೀತಿಯ ರುಚಿಗಳ ಗುರುತಿಸುವಿಕೆ, ವೈಯಕ್ತಿಕ ಆದ್ಯತೆಗಳು ಮತ್ತು ಇಷ್ಟ ಅಥವಾ ಇಷ್ಟವಿಲ್ಲದಿರುವವು ಚರ್ಚೆಯ ವಿಷಯಗಳೆನಿಸುತ್ತವೆ. ಕಾಳಜಿ, ಸಹಭಾಜನದ ಸಾಮಾಜಿಕ ಕಲಿಕೆಗಳು ಮತ್ತು ಒಟ್ಟಿಗೇ ಕುಳಿತುಕೊಳ್ಳುವ ಮೂಲಕ ಸಾಮಾಜಿಕ ಎಲ್ಲೆಗಳನ್ನು ದಾಟುವುದು ಕೂಡಾ ಮುಖ್ಯವಾಗುತ್ತದೆ.

## 5.5 3ರಿಂದ 5+ವರ್ಷದ ಮಕ್ಕಳಿಗೆ ಸಂಬಂಧಿಸಿದ ಇತರ ವಿಷಯಗಳು

### 5.5.1 ಪಾಲಕರು ಮತ್ತು ಸಮುದಾಯಗಳು

ಪಾಲಕರಿಗೆ ECCEಯ ದಿನಚರಿಯು ತಿಳಿದಿರಬೇಕು. ಮಕ್ಕಳ ಪ್ರಗತಿ ಮತ್ತು ಅವರ ದಿನನಿತ್ಯದ ಚಟುವಟಿಕೆಗಳ ವರದಿಗಳನ್ನು ಶಿಕ್ಷಕರು-ಪಾಲಕರ ಮೀಟಿಂಗುಗಳ ಮೂಲಕ ಅಥವಾ ಮನೆ ಭೇಟಿಗಳ ಮೂಲಕ ತಿಳಿಸಬಹುದು. ತಮ್ಮ ಮಕ್ಕಳ ತರಗತಿಕೋಣೆಯ ದಿನಚರಿಗಳನ್ನು ತಿಳಿದುಕೊಳ್ಳಲು ಇಚ್ಛಿಸುವ ಪಾಲಕರಿಗೆ ವಿಶೇಷ ಸಮಯವನ್ನು ನಿಗದಿಪಡಿಸಬಹುದು. ECCE ಕೇಂದ್ರವು ತಮ್ಮ ಮಕ್ಕಳ ಆಸಕ್ತಿಗಳು ಮತ್ತು ಆಯ್ಕೆಗಳ ವಿಚಾರವಾಗಿ ಪಾಲಕರ ಒಳಗೊಳ್ಳುವಿಕೆಯನ್ನು ಖಾತರಿಪಡಿಸಿಕೊಳ್ಳಬೇಕು ಮತ್ತು ಸಮುದಾಯ ಹಾಗೂ ಸಮುದಾಯದ ಮುಂದಾಳುಗಳ ಜೊತೆಗೆ ಆಪ್ತ ಸಂಬಂಧವನ್ನಿರಿಸಿಕೊಳ್ಳಬೇಕು. ಇದು ಮಗುವಿನ ಬೆಳವಣಿಗೆಯ ಮತ್ತು ಕೇಂದ್ರಕ್ಕೆ ಸಿಗುವ ಸಮುದಾಯದ ಬೆಂಬಲದ ಸಂರಕ್ಷಣೆಯ ದೃಷ್ಟಿಯಿಂದ ಮುಖ್ಯವೆನಿಸುತ್ತದೆ.

### 5.5.2
### ವಯಸ್ಕ-ಮಗುವಿನ ಒಡನಾಟಗಳು

- ಬೋಧನಾತ್ಮಕ ಮತ್ತು ಕಟ್ಟುನಿಟ್ಟಿನ ವಿಧಾನಕ್ಕಿಂತ ಆಪ್ತವಾಗಿ, ಮಾರ್ಗದರ್ಶನವನ್ನು ಒದಗಿಸುತ್ತ ಜಾಗರೂಕವಾಗಿ, ಸಂವೇದನಾಶೀಲರಾಗಿರಬೇಕು.
- ಮಕ್ಕಳು ಸಂಭಾಷಣೆಗಳ ಮೂಲಕ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡಿ; ತಮ್ಮ ಆಲೋಚನೆಗಳನ್ನು ಅಭಿವ್ಯಕ್ತಿಸಲು ಅವರನ್ನು ಪ್ರೋತ್ಸಾಹಿಸಿ.
- ಕೆಲಸಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಸಹಾಯ ಮಾಡಿ.
- ಮಕ್ಕಳ ಸಾಮಾಜಿಕ ಒಡನಾಟಗಳು ಮತ್ತು ಸಂವಹನದ ರೀತಿಯನ್ನು ಪ್ರೋತ್ಸಾಹಿಸುತ್ತ ಅವರಲ್ಲಿ ಆತ್ಮಗೌರವವನ್ನು ಬೆಳೆಸಿ.
- ಮಕ್ಕಳನ್ನು ಸ್ವೀಕರಿಸಿ, ಗೌರವಿಸಿ, ಮತ್ತು ಅವರನ್ನು ಸಂತೈಸಿ, ಇದು ಅವರ ಸ್ವ-ಪರಿಕಲ್ಪನೆಗೆ ಬಹಳ ಮುಖ್ಯ.

### 5.5.3: ಮೌಲ್ಯಮಾಪನ

ಮಕ್ಕಳ ಪ್ರಗತಿಯ ಮೇಲ್ವಿಚಾರಣೆಗೆ ನಿರಂತರ ಮತ್ತು ಸುಸಂಗತ ಅವಲೋಕನವು ಅವಶ್ಯ. ಯಾವುದೇ ಪರಿಮಾಣಾತ್ಮಕವಾದ ಅಥವಾ ಒಂದು ಮಾನಕೀಕೃತ ಪರೀಕ್ಷೆಯ ಬಳಕೆಯನ್ನು ಶಿಫಾರಸ್ಸು ಮಾಡಲಾಗಿಲ್ಲ. ಅದನ್ನು ವಸ್ತುತಃ ನಿಷೇಧಿಸಲಾಗಿದೆ. ಆರಂಭಿಕ ವರ್ಷಗಳಲ್ಲಿ ಮಕ್ಕಳನ್ನು ಉತ್ತೀರ್ಣಗೊಳಿಸಲು ಅಥವಾ ಉನ್ನತ ಕಲಿಕೆಯ ವ್ಯವಸ್ಥೆಗಳಿಗೆ ಕಳುಹಿಸಲು ಪರೀಕ್ಷೆ ಅಥವಾ ಮೌಖಿಕ ಸಂದರ್ಶನಗಳಿಗೆ ಅವರನ್ನು ಒಳಪಡಿಸಬಾರದು.

ಶಿಕ್ಷಕರು ತರಗತಿಕೋಣೆಯ ದಿನಚರಿಯಲ್ಲಿ ಮಕ್ಕಳ ಭಾಗವಹಿಸುವಿಕೆ ಮತ್ತು ಇತರರೊಂದಿಗೆ ಅಂದರೆ ಮಕ್ಕಳು ಮತ್ತು ವಯಸ್ಕರೊಂದಿಗೆ ಒಡನಾಡುವಾಗಿನ ಅವರ ಕೌಶಲ್ಯಗಳ ಬಗೆಗೆ ಬರೆಯಬಹುದು. ಅವರ ವರ್ತನೆಗಳು ಮತ್ತು ಕೌಶಲ್ಯಗಳ ವೀಕ್ಷಣೆಗಾಗಿ ತಾಳೆಪಟ್ಟಿ(checklist)ಯೊಂದನ್ನು ರೂಪಿಸಿಕೊಳ್ಳಬಹುದು, ಆ ಮೂಲಕ ಬೆಳವಣಿಗೆಯ ಮುಖ್ಯ ಕ್ಷೇತ್ರಗಳಲ್ಲಿ ಮಗುವಿನ ಪ್ರಗತಿಯ ಜಾಡನ್ನು ಅನುಸರಿಸಬಹುದು.

### 5.5.4: ತರಗತಿಕೋಣೆಯಲ್ಲಿನ ಭಾಷೆ

ECCE ವ್ಯವಸ್ಥೆಯಲ್ಲಿ ಪರಸ್ಪರ ಒಡನಾಟದ ಮತ್ತು ಸಂವಹನದ ಭಾಷೆಯು ಮಗುವಿನ 'ಮೊದಲ' ಭಾಷೆ, ಅಂದರೆ ಅದರ ಮನೆಭಾಷೆಯೇ ಆಗಿರುವುದು ಸಾಮಾನ್ಯ. ಏಕೆಂದರೆ ಚಿಕ್ಕ ವಯಸ್ಸಿನ ಮಗುವು ತನ್ನ ಪರಿಚಿತ ಭಾಷೆಯಲ್ಲಿ ಮಾತ್ರವೇ ಪರಿಕಲ್ಪನೆಗಳನ್ನು ಗ್ರಹಿಸಿ, ತನ್ನನ್ನು ಅಭಿವ್ಯಕ್ತಿಸುತ್ತದೆಂಬುದು ಸ್ಪಷ್ಟ. ಹೆಚ್ಚಿನ ಸಂದರ್ಭಗಳಲ್ಲಿ ಇದು, ಪ್ರಾದೇಶಿಕ ಭಾಷೆ ಅಥವಾ ಒಂದನೆಯ ತರಗತಿಯಿಂದ ಬೋಧನಾ ಮಾಧ್ಯಮವೆನಿಸಿದ ಶಾಲಾ ಭಾಷೆಯಾಗಿರುತ್ತದೆ. ಆದರೆ ಗುಂಪಿನಲ್ಲಿ ವಿಭಿನ್ನ ಭಾಷೆಯ ಹಿನ್ನೆಲೆಗಳಿಂದ ಬಂದ ಮಕ್ಕಳಿದ್ದರೆ, ಅಥವಾ ಒಂದು ಭಾಷೆಗಿಂತ ಮತ್ತೊಂದು ಭಾಷೆಯಲ್ಲಿ ಹೆಚ್ಚು ಪರಿಚಿತರಾಗಿದ್ದರೆ, ಅಥವಾ ಒಂದು ಭಾಷೆ ಅರ್ಥವಾಗುತ್ತದೆ ಆದರೆ ಮಾತನಾಡುವುದು ಮತ್ತೊಂದು ಭಾಷೆ ಎಂಬ ಸನ್ನಿವೇಶವಿದ್ದರೆ ಆಗ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಅರ್ಥಮಾಡಿಕೊಳ್ಳುವುದನ್ನು ಅಥವಾ ಬಳಸುವುದನ್ನು ಕಲಿಯುವ ನಿಟ್ಟಿನಲ್ಲಿ ಮಕ್ಕಳಿಗೆ ಸಹಾಯಮಾಡಲು ಈ ವರ್ಷಗಳು ಉತ್ತಮ ಅವಧಿಯಾಗಿರುತ್ತವೆದೆ, ಅದೇ ರೀತಿ ಮುಂದೆ ಬೋಧನಾ ಮಾಧ್ಯಮವಾಗಲಿರುವ ಭಾಷೆಗೆ ಕ್ರಮೇಣ ತಮ್ಮನ್ನು ಹೊಂದಿಸಿಕೊಳ್ಳಲು ಇದು ಸೂಕ್ತವಾದ ಸಮಯವಾಗಿರುತ್ತದೆ. ಸಮೃದ್ಧ ಭಾಷಾ ಪರಿಸರವನ್ನು ಕಲ್ಪಿಸುವುದು; ಪರಸ್ಪರರ ಭಾಷೆಯನ್ನು ಕಲಿಯುವ ಜೊತೆಗೆ, ಮಕ್ಕಳು ತಮ್ಮ ಭಾಷೆಯಲ್ಲಿ ಮಾತನಾಡಲು ಪ್ರೋತ್ಸಾಹ ಮತ್ತು ಪರಸ್ಪರರ ಶಬ್ದಗಳನ್ನು ಸರಾಗವಾಗಿ ಗ್ರಹಿಸುವ ನಿಟ್ಟಿನಲ್ಲಿ, ಚಿಕ್ಕ ಗುಂಪುಗಳಲ್ಲಿ ಒಟ್ಟಾಗಿ ಆಡುವ ಮೂಲಕ ಇದನ್ನು ಸಾಧಿಸಬಹುದು. ಇದರಿಂದ ಇತರ ಭಾಷೆಗಳ ಬಗ್ಗೆ ಗೌರವ ಮತ್ತು ಸಹನೆಯನ್ನು ಸಹ ಪೋಷಿಸಿದಂತಾಗುತ್ತದೆ.

ಶಿಕ್ಷಕರಿಗೆ ಒಂದಕ್ಕಿಂತ ಹೆಚ್ಚು ಭಾಷೆ ಗೊತ್ತಿದ್ದರೆ ಅದು ಸಹಾಯಕಾರಿ. ಅದಿಲ್ಲದಿದ್ದರೆ ಬೇರೆ ಬೇರೆ ಮನೆಭಾಷೆಗಳನ್ನಾಡುವ ಮಕ್ಕಳಿಂದ ಕನಿಷ್ಠ ಕೆಲವು ಶಬ್ದಗಳನ್ನಾದರೂ ಕಲಿಯಲು ಪ್ರಾಮಾಣಿಕವಾಗಿ ಪ್ರಯತ್ನಿಸತಕ್ಕದ್ದು. ಅದು ಅವರಿಗೆ ಮುಖ್ಯವಾಗಿ ಮೊದಲ ಕೆಲವು ವಾರಗಳಲ್ಲಿ, ಸ್ವೀಕೃತಿಯ ಭಾವವನ್ನು ಮತ್ತು ಭಾವನಾತ್ಮಕ ಭದ್ರತೆಯನ್ನು ಒದಗಿಸುತ್ತದೆ. ಈ ಹಂತದಲ್ಲಿ ಭಾಷೆಯು ಹೆಚ್ಚಾಗಿ, ಮೌಖಿಕವಾಗಿರುತ್ತದೆಯಲ್ಲದೆ, ಭಾಷಾ ಚಟುವಟಿಕೆಗಳು ಮೊದಲು ಆಲಿಸುವುದು ಮತ್ತು ಮಾತನಾಡುವ ನಿಟ್ಟಿನ ಸಹಜ ಕ್ರಮಾನುಗತಿಯಲ್ಲಿರುತ್ತವೆ. ನಂತರ ಓದುವುದಕ್ಕೂ ಮೊದಲಿನ(pre-reading) ಮತ್ತು ಬರಹ-ಪೂರ್ವ (pre-writing)) ಚಟುವಟಿಕೆಗಳ ಮೂಲಕ ಇದನ್ನು ಅನುಸರಿಸಲಾಗುತ್ತದೆ. ಇದು ಕಠಿಣವೆನಿಸತಕ್ಕದ್ದಲ್ಲ. ವರ್ಷಗಳು ಕಳೆದಂತೆ ಶಿಕ್ಷಕರು ಪ್ರಾದೇಶಿಕ/ಶಾಲಾ ಭಾಷೆಯಲ್ಲಿ ಹೆಚ್ಚು ಸುಸಂಬದ್ಧವಾಗಿ ಮಾತನಾಡಲು ಪ್ರಯತ್ನಿಸತಕ್ಕದ್ದು ಮತ್ತು ಮಕ್ಕಳನ್ನೂ ಹಾಗೆ ಮಾಡಲು ಪ್ರೋತ್ಸಾಹಿಸಬೇಕು. ಆಗ ಮಕ್ಕಳು ಒಂದನೆಯ ತರಗತಿಯನ್ನು ಪ್ರವೇಶಿಸಲು ಸಂಪೂರ್ಣವಾಗಿ ಸಿದ್ಧರಾಗುತ್ತಾರೆ. ಭಿನ್ನ ಭಾಷಾ ಸಮುದಾಯಗಳಿಗೆ ಸೇರಿರುವುದು, ಹಲವು ಭಾಷೆಗಳನ್ನು ಕಲಿತಿರುವುದು ಹೆಮ್ಮೆಯ ವಿಷಯವಾಗಬೇಕೇ ವಿನಃ ಪ್ರತ್ಯೇಕತೆಗೆ ಅಥವಾ ಕೀಳರಿಮೆಗೆ ಅದು ದಾರಿಯಾಗಬಾರದು.

ಸಾಮಾಜಿಕವಾಗಿ ಬಹಳ ಬೇಡಿಕೆಯಿದ್ದು, ಶಿಕ್ಷಕಿಯು ಇಂಗ್ಲಿಷಿನ ಮಾತುಗಾರಿಕೆಯನ್ನು ನಿರ್ವಹಿಸುವ ನಿಟ್ಟಿನಲ್ಲಿ ಸೂಕ್ತವಾಗಿ ಸಜ್ಜುಗೊಂಡಿದ್ದು, ತನ್ನ ಸಾಮರ್ಥ್ಯದ ಬಗೆಗೆ ಆಕೆಗೆ ವಿಶ್ವಾಸವಿದೆ ಎಂದಾದರೆ ಈ ಹಂತದಲ್ಲಿಯೂ ಎರಡನೆಯ ಭಾಷೆಯಾಗಿ ಇಂಗ್ಲಿಷನ್ನು ಪರಿಚಯಿಸಬಹುದು. ಆದರೆ ಅದು ಇಂಗ್ಲಿಷ್ ಮಾತುಗಾರಿಕೆಯನ್ನು ಕುರಿತ ಶಿಕ್ಷಕಿಯ ಜ್ಞಾನವನ್ನು, ಆಕೆಯ ತರಬೇತಿ ಮತ್ತು ದೃಷ್ಟಿಕೋನವನ್ನು ಅವಲಂಬಿಸಿದೆ ಮತ್ತು ಅದಕ್ಕೆ ತಯಾರಿಲ್ಲದವರ ಮೇಲೆ ಅದನ್ನು ಹೇರುವುದು ಸಮಂಜಸವಲ್ಲ. ಇತ್ತ ಮಕ್ಕಳಿಗೂ ಅರ್ಥವಾಗದ ಅತ್ತ ಶಿಕ್ಷಕರಿಗೂ ಸರಿಯಾಗಿ ಅರ್ಥವಾಗದ ಸಂಗತಿಗಳನ್ನು ಕಂಠಪಾಠ ಮಾಡಲು ಮಕ್ಕಳಿಗೆ ಒತ್ತಾಯಿಸುವುದು ECCEಯ ಇಡೀ ಆಶಯಗಳಿಗೆ ವಿರುದ್ಧವಾದುದು.

**5.4.5: ಒಳಗೊಳ್ಳುವ ಶಿಕ್ಷಣ**

ಒಳಗೊಳ್ಳುವ ಶಿಕ್ಷಣವು ಈ ರೀತಿಯಲ್ಲಿ ಇರುತ್ತದೆ: ಇಲ್ಲಿ ಎಲ್ಲಾ ಮಕ್ಕಳಿಗೂ ಚಟುವಟಿಕೆಗಳಲ್ಲಿ ಭಾಗವಹಿಸಲು ಅಡತಡೆಗಳಿಲ್ಲದ ಮತ್ತು ಬೆಂಬಲಯುತ ಅವಕಾಶವನ್ನು, ಸಂಗಡಿಗರೊಂದಿಗೆ ಹೊಂದಿಕೊಂಡಿರುವುದನ್ನು ಖಾತರಿಪಡಿಸಿಕೊಳ್ಳಲಾಗುತ್ತದೆ. ಜೊತೆಗೆ ಬೆಳವಣಿಗೆಯ ಕೌಶಲ್ಯಗಳನ್ನು ದಕ್ಕಿಸಿಕೊಳ್ಳಲು ಪ್ರತಿಯೊಬ್ಬರಿಗೂ ಅಗತ್ಯವಿರುವ ವ್ಯಕ್ತಿಗತ ಗಮನವೂ ದೊರೆಯುತ್ತದೆ. ಮಕ್ಕಳ ಹಕ್ಕುಗಳ ದೃಷ್ಟಿಕೋನದಿಂದ, ಅಂಗವೈಕಲ್ಯದ ಕಾರಣದಿಂದ ಯಾವ ಮಗುವೂ ತಿರಸ್ಕೃತವಾಗದಂತೆ ಮತ್ತು ಅಂಗವೈಕಲ್ಯವಿರುವ ಮಗುವು ಶಾಲೆಯ ಅಥವಾ ಸಮುದಾಯದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದನ್ನು ಸರಕಾರವು ಖಚಿತಪಡಿಸಿಕೊಳ್ಳಬೇಕು. ಈ ಗುರಿಯನ್ನು ನಿಶ್ಚಿತಪಡಿಸಿಕೊಳ್ಳಲು ಭಾರತ

ಸರಕಾರವು 1995ರ ಅಂಗವಿಕಲರ ಕಾಯಿದೆಯನ್ನು ಜಾರಿಯಲ್ಲಿ ತಂದಿದೆ. ಆದರೆ ಭಾರತದ ಸಂದರ್ಭದಲ್ಲಿ ಅಂಗವಿಕಲರಿಗೆ ಯಾವ ರೀತಿಯ ಶಿಕ್ಷಣ ವಿಧಾನವು ಯೋಗ್ಯವೆಂಬುದರ ಬಗೆಗೆ ಸ್ಪಷ್ಟ ಗ್ರಹಿಕೆಯಿಲ್ಲ - ವಿಶೇಷ ಶಾಲೆಗಳಲ್ಲಿ ವಿಶೇಷ ಶಿಕ್ಷಣ ನೀಡಬೇಕೆ ಅಥವಾ ಆಗಾಗ ವಿಶೇಷ ತರಗತಿಗಳೊಂದಿಗೆ ಎಂದಿನ ಶಾಲೆಗಳಲ್ಲಿಯೇ ಶಿಕ್ಷಣವನ್ನು ಒದಗಿಸಬೇಕೆ ಅಥವಾ ಸಾಮಾನ್ಯ ಶಾಲೆಗಳಲ್ಲಿ ಸಂಪನ್ಮೂಲ ಕೆಂದ್ರಗಳೊಂದಿಗೆ ಅವರಿಗೆ ಶಿಕ್ಷಣ ನೀಡಬೇಕೆ, ಅಥವಾ ಕೇವಲ ಆಗಾಗ ನಡೆಸುವ ವಿಶೇಷ ತರಗತಿಗಳೊಂದಿಗೆ ಸಂಪೂರ್ಣವಾಗಿ ಒಳಗೊಳ್ಳಬೇಕೆ? ಬಹಳ ಗಂಭೀರ ಸ್ವರೂಪದ ಅಂಗವೈಕಲ್ಯವಿರುವ ಮಕ್ಕಳಿಗೆ ಕೊನೆಯಪಕ್ಷ ಪೂರ್ವ-ಪ್ರಾಥಮಿಕ ಹಂತದವರೆಗಂತೂ ವಿಶೇಷ ಶಿಕ್ಷಣದ ಅಗತ್ಯವಿದೆ ಎಂದು ಶಿಕ್ಷಣ ತಜ್ಞರು ಭಾವಿಸುತ್ತಾರೆ.

ಭಾರತದದಲ್ಲಿ ECCEಯ ವಾಸ್ತವಗಳನ್ನು ಪರಿಗಣಿಸಿ ಅದನ್ನು ಹೇಗೆ ಕಾರ್ಯರೂಪಕ್ಕೆ ತರಬಹುದು ಎಂಬುದಕ್ಕೆ ಸಂಬಂಧಿಸಿ ಮೊದಲನೆಯ ಹೆಜ್ಜೆಯಾಗಿ ಈ ಕೆಳಗಿನ ಕಾರ್ಯಗಳನ್ನು ಕೈಗೊಳ್ಳಬಹುದು:

- ಅಸ್ತಿತ್ವದಲ್ಲಿರುವ ECCE ಯೋಜನೆಗಳು ವಿಶೇಷ ಚೇತನವುಳ್ಳ ಮಕ್ಕಳಿಗೆ ಲಭ್ಯವಾಗುವಂತೆ ಮಾಡುವುದು.
- ECCE ಶಿಕ್ಷಕ/ಶಿಕ್ಷಕಿಯರು ತರಬೇತಿ ಹೊಂದಿರಬೇಕು ಮತ್ತು ವಿಶೇಷ ಚೇತನರನ್ನು ಗುರುತಿಸಲು ಅಗತ್ಯವಿರುವ ಕೌಶಲ್ಯಗಳನ್ನು ಹೊಂದಿರಬೇಕು.
- ಉಲ್ಲೇಖಿತ ಸೇವೆಗಳು ಸುಲಭವಾಗಿ ಸಿಗುವಂತಿರಬೇಕು.
- ECCE ಕೇಂದ್ರಗಳ ಮೂಲಕ ಪಾಲಕರ ಬೆಂಬಲ ಕಾರ್ಯಕ್ರಮಗಳನ್ನು ಸಂಯೋಜಿಸಬೇಕು.

## 5.6 ಆರಂಭದ ಪ್ರಾಥಮಿಕ ಮಟ್ಟದಲ್ಲಿನ ಪಠ್ಯಕ್ರಮ, 6ರಿಂದ 8+ವಯಸ್ಸಿನ ಮಕ್ಕಳು

ಈ ಹಂತದಲ್ಲಿ ಶಾಲೆಯ ಔಪಚಾರಿಕ ದಿನಚರಿಗಳಿಗೆ ಕ್ರಮೇಣ ಹೊಂದಿಕೊಳ್ಳಲು ಮತ್ತು ಬುನಾದಿ ಸ್ವರೂಪದ ಅಕ್ಷರ (ಓದುವುದು ಮತ್ತು ಬರೆಯುವುದು) ಹಾಗೂ ಅಂಕಿಗಳನ್ನು (ಗಣಿತೀಯ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಅನ್ವಯಿಸುವುದು, ಜೊತೆಗೆ ಸಮಾಜ ಮತ್ತು ನಿಸರ್ಗವನ್ನು ಕುರಿತು ವ್ಯವಸ್ಥಿತ ಜ್ಞಾನವನ್ನು ಪಡೆಯುವುದು) ಕಲಿಯಲು ಮಕ್ಕಳಿಗೆ ಸಹಾಯವು ಅವಶ್ಯ. ಆದ್ದರಿಂದ ಈಗಾಗಲೇ ಇಲ್ಲಿ ನೀಡಿದ ಮೂಲ ತತ್ವಗಳನ್ನು ಪ್ರಾಥಮಿಕ ಶಿಕ್ಷಣದ ಮೊದಲ ಎರಡು ವರ್ಷಗಳ ಪಠ್ಯಕ್ರಮವನ್ನು ರೂಪಿಸಲು ಬಳಸಬೇಕು. ಇದು ಶಿಕ್ಷಣದ ಮುಂದಿನ ವಿಭಿನ್ನ ಹಂತದ ನಿಟ್ಟಿನ ಪರಿವರ್ತನೆಗೆ ನೆರವಾಗುತ್ತದೆ; ಅದನ್ನು ಪಠ್ಯಕ್ರಮವನ್ನು ರೂಪಿಸುವವರು ಮತ್ತು ಪ್ರಾಥಮಿಕ ಹಂತದ ಶಿಕ್ಷಕರು ಸೇರಿ ಮಾಡಬೇಕು. ಇದಕ್ಕಾಗಿ ಈ ಕೆಳಗಿನ ಮಾರ್ಗಸೂಚಿಗಳನ್ನು ಸೂಚಿಸಲಾಗಿದೆ.

**ಶಿಕ್ಷಕರ ಗುರಿಗಳು:**

- ಬೆಳವಣಿಗೆಯ ಎಲ್ಲಾ ಕ್ಷೇತ್ರಗಳಲ್ಲಿ ಜ್ಞಾನ ಮತ್ತು ಕೌಶಲ್ಯಗಳನ್ನು ಬೆಳೆಸಬೇಕು.
- ಹೇಗೆ ಕಲಿಯಬೇಕೆಂಬುದನ್ನು ಕಲಿಯಲು ಮಕ್ಕಳಿಗೆ ನೆರವಾಗುವುದು.

- ವ್ಯಕ್ತಿಗತ ಕಲಿಕೆಯ ಸ್ವರೂಪಗಳನ್ನು ಮತ್ತು ಸಮಯವನ್ನು ಗೌರವಿಸುವುದು.
- ವ್ಯಕ್ತಿಗತ ಭಿನ್ನತೆಗಳು ಮತ್ತು ಕಲಿಕೆಯ ಶೈಲಿಗಳನ್ನು ಅರ್ಥಮಾಡಿಕೊಳ್ಳುವುದು.

**ತರಗತಿಕೋಣೆಯ ಪಾರಸ್ಪರಿಕ ಕ್ರಿಯೆಗಳಿಗೆ ಕಾರ್ಯವಿಧಾನಗಳು:**

- ಮೂರ್ತ ಅನುಭವಗಳನ್ನು ಒದಗಿಸಿ.
- ಸಂಗಡಿಗರೊಂದಿಗಿನ ಪರಸ್ಪರ ಒಡನಾಟದ ಮೂಲಕ ಕಲಿಸಿ.
- ಪರಸ್ಪರ ಸಹಕರಿಸಿಕೊಂಡು ಕಲಿಯುವುದನ್ನು ಪ್ರೋತ್ಸಾಹಿಸಿ.
- ಏಕೀಕೃತ ಕಲಿಕೆಯನ್ನು ಆರಂಭಿಸಲು ಯೋಜನಾ ವಿಧಾನವನ್ನು ಬಳಸಿ.
- ಮಕ್ಕಳು ಸಕ್ರಿಯವಾಗಿ ಪಾಲ್ಗೊಳ್ಳುವಂತಾಗಲು ಶ್ರಮ ವಹಿಸಿ.
- ಭಾಷಾ ಕಲಿಕೆಗೆ ನಾಟಕ ಪ್ರಕಾರವನ್ನು ಬಳಸಿ.

ಶಿಕ್ಷಕ ಮತ್ತು ಮಗುವಿನ ಸಂಬಂಧಗಳು

- ಮಕ್ಕಳು ತಮ್ಮ ಭಾವನೆಗಳನ್ನು ಅಭಿವ್ಯಕ್ತಿಸಲು ಅನುವು ಮಾಡಿಕೊಡಿ.
- ಅವರ ಪ್ರಯೋಗಗಳು ಮತ್ತು ಯಶಸ್ಸುಗಳ ಸಹಭಾಜನ(share).
- ಅವರ ಭಾವನೆಗಳಿಗೆ ಸ್ಪಂದಿಸಿ ಮತ್ತು ಮಕ್ಕಳಿಗೆ ಹತ್ತಿರವಾಗಿ.

ಅದೆಷ್ಟೇ ಉತ್ತಮವಾದ ಪಠ್ಯಕ್ರಮವಿದ್ದರೂ ಅದನ್ನು ಉತ್ತಮ ತರಬೇತಿ ಹೊಂದಿದ ಮತ್ತು ಸಂವೇದನಾಶೀಲ ಶಿಕ್ಷಕನು ಮಾತ್ರವೇ ನಿರ್ವಹಿಸಲು ಸಾಧ್ಯ. 8 ವರ್ಷದವರೆಗಿನ ಮಕ್ಕಳಿಗಾಗಿ ಇರುವ ECCE ಉಪಕ್ರಮವು ಯಶಸ್ಸನ್ನು ಕಾಣಬೇಕೆಂದರೆ ಒಬ್ಬ ಹೊಸ ಬಗೆಯ ಶಿಕ್ಷಕ ಬೇಕಾಗುತ್ತದೆ. ವೃತ್ತಿಸಂಬಂಧಿ ತರಬೇತಿಯನ್ನು ಪಡೆದ ಮತ್ತು ಮಗುವಿನ ಬೆಳವಣಿಗೆಯನ್ನು ಕುರಿತ ದೃಷ್ಟಿಕೋನಗಳನ್ನು ಕುರಿತ ನಿರ್ದಿಷ್ಟ ಕಾಳಜಿ ಹೊಂದಿದ ಶಿಕ್ಷಕರ ಜರೂರತ್ತಿದೆ. ಈ ಹಂತಕ್ಕೆ ಬೇಕಾಗುವ ಶಿಕ್ಷಕರನ್ನು ವೃತ್ತಿಪರವಾಗಿ ಸಿದ್ಧಗೊಳಿಸುವ ಬಗೆಗೆ ಇಲ್ಲಿಯವರೆಗೆ ಯೋಜಿಸಿಲ್ಲ ಮತ್ತು ಕಾಳಜಿಯನ್ನೂ ತೋರಿಸಿಲ್ಲವಾಗಿ. ಆರಂಭಿಕ ಬಾಲ್ಯದ ಬೆಳವಣಿಗೆಗೆ ಸಂಬಂಧಿಸಿದ ಅಗತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತರಬೇತಿಗಳ ಕ್ರಮಾನುಗತಿಯ ವಿಚಾರಶೀಲ ಯೋಜನೆಯ ಅವಶ್ಯಕತೆಯು ತಲೆದೋರಿದೆ.

## ಪರಾಮರ್ಶನ ಗ್ರಂಥಗಳು:


Anandalakshmi, S. 1985. Cognitive Competence in Infancy ICSSR Research Abstracts Quarterly, Vol. XIV No. 1 & 2, January - June, 1985.

Bhattacharya, A.K. 1981. Nutritional Deprivation and Related Emotional Aspects in Calcutta Children, *Child Abuse and Neglect* 5(4) pp : 467-474

Christina, J.R.J. 1999. The First Teacher: Child Care Workers in the Voluntary Sector in Tamil Nadu, Research Report No. 3., M.S. Swaminathan Research Foundation, Chennai.

D'Souza, A.1979. Day Care for Underprivileged Children: A study of Crèeches in Delhi. In A. D'Souza (ed.) *Children in India: Critical Issues in Human Development.* New Delhi: Manohar Publications, New Delhi.

Datta, V. 1994. Developmental Differences among Pre-school Children in Group Care and in Home Care., Project Report., Tata Institute of Social Sciences (TISS), Mumbai.

Datta, V. 2001a. A Study of Urban Early Childhood Programmes–A project sponsored by UNICEF. Tata Institute of Social Sciences, Mumbai.

Datta, V. 2001b. Job Performance of Anganwadi Workers in Three Districts in Maharashtra–A project s ponsored by UNICEF. Tata Institute of Social Sciences (TISS), Mumbai.

Datta, V. 2002. Child Development Workers in Maharashtra : A study of three districts. Sponsored by Board of Research Studies, Tata Institute of Social Sciences (TISS), Mumbai.

Datta, V. 2005. Reaching the Unreached: Early Childhood Care and Education Intervention in India. In J. Patnaik (ed.), *Children in South Asia: A critical Look at Issues, Policies and Programmes,* Greenwich, C.T. Information Age Publishing.

Department of EE & L, MHRD., 2001. Working Group Report on Elementary and Adult Education, Tenth Five- Year Plan, 2002—2007.

Department. of EE & L, MHRD. 2004. Report of the Committee on Early Childhood Education.

Doherty, G. 1997. *Zero to Six: The Basis for School Readiness.* Applied Research Branch R-97-8E, Human Resources Development, Ottawa, Canada.

Elkind, D 1987. Cited in V. Kaul., 1997. Pressures on the Pre-school Child: Issues and Strategies, and Role of Professional Organisations for Advocacy in ECE. A Seminar Report NCERT, New Delhi.

Evans, J. L. 1996. Quality in Programming : Everyone's Concern, Coordinators' Notebook No. 18., Consultative Group on Early Childhood Care and Development.

Ghai, O.P. 1975. Effect of Marasmic Malnutrition on Subsequent Mental Development. *Journal of Indian Pediatrics 12.*

Gopal, .A.K. and Khan. N 1998. Crèches Services in India. National Institute of Public Cooperation and Child Development ( NIPPCD) New Delhi.

Government of India 1985. The Child in India: A Statistical Profile. Ministry of Social Welfare, New Delhi.

Government of India 1986. National Policy on Education.

Government of India 1992. Programme of Action.

Gulati, A.K. 1993. Impact of Early Schooling on the Health of Children. Paper presented at the Seminar on the Burdened Pre-schooler : Issues and Alternatives, Government Home Science College, Chandigarh.

Jhingran, D. 2005. *Language Disadvantage: The Learning Challenge in Primary Education*. APH, New Delhi.

Karoly, L.; Greenwood, P.; Everingham, S.; Hoube, J.; Kilburn, R; Rydell, P.; Sanders, M. and Chiesa, J. 1998. *Investing in Our Children: What We Know and Don't Know about Costs and Benefits of Early Childhood Intervention.* Santa Monica, California, Rand.

Katz, L. Damaged Disposition Hypothesis 1987. Cited in V. Kaul, Venita. 1997. *Pressures on the Pre-school Child : Issues and Strategies, and Role of Professional Organisations for Advocacy in ECE,* A Seminar Report NCERT, New Delhi.

Kaul, V. 1997. *Pressures on the Pre-school Child: Issues and Strategies and Role of Professional Organisations for Advocacy in ECE* , A Seminar Report, NCERT, New Delhi.

Kaul, V; Ramachandran C. and Upadhyay, G.C. 1994. Impact of ECE on Retention in Primary *Grades: A Longitudinal Study.* NCERT, New Delhi.

Kaul, V. 1997. The Training of Teachers. In M. Swaminathan (ed.). 1998. *The First Five Years.* Sage Publications, New Delhi. pp. 195-210.

Levinger, B; Del Rosso; and Marek 1994, Early Childhood Care and Education in the Context of Education for All. *New Concept Information System 2003.*

Love, J.P. Schobert P.; and Meckstroth., A. 2002.: "Investing in Effective Child Care and Education: Lessons from Research". In M. Young (ed.). From Early Child Development to Human Development: Investing in Our Children's Future. World Bank, Washington D.C.. , pp.145—193.

MSSRF and NIPPCD. 1996. Learning from Innovation: – Report of a Consultation on Innovative Approaches to ECCE., Chennai.

MSSRF. 2000. Quality Matters! Understanding the relationship between quality of early childhood education and learning competencies of children: An exploratory study in Tamil Nadu. M.S. Swaminathan Research Foundation, Chennai.

Natesan, H. and Devdas. R.P. 1981. Measurement of Mental Abilities of Well-nourished and Mal-nourished Children. *Journal of Psychological Researches 25(3).*

Piaget, J. 1952. *The Origins of Intelligence in Children* (translator M. Cook). International Universities Press, New York. First published 1934.

Ramamurti, A. 1990. Towards an Enlightened and Humane Society. Report of the Commission for Review of the National Policy on Education 1986. MHRD (mimeo).

Seth, K. 1996. Minimum Specifications for Pre–schools. NCERT, New Delhi.

Sethi, R.M. 1982. Female Labour Force in Agriculture: A Case of Punjab. Chandigarh. Amritsar. In T.S. Saraswathi and B. Kaur (eds.). 1993. Human Development and Family Studies in India. Sage Publications India Pvt. Ltd., New Delhi.

Shah, P.M., Walimbe, S.R. and Dhole, V.S.; 1979. Wage-Earning Mothers, Mother-Substitutes and Care of the Young in Rural Maharashtra. *Indian Pediatrics* 1979, 16 (2), 167-178.

Shanmugavelayutham, K. and Nirmala. M.F. 2003. A Study of the Work Conditions of Anganwadi Workers in Tamil Nadu. TN-FORCES, Chennai.

Sriram, R. and Ganapathy. M. 1997. Child Care Options in Agricultural Contexts: The Unresolved Dilemmas. *Economic and Political Weekly 32,* WS 64–WS 72.

Supreme Court. 1993. Judgement in the Case of Unnikrishnan vs. State of Andhra Pradesh.

Swaminathan, M. 1989. The First Three Years: A Source Book on Early Childhood Care and Education. UNESCO, Bangkok, Paris.

Swaminathan, M. and Daniel. P. 2000. *Activity-Based Developmentally Appropriate Curriculum for Young Children.* Indian Association for Pre-school Education. Chennai, Coimbatore, Neyveli.

Swaminathan, M. 2003. Empowerment of Women through Certification of ECD Training in Tamil Nadu. TN-FORCES, Chennai. Unpublished.

Swaminathan, M. and Daniel. P. 2004. *Play Activities for Child Development: A Guide to Pre-school Teachers.* National Book Trust, New Delhi.

UNESCO, Paris. 2003. Early Childhood Care and Education in E-9 Countries: Status and Outlook. Prepared for the Fifth E-9 Ministerial Meeting.

Upadhyaya, G.C. et al. 1996. Identifying Numeracy and Reading Readiness Levels of Entrants to Class I: A Synthesis Report. NCERT, New Delhi.

Upadhyay, G.C. et al. 2000. Pathyakram Bojh: Purva Prathamic evam Prathamic estar per ek Margdarshi Adhyayan, Primary Shikshak. No. 3(26). NCERT, New Delhi.

Vygotsky, L.S. 1985. Play and Its Role in the Mental Development of the Child. In J. Bruner, A. Jolly, and K. Sylva (eds.). *Play: Its Role in Development and Evolution. Basic Books,* New York. pp 597 - 608.